Misappropriation in the Weavers, Co-operative Society of Shigli Village.

Q.—202. Sri SIDDAIAH KASIMATH (Shirahatti).—

Will the Government be pleased to state :—

(*a*) whether the accounts of the Weavers' Co-operative Society No. II of Shigli Village in Shirahatti Taluk have been audited ;

(*b*) the amount misappropriated according to the audit report ;

(*c*) the action that has so far been taken in the matter ?

A.—Sri KONDAJJI BASAPPA (Deputy Minister for Co-operation).—

(*a*) Yes.—up to 1962-63.

(*b*) Rs. 3,677-94.

(*c*) A sum of Rs. 2,550 has been recovered. Show cause notice has been issued for the recovery of the balance amount.

BUDGET ESTIMATES FOR 1965—66.

DEMANDS FOR GRANTS DEMANDS NO. 31—PUBLIC WORKS (*Continued*)

Sri Y. MANJAYYA SETTY (Coondapur).—Mr. Speaker, Yesterday I was dealing with the development of the Coondapur port and Iwas telling that in the Third Five Year Plan, 15 lakhs is provided for the Development of that port and I am extremely sorry that no substantial amount has Spent for the Development of the said port. I am quoting Coondpur as an instance. The same is the fate with regard to the Development of other minor ports.

I would like to draw the attention of the Hon'ble Minister to the detailed estimates of plan schemes for 1965-66. It is seen that scheme No. 565 repair facilities to Karwar, two lakhs was provided and Rs. 1,000 has been shown in the revised estimate. Similarly for scheme No. 567, transit shed, out of 30 lakhs provided, nothing has been spent, nor even a corresponding provision made for the next year in the budget for 1965-66. In regard to scheme No. 572, 573, 574, 575, 576 it is surprising that nothing has been spent, Under the head facilities. for handling iron ore at Honnavar, not a pie has been spent. Beacon Light scheme at Honnavar, nothing has been spent. So there is almost a uniform policy with regard to this and not a single pie has been spent for the Development of ports. My friend Mr. Kolkebyle has said that the Developmental activities of the ports may be handed over to the Chief Engineer. I beg to differ from that view and I think the remedy for the disease lies in the recruitment of proper staff for undertaking this work. Marine engineers, and persons experienced in construction of ports are needed. There should be a regular staff and competent marine engineer. I wish the Government applies its mind and think of

(SRI Y. MANJAYYA SETTY)

recruiting proper staff and see that some work is done for the Development of ports during the Third Five Year Plan period.

It is needless for me to say that in the interest of trade and Commerce, the Development of ports is necessary because it is linked up with the economic prosperity of the people of the State. Let it not be understood that when I speak about the development of ports that these ports are intended only for the prosperity of the people of South Kanara and North Kanara It is intended for the prosperity of the people of the whole State.

We have been hearing about the establishment of five or six fisheries harbours in these ports. We have been hearing only and nothing has been done so far. I wish the programme of fisheries harbours in also taken up.

Coming to Irrigation, I wish to say that more emphasis should be laid on the minor Irrigation works. In Malnad areas, in view of the innumerable rivulets and streams, there is great scope for the development of minor Irrigation works by putting up vented dams across rivulets and streams.

In our district, there is a great scope for putting up vented dam and the progress achieved in this direction is far from satisfactory. We have been hearing a lot about lift irrigation scheme. There is great scope for also. There are about thirteen to fourteen rivers running from east to west in our district, which are all suitable for lift irrigation schemes. Investigation has been done and estimates and plans have been prepared and submitted to the Government. I do not know hat steps Government has taken to implement these schemes. It seems there is some difference of opinion with regard to the management of these lift irrigation schemes, whether it should be entrusted to co-operative societies or to some other Agency. I wish an early decision is taken.

Apart from minor irrigation, there is great scope for major irrigation schemes also. One of the major irrigation schemes that has been taken up and included in the Third Five Year Plan is the Bijur Irrigation scheme in South Kanara district. Last year, steps were taken to execute the scheme, but the progress achieved is far from satisfactory. This is one of the major irrigation schemes which should have been given better attention by the Government, and I do not know for whatreasons the Excution of the schemeis not expedited. The cost of the scheme is more than 50 lakhs and it will benefit about 16 thousand acres of land by providing irrigation facilities. I wish better attention is paid for the implemention of this scheme and provide irrigation facilities to the people of the district.

With regard to the roads and bridges, the public works Department has done its best during the Third Five Year Plan and I am very happy to say that there is better attention and better progress in this direction in our State. Unfortunately, the finance allotted for roads and bridges for the entire Third Five Year Plan has been spent in the first three years

of the plan period, and there is little finance left to under taken more works of roads and bridges. That has been the reply given by the Hon'ble Minister. To an extent, it is also true. But, at the same time, I wish to suggest that all those works which have been agreed to be taken by the Government or which were included in the Budget, must have priority. To quote an instance, there are one or two bridges in my constituency which have been included in the Budget, for which administrative sanction also has been given by the Government. They are bridges at Kamalsile and Hallihole. But I find that these two works are not included in the Budget But there is a lumpsum grant provided in the Budget for undertaking roads and bridge works. In view of the administrative sanction given by the Government, I say that there is a moral obligation on the part of the Government to take up these works. I wish the Government takes up these works out of the amount provided in the Budget under lumpsum grant. I wish the P.W.D. Minister will take up this work and discharge his moral obligation.

The west Coast Road work is progressing very well. For this work, in South Kanara district, a large number of land holders have surrendered their lands even before the payment of compensation so that this developmental work may go ahead. Some of the land holbers have surrendered their lands three or four years back, with the anticipation of getting compensation as early as possible- Unfortunately, they have not got the compensation so far. The Land Acquisition Officer who was posted for this work, I think, must have been unwilling to go and work there and has gone on leave. For the last two or three months, there is no Land Acquisition Officer in charge of this acquisition of land for the West Coast road. I made representation to the concerned authority to post a land acquisition officer immediately. I wish the Hon'ble P.W.D. Minister takes some interest and see that the land acquisition officer is posted and the compensation paid to these land holders who willingly surrendered their land. Unless that is done, specially the public workers like us, who have induced the land holders to surrender their lands in anticipation of getting due compensation quickly, will not have the fact to face them, I wish the Hon'ble Minister concerned takes the matter seriously and that a willing person is appointed as land acquisition officer to undertake this work. With these few words, I support the demands under discussion.

ಶ್ರೀ ಜಿ. ವಿ. ಗೌಡ (ಪಾಳ್ಯ).—ಮಾನ್ಯ ಸಭಾಪತಿಯವರೇ, ಸಾಮಾನ್ಯ ಆಡಳಿತದ ಖರ್ಚು ಒಂದು ವರ್ಷಕ್ಕೆ ಸುಮಾರು ಶೇಕಡ 17ರಷ್ಟು ಹೆಚ್ಚಾಗಿದೆ. ಮತ್ತು ಸಾಮಾನ್ಯ ಆಡಳಿತಕ್ಕೆ 63-64 ರಲ್ಲಿ 286 ಲಕ್ಷ ರೂಪಾಯಿ, ಈ ವರ್ಷ 312 ಲಕ್ಷ, ಮುಂದಿನ ವರ್ಷ 329 ಲಕ್ಷ ಹೀಗೆ ಖರ್ಚಿದೆ. ಖರ್ಚು ಜಾಸ್ತಿ ಎಂದು ಹೇಳಬಹುದು. ಆದರೆ ಅದಕ್ಕನುಗುಣವಾಗಿ ಉತ್ತಮ ಫಲಿತಾಂಶ ವಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಆಡಳಿತದ ಪುನರ್ವ್ಯವಸ್ಥೆ ಮಾಡಬೇಕೆಂದು ರಾಜ್ಯದ ಸೆಕ್ರೆಟೇರಿಯಟ್ ಮಟ್ಟದಲ್ಲಿ ಒಂದು ಸಮಿತಿ ಮಾಡಿದರು, ಅದಕ್ಕೆ ಒಂದೂಮುಕ್ಕಾಲು ಕೋಟಿ ರೂಪಾಯಿಗಳ ಖರ್ಚಾಯಿತು. ಅಷ್ಟು ಖರ್ಚು ಮಾಡಿರುವಾಗ ಆಡಳಿತದಲ್ಲಿ ಎಂಥ ಸುಧಾರಣೆಯಾಗಿದೆ ಎಂಬುದನ್ನು ಮುಖ್ಯಮಂತ್ರಿಗಳು ತಿಳಿಸಬೇಕು. ನಿರೀಕ್ಷಿಸಿದಷ್ಟು ಉತ್ತಮ ಪಲಿತಾಂಶ ಒದಗಿಲ್ಲ ಎಂಬ ಭಾವನೆಯಿದೆ. ನಮ್ಮ ರಾಜ್ಯಪಾಲರ ಮನೆಗೆ ಅಂದರೆ ರಾಜಭವನಕ್ಕೆ ರಿಪೇರಿಗೆ ವರ್ಷಕ್ಕೆ 50 ಸಾವಿರ ರೂಪಾಯಿ, ರಾಜಭವನದ ಇಂಪ್ರೂವ್‌ಮೆಂಟಿಗೆ 50 ಸಾವಿರ ರೂಪಾಯಿ ಕೊಟ್ಟಿದೆ.

(ಶ್ರೀ ಜಿ. ವಿ. ಗೌಡ)

ಗಾರ್ಡನ್ಸ್‌ಗೋಸ್ಕರ 50 ಸಾವಿರ ರೂಪಾಯಿ, ನೀರಿನ ವ್ಯವಸ್ಥೆಗೋಸ್ಕರ 50 ಸಾವಿರ ರೂಪಾಯಿ ಹೀಗೆ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಒಂದು ವರ್ಷಕ್ಕೆ ಇಷ್ಟು ಹಣ ಖರ್ಚು ಮಾಡತಕ್ಕದ್ದು ಸೂಕ್ತವೇ ಎನ್ನುವುದನ್ನು ಸ್ವಲ್ಪಮಟ್ಟಿಗೆ ಯೋಚನೆ ಮಾಡಬೇಕು.

ನಮ್ಮ ಮಂತ್ರಿಗಳು 1963-64 ರಲ್ಲಿ 7,55000 ರೂಪಾಯಿಗಳನ್ನು ಖರ್ಚು ಮಾಡಿದ್ದು 1964-65 ರಲ್ಲಿ 16,60,000 ರೂಪಾಯಿ ಖರ್ಚಾಗಿದೆ. ಇದು ಶೇಕಡ 110 ರಷ್ಟು ಜಾಸ್ತಿಯಾಯಿತು ? ಮುಂದಿನ ವರ್ಷವೂ ಕೂಡ 15½ ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಆದಷ್ಟು ಮಟ್ಟಿಗೂ ಈ ವೆಚ್ಚವನ್ನು ಕಡಮೆ ಮಾಡಬೇಕು ಎಂದು ಹಣಕಾಸಿನ ಮಂತ್ರಿಗಳನ್ನು ಕೇಳುತ್ತೇನೆ. ಏನು ವೆಚ್ಚವಿದೆಯೋ ಅದನ್ನು ಆದಷ್ಟು ಉಳಿಸಿಕೊಂಡು ಉತ್ತಮವಾದ ಸುಧಾರಣೆಯನ್ನು ತರಬೇಕೆಂದು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಮಂತ್ರಿಗಳು).—ಈಗ ಮಂತ್ರಿಗಳು ತೆಗೆದುಕೊಳ್ಳತಕ್ಕದ್ದು ಜಾಸ್ತಿ ಎಂದು ಹೇಳುತ್ತಿರಾ ? ಪ್ರಾಮಾಣಿಕವಾಗಿ ಚೆನ್ನಾಗಿ ಕೆಲಸ ಮಾಡಬೇಕು ಎಂದು ಹೇಳುತ್ತೀರಿ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಐದು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳಲಿ ಎಂಟು ಜನ ಮಂತ್ರಿಗಳು ಇದ್ದರೆ ಸಾಕು. 27 ಜನ ಮಂತ್ರಿಗಳು ಏಕೆ ಸ್ವಾಮಿ ?

ಶ್ರೀ ಜಿ. ವಿ. ಗೌಡ.—ಮೂರು ಸಾವಿರ ರೂಪಾಯಿ ಸಂಬಳ ಮಾಡಿಕೊಂಡರೂ ಸಹ ನಾನು ಒಪ್ಪಿಕೊಳ್ಳುತ್ತೇನೆ.

ನಾನು ಹೇಳುತ್ತಿರುವುದು 1963-64 ರಲ್ಲಿ ಏಳೂವರೆ ಲಕ್ಷ ರೂಪಾಯಿ ಇದ್ದದ್ದು ಈ ವರ್ಷ ಹದಿನಾರೂವರೆ ಲಕ್ಷ ರೂಪಾಯಿ ಏಕೆ ಖರ್ಚಾಯಿತು ಎಂದು ಕೇಳುತ್ತಿದ್ದೇನೆ.

ಬೆಟ್ಟಿಂಗ್ ಟ್ಯಾಕ್ಸ್, ಎಂಟರಟೇನ್‌ಮೆಂಟ್ ಟ್ಯಾಕ್ಸ್ ಇವುಗಳಲ್ಲಿ ಮೂರು ನಾಲ್ಕು ವರ್ಷಗಳಿಂದ ಏನು ಬರುತ್ತಿತ್ತೋ ಅದು ಹೆಚ್ಚು ಕಡಮೆ ಅದೇ ಪ್ರಮಾಣದಲ್ಲಿ ಇವತ್ತಿಗೂ ಇದೆ ; ಬೆಟಿಂಗ್ ಟ್ಯಾಕ್ಸ್ ಟೋಟಲೈಸೇಷನ್ ಟ್ಯಾಕ್ಸ್ ಇವುಗಳಲ್ಲಿ ಶೇಕಡ 25 ರಷ್ಟು ಮಾಡಬೇಕು ಎಂದು ವಿಧಾಯಕ ಮಾಡಿದ್ದೇವೆ. ಪ್ರಾಯಶಃ ಶೇಕಡ 25 ರಷ್ಟನ್ನು ಹಾಕಿಲ್ಲ ಎಂದು ಕಂಡುಬರುತ್ತದೆ. ಇದು ನಿಜವಾಗಿಯೂ ವಿಷಾದಕರವಾದುದು. ಆದಷ್ಟು ಬೇಗ ಕಾನೂನಿನಲ್ಲಿ ಎಷ್ಟು ನಿಗದಿ ಮಾಡಿದ್ದೇವೆಯೋ ಅಷ್ಟು ತೆರಿಗೆಯನ್ನೂ ಹೆಚ್ಚಾಗಿ ಹಾಕಿ ನಮಗೆ ಹೆಚ್ಚಿನ ಆದಾಯ ಬರುವ ವ್ಯವಸ್ಥೆ ಮಾಡಬೇಕೆಂದು ಸೂಚನೆ ಮಾಡುತ್ತಿದ್ದೇನೆ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಬೆಟಿಂಗ್ ಟಾಕ್ಸನ್ನು ನೂರಕ್ಕೆ 25 ರಷ್ಟು ಏರಿಸಿದ್ದರಿಂದ ಉತ್ಪನ್ನ ಕಡಮೆಯಾಗಿದೆ. ಮದ್ರಾಸಿನಲ್ಲಿಯೂ ಏರಿಸಿದ್ದು ಉತ್ಪನ್ನ ಕಡಮೆ ಆಯಿತು ಎಂದು ಈಗ ಇಳಿಸಿದ್ದಾರೆ. ಇದನ್ನು ಸ್ವಲ್ಪ ವಿಚಾರ ಮಾಡಿ ಹೇಳಬೇಕು.

ಶ್ರೀ ಜಿ. ವಿ. ಗೌಡ.—ಜಾಸ್ತಿ ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ. ಲೋಕೋಪಯೋಗಿ ಇಲಾಖೆಯ ಬೇಡಿಕೆ ಏನಿದೆ ಇದರಲ್ಲಿ ಮೂರನೆ ಯೋಜನೆಯ ಕೊನೆ ವರ್ಷದಲ್ಲಿ ಒದಗಿಸಿರುವ ಹಣ ಮೊದಲು ಮೂರು ವರ್ಷಗಳಲ್ಲಿಯೂ ಒದಗಿಸಿದ್ದುದಕ್ಕಿಂತ ಕಡಮೆಯಾಗಿದೆ. ಗ್ರಾಮಾಂತರ ಪ್ರದೇಶದ ರಸ್ತೆ ನಿರ್ಮಾಣಕ್ಕಾಗಿ ಇಲ್ಲಿಯವರೆಗೂ ಐದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಷ್ಟು ಹಣವನ್ನು ಖರ್ಚು ಮಾಡಿ ಗ್ರಾಮಾಂತರ ರಸ್ತೆಗಳಾಗಿ ಮಾಡಿರುವ ರಸ್ತೆಗಳೆಲ್ಲ ಬಹಳ ಕೆಟ್ಟು ಹೋಗಿವೆ. ತಾಲ್ಲೂಕು ಬೋರ್ಡುಗಳು ಈ ರಸ್ತೆಗಳನ್ನು ಮೇಂಟೇನ್ ಮಾಡಬೇಕು ಎನ್ನುವ ಅಭಿಪ್ರಾಯದಲ್ಲಿ ಸರ್ಕಾರ ಇದೆ. ಯಾವ ತಾಲ್ಲೂಕು ಬೋರ್ಡ್ ಕೂಡ ಸರ್ಕಾರ ಮಾಡಿರತಕ್ಕ ರಸ್ತೆಗಳ ಮೇಲ್ವಿಚಾರಣೆ ಮಾಡುತ್ತ ಇಲ್ಲ. ಇದೇ ಹಣವನ್ನು ಖರ್ಚು ಮಾಡಿ ಬೇರೆ ಕೆಲಸಗಳನ್ನು ಮಾಡಿದ್ದರೆ ಶಾಶ್ವತವಾದ ಫಲ ಸಿಕ್ಕುತ್ತಿತ್ತು. ಗ್ರಾಮಾಂತರ ಪ್ರದೇಶದ ರಸ್ತೆಗಳಿಗೆ ಖರ್ಚು ಮಾಡಿರತಕ್ಕ ದುಡ್ಡು ವ್ಯರ್ಥವಾಗಿದೆ ಎನ್ನುವುದನ್ನು ನಾನು ಇಲ್ಲಿ ಹೇಳಲಿಕ್ಕೆ ಮನಸ್ಸು ನೋಯುತ್ತದೆ. ಒಂದು ಕೆಲಸವನ್ನು ಮಾಡಿದ ಮೇಲೆ ಅದು ಶಾಶ್ವತವಾಗಿ ಇರುವಂತೆ ಮೇಲ್ವಿಚಾರಣೆಯನ್ನು ಮಾಡಬೇಕಾಗಿತ್ತು. ಅದನ್ನು ಮಾಡುತ್ತಿಲ್ಲ. ಮೂರನೆಯ ಯೋಜನೆಯಲ್ಲಿ ಕಮ್ಯೂನಿಕೇಷನ್ಸ್ ಕೆಳಗಡೆ 9 ಕೋಟಿ ರೂಪಾಯಿಗಳನ್ನು ಇಟ್ಟಿರುವುದರಲ್ಲೇ 5½ ಕೋಟಿ ರೂಪಾಯಿಗಳನ್ನು ಗ್ರಾಮಾಂತರ ರಸ್ತೆಗಳಿಗೆ ಖರ್ಚು ಮಾಡಿದ್ದಾರೆ. ಇನ್ನುಳಿದ ಕೆಲಸಗಳಿಗೆ ನಾಲ್ಕು ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ ಮತ್ತು ಅಸ್ಫಾಲ್ಟಿಂಗ್, ಸೇತುವೆ ಕಟ್ಟುವುದು ಮತ್ತು ಇತರ ರಿಪೇರಿಗಳಿಗೆ ಹಣ ಸಾಲದೆ ಹೆಚ್ಚಿನ ಕೆಲಸ ಸಾಧನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಸ್ವಲ್ಪ ಯೋಚನೆ ಮಾಡಬೇಕು.

ನಮ್ಮಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳು ಎಲ್ಲ ರಾಜ್ಯಗಳಿಗಿಂತಲೂ ಬಹಳ ಕಡಮೆ. ನಾಲ್ಕನೆಯ ಯೋಜನೆಯಲ್ಲಾದರೂ ಹೆಚ್ಚಿನ ಉದ್ದದ ಮೈಲೇಜ್ ತೆಗೆದುಕೊಳ್ಳುವ ರೀತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ನಮ್ಮ ರಾಜ್ಯದ ವಿಸ್ತೀರ್ಣ ಮತ್ತು ನಮ್ಮ ರಾಜ್ಯದಲ್ಲಿರತಕ್ಕ ಒಟ್ಟು ರಸ್ತೆಗಳ ಉದ್ದ ಇವುಗಳ ಆಧಾರದ ಮೇಲೆ ರಾಷ್ಟ್ರೀಯ ಹೆದ್ದಾರಿಗಳು ಇರತಕ್ಕದ್ದು ನ್ಯಾಯಬದ್ಧವಾಗಿರುವ ವಿಷಯ. ಮದ್ರಾಸ್, ಆಂಧ್ರ, ಮಹಾರಾಷ್ಟ್ರ, ಹೀಗೆ ಯಾವ ರಾಜ್ಯಗಳನ್ನು ತೆಗೆದುಕೊಂಡರೂ ರಸ್ತೆಗಳ ಉದ್ದ ಏನಿದೆ ಅದಕ್ಕನುಗುಣವಾಗಿ ನಮ್ಮಲ್ಲಿ ರಸ್ತೆಗಳು ಇಲ್ಲ. ಅವೆಲ್ಲಕ್ಕಿಂತಲೂ ನಾವು ಬಹಳ ಕೆಳಮಟ್ಟದಲ್ಲಿದ್ದೇವೆ. ಈ ವಿಷಯಕ್ಕೆ ಮಹತ್ವ ಕೊಡತಕ್ಕದ್ದು ಅವಶ್ಯಕ ಎಂದು ನಾನು ತಿಳಿಯುತ್ತೇನೆ. ಬೆಂಗಳೂರು–ಮೈಸೂರು–ನೀಲಗಿರಿ ರಸ್ತೆ, ಬೆಂಗಳೂರು–ಮೈಸೂರು–ಕೊಡಗು–ಮಂಗಳೂರು ರಸ್ತೆ ಇವು ರಾಷ್ಟ್ರೀಯ ಹೆದ್ದಾರಿಗಳಾಗಿ ಮಾರ್ಪಾಟು ಆಗಬೇಕೆಂದು ನಾನು ತಿಳಿಸುತ್ತಿದ್ದೇನೆ.

ಮೇಜರ್ ಮತ್ತು ಮೀಡಿಯಂ ಪ್ರಾಜೆಕ್ಟ್‌ಗಳ ವಿಷಯವನ್ನು ತೆಗೆದುಕೊಂಡರೆ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ಯೋಜನೆಗಳನ್ನು ಸರ್ಕಾರ ಕೈಗೊಂಡಿತ್ತು. ಆ ಯೋಜನೆಗಳು ಇನ್ನೂ ಕೂಡ ಪೂರ್ಣವಾಗಿಲ್ಲ. ಇಲ್ಲಿಯವರೆಗೆ ಒಂದು ಎರಡು ಮತ್ತು ಮೂರನೆಯ ಯೋಜನೆಗಳಲ್ಲಿ 32 ಮೇಜರ್ ಮತ್ತು ಮೀಡಿಯಂ ಪ್ರಾಜೆಕ್ಟ್ ಕೆಲಸ ಕಾರ್ಯಗಳು ನಡೆಯುತ್ತಿವೆ. ಮೂರನೆಯ ಯೋಜನೆಯಲ್ಲಿ 228 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ನಾವು ಖರ್ಚು ಮಾಡಿರತಕ್ಕ ಹಣ 67½ ಕೋಟಿ ರೂಪಾಯಿ 230 ಕೋಟಿ ರೂಪಾಯಿ ಖರ್ಚಾಗುವುದರಲ್ಲಿ 68 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ನಾಲ್ಕನೆಯ ಯೋಜನೆಗೆ ನಮ್ಮ ಆರ್ಥಿಕ ಮಂತ್ರಿಗಳು ಹೇಳುವ ಪ್ರಕಾರ 500 ಕೋಟಿ ರೂಪಾಯಿ ಅಂದಾಜು ಇದ್ದರೂ ಕೂಡ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಶೇಕಡ 40 ರಷ್ಟು ಕೊಟ್ಟರೂ 200 ಕೋಟಿ ರೂಪಾಯಿ ಆಗುತ್ತದೆ. ಇದರಲ್ಲಿ ಮೂರು ಯೋಜನೆಗಳಲ್ಲಿ ಉಳಿದಿರುವ ಕೆಲಸವನ್ನು ಮಾಡುವುದಕ್ಕೆ ಆಗದೆ ಇರುವ ಪರಿಸ್ಥಿತಿ ಇದೆ. ಹೊಸ ಕೆಲಸಗಳನ್ನು ತೆಗೆದುಕೊಳ್ಳಲು ನಮ್ಮಲ್ಲಿ ದುಡ್ಡಿರುವುದಿಲ್ಲ. ಇದನ್ನು ಸರ್ಕಾರ ಯೋಚನೆ ಮಾಡಬೇಕು. ಸಕಾಲಕ್ಕೆ ಯೋಜನೆಗಳನ್ನು ಮುಗಿಸದೆ ಇರುವುದರ ಪರಿಣಾಮವಾಗಿ ಆ ಯೋಜನೆಗಳ ಖರ್ಚು ಜಾಸ್ತಿಯಾಗುತ್ತದೆ. ಮತ್ತು ಯೋಜನೆಗಳಿಗೆ ಒದಗಿಸತಕ್ಕ ಹಣ ಸಾಲದೆ ಕೆಲಸ ತಡವಾಗಿ ಜನಗಳಿಗೆ ಪ್ರತಿಫಲ ದೊರೆಯತಕ್ಕದ್ದು ನಿಧಾನವಾಗಿ ಕಷ್ಟವಾಗುತ್ತದೆ. ಆದುದರಿಂದ ನೀರಾವರಿಗೆ ನಾಲ್ಕನೆಯ ಯೋಜನೆಯಲ್ಲಿ ಹೊಸ ಸ್ಕೀಮುಗಳಿಗೆ ಯಾವ ರೀತಿಯಲ್ಲಿ ಹಣವನ್ನು ಒದಗಿಸಬೇಕು ಎನ್ನುವ ವಿಚಾರದಲ್ಲಿ ಹೆಚ್ಚು ಪರಿಶೀಲನೆ ಮಾಡಬೇಕು ಎಂದು ಆ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ.

ಎರಡನೆಯ ಯೋಜನೆಯಲ್ಲಿ 11 ಮೀಡಿಯಂ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡರು. ಅವುಗಳನ್ನು ಮೂರನೆಯ ಯೋಜನೆಗೂ ಮುಂದುವರಿಸಿಕೊಂಡು ಬಂದರು. ಮೂರನೆಯ ಯೋಜನೆಯಲ್ಲಿ ಮೂರು ಮೇಜರ್ ಮತ್ತು ನಾಲ್ಕು ಮೀಡಿಯಂ ಒಟ್ಟು ಏಳು ಹೊಸ ಯೋಜನೆಗಳಿಗಾಗಿ ಒದಗಿಸಿರತಕ್ಕ ಹಣ 40 ಕೋಟಿ 16 ಲಕ್ಷ ರೂಪಾಯಿ. ಅದರಲ್ಲಿ ನಾಲ್ಕು ವರ್ಷಗಳಲ್ಲಿ 24½ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನೂ 16½ ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ. ಮುಂದಿನ ವರ್ಷ ಇಷ್ಟನ್ನೂ ಕೊಡುವುದಕ್ಕೆ ಸಾಧ್ಯವೋ ಇಲ್ಲವೋ ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು. ಸಾಧ್ಯವಾಗದೆ ಇದ್ದರೆ ಹೊಸ ಮೀಡಿಯಂ ಪ್ರಾಜೆಕ್ಟ್‌ಗಳನ್ನಾದರೂ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತಿದ್ದೇನೆ. ಮೂರನೆಯ ಯೋಜನೆಯಲ್ಲಿ ಮೊದಲನೆ ಯೋಜನೆಯಲ್ಲಿ ತೆಗೆದುಕೊಂಡ ಕೆಲಸಗಳನ್ನು ಪೂರ್ಣ ಮಾಡದೆ ಇದ್ದರೆ ಅದರ ಪರಿಣಾಮ ಎಷ್ಟರಮಟ್ಟಿಗೆ ಆಗುತ್ತದೆ ಎನ್ನುವುದನ್ನು ಸರ್ಕಾರ ಪರಿಶೀಲನೆ ಮಾಡಬೇಕಾದ್ದು ಬಹಳ ಆವಶ್ಯಕ ಎಂದು ತಿಳಿದುಕೊಂಡಿದ್ದೇನೆ. ನಾವು ತೆಗೆದುಕೊಂಡಿರತಕ್ಕ 32 ಪ್ರಾಜೆಕ್ಟ್‌ಗಳೂ ಪೂರ್ಣವಾದರೆ 35 ಲಕ್ಷ ಎಕರೆ ನೀರಾವರಿಗೆ ಬರುತ್ತದೆ. ಈಗ ಆಗಿರುವ ನೀರಾವರಿ ಕೆಲಸದ ಪ್ರಕಾರ 12 ಲಕ್ಷ ಪೊಟೆನ್‌ಷಿಯಲ್ ಆಗುತ್ತದೆ. ಇದರಲ್ಲಿ ವಾಸ್ತವವಾಗಿ ನೀರಾವರಿಗೆ ಬಂದಿರತಕ್ಕದ್ದು 8 ಲಕ್ಷ ಎಕರೆ ಮಾತ್ರ. ನಾವು ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಿರುವುದನ್ನು ಉಪಯೋಗಿಸಿಕೊಳ್ಳುವುದಕ್ಕೆ ವ್ಯವಸ್ಥೆ ಆಗಿರತಕ್ಕದ್ದು ಬಹಳ ವಿಷಾದಕರ ಎಂದು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

ಮೈನರ್ ಇರಿಗೇಷನ್‌ಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದಾರೆಂದು ಗೊತ್ತಾಗಿದೆ. ಸುಮಾರು 800 ಲಕ್ಷ ಖರ್ಚು ಮಾಡಬೇಕೆಂದಿರುವುದನ್ನು ವಿನಿಯೋಗಿಸುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು ಇನ್ನೂ ಅವಶ್ಯಕ. ಒಂದು ಬಾವಿಯಿಂದ ರೈತ ನಾಲ್ಕು ಎಕರೆ ಜಮೀನನ್ನು ನೀರಾವರಿಗೆ ತಂದರೆ, ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಾನೆ. ಎಂದರೆ ವರ್ಷಕ್ಕೆ ಎಂಟು ಎಕರೆಗೆ ನೀರನ್ನು ಒದಗಿಸಿದ ಹಾಗಾಯಿತು. ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಾದರೆ 10 ಸಾವಿರ ಬಾವಿ

(ಶ್ರೀ ಜೆ. ವಿ. ಗೌಡ)

ಗಳನ್ನು ತೆಗೆಯಬಹುದು. 10 ಸಾವಿರ ಬಾವಿಗಳಿಂದ 80 ಸಾವಿರ ಎಕರೆ ನೀರಾವರಿ ಮಾಡುವು ದಕ್ಕೆ ಸೌಕರ್ಯವನ್ನು ಒದಗಿಸಬಹುದು. ಆದುದರಿಂದ ಸರ್ಕಾರದವರು ಹೆಚ್ಚಿನ ಮಹತ್ವವನ್ನು ಸಣ್ಣ ನೀರಾವರಿ ಕೆಲಸಗಳಿಗೆ ಕೊಡಬೇಕು ಎಂದು ನಾನು ಹೇಳಬೇಕಾಗಿದೆ. ಇನ್ನು ಇತರ ವಿಚಾರಗಳ ಬಗ್ಗೆ ಹೇಳುವುದಾದರೆ 43ನೇ ಬೇಡಿಕೆಯಲ್ಲಿ ಖರ್ಚಾದುದು ಸುಮಾರು ಶೇಕಡ 31 ರಷ್ಟು ಜಾಸ್ತಿಯಾಗಿದೆ. ಇನ್ನು 50 ಪಬ್ಲಿಕ'ವರ್ಕ್ಸ್‌ನಲ್ಲಿ ಈ ಸಿಬ್ಬಂದಿ ಖರ್ಚು ಏನಿದೆ ಅದೂ ಕೂಡ ಜಾಸ್ತಿಯಾಗಿದೆ. ಇನ್ನು ಕೆಲಸಗಳಿಗೆ ಒದಗಿಸುವ ಖರ್ಚು ಮಾತ್ರ ಮಿನಿಮಂ ಆಗಿದೆ. ಈ ಬಾಬಿಗೆ 63–64ನೇ ಸಾಲಿನಲ್ಲಿ ಸುಮಾರು 70 ಲಕ್ಷ 73 ಸಾವಿರ ರೂಪಾಯಿಗಳನ್ನು ಒದಗಿಸಿದ್ದರು, ಈ ವರ್ಷ 93 ಲಕ್ಷ 75 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ಕೆಲಸಗಾರರಿಗೆ 619 ಲಕ್ಷ ರೂಪಾಯಿಗಳಿಂದ 512 ಲಕ್ಷ ರೂಪಾಯಿಗಳಿಗೆ ಇಳಿಸಿದ್ದಾರೆ. ಜಾಸ್ತಿ ಸಿಬ್ಬಂದಿಯಾದಾಗ್ಗೆ ಹೆಚ್ಚು ಕೆಲಸ ಆಗಬೇಕಾಗಿದೆ. ಆದಕ್ಕೆ ಹೆಚ್ಚು ದುಡ್ಡನ್ನು ಒದಗಿಸಬೇಕಾಗುತ್ತದೆ. ಈ ಕೆಲಸ ಕಾರ್ಯಗಳಿಗೆ ತಕ್ಕಂತೆ ಸಿಬ್ಬಂದಿಯನ್ನು ಇಟ್ಟುಕೊಳ್ಳುವುದು ಆಡಳಿತ ಹಿತದೃಷ್ಟಿಯಿಂದ ಸೂಕ್ತವಾದುದೆಂದು ನಾನು ತಿಳಿಸುತ್ತೇನೆ.

12-30 P.M.

ಇನ್ನು ನನ್ನ ತಾಲ್ಲೂಕಿನ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಮೊದಲೇ ಪ್ರಸ್ತಾಪಿಸಿದ ಹಾಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೊಸ ಯೋಜನೆಗಳನ್ನು ಕೈಕೊಳ್ಳುವುದಕ್ಕೆ ಸಾಕಷ್ಟು ಹಣ ಸಿಗುವುದಿಲ್ಲವೆಂದು ನಮ್ಮಲ್ಲಿ ಕೆಲವರಿಗೆ ಹೆದರಿಕೆ ಉಂಟು. ಆದ್ದರಿಂದ ಈಗಿರತಕ್ಕ ನೀರಾವರಿಯೋಜನೆಗಳನ್ನು ಸಾಕಷ್ಟು ಬೇಗ ಮುಂದುವರಿಸುವುದು ಇವರಿಗೆ ಅನಿವಾರ್ಯವೆಂದು ನನಗೆ ತೋರುತ್ತಿದೆ. ಈಗ ಏನು ನೀರಾವರಿಯೋಜನೆಗಳನ್ನು ಇವರು ತೆಗೆದುಕೊಂಡಿದ್ದಾರೋ ಅದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕು. ಆ ಪ್ರಕಾರ ಕಪಿನಿ ಪ್ರಾಜೆಕ್ಟ್ ಮತ್ತು ಹೆಬ್ಬಾಳ್ಳ ಪ್ರಾಜೆಕ್ಟ್‌ಗಳ ಕೆಲಸ ಬೇಗ ಪೂರೈಕೆ ಆಗಬೇಕು. ಅವುಗಳ ನೀರನ್ನು ಉಪಯೋಗಿಸುವ ವ್ಯವಸ್ಥೆ ಮಾಡಬೇಕು. ನನ್ನ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶ. ದೊಡ್ಡ ದೊಡ್ಡ ತಾಲ್ಲೂಕುಗಳಲ್ಲಿ ನೀರಾವರಿ ಸೌಕರ್ಯ ಬಹಳವಿದೆ. ಅದನ್ನು ಎಕ್ಸ್‌ಪ್ಲಾಯ್' ಮಾಡುವುದಾದರೆ ನಿಜವಾಗಿ ನಾಲ್ಕೈದು ಮಧ್ಯಮವರ್ಗದ ಪ್ರಾಜೆಕ್ಟ್‌ಗಳನ್ನು ಮಾಡಬಹುದು ಮತ್ತು ಅನೇಕ ಕೆರೆಗಳನ್ನು ನಿರ್ಮಿಸಬಹುದು. ಈ ವರ್ಷದಲ್ಲಿ ನನ್ನ ತಾಲ್ಲೂಕಿನಲ್ಲಿ ಯಾವ ಒಂದು ಹೊಸ ಕೆಲಸವೂ ಇಲ್ಲ. 7-8 ವರ್ಷಗಳಿಂದಲೂ ಕೆಲವು ಪಿಕಪ್ ಕೆಲಸಗಳು ಮಾತ್ರ ಮುಂದುವರಿಯುತ್ತಾ ಇವೆ. ಹೊಸಕೆಲಸಗಳನ್ನೇನೂ ಮಾಡಿಯೇ ಇಲ್ಲ. ಬಹಳ ವಿಷಾದವಾಗುತ್ತದೆ. ಒಟ್ಟಿನಲ್ಲಿ ಈ ಮಧ್ಯಮವರ್ಗದ ನೀರಾವರಿಯೋಜನೆಗಳನ್ನು ಮೂರನೆಯ ಪಾಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಕಾರ್ಯಗತಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡು ಆದಷ್ಟು ಬೇಗ ಪೂರೈಕೆಯಾಗಬೇಕೆಂದು ತಿಳಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri KADIDAL MANJAPPA (Sringeri).—Mr. Speaker, Sir, I rise to make a few observations concerning Demand Nos. 10 and 31.

The States Reorganisation has created a few problems in this State. ne of them is concerning the integration of servic. Integration of services, we all know, is not an easy mattees; it is a difficult problem. Whatever may be our sympthy in dealing with this problem, it is not possible to satisfy people belonaing to different regions in this State. After the States Reorganisatgon took place, the Government of India laid down certain princiiples for the integration of services and for fixing the senieity of officers in the different cadres. In 1957, a provisional Intr-State Seniority List was prepared and thereafter several officers complained to the Government that the provisional list was not correct and that it contained factural errors. Therefore, with a view to getting the

assitance of a person who is not concerned with any region in the State, the Mysore Government invited one Mr. Dutt to study the problem of integration concerning the Gazetted Officers and another Mr. Soneza to study the problem and send recommendations to Government. Accordingly, they came here and heard the representations of the people and they submitted a report to the Government. Even Thereafter there was dissatisfaction among some people. Thereafter, I believe it was in the year 1958 or 1959, Cabinet Sub-Committee was constituted under my chairmanship. The said committee consisted of Ministers representing the different regions in the State. The Sub-Committee spent nearly 3 months and they came to certain decisons with regard to some points and agreed to disagree on certain points. Thereafter the Cabinet considered the recommendations of the sub-committee. The Cabinet finally dicided that wherever the Cabinet members agreed the formula should be adopted and wherever they did not agree Mr. Dutt's recommendation should be adopted. That was the decision taken by the Mysore Government in the year 1960.

Mr. SPEAKER.—Is it a cabinet disclosure ?

Sri KADIAL MANJPPA.—No, Sir, it was only the decision of the Government. I am told that the decision of the Government has not been communicated to the Government of India while the proposal were sent by some Departments and as a result now almost every day there is a writ petition in the High Court and there is dissatisfaction among Governments servants. I know that I have to be blamed to some extent because I was also member of the Cabinet.

Sri B. D. JATTI.—I want to clarify one point. It was correct that some list was prepared and that list was called the 1957 list. Afterwards another list was prepared for the information of the Government of India. The Government of India decided to send both the lists for clarification or for any other purpose along with the objections raised by various membere after the publication of the list.

Sri KADIDAL MANJAPPA.—I know that the 1960 list was struck down by the Mysore High Court on the Ground it was published as a final list. The list ought to have been published as a provisional list. Thereafter I am told that some departments while sending there recommendations to the Government of India have not sent the decision of the Mysore Government taken in 1960.

Sri B. D. JATTI.—That information is not correct.

Sri KADIDAL MANJAPPA.—I am speaking on the basis of reliable information.

Mr. SPEAKER.— If it is not correct, how does it become reliable.

Sri C. J. MUCKANNAPPA.—Who is correct, Sir,

Mr. SPEAKER.— All of us are correct.

Sri KADIDAL MANJAPPA.— I would request the Government to finalise these things very early to put an end to these problems which have created a lot dissatisfaction among the members of the service.

(SRI KADIDAL MANJAPPA)

With regard to recruitment, I desire to make a few observation. At present, recruitment is done through several agencies. In the case of temporary vacancies, unit officers recruit people through the Employment Exchange. In the case of permanent vacancies, there are the Divisional Level Committee, the State Level Committee and the Public Service Commission. We have certain rules for the purpose of recruiting candidates to various departments. The complaint now is that those rules are not being adhered to by the several agencies. I am told that the Unit Officers are required to adopt the list sent by the Employment Exchange Officers. It is the Unit Officers that should decide whether the list is prepared in accordance with the rules of recruitment or otherwise. Therefore, there is no point in relying upon the list sent by the Employment Exchange Officers. Sometimes these officers are guided by other considerations. They prepare the list to suit their own convenience or choice. Now that the Public Service Commission is enlarged, I would suggest that the work now done by the Divisional Recruitment Committee and the State Level Recruitment Committee may be conveniently entrusted to the Public Service Commission.

I am told there is no appointing authority in the case of Government industrial concerns and that the person in charge of industries or the industrial concerns is the final authority to select. Committees are constituted but the boss i.e the Managing Director or the Director has got the full authority and recruitment is done under his guidance. There should be an independent body free from the control of the Managing Directors to select persons for the vacancies that arise in the Government industrial concerns.

Similarly, in the case of the Collegiate Education Department, I am told there is no committee for appointing officials to fill up the vacancies. I have told Sri Kanthi twice or thrice that there is need for an appointing authority in this Department. I am told that the vacancies are filled up by some person and it is very difficult to terminate the services of the temporary persons who are appointed.

With regard to communications, I would like to say a few words now that the Chief Minister is here. Some time back I had requested the Chief Minister to allot at least a lakh of rupees to each malnad taluk for the purpose of improving the communications in Malnad. There, the main problem is the problem of communications. When it is a question of taxing areca or coffee or cardamom or the question of procurement, some of our friends are very liberal. Some people say that areca should be taxed higher than other commodities because the persons concerned are in a position to pay the tax. In the matter of communications also they should be equally liberal, because from those areas they get agricultural income-tax and forest revenue. Therefore, it is our moral duty to improve the communications in those

regions. I would therefore repeat my request to the Chief Minister that at least hereafter he may consider my suggestion to provide a lakh of rupees to each Malnad Taluk every year.

With regard to registration of contractors, I submitted on the last occasion that the system is very harmful. When I was the Minister in charge of Public Works, the contractors were trying to bring a lot of pressure on me to introduce the system of registering the contractors. As an experimental measure, my colleague, the then Public Works Minister, had introduced this system and now we know the result. It has created a monopoly; only big contractors can take up works and there is no healthy competition. As a result, now there are three tiers under a big contractor. When a big contractor takes up a work, he naturally entrusts it to a sub-contractor and that sub-contractor entrusts it to piece workers and these piece workers get the work done through ordinary labourers. Now, there are three persons who are bent upon making money out of one contract. Therefore, I would like to submit that sooner the system of registration is done away with the better for the country.

With these few observations I thank you, Sir.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ(ಸಿರಾ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಬೇಡಿಕೆಗಳ ಮೇಲೆ ನನ್ನ ಅಭಿಪ್ರಾಯವನ್ನು ತಿಳಿಸಬೇಕೆಂದು ನಾನು ನಿಂತಿದ್ದೇನೆ. ಈ ರಾಜ್ಯದಲ್ಲಿರತಕ್ಕ ಸಾಮಾನ್ಯ ಆಡಳಿತದ ಮೇಲೆ ಸರ್ಕಾರದವರು 3 ಕೋಟಿ 25 ಲಕ್ಷ 87 ಸಾವಿರ ರೂಪಾಯಿಗಳನು ಖರ್ಚು ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಈಗಾಗಲೇ ನನ್ನ ಅನೇಕ ಜನ ಸ್ನೇಹಿತರು ಮಾತನಾಡಿ ಈ ಸಾಮಾನ್ಯ ಆಡಳಿತ ಇಲಾಖೆ ದೇಶಕ್ಕೆ ಒಂದು ಹೊರೆಯಾಗಿದೆ. ಇದರಿಂದ ಜನತೆಗೆ ಕಲ್ಯಾಣ ಸಿಕ್ಕುವುದಿಲ್ಲ, ಮೂಗಿಗಿಂತ ಮೂಗುತಿ ಭಾರ ಎಂದು ಇದು ದಿನೇ ದಿನೇ ಬೆಳೆಯುತ್ತಿವೆ ಎಂದು ಎರಡೂ ಭಾಗದ ಸದಸ್ಯರು ಸರ್ಕಾರಕ್ಕೆ ಹೇಳಿದ್ದಾರೆ. ಸಾಮಾನ್ಯ ಆಡಳಿತ ಶಾಖೆ ನೇರವಾಗಿ ಮುಖ್ಯ ಮಂತ್ರಿಗಳ ಆಧೀನದಲ್ಲಿದೆ. ಅಲ್ಲಿ ನಡೆಯುವ ಅನ್ಯಾಯ ಅತ್ಯಾಚಾರ ಬೇರೆ ಎಲ್ಲೂ ನಡೆಯುವುದಿಲ್ಲ ಎಂದು ನನ್ನ ಭಾವನೆ. ಈ ಸಾಮಾನ್ಯ ಆಡಳಿತ ಇಲಾಖೆಯಲ್ಲಿ ಯಾರಿಗೆ ಪ್ರಮೋಷನ್ ಸಿಕ್ಕಬೇಕೋ ಅಂಥವರ ಮೇಲೆ ಇಲ್ಲದೆ ಸಲ್ಲದೆ ಇರತಕ್ಕ ಅಪಾದನೆಗಳನ್ನು ಹೊರಿಸಿ ಅವರಿಗೆ ಪ್ರಮೋಷನ್ ಮುಖಾಂತರ ಸಿಕ್ಕತಕ್ಕ ಜಾಗವನ್ನು ಸಿಕ್ಕದ ಹಾಗೆ ಮಾಡುತ್ತಿದ್ದಾರೆ. ಈ ರೀತಿ ನಡೆಯುತಕ್ಕ ಅನ್ಯಾಯಕ್ಕೆ ನಾನು ನೇರವಾಗಿ ಮುಖ್ಯಮಂತ್ರಿಗಳ ಮೇಲೆ ಚಾರ್ಜ್ ಮಾಡುವುದಿಲ್ಲ. ಆದರೆ ಅವರಿಗೆ ಅಡ್ವೈಜ್ ಮಾಡತಕ್ಕವರು ಮತ್ತು ಎಲ್ಲಾ ವಿಷಯಗಳನ್ನು ತಂದು ಅವರಿಗೆ ತಿಳಿಸತಕ್ಕಂಥವರು ಅಡ್ಡದಾರಿ ಹಿಡಿಯುವುದಕ್ಕೆ ಕಾರಣರಾಗಿದ್ದಾರೆ ಎಂದು ನಾನು ಮುಖ್ಯ ಮಂತ್ರಿಗಳಿಗೆ ತಿಳಿಸುತ್ತೇನೆ. ಈ ರಾಜ್ಯದಲ್ಲಿ 1957ನೇ ಇಸವಿಯಿಂದ ಇಲ್ಲಿಯವರೆಗೂ ಎಕ್ಸ್‌ಟೆನ್‌ಷನ್‌ಗಳು ರೀಎಂಪ್ಲಾಯ್‌ಮೆಂಟ್‌ಗಳು ಆಗುತ್ತಿವೆ. ಅನೇಕ ಸಾರಿ ಇಂಜಿನಿಯರುಗಳಿಗೆ, ಡಾಕ್ಟರುಗಳಿಗೆ ಮುಂತಾದ ಟೆಕ್ನಿಕಲ್ ಕೆಲಸಗಳಿಗೆ ಸಂಬಂಧಪಟ್ಟವರಿಗೆ ಎಕ್ಸ್‌ಟೆನ್‌ಷನ್ ಕೊಡುತ್ತಿದ್ದಾರೆ. ಆದರೆ ಸಾಮಾನ್ಯ ಆಡಳಿತ ಇಲಾಖೆಯಲ್ಲಿಯೂ ಸಹ ತಮಗೆ ಬೇಕಾದವರಿಗೆ ಎಕ್ಸ್‌ಟೆನ್‌ಷನ್ ಸಿಕ್ಕುತ್ತಿದೆ, ತಮ್ಮ ಸಂಬಂಧೀಕರಿಗೆ ಎಕ್ಸ್‌ಟೆನ್‌ಷನ್ ಸಿಕ್ಕುತ್ತಿದೆ, ನೇರವಾಗಿ ತಮಗೆ ಸಂಬಂಧ ಇಲ್ಲದಿದ್ದರೂ ತಮ್ಮ ಸಂಬಂಧೀಕರಿಗೆ ಸಂಬಂಧವಿರತಕ್ಕವರಗೆ ಎಕ್ಸ್‌ಟೆನ್‌ಷನ್ ಸಿಕ್ಕುತ್ತಿದೆ. ಕೆಲವು ಸಂದರ್ಭದಲ್ಲಿ ತಮ್ಮ ಕಲೀಗ್ಸ್, ಕ್ಯಾಬಿನೇಟ್ ರ್ಯಾಂಕಿನಲ್ಲಿರತಕ್ಕ ಮಂತ್ರಿಗಳು ರೆಕಮೆಂಡ್ ಮಾಡಿರತಕ್ಕವರಿಗೆ ಎಕ್ಸ್‌ಟೆನ್‌ಷನ್ ಕೊಟ್ಟಿಲ್ಲ. ತಮ್ಮ ಖಾತೆಯ ಕೆಲಸಕ್ಕೋಸ್ಕರ ಇಂಥವರು ಬೇಕು ಅವರಿಗೆ ಎಕ್ಸ್‌ಟೆನ್‌ಷನ್ ಕೊಡಬೇಕೆಂದು ಹೇಳಿದರೂ ಅಂಥವರಿಗೆ ಎಕ್ಸ್‌ಟೆನ್‌ಷನ್ ಸಿಕ್ಕುವುದಿಲ್ಲ. ರೀಎಂಪ್ಲಾಯಮೆಂಟ್ ಸಿಕ್ಕುವುದಿಲ್ಲ. ಸರ್ಕಾರಕ್ಕೆ ಬುದ್ಧಿವಾದವನ್ನು ಹೇಳತಕ್ಕಂಥ ಅಧಿಕಾರಿಗಳು ಮುಖ್ಯಮಂತ್ರಿಗಳ ಮನೋಭಾವ ಏನಿದೆ ಎನ್ನತಕ್ಕಂಥಾದ್ದನ್ನು ತಿಳಿದುಕೊಂಡು ಫೈಲಿನಲ್ಲಿ ನೋಟು ಬರೆಯುತ್ತಾರೆ, ಅವರಿಗೆ ಎಕ್ಸ್‌ಟೆನ್‌ಷನ್ ಅಥವಾ ರೀಎಂಪ್ಲಾಯ್‌ಮೆಂಟ್ ಸಿಕ್ಕುತ್ತದೆ. ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟಮೆಂಟಿನಲ್ಲಿ ಕೆಲವರಿಗೆ ಎಕ್ಸ್‌ಟೆನ್‌ಷನ್ ಕೊಟ್ಟಿದ್ದಾರೆ, ರೆವಿನ್ಯೂ ಇಲಾಖೆಯಲ್ಲಿ

†Indicates that the remarks or speeches have not been revised by the member concerend.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಬೇಕಾದಷ್ಟು ಜನಗಳಿಗೆ ಎಕ್ಸ್‌ಟೆನ್ಷನ್ ಕೊಟ್ಟಿದ್ದಾರೆ. ಪಬ್ಲಿಕ್ ವರ್ಕ್ಸ್‌ಸ್ ಇಲಾಖೆಯಲ್ಲಿ ಎಕ್ಸ್‌ಟೆನ್ಷನ್ ಕೊಟ್ಟಿದ್ದಾರೆ. ಟೆಕ್ನಿಕಲ್ ಅಫಿಷಿಯಲ್ ಆಗಿದ್ದರೆ ಏನೋ ಎಕ್ಸ್‌ಟೆನ್ಷನ್ ಕೊಡಬಹುದು. ಒಬ್ಬ ರೆವಿನ್ಯೂ ಅಧಿಕಾರಿ ಇಲ್ಲದೆ ಇದ್ದರೆ, ಒಬ್ಬ ಅಂಡರ್ ಸೆಕ್ರೆಟರಿ ಇಲ್ಲದೇ ಹೋದರೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೆ ? ಮುಖ್ಯ ಮಂತ್ರಿಗಳು ಇದನ್ನು ಸ್ವಲ್ಪ ಯೋಚನೆ ಮಾಡಬೇಕು. ಇಂಥವರಿಗೆಲ್ಲಾ ಎಕ್ಸ್‌ಟೆನ್ಷನ್ ಕೊಟ್ಟಿದ್ದಾರೆ. ರೆವಿನ್ಯೂ ಸೆಟ್ಲ್‌ಮೆಂಟ್ ಖಾತೆಯಲ್ಲಿ ಇಂಥಾ ಒಬ್ಬ ಅಧಿಕಾರಿ ಇದ್ದರೆ, ಅವರಿಂದ ಕೆಲಸ ಆಗುತ್ತಿದೆ ಅವರಿಗೆ ಎಕ್ಸ್‌ಟೆನ್ಷನ್ ಕೊಡಬೇಕು ಎಂದು ಅನೇಕರು ಸುಮಾರು 20—25 ಸಾರಿ ಮುಖ್ಯಮಂತ್ರಿಗಳಿಗೆ ಅವರ ಮನೆ ಮತ್ತು ಆಫೀಸುಗಳಿಗೆ ತಿರುಗಿ ಹೇಳಿದ್ದಾರೆ, ಮತ್ತು ಅದನ್ನು ಮಾಡಬೇಕಾದ್ದು ನ್ಯಾಯ ಸರ್ವೆ ಸೆಟ್ಲ್‌ಮೆಂಟ್ ಆಗಬೇಕು, ಅದರಿಂದ ಹಣ ಬರುತ್ತದೆ, ಎಂದು ಹೇಳಿದರೂ ಕೂಡ ಆ ಅಧಿಕಾರಿಗಳ ಮೇಲೆ ಹಿರಿಯೂರಿಗೆ ಸಂಬಂಧಪಟ್ಟ ಹಾಗೆ ಏನೋ ಒಂದು ದೊಡ್ಡ ಕುಂಬಳಕಾಯಿನಷ್ಟು ತಪ್ಪು ಇದೆ, ಆದ್ದರಿಂದ ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಯುವಕರಿಗೆ ಅಡ್ಡಿ ಆತಂಕ ಬರುವಹಾಗೆ ಮಾಡಬಾರದು ಎಂದು ನಾನೂ ಒಪ್ಪುತ್ತೇನೆ. ಸರಕಾರದಲ್ಲಿ ಯಾವುದಾದರೂ ಒಂದು ಸ್ಪಷ್ಟ ನಿಯಮ ಇರಬೇಕು. ಹಾಗಾದರೆ ಸರಕಾರ ಕೇಳಬಹುದು : ನಮಗೆ ಡಿಸ್ಕ್ರಿಷನ್ ಇಲ್ಲವೇಇಲ್ಲವೇ. ಯಾವುದಾದರೂ ಒಳ್ಳೆಯ ಡಿಸರ್ವಿಂಗ್ ಕೇಸುಗಳಿದ್ದರೆ ಅಂಥ ಅಧಿಕಾರಿಗಳಿಗೆ ಎಕ್ಸ್‌ಟೆನ್ಷನ್ ಕೊಡುವುದಕ್ಕೆ ರೀಎಂಪ್ಲಾಯ್‌ಮೆಂಟ್ ಕೊಡುವುದಕ್ಕೆ ಅಧಿಕಾರವಿಲ್ಲವೆ ಸರಕಾರಕ್ಕೆ ಎಂದು. ನಾನು ಅದನ್ನು ಪ್ರಶ್ನೆ ಮಾಡುತ್ತಾ ಇಲ್ಲ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದಕತೆ : ಇಂಟರ್-ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡುವಾಗ, ಪ್ರಮೋಷನ್ ಕೊಡುವಾಗ ತಮಗೆ ಇರತಕ್ಕಂಥ ರಾಜಕೀಯ ಗೊಂದಲದಲ್ಲಿ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ವಿಮರ್ಶೆ ಮಾಡುವುದಕ್ಕೆ ವೇಳೆ ಇದೆಯೊ ಇಲ್ಲವೋ ಗೊತ್ತಿಲ್ಲ.

ತಮ್ಮ ಚೀಫ್ ಸೆಕ್ರೆಟರಿಯಿಂದ ಹಿಡಿದು ಕೊನೆಯ ಮನುಷ್ಯನವರೆಗೂ, ನಾನಾದರೂ ಹೇಳುತ್ತೇನೆ, ಜನರಲ್ ಅಡ್ಮಿನಿಸ್ಟ್ರೇಷನ್ ಪಾಪದ ಕೂಪ. ನಾನು ತಿಳಿದುಕೊಂಡಿದ್ದೇನೆ : ಅಲ್ಲಿ ಓಡಾಡುವವರಿಗೆ, ಬಾಯಿ ಇರುವವರಿಗೆ, ಪೊಲಿಟಿಕಲ್ ಪುಲ್ ಇರುವವರಿಗೆ ಕೆಲಸ ನಡೆಯುತ್ತದೆ, ಮಿಕ್ಕಾದವರಿಗೆ ಯಾರಿಗೆ ಏನೂ ಸಿಗುವುದಿಲ್ಲ. ಇಲ್ಲಿ ಇನ್ನು ಜಾಸ್ತಿ ಹೇಳಲಾರೆ ಆ ಇಲಾಖೆಯ ಬಗ್ಗೆ. ನನ್ನ ಕರೆದು ಕೇಳಿದರೆ ಅಲ್ಲಿ ಏನು ನಡೆಯುತ್ತಿದೆ ಎಂದು ಕೂಲಂಕಷವಾಗಿ ಹೇಳುವುದಕ್ಕೊ ತಯಾರಾಗಿದ್ದೇನೆ. ಸೆಕ್ರೆಟೇರಿಯಟ್ಟಿನಲ್ಲಿರತಕ್ಕಂಥ ಅಧಿಕಾರಿಗಳು ಎಷ್ಟು ವರ್ಷವಾದರೂ ಒಂದೇ ಸ್ಥಳದಲ್ಲಿರಬಹುದು. ಸೆಕ್ರೆಟರಿಗಳು, ಡೆಪ್ಯುಟಿ ಸೆಕ್ರೆಟರಿಗಳು, ಅಂಡರ್ ಸೆಕ್ರೆಟರಿಗಳು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಬದಲಾವಣೆಯಾದರೆ, ಅದೇ ವರ್ಗ, ಕೆಲವು ಸರ್ತಿ ಅದೂ ಇಲ್ಲ; ಸೆಕ್ಷನ್ನಿನಿಂದ ಸೆಕ್ಷನ್ನಿಗೆ ವರ್ಗಾಯಿಸುತ್ತಾರೆ. 10—15—20 ವರ್ಷ ಒಂದೇ ಊರಿನಲ್ಲಿರುವುದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದಾರೆ. ಅವರುಗಳು ಪ್ಯಾಲೇಸ್ ಆರ್ಚರ್ಡ್, ರಾಜಾಮಹಲ್ ಗುಟ್ಟಹಳ್ಳಿ. ರಾಜಾಜಿನಗರ ಮತ್ತು ಎಲ್ಲೆಲ್ಲೂ ಸೈಟುಗಳನ್ನು ತೆಗೆದುಕೊಂಡು, ಮನೆಗಳನ್ನು ಕಟ್ಟಿಸಿಕೊಂಡು, ಬಾಡಿಗೆಗೆ ಕೊಟ್ಟು ಹಣ ಸಂಪಾದಿಸುತ್ತಿದ್ದಾರೆ. ಬೆಂಗಳೂರಿಗೆ ಹೊರಗಡೆಯಿಂದ ಅಧಿಕಾರಿಗಳು ವರ್ಗವಾಗಿ ಬರುವುದಕ್ಕೆ ಅವಕಾಶವೇ ಇಲ್ಲ; ಏಕೆಂದರೆ ಈ ಸೆಕ್ರೆಟೇರಿಯಟ್ಟಿನಲ್ಲಿರುವವರು ಮಂತ್ರಿಮಂಡಲಕ್ಕೆ ಬಹಳ ಹತ್ತಿರವಿದ್ದಾರೆ. ತಮ್ಮನ್ನು ನೋಡುವುದಕ್ಕೆ ಅವರಿಗೆ ಶಕ್ಯವಿದೆ. ಬಳ್ಳಾರಿಯಲ್ಲಿರತಕ್ಕಂಥ ಒಬ್ಬ ನೌಕರ ಬಂದು ಮಂತ್ರಿಗಳನ್ನೋ, ಸೆಕ್ರೆಟರಿಗಳನ್ನೋ ನೋಡಬೇಕಾದರೆ ರಜ ತೆಗೆದುಕೊಳ್ಳಬೇಕು ಇಲ್ಲಿಗೆ ಬರಬೇಕು, ಆದರೆ ಇಲ್ಲಿ ಸೆಕ್ರೆಟೇರಿಯಟ್ಟಿನಲ್ಲಿರುವವರು ತಮ್ಮನ್ನು ಸಾಯಂಕಾಲ ಮಧ್ಯಾಹ್ನ, ಬಿಡುವಾದಾಗ ನೋಡಬಹುದು. ಅದೂ ಅಲ್ಲದೆ, ಈ ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕಂಥವರು ಬಹಳ ವರ್ಷಗಳಿಂದಲೂ ಅಲ್ಲಿಯೇ ಇದ್ದು ಖಾಯಮ್ಮಾಗಿಬಿಟ್ಟಿದ್ದಾರೆ. ಅವರನ್ನು ಅಲ್ಲಿಂದ ಸ್ಥಳಪಲ್ಲಟ ಮಾಡುವುದರಿಂದ, ತಮಗೂ ಕೀರ್ತಿ ಬರುತ್ತದೆ, ಜನಗಳಿಗೆ ಸ್ವಲ್ಪಮಟ್ಟಿಗಾದರೂ ನ್ಯಾಯ ದೊರೆಯುತ್ತದೆ. ಇದಕ್ಕೋಸ್ಕರ ಸ್ವಲ್ಪ ತಾವು ಈ ಕಡೆಗೆ ಗಮನ ಕೊಡಬೇಕು. ಇವರನ್ನು ಕಿತ್ತೊಗೆಯದಿದ್ದರೆ, ಸಾಮಾನ್ಯ ಜನರಿಗೆ ಏನು ಪ್ರತಿಫಲ ದೊರೆಯಬೇಕೆಂದು ನೀವು ನಿರೀಕ್ಷಿಸುತ್ತೀರೊ, ಅದು ದೊರೆಯುವುದಿಲ್ಲ, ನೀವು ಏನೇ ಪ್ಲಾನ್ ಮಾಡಿ, ಎಷ್ಟೇ ಹಣ ತನ್ನಿ ಏನು ಮಾಡಿದರೂ ಸಾಧ್ಯವಿಲ್ಲ. ಆದ್ದರಿಂದ ಸರಕಾರ ನನ್ನ ಸಲಹೆಗೆ ಗಮನ ಕೊಡಬೇಕು.

ದುಡ್ಡು ಇಲ್ಲ, ಹಣವಿಲ್ಲ ಅಂತ ಹೇಳುತ್ತಿರುವಾಗ ವಿಜಿಲನ್ಸ್ ಕಮಿಶನ್ ಮಾಡಿದ್ದೀರಿ. ಗವರ್ನಮೆಂಟ್ ಆಫ್ ಇಂಡಿಯಾದವರು ಮಾಡಿಬಿಟ್ಟರು ಎಂದು ನಾವು ತಕ್ಷಣ ಮಾಡಬೇಕಾದ ಪ್ರಮೇಯವಿಲ್ಲ. ಇದನ್ನು ಅಪಾಯಿಂಟ್ ಮಾಡತಕ್ಕ ತುರ್ತು ಪರಿಸ್ಥಿತಿ ಮೈಸೂರು ರಾಜ್ಯದಲ್ಲಿ ಏನಿತ್ತು ?

ಏತಕ್ಕೋಸ್ಕರ ಇದನ್ನು ಮಾಡಿದರು ಎಂದು ಇದುವರೆಗೂ ಅರ್ಥವಾಗಲಿಲ್ಲ. ಇದರ ಕಾರ್ಯಕಲಾಪ ವೇನು, ಇದರ ಅಧಿಕಾರ ವ್ಯಾಪ್ತಿಯೇನು, ಇದರ ಅಧಿಕಾರವೇನು ? ನಮಗೆ ಏನೂ ಗೊತ್ತಿಲ್ಲ. ಅವರ ಸಂಬಳಸಾರಿಗೆಗಳು ಏನು ? ಅವರು ಯಾವ ಕಾನೂನಿನ ಚೌಕಟ್ಟಿನಲ್ಲಿ ಬರುತ್ತಾರೆ, ಇದು ಎಲ್ಲಾ ನಮಗೆ ಗೊತ್ತಿಲ್ಲ. ತಾವು ಅದನ್ನು ಪೊಲಿಟಿಕಲ್ ಇಂಟರೆಸ್ಟ್ ಸ್ಯಾಟಿಸ್‌ಫೈ ಮಾಡುವುದ ಕ್ಕೋಸ್ಕರ ಈ ಅಪಾಯಿಂಟ್‌ಮೆಂಟ್ ಮಾಡಿದ್ದೀರಿ ಎಂದು ನಾನಾದರೂ ಭಾವನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇವಕ್ಕೆ ಯಾವ ರೀತಿ ಉತ್ತರ ಕೊಡುತ್ತಾರೋ, ಅದನ್ನು ನನಗೆ ತಿಳಿಸ ಬೇಕು. ಮೈಸೂರು ರಾಜ್ಯದಲ್ಲಿ ಯಾವುದೋ ಒಂದು ಪೊಲಿಟಿಕಲ್ ಸೆಕ್ಷನ್ನಿನ ಇಂಟರೆಸ್ಟ್ ಸ್ಯಾಟಿಸ್‌ಫೈ ಮಾಡುವುದಕ್ಕೋಸ್ಕರ ಮೈಸೂರು ಸರಕಾರ ವಿಜಿಲೆನ್ಸ್ ಕಮಿಷನರ್ ಅಪಾಯಿಂಟ್ ಮಾಡಿದ್ದಾರೆಂದು ನನಗಾದರೂ ಅನ್ನಿಸುತ್ತದೆ.

ಶ್ರೀ ಪಿ. ವಿ. ಆರ್. ರಾವ್‌ರವರು ಮೈಸೂರು ಸರಕಾರದ ಚೀಫ್ ಸೆಕ್ರೆಟರಿಯಾಗಿ ಬಂದಾಗ. ಅವರು ಬ್ರಾಹ್ಮಣರು, ಅವರು ಇದ್ದರೆ ರಾಜ್ಯ ತಲೆಕೆಳಗಾಗುತ್ತದೆಂದು ಗದ್ದಲ ಮಾಡಿದೆವು ಮತ್ತು ಅವರನ್ನು ಓಡಿಸಬೇಕು ಎಂದು ಈ ಸಭೆಯಲ್ಲಿ ಬಹಳ ಅತಿ ಉಗ್ರವಾಗಿ ಟೀಕೆ ಮಾಡಿದೆವು. ಅವರ ಕಾಲದಲ್ಲಿ ಇದ್ದಂಥ ಆಡಳಿತದ ಬಿಗಿ, ಈ ವಿಧಾನ ಸೌಧದಲ್ಲಿ, ಅಠಾರಕಚೇರಿಯಲ್ಲಿ ಇದ್ದಂಥ ಬಿಗಿ ಇವತ್ತು ನಮಗೆ ಕಾಣುತ್ತಾ ಇಲ್ಲ. ಎಲ್ಲವೂ ಶಿಥಿಲವಾಗಿದೆ. ಹಳ್ಳಿಯವರನ್ನು ವಿಧಾನ ಸೌಧದೊಳಗೆ ಬರದಂತೆ ತಡೆಯುವುದರಲ್ಲಿ ಬಿಗಿ ಇದೆ; ಮಾನ್ಯ ಮುಖ್ಯ ಮಂತ್ರಿಗಳನ್ನೊ, ಇತರ ಮಂತ್ರಿಗಳನ್ನೊ ಸರಕಾರಿ ಅಧಿಕಾರಿಗಳನ್ನೊ ಇಲ್ಲಿ ನೋಡಬೇಕೆಂದರೆ, ಹಳ್ಳಿಯವರನ್ನು ಗೇಟಿನ ಬಳಿಯೆ ತಡೆಯುವುದಕ್ಕೆ ಬಿಗಿ ಮಾಡಿದ್ದಾರೆ. ಶ್ರೀ ಪಿ. ವಿ. ಆರ್. ರವರ ಕಾಲದಲ್ಲಿದ್ದ ಎಫಿಶಿಯನ್ಸಿ ಇವತ್ತು ಕಣ್ಮರೆಯಾಗಿದೆ. ಅವತ್ತಿನ ದಿವಸ ನಾನು ಕೂಡ ಎಲ್ಲ ಸದಸ್ಯರ ಜೊತೆಯಲ್ಲಿ ಕೈಗೂಡಿಸಿದೆ. ಅವರನ್ನು ಓಡಿಸಬೇಕು, ಇಲ್ಲದಿದ್ದರೆ ಬ್ರಾಹ್ಮಣೇತರರಿಗೆ ಅನ್ಯಾಯವಾಗುತ್ತದೆ, ಬ್ರಾಹ್ಮಣೇತರರಿಗೆ ಕಿರುಕುಳ ಬಂದಿದೆ, ಬ್ರಾಹ್ಮಣೇತರ ಚೀಫ್ ಸೆಕ್ರೆಟರಿಯವರನ್ನು ತರಬೇಕು ಎಂದು ಹೇಳಿದರು. ಐ. ಸಿ. ಎಸ್. ನಿಂದ ಒಬ್ಬರನ್ನು ತಾವು ಚೀಫ್ ಸೆಕ್ರೆಟರಿಯಾಗಿ ಕರೆದುಕೊಂಡು ಬಂದಿರಿ. ಆದರೆ ಆಡಳಿತದಲ್ಲಿದ್ದಂಥ ನ್ಯೂನತೆಗಳು ದೂರವಾಗಲಿಲ್ಲ. ಅದಕ್ಕೆ ಪ್ರತಿಯಾಗಿ, ಎಫಿಶಿಯನ್ಸಿ ದೂರವಾಗಿದೆ; ಎಫಿಶಿಯನ್ಸಿ ಕ್ರಿಯೇಟ್ ಮಾಡತಕ್ಕಂಥ, ಎಫಿಶಿಯನ್ಸಿ ಟೆಂಪೊ ಏರಿಸುವ ಒಂದು ವಾತಾವರಣ ನಮ್ಮ ರಾಜ್ಯದಲ್ಲಿ ಬರಲಿಲ್ಲ. ಇದಕ್ಕೋಸ್ಕರ ಮಾನ್ಯ ಮುಖ್ಯ ಮಂತ್ರಿಗಳೂ, ಸರಕಾರ, ದೀರ್ಘವಾಗಿ ಯೋಚನೆಮಾಡಬೇಕೆಂದು ಭಿನ್ನೈಸಿಕೊಳ್ಳುತ್ತೇನೆ.

ವಿಜಿಲೆನ್ಸ್ ಕಮಿಶನ್, ಆಂಟಿಕರಪಶನ್ ಇಲಾಖೆ ಮಾಡಿದ್ದೀರಿ. ರೆವಿನ್ಯೂ ಡಿಪಾರ್ಟ್‌ಮೆಂಟಿ ನಲ್ಲಿ ಒಬ್ಬ ಅಂಡರ್ ಸೆಕ್ರೆಟರಿಗಳಿದ್ದಾರೆ. ಒಬ್ಬ ಶಿರಸ್ತೆದಾರ್ ತಹಸೀಲ್‌ದಾರ್ ಆಗಿ ಪ್ರಮೋಶನ್ ಆಗಬೇಕಾದರೆ, ಅವರ ಕಾಗದಪತ್ರ ಮುಂದೆ ಹೋಗಿ ಏನಾದರೂ ನಡೆಯಬೇಕಾದರೆ ಸಕಾರಗಳು ನಕಾರಗಳು ಅವರ ಜೇಬಿಗೆ ಬಿದ್ದು ನಡೆಯಬೇಕು. ಸಂಬಂಧಪಟ್ಟವರಿಂದ ನೂರು, ಸಾವಿರಗಳು ಕೈಬಿಟ್ಟರೇನೆ ಫೈಲ್ ಓಡಾಡುವುದು. ಇಲ್ಲದೆ ಹೋದರೆ, ತಿಂಗಳಾನುಗಟ್ಟ್ಲೆ ಫೈಲ್ ಅಲ್ಲಿಯೇ ಕೊಳೆಯುತ್ತಿರುತ್ತದೆ. ಅವರ ಹೆಸರು ಹೇಳುವುದಿಲ್ಲ. ಪ್ರತ್ಯೇಕ ಕೇಳಿದರೆ, ಹೇಳುವುದಕ್ಕೆ ತಯಾರಿದ್ದೇನೆ. ಈ ಅಧಿಕಾರಿಯನ್ನು ತೆಗೆಯದೆ ಹೋದರೆ ತಾವು ಏನನ್ನೂ ನಿರ್ವಂಚನೆಯಿಂದ ಮಾಡುವುದಕ್ಕಾಗುವುದಿಲ್ಲ. ಇಂಥ ಸಣ್ಣ ಪುಟ್ಟ ಅಧಿಕಾರಿಗಳಿಂದ ತಮ್ಮ ಒಳ್ಳೆಯ ಉದ್ದೇಶಗಳೆಲ್ಲಾ ವಿಫಲವಾಗಿವೆ. ವಿಧಾನ ಸೌಧದಲ್ಲಿ ಇಂಥ ವ್ಯವಹಾರಗಳು ನಡೆಯುತ್ತಿವೆ. ಅಂಥ ಅಧಿಕಾರಿಗಳು ರೆವಿನ್ಯೂ ಡಿಪಾರ್ಟ್‌ಮೆಂಟಿನ ಎಸ್ಟಾಬ್ಲಿಶ್‌ಮೆಂಟು ಸೆಕ್ಷನ್ನಿನಲ್ಲಿದ್ದಾರೆ. ಈ ಅಂಡರ್ ಸೆಕ್ರೆಟರಿಯವರ ಮೇಲೆ ನೂರಾರು ಕಂಪ್ಲೇಂಟುಗಳಿವೆ, ಎನ್‌ಕ್ವಯರಿಗಳೂ ಇದ್ದಾವೆ. ಅವರಿಗೆ ಎಕ್ಸ್‌ಟೆನ್‌ಷನ್ ಕೊಟ್ಟು ಇಟ್ಟಿರುತ್ತೀರಿ ಇದು ನ್ಯಾಯವಲ್ಲ. ತಾವು ಯೋಚನೆ ಮಾಡಬೇಕು ಎಂದು ಹೇಳುತ್ತಿದ್ದೇನೆ. ತಾವು ಹೆಸರು ಹೇಳಬಾರದು ಎಂದು ಅಪ್ಪಣೆ ಕೊಡಿಸಿರುವುದರಿಂದ, ಅಧಿಕಾರಿಯ ಹೆಸರು ಹೇಳದೆ ಬಾಯಿಗೆ ಬೀಗ ಹಾಕಿಕೊಂಡಿದ್ದೇನೆ.

ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವಾಗ ಪಬ್ಲಿಕ್ ಸರ್ವೀಸ್ ಕಮಿಶನ್ ಅಧಿಕಾರ ವ್ಯಾಪ್ತಿ ಬಗ್ಗೆ ಒಂದು ವಿಷಯ ಹೇಳಬೇಕಾಗಿದೆ. ಡಿವಿಜನಲ್ ರಿಕ್ರೂಟ್‌ಮೆಂಟ್ ಕಮಿಟಿ, ಸ್ಟೇಟ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ, ಯೂನಿಟ್ ಲೆವಲ್ ರಿಕ್ರೂಟ್‌ಮೆಂಟ್ ಮಾಡುತ್ತಿರುವ ಕೆಲಸವನ್ನು (ಉಪಾಧ್ಯಾಯರದು ಬಿಟ್ಟು) ಪಬ್ಲಿಕ್ ಸರ್ವೀಸು ಕಮಿಷನ್ನಿಗೆ ಕೊಟ್ಟುಬಿಟ್ಟರೆ ಒಳ್ಳೆಯದು. ಲೆಕ್ಚರರ್, ರೀಡರ್, ಪ್ರೊಫೆಸರುಗಳದ್ದು ಪಬ್ಲಿಕ್ ಸರ್ವೀಸು ಕಮಿಷನ್ನಿಗೆ ಕೊಡುವುದು ಒಳ್ಳೆಯದು. ಹೀಗೆ ಮಾಡಿ ದೇಶದ ಜನತೆಗೆ ನ್ಯಾಯ ಒದಗಿಸಿಕೊಡಬೇಕೆಂದು ಭಿನ್ನೈಸಿಕೊಳ್ಳುತ್ತೇನೆ.

ಪಿ. ಡಬ್ಲ್ಯೂ. ಡಿ. ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ನನ್ನ ಸ್ನೇಹಿತರಾದ ಶ್ರೀ ವಿರೇಂದ್ರ ಪಾಟೀಲರು ನನಗೆ ಬಹಳ ಆತ್ಮೀಯರು. ಆದರೆ ಅವರು ಮಾಡುವ ಕೆಲಸಕ್ಕೂ ಹೇಳುವ ಮಾತಿಗೂ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಬಹಳ ವ್ಯತ್ಯಾಸವಿದೆ. ಅವರು ಮಾಡುವುದರಲ್ಲಿ ಸೆಲ್ಫ್—ಇಂಟರೆಸ್ಟು, ಸ್ವಂತ—ಇಂಟರೆಸ್ಟು ಇದೆ. ಈಗ 2 ವರ್ಷದಿಂದ ಮೈನರ್ ಇರ್ರಿಗೇಷನ್ ಕೆಲಸ ಸ್ಟ್ಯಾಂಡ್‌ಸ್ಟಿಲ್ ಆಗಿದೆ. ಈಗ ಬಂದಿರತಕ್ಕಂಥ ಚೀಫ್ ಇಂಜಿನಿಯರು ಒಂದು ಹೊಸ ಡಿಸೈನ್ ಕೊಟ್ಟಿದ್ದಾರೆ. ಕೆರೆಗೆ ಈಗ 20 ಸಾವಿರವಿರುವುದು 40 ಸಾವಿರವಾಗುತ್ತದೆ. 10 ಸಾವಿರವಿರುವುದು 20 ಸಾವಿರವಾಗುತ್ತದೆ. ಇದರಿಂದ ಮೈಸೂರು ರಾಜ್ಯದಲ್ಲಿ ಏನೂ ಕೆಲಸಕಾರ್ಯ ನಡೆಯುವುದಕ್ಕೆ ಸಾಧ್ಯವಿಲ್ಲ. ಒಂದು ವಿಷಯ ಹೇಳಬೇಕಾಗಿದೆ. ನನಗೂ ಜಾತಿ ಅಭಿಮಾನವಿದೆ. ಆದರೆ ಆ ಜಾತಿ ಅಭಿಮಾನ ಎಲ್ಲಾ ಮೇರೆಯನ್ನೂ ಮಿತಿಮೀರಿ ಹೊರಟುಬಿಟ್ಟರೆ ನಾವು ನೀವು ಉಳಿಯುವುದಕ್ಕೆ ಆಗುವುದಿಲ್ಲ. ಸಮುದ್ರ ಉಕ್ಕಿಬಿಟ್ಟು ನೀರು ಈಚೆಗೆ ಹೋದರೆ ಏನು ಪ್ರಮಾದವಾಗುತ್ತದೋ ಅದೇ ಆಗುತ್ತದೆ. ಒಬ್ಬ ಸೂಪರಿಂಟೆಂಡಿಂಗ್ ಇಂಜನಿಯರಿಗೆ ಪ್ರಮೋಷನ್ ಚೀಫ್ ಇಂಜನಿಯರಾಗಿ ಪ್ರಮೋಷನ್ ಕೊಟ್ಟಿದ್ದು ನ್ಯಾಯವಲ್ಲ, ಅನೇಕ ಜನಗಳಿಗೆ ಅನ್ಯಾಯ ಮಾಡಿದ್ದೀರಿ, ಕೊಡಬೇಡಿ ಅಂತ ಹೇಳಿದರೂ, ನಾನು ಕೊಟ್ಟೇ ಕೊಡುತ್ತೇನೆಂದು ಹೇಳಿದರು, ಹೀಗೆ ಹೇಳಿ ಕೊಟ್ಟಿದ್ದೆ ಕೊಟ್ಟದ್ದು. ಆ ಹೊತ್ತು ರಾಯಚೂರಿನಲ್ಲಿದ್ದ ಸೂಪರಿಂಟೆಂಡಿಂಗ್ ಇಂಜನಿಯರಿಗೆ ಕೊಟ್ಟಿದ್ದು ಕಾನೂನುಬಾಹಿರ ಎಂದು ಹೇಳಿದೆವು. ಅವರು ಮಡಕೇರಿಯಿಂದ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನಿಯರಾಗಿ ರಾಜ್ಯಕ್ಕೆ ಬಂದರು. ಅವರಿಗೆ ಆ ಹುದ್ದೆಯಿಂದ ಮುಂದಕ್ಕೆ ಪ್ರಮೋಶನ್ ಕೊಟ್ಟಿದ್ದೇ ತಪ್ಪು. ಆದರೂ ಕೊಟ್ಟಿದ್ದೇ ಕೊಟ್ಟದ್ದು. ಯಾರು ಏನು ಬೇಕಾದರೂ ಹೇಳಲಿ, ಕೊಟ್ಟೇಕೊಡುತ್ತೇನೆ ಅಂದರು. ಅವರ ಕೇಸು ಹೈಕೋರ್ಟಿಗೆ ಹೋಯಿತು. ಆದ್ದರಿಂದ ನೀವು ಎಷ್ಟರಮಟ್ಟಿಗೆ ಕಾನೂನಿಗೆ, ನ್ಯಾಯಕ್ಕೆ ವಿರೋಧವಾಗಿ ಮಾಡುತ್ತೀರಿ ಅನ್ನುವುದು ವ್ಯಕ್ತವಾಗುತ್ತದೆ. ನಿಮಗೆ ಜಾತಿ ಅನ್ನತಕ್ಕಂಥ ಪ್ರೇಮ ಎಷ್ಟಿದೆ ಅನ್ನತಕ್ಕಂಥಾದ್ದನ್ನು ಇದು ಒಂದೇ ತೋರಿಸುತ್ತದೆ. ಇವತ್ತು ಎಲ್ಲಾ ಸಾಕಷ್ಟು ತಾವೇ ಇದ್ದೀರಿ. ಪಿ. ಡಬ್ಲ್ಯು. ಡಿ. ಖಾತೆ ತೆಗೆದುಕೊಂಡರೆ ಮಂತ್ರಿಯಿಂದ ಮೊದಲ್ಗೊಂಡು ಸೂಪರ್‌ವೈಸರವರೆಗೂ ಅವರೇ. ನನಗೆ ಸಂತೋಷ. ಆದರೆ ಅದಕ್ಕೆ ಮಿತಿ ಬೇಡವೆ? ಎಲ್ಲಾದರಲ್ಲೂ ಒಂದು ನೀತಿ ಇರಬೇಕು. ಜನ ಏನೆನ್ನುತ್ತಾರೆ ಎಂಬ ಸಂಕೋಚವೂ ಇರಬೇಕು. ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ, ಅಡರ್‌ಸೆಕ್ರೆಟರಿ ಎಸ್ಟಾಬ್ಲಿಷ್‌ಮೆಂಟ್ ಪಾರ್ಲಿಮೆಂಟರಿ ಸೆಕ್ರೆಟರಿ, ಮಿನಿಸ್ಟರು ಎಲ್ಲಾ ಒಂದೇ ಜಾತಿ ಅಂದರೆ, ಏನು ಸ್ವಾಮಿ ಎಷ್ಟು ಭಯೋತ್ಪಾತವಾಗುತ್ತದೆ? ಇನ್ನು ಯಾರೂ ಈ ರಾಜ್ಯದಲ್ಲಿ ಇರುವುದಕೆ ಲಾಯಕ್ಕಿಲ್ಲವೇ? ಇವರ ಮೇಲೆ ಏನಾದರೂ ನಾವು ಕಠಿಣವಾಗಿ ಮಾತನಾಡಿದರೆ ಇವರು ನಮ್ಮನ್ನು ಏನು ಮಾಡಬಲ್ಲರು? ಎಲ್ಲ ಅಷ್ಟದಿಕ್ಪಾಲಕರೂ, ನವಗ್ರಹಗಳೂ ನೀವೆ, ಏನು ಮಾಡುತ್ತೀರೊ ಎಂಬ ಭಯ ಬಂದಿದೆ.

1-00 P.M.

ಇದಕ್ಕೆ ಅವಕಾಶ ಕೊಡಬೇಡಿ. ನೀವು ಮಾಡುವ ಎಲ್ಲ ಕಾರ್ಯಗಳಲ್ಲಿಯೂ ಸುರಕ್ಷಿತವಾದ ಆಡಳಿತ ಮಾಡಬೇಕು, ಸುರಕ್ಷಿತವಾದ ರಾಜ್ಯಭಾರ ಮಾಡುವುದರಿಂದ ಎಲ್ಲ ಜನಗಳೂ ಸುರಕ್ಷಿತವಾಗಿರಬಹುದು ಆದರೆ ಇಲ್ಲಿ ಆಗುತ್ತಿರುವುದನ್ನು ನೋಡಿದರೆನಮ್ಮಲ್ಲಿ ಒಂದು ತರಹದ ಭಯ ಭೀತಿಗಳು ಹುಟ್ಟಿ ಏನೋ ಒಂದು ತರಹದತವಕ ಇದೆ. ಇನ್ನು ಈ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ನಮ್ಮ ಈ ವಿಧಾನ ಸೌಧದ ಹತ್ತಿರವೇ ಒಂದು ಮಿನಿಯೇಚರು ವಿಧಾನ ಸೌಧ ಎಂದು ಐದು ಅಂತಸ್ತುಗಳ ಒಂದು ದೊಡ್ಡ ಕಟ್ಟಡವನ್ನು ಕಟ್ಟಿದ್ದಾರೆ. ಇದರ ಬಗ್ಗೆ ಎನ್‌ಕ್ವೈರಿ ಮಾಡಿ, ಈ ಮಿನಿಯೇಚರು ವಿಧಾನ ಸೌಧದಂತಹ ಕಟ್ಟಡವನ್ನು ಕಟ್ಟಲು ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ ಎಂದು ಕೇಳಿದ್ದೆವು. ಸರಕಾರ ಹೇಳಿದಂತಹ ಆರ್ಡರನ್ನು ಕೇಳದೆ ಇಲ್ಲಿ ಈ ರೀತಿಯಾಗಿ ಇಷ್ಟು ಹೆಚ್ಚು ಪ್ರಮಾಣದಲ್ಲಿ ಇದನ್ನು ಕಟ್ಟಿದಂತಹ ಅಧಿಕಾರಿಗಳು ಯಾರು ಇದ್ದಾರೋ ಅವರಮೇಲೆ ಕ್ರಮ ತೆಗೆದುಕೊಂಡಿದ್ದೀರಾ ಎಂದು ಕೇಳಬೇಕಾಗಿದೆ. ಸುಮಾರು 16-20 ಲಕ್ಷ ರೂಪಾಯಿಗಳಷ್ಟು ಎಸ್ಟಿಮೇಟಿನಲ್ಲಿ ಈ ಮಿನಿಯೇಚರು ವಿಧಾನ ಸೌಧಕ್ಕಾಗಿ ಖರ್ಚು ಮಾಡಬೇಕೆಂದು ಇದ್ದುದು ಇವೊತ್ತು 50 ಲಕ್ಷಕ್ಕೂ ಮೀರಿ ಸುಮಾರು 60-65 ಲಕ್ಷದವರೆಗೂ ಆದರೂ ಇನ್ನೂ ಪೂರ್ತಿಯಾಗುವ ಸ್ಥಿತಿಯಲ್ಲಿಲ್ಲ. ಇದು ನ್ಯಾಯವಾದ ಖರ್ಚೆ ಎಂದು ನಾನು ಇಲ್ಲಿ ತಮ್ಮನ್ನು ಕೇಳಬೇಕಾಗಿದೆ. ಇದನ್ನು ಏತಕ್ಕಾಗಿ ಹೇಳುತ್ತೇನೆಂದರೆ, ಈ ರಾಜ್ಯದಲ್ಲಿ ತಾವು ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕೆಂದು ಹೇಳುತ್ತಲಿದ್ದೀರಿ. ಒಬ್ಬ ಚೀಫ್ ಇಂಜನೀಯರವರ ಕೈಕೆಳಗೆ ಒಬ್ಬರು ಒಕ್ಕಲಿಗರು ಅಸಿಸ್ಟೆಂಟ್ ಕಮಿಷನ್ನರನ್ನಾಗಿ ಅವರ ಕೈಕೆಳಗೆ ಕೆಲಸ ಮಾಡುವುದಕ್ಕೆ ಆಗುತ್ತಿರಲಿಲ್ಲವೇ? ಅವರನ್ನು ತೆಗೆದು ತಮ್ಮ ಜಾತಿಗೆ ಸೇರಿದವರೇಬೇಕು

ಎಂದು ಅಲ್ಲಿಗೆ ಏತಕ್ಕಾಗಿ ನೇಮಕ ಮಾಡಬೇಕು ? ಒಂದು ಜಾತಿಯವರ ಕೈಕೆಳಗೆ ಇನ್ನೊಂದು ಜಾತಿಯವರು ಕೆಲಸ ಮಾಡಕೂಡದು ಎನ್ನುವುದು ತಮ್ಮ ಅಭಿಪ್ರಾಯವೇ ? ಎಲ್ಲ ಕಡೆಗಳಲ್ಲಿಯೂ ಒಂದೇ ಜಾತಿಯವರೇ ಇದ್ದು ಕೆಲಸ ಮಾಡಬೇಕೆಂದು ಮಾಡಿಕೊಂಡಿದ್ದೀರಾ ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರನ್ನು ಇಲ್ಲಿ ಕೇಳಬೇಕಾಗಿದೆ. ನಮ್ಮ ಮುಖ್ಯ ಮಂತ್ರಿಗಳನ್ನು ಇನ್ನೊಂದು ವಿಚಾರದಲ್ಲಿ ಪ್ರಶ್ನೆ ಮಾಡಬೇಕಾಗಿದೆ ತಾವು ಇವೊತ್ತು ನಿಮ್ಮ ಮಂತ್ರಿಮಂಡಲದಲ್ಲಿ ಎಲ್ಲ ಜಾತಿಯ ಮಂತ್ರಿಗಳನ್ನು ಮಂತ್ರಿಮಂಡಲಕ್ಕೆ ತೆಗೆದುಕೊಂಡಿದ್ದೀರಿ. ಇವರಲ್ಲಿ ಯಾರೋ ಕೆಲವರು ನಿಮಗೆ ಆಗದವರು ಎಂದು ಅವರನ್ನು ತೆಗೆದು ಬಿಡಿ. ಇದರಲ್ಲಿ ಬೇರೆ ಬೇರೆ ಜಾತಿಯವರು ಇರಬಹುದು ಎಂದು ಇದ್ದರೆ ನಿಮ್ಮ ಸರಕಾರದ ನೀತಿ ಜಾತೀಯತೆಯ ಬಗ್ಗೆ ಏನು ಎಂದು ನಾನು ಇಲ್ಲಿ ತಮ್ಮನ್ನು ಕೇಳಿ ತಿಳಿದುಕೊಳ್ಳಬೇಕಾಗಿದೆ. ನಿಮ್ಮ ಪಾಲಿಸಿ ಹೇಗಿದೆ ಎಂದರೆ, ನೀವು ಮಾಡುವ ಕೆಲಸ, ನಿಮ್ಮ ಮಂತ್ರಿಮಂಡಲದಲ್ಲಿ ನಿಮ್ಮ ಸಹೋದ್ಯೋಗಿಗಳು ಮಾಡುವ ಕೆಲಸ ಜಾತೀಯತೆಯ ಜಗಲಿಯ ಮೇಲೆಯೇ ನಡೆಯುತ್ತಿದೆ. ಇದು ಯೋಗ್ಯವಲ್ಲ. ಈ ರೀತಿ ಯಾಗಬಾರದ . ಇದಕ್ಕೋಸ್ಕರ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದು ಇದನ್ನೆಲ್ಲಾ ತಾವು ಇವೊತ್ತು ತೊಡೆದು ಹಾಕದೇ ಹೋದರೆ ನಿಮ್ಮ ಆಡಳಿತ ಸುಗಮವಾಗುವುದಿಲ್ಲ. ಜಾತೀಯತೆಯ ಮನೋಭಾವವನ್ನು ಇಲ್ಲಿ ತೆಗೆದುಬಿಡಿ. ಮತ್ತು ಯಾವ ಕೆಲಸ ಮಾಡುವಾಗಲೂ ಜಾತೀಯತೆಯ ಮೇಲೆ ಮಾಡಲು ಅವಕಾಶವಿಲ್ಲದೇ ಇರಲಿ ಎಂದು ಇಷ್ಟನ್ನು ಹೇಳಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

†ಶ್ರೀ ಗಾಂಜಿ ವೀರಪ್ಪ (ಹರಿಹರ).—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಸಂಬಂಧವಾಗಿ ನಮ್ಮ ಮುಂದೆ ಇಟ್ಟಿರುವ ಡಿಮ್ಯಾಂಡುಗಳನ್ನು ಸಮರ್ಥಿಸುತ್ತಾ ಕೆಲವಂಶಗಳನ್ನು ಇಲ್ಲಿ ಹೇಳಬೇಕೆಂದು ಅಪೇಕ್ಷಿಸುತ್ತೇನೆ. ಸುಮಾರು 500 ಕೋಟಿ ರೂಪಾಯಿಗಳಷ್ಟು ಅಂದಾಜನ್ನು ಮಾಡಿ ಇರಿಗೇಷನ್ನು, ಪವರು ಬಾಬುಗಳಿಗೋಸ್ಕರ 203 ಕೋಟಿ ರೂಪಾಯಿಗಳ ಅಂದಾಜನ್ನು ಮಾಡಿ ಖರ್ಚು ಮಾಡಬೇಕೆಂದು ಮೀಸಲಾಗಿಟ್ಟಿದ್ದಾರೆ. ಇಲ್ಲಿ ಒಂದಂಶವನ್ನು ನಾನು ಒತ್ತಾಯ ಮಾಡಿ ಹೇಳುತ್ತೇನೆ. ನಮ್ಮ ದೇಶದಲ್ಲಿ ನಮಗೆಲ್ಲ ಗೊತ್ತಿರುವಂತೆ ನೀರಾವರಿ ಪ್ರದೇಶಗಳು ಬಹಳ ಕಡಿಮೆ, ಸುಮಾರು ಶೇಕಡಾ 7–8 ಭಾಗದಷ್ಟು ಮಾತ್ರ ನೀರಾವರಿಯಾಗುತ್ತಿದೆ. ನಮ್ಮ ದೇಶದಲ್ಲಿ ನಡೆಯುತ್ತಿರುವ ನೀರಾವರಿಯ ಕೆಲಸಗಳಿಗೂ ಇತರ ಪ್ರಾಂತಗಳ ನೀರಾವರಿಗೂ ಹೋಲಿಸಿ ನೋಡಿದರೆ ಆಂಧ್ರದಲ್ಲಿ ಶೇಕಡಾ 28ರಷ್ಟು ಪ್ರದೇಶ ನೀರಾವರಿಗೆ ಬಂದಿದೆ, ಮದರಾಸಿನಲ್ಲಿ ಶೇಖಡಾ 40ರಷ್ಟು ನೀರಾವರಿಗೆ ಬಂದಿದೆ. ನಮ್ಮ ದೇಶದಲ್ಲಿ ಕೃಷ್ಣಾ, ಗೋದಾವರಿ, ಕಾವೇರಿ ಈ ನದಿಗಳ ನೀರಿನ ಹಂಚುವಿಕೆಯ ವಿಚಾರದಲ್ಲಿ ನಾವು ಕೆಲವು ಹಕ್ಕುಗಳನ್ನು ಸಂಪಾದನೆ ಮಾಡಿಕೊಂಡಿದ್ದೇವೆ. ನಮಗೆ ದೊರೆಯತಕ್ಕ ನೀರನ್ನು ಪಯೋಗಿಸಿಕೊಳ್ಳಬೇಕು ಮತ್ತು ನಮ್ಮ ದೇಶದಲ್ಲಿ ನಮಗೆ ಬರತಕ್ಕ ವರಮಾನವನ್ನೂ ಹೆಚ್ಚು ಮಾಡಿಕೊಳ್ಳಬೇಕು. ನೀರನ್ನು ನಿಗದಿಯಾದ ಕಾಲದಲ್ಲಿ ಉಪಯೋಗಿಸಿ ಕೊಳ್ಳದೇ ಹೋದರೆ ಮತ್ತು ಯಾವ ಕೆಲಸವನ್ನೂ ಕಾರ್ಯರೂಪಕ್ಕೆ ಬರುವಂತೆ ಮಾಡದೇ ಹೋದರೆ ದೊಡ್ಡ ದೊಡ್ಡ ಯೋಜನೆಗಳನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ಆಹಾರದ ಕೊರತೆ ಹೆಚ್ಚಾಗುತ್ತಿದೆ. ಸಾಮಾನ್ಯವಾಗಿ ಪ್ರಾಜೆಕ್ಟುಗಳನ್ನು ಹೆಚ್ಚು ಮಾಡಿಕೊಂಡು ವ್ಯವಸಾಯಕ್ಕೆ ಬೇಕಾದ ಅನುಕೂಲಗಳನ್ನು ಮಾಡಬೇಕಾದರೆ ಹೆಚ್ಚು ನೀರಾವರಿಯಾಗಲು ಪ್ರಯತ್ನ ಮಾಡಬೇಕು. ಆದರೆ ಈ ಬಡ್ಜೆಟ್ಟನ್ನು ನೋಡಿದರೆ ಇದಕ್ಕಾಗಿ ಮೀಸಲಾಗಿಟ್ಟಿರತಕ್ಕ ಹಣ ಸಾಲದು ಎಂದು ಹೇಳುತ್ತೇನೆ. ಆಂಧ್ರ ಪ್ರದೇಶದ ಬಡ್ಜೆಟ್ಟನ್ನು ನೋಡಿದರೆ ಅವರು ಅನಾವಶ್ಯಕವಾದ ಬಾಬು ಗಳಿಗೆಲ್ಲಾ ಹಣವನ್ನು ಖರ್ಚು ಮಾಡದೆ ನೀರಾವರಿ ಯೋಜನೆಗಳಿಗಾಗಿ ಹೆಚ್ಚು ಹೆಚ್ಚು ಹಣವನ್ನು ಹಾಕುತ್ತಿದ್ದಾರೆ. ನಾನು ಸರಕಾರದಲ್ಲಿ ಅರಿಕೆ ಮಾಡಿಕೊಳ್ಳುವುದು, ಅನಾವಶ್ಯಕವಾಗಿ ಏನೇನು ಖರ್ಚು ಮಾಡಬೇಕೆಂದು ಬೇರೆ ಬಾಬುಗಳಲ್ಲಿ ನಿಗದಿಯಾಗಿದೆಯೋ ಅದನ್ನು ತೆಗೆದು ಆ ಹಣವನ್ನು ನೀರಾವರಿಗಾಗಿಯೇ ಮೀಸಲಾಗಿಟ್ಟು ಜನಕ್ಕೆ ವ್ಯವಸಾಯ ಮಾಡಲು ಅನುಕೂಲಗಳನ್ನು ಮಾಡಿ ಕೊಡಬಹುದು. ನಮ್ಮಲ್ಲಿ ಶೇಕಡಾ ಏಳರಷ್ಟು ಪ್ರದೇಶದಲ್ಲಿ ಮಾತ್ರ ಈಗ ನೀರಾವರಿಯಾಗುತ್ತಿದೆ. ಇದನ್ನು ಆದಷ್ಟು ಜಾಗ್ರತೆಯಾಗಿ ಶೇಕಡಾ 28 ರಿಂದ 30ರಷ್ಟಕ್ಕೆ ಹೆಚ್ಚುವಂತೆ ಮಾಡಿದರೆ ಆಗ ನಮ್ಮ ಸಮಸ್ಯೆಗಳು ಬಗೆಹರಿಯುತ್ತವೆ ಇಲ್ಲದೇ ಇದ್ದರೆ ಆಗುವುದಿಲ್ಲ. ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಬೇಕೆಂದು ಶರಾವತಿ, ಅಪ್ಪರ್ ಕೃಷ್ಣಾ, ಮಲಪ್ರಭಾ, ಘಟಪ್ರಭಾ ಹಾಗೂ ಕಾವೇರಿ ನದಿಯ ಬಯಲಿನಲ್ಲಿ ಅನೇಕ ಯೋಜನೆಗಳನ್ನು ಮಾಡಬೇಕೆಂದು ತೆಗೆದುಕೊಳ್ಳುತ್ತಿದ್ದೇವೆ. ಆದರೆ ಇವಕ್ಕಾಗಿ ಒಂದು ಕೋಟಿ, ಎರಡು ಕೋಟಿಗಳಷ್ಟು ಖರ್ಚು ಮಾಡಿದರೂ ಇವು ಪೂರ್ತಿಯಾಗುವುದಿಲ್ಲ. ಆದುದ ರಿಂದ ನಾನು ನಮ್ಮ ಆರ್ಥಿಕ ಮಂತ್ರಿಗಳಲ್ಲಿ ಹೇಳುವುದು, ಅನೇಕ ಪ್ರಾಜೆಕ್ಟುಗಳಲ್ಲಿ ನಮಗೆ ಬರ ಬೇಕಾದ ಅರಿಯರ್ಸ್ ಬೇಕಾದಷ್ಟಿದೆ. ಅವನ್ನೆಲ್ಲಾ ವಸೂಲು ಮಾಡಲು ತೀವ್ರವಾದ ಕ್ರಮಗಳನ್ನು ತೆಗೆದುಕೊಂಡು ಕೆಲಸ ಮಾಡುವುದು ಅಗತ್ಯ. ಅಲ್ಲದೆ ನಮ್ಮಲ್ಲಿ ಎಷ್ಟೋ ಸ್ಕೀಮುಗಳಿವೆ.

(ಶ್ರೀ ಗಾಂಜಿ ವೀರಪ್ಪ)

ಎನ್. ಇ. ಎಸ್. ಸ್ಕೀಮು ಹಾಗೂ ಇನ್ನಿತರ ಯೋಜನೆಗಳಲ್ಲಿ ಏನು ಖರ್ಚು ಮಾಡಬೇಕೆಂದಿದ್ದೇವೋ ಅವುಗಳಲ್ಲಿ ಅರ್ಧ ಭಾಗದಷ್ಟನ್ನು ಖೋತಾ ಮಾಡಬಹುದು ಮತ್ತು ಇದರ ಆಡಳಿತದ ವಿಭಾಗದಲ್ಲಿ ಅರ್ಧದಷ್ಟು ಖೋತಾ ಮಾಡಬಹುದು. ಇದರಿಂದ ನಮ್ಮ ರಿಸೋರ್ಸಸ್‌ಗಳನ್ನೂ ಹೆಚ್ಚಿಗೆ ಮಾಡಬೇಕು. ಇದನ್ನು ತೀವ್ರವಾಗಿ ಯೋಚನೆ ಮಾಡಬೇಕು. ಅಲ್ಲದೆ ನಮ್ಮ ಪ್ರೊಹಿಬಿಷನ್ನು ಪಾಲಸಿಯನ್ನು ರಿವೈಸು ಮಾಡಬೇಕಾಗಿದೆ ಎಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳೇ ಹೇಳುತ್ತಾ 'it requires rethinking' ಎಂದು ಹೇಳಿದ್ದಾರೆ. ಇದನ್ನು ಜಾಗ್ರತೆಯಾಗಿ ಏನು ಮಾಡಬೇಕು ಎನ್ನುವುದನ್ನು ಪರಿಶೀಲನೆ ಮಾಡಬೇಕು. ಹೀಗೆ ನಾನಾ ವಿಧದಲ್ಲಿ ನಮಗೆ ಬರುವ ವರಮಾನವನ್ನು ಹೆಚ್ಚು ಮಾಡಿಕೊಂಡು ಇರಿಗೇಷನ್ ಬಾಬಿಗಾಗಿ ಹೆಚ್ಚು ಖರ್ಚು ಮಾಡಿದರೆ ನಮ್ಮ ದೇಶದಪ್ರಗತಿ ಸಾಧನೆಯಾಗುತ್ತದೆ, ಇಲ್ಲದೇ ಇದ್ದರೆ ಬೇರೆ ಮಾರ್ಗವೇ ಇಲ್ಲ.

ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿಯೂ ಕೆಲವು ನೀರಾವರಿ ಯೋಜನೆಗಳಾಗಿವೆ. ಬರಗಾಲದ ಜಿಲ್ಲೆಗಳಲ್ಲಿ ನಮ್ಮ ಚಿತ್ರದುರ್ಗ ಜಿಲ್ಲೆ ಕೂಡ ಒಂದು. ಇಲ್ಲಿ ನೀರಾವರಿ ಯೋಜನೆಗಳು ಅಗತ್ಯವಾಗಿ ಆಗಬೇಕು. ನಮ್ಮ ಭಾಗದಲ್ಲಿರುವ ವಾಣಿವಿಲಾಸ ಕೆರೆಗೆ ವಗಚಿ ನದಿಯಿಂದ ನೀರನ್ನು ಡೈವರ್ಟು ಮಾಡಬೇಕೆಂದು ಇದ್ದುದನ್ನು ಇನ್ನೂ ಫೈನಲೈಸ್ ಮಾಡಿಲ್ಲ, ಇದನ್ನು ಮಾಡಿದರೆ ಇದರ ಕೆಳಗೆ ಸುಮಾರು 20-25 ಸಾವಿರ ಎಕರೆಯಷ್ಟು ಭೂಮಿಗೆ ನೀರು ಸಿಕ್ಕಿ ವ್ಯವಸಾಯ ಮಾಡಲು ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ತನಿಖೆ ಮಾಡುತ್ತಿದ್ದಾರೆಂದು ಕೇಳುತ್ತೇನೆ. ಆದಷ್ಟು ಜಾಗ್ರತೆಯಾಗಿ ತನಿಖೆಯನ್ನು ಪೂರೈಸಿ ಇದನ್ನು ನಾಲ್ಕನೇ ಯೋಜನೆಯಲ್ಲಾದರೂ ಸೇರಿಸಲು ಪ್ರಯತ್ನ ಮಾಡಿದರೆ ಇದು ಕಾರ್ಯಗತವಾಗುವುದಕ್ಕೆ ಸಾಧ್ಯವಾಗುತ್ತದೆ. ಇದೇ ರೀತಿಯಾಗಿ ಇನ್ನೂ ಕೆಲವು ಯೋಜನೆಗಳನ್ನು ಮಾಡಬೇಕಾಗಿದೆ, ಜಿನಿಗೆ ಹಳ್ಳದ ಯೋಜನೆಯನ್ನು ಮಾಡಿದರೆ ಚಳ್ಳಕೆರೆ ತಾಲ್ಲೂಕಿನಲ್ಲಿರುವ ನಾಯಕನಹಟ್ಟಿ ಹೋಬಳಿಯ ಜನಗಳಿಗೆ ಸ್ವಲ್ಪಮಟ್ಟಿನ ಅನುಕೂಲಗಳು ಸಿಗುತ್ತವೆ. ಅದೇ ತಾಲ್ಲೂಕಿನಲ್ಲಿರುವ ಸುವರ್ಣಮುಖಿ ಯೋಜನೆ ಇದೆ, ಹೀಗೆ ಕೆಲವಾರು ದೊಡ್ಡ ದೊಡ್ಡ ಯೋಜನೆಗಳಿರುವುದನ್ನು ಪರಿಪೂರ್ಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆಲ್ಲಾ ಹಣದ ಅಭಾವವಿರುವುದರಿಂದಾಗಿ ಇವನ್ನು ಮಾಡುವುದಕ್ಕೆ ಆಗಿಲ್ಲ. ಇನ್ನು ಅಪ್ಪರ್ ಕೃಷ್ಣಾ ಯೋಜನೆ ಎಂದು ಏನು ಮಾಡಬೇಕೆಂದಿದ್ದಾರೋ ಅದನ್ನು ಕೇಂದ್ರ ಸರಕಾರದವರೇ ಪೂರ್ತಿಯಾಗಿ ವಹಿಸಿಕೊಳ್ಳುವುದಕ್ಕೆ ನಾವು ಬಹಳ ಒತ್ತಾಯ ಮಾಡಬೇಕು. ಅದಿಲ್ಲದಿದ್ದರೆ ಈಗಿನ ಪರಿಸ್ಥಿತಿಯಲ್ಲಿ ದೊಡ್ಡ ದೊಡ್ಡ ಯೋಜನೆಗಳಿಗಾಗಿ ರಿಸೋರ್ಸಸ್‌ಗಳನ್ನು ನಿಗದಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಶರಾವತಿ ಯೋಜನೆಯೊಂದಕ್ಕೇ ನಮಗೆ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಆಗಲಿಲ್ಲ. ಹಾಗೇ ಕಾಳೀ ನದಿಯ ಯೋಜನೆಯೂ ಇದೆ. ಇದು ಒಂದು ಒಳ್ಳೆಯ ಯೋಜನೆ. ಶರಾವತಿಯಲ್ಲಿ ನಮಗೆ ಎಷ್ಟು ಪವರು ದೊರಕುತ್ತದೋ ಅದಕ್ಕಿಂತ ಹೆಚ್ಚಾಗಿ ಇದರಲ್ಲಿ ಪವರ ದೊರಕುತ್ತದೆ ಎನ್ನುವುದು ನಮಗೆ ದೊರೆತಿರುವ ಅಂಕೆ ಅಂಶಗಳಿಂದ ಗೊತ್ತಾಗುತ್ತದೆ. ಕಾಳೀ ನದಿಯ ಯೋಜನೆಯನ್ನು ಪೂರ್ತಿಯಾಗಿ ಕೇಂದ್ರ ಸರಕಾರದವರೇ ವಹಿಸಿಕೊಂಡು ಅದಕ್ಕೆ ರಿಸೋರ್ಸಸ್‌ಗಳನ್ನು ಪ್ರೊವೈಡು ಮಾಡಿದರೆ ಇದನ್ನು ಮಾಡಲು ಸಾಧ್ಯವಿದೆ. ಹಾಗಿಲ್ಲದೆ ನಾವೇ ಇದಕ್ಕಾಗಿ ನೂರಾರು ಕೋಟಿ ರೂಪಾಯಿಗಳಷ್ಟು ಒದಗಿಸಬೇಕೆಂದರೆ ಬಹಳ ಕಷ್ಟವಾಗುತ್ತದೆ. ಈಗಿನಿಂದಲೇ ಈ ವಿಚಾರದಲ್ಲಿ ಪ್ರಯತ್ನಮಾಡಿ ಹೆಚ್ಚು ಹಣವನ್ನು ಇದಕ್ಕಾಗಿ ತೆಗೆದುಕೊಳ್ಳುವುದು ಅಗತ್ಯ ಎಂದು ಸರಕಾರದಲ್ಲಿ ಒತ್ತಿ ಒತ್ತಿ ಹೇಳುತ್ತಲಿದ್ದೇನೆ.

ಇದೇ ರೀತಿ ಇರಿಗೇಷನ್ನು ಮಾಡುವಾಗ ಲಿಫ್ಟ್ ಇರಿಗೇಷನ್ ಸ್ಕೀಮು ಎಂದು ಮಾಡಬೇಕೆಂದು ವಿಚಾರ ಮಾಡುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಇದನ್ನು ಯಾವ ರೀತಿ ಮಾಡಬೇಕು ? ಇದನ್ನು ಕೋ-ಆಪರೇಟೀವ್ ಸೊಸೈಟಿಗಳ ಮುಖಾಂತರ ಮಾಡಬೇಕೇ ? ಇಲ್ಲವೇ ಪಿ. ಡಬ್ಲ್ಯು. ಡಿ. ಯವರೇ ಮಾಡಬೇಕೇ ಎನ್ನುವುದನ್ನು ಇನ್ನೂ ಯೋಚನೆ ಮಾಡುತ್ತ ಇದ್ದಾರೆ. ಕೋ-ಆಪರೇಟೀವ್ ಸೊಸೈಟಿಗಳ ಮುಖಾಂತರ ಲಿಫ್ಟ್ ಇರಿಗೇಷನ್ನು ಮಾಡುತ್ತಿರುವುದು ಚೆನ್ನಾಗಿ ನಡೆಯುತ್ತಿದೆ. ನಮ್ಮ ಹರಿಹರಕ್ಕೆ ಸ್ವಲ್ಪ ದೂರದಲ್ಲಿ ಹೊಸಪೇಟೆ ಎಂಬಲ್ಲಿ ಚೆನ್ನಾಗಿ ಮಾಡುತ್ತಿದ್ದಾರೆ. ಅದೇ ರೀತಿ ಇಲ್ಲಿಯೂ ಮಾಡಬಹುದು. ಹಾಗೆ ಮಾಡಲು ಸಾಧ್ಯವಾಗದಿದ್ದರೆ ಇದನ್ನು ಪಿ.ಡಬ್ಲ್ಯು.ಡಿ. ಇಲಾಖೆಯವರೇ ತೆಗೆದುಕೊಂಡು ಎಲ್ಲೆಲ್ಲಿ ನೀರಿನ ಸೌಕರ್ಯಗಳಿವೆಯೋ ಅದನ್ನು ನೋಡಿಕೊಂಡು ಅಲ್ಲಿ ಲಿಫ್ಟ್ ಇರಿಗೇಷನ್ನು ಸ್ಕೀಮನ್ನು ತೆಗೆದುಕೊಳ್ಳಬೇಕು. ಎಲ್ಲೆಲ್ಲಿ ಸಾಧ್ಯವೊ ಅಲ್ಲೆಲ್ಲಾ ಇದನ್ನು ಮಾಡಬಹುದು. ಆದುದರಿಂದ ನಾನು ಒತ್ತಾಯ ಮಾಡಿ ಒಂದು ಮಾತನ್ನು ಹೇಳುತ್ತೇನೆ. ನಮ್ಮ ದೇಶದಲ್ಲಿಯ ನೀರಾವರಿ ಪ್ರದೇಶ ಹೆಚ್ಚು ಮಾಡುವುದಕ್ಕೋಸ್ಕರ ಬೇರೆ ಡಿಪಾರ್ಟ್‌ಮೆಂಟುಗಳಿಗೆ ಒದಗಿಸಿರತಕ್ಕ ಹಣವನ್ನು ಖೋತಾ ಮಾಡಿ ಆ ಹಣವನ್ನು ನೀರಾವರಿಗೆ ಉಪಯೋಗಿಸುವ ಹಾಗೆ ಸರ್ವ ಪ್ರಯತ್ನ

ಸರಕಾರ ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಕ್ಲಾಸ್ ಫೋರ್ ಸರ್ವೆಂಟ್ಸ್, ಲಾರಿ ಡ್ರೈವರ್ಸ್, ಕ್ಲೀನರ್ಸ್ ಮುಂತಾದವರು ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಕೂಡ ಅವರು ಟೆಂಪರರಿ ಸ್ಟಾಫ್ ಎಂದು ಇಟ್ಟುಕೊಂಡಿದ್ದಾರೆ. ಅಂಥವರನ್ನು ಪರ್ಮನೆಂಟ್ ಆಗಿ ಮಾಡಿಲ್ಲ. ಇಂಥ ಟೆಂಪರರಿ ಎಸ್ಟಾಬ್ಲಿಶ್‌ಮೆಂಟ್ ಕಾಯಂ ಮಾಡಬೇಕು. ಅವರಿಗೆ ಅನುಕೂಲ ಮಾಡಿಕೊಡಬೇಕು. ಇವಲ್ಲದೆ ಎಲ್ಲ ಡಿಪಾರ್ಟ್‌ಮೆಂಟಿನಲ್ಲಿ ಇಂಟರ್ ಸ್ಟೇಟ್ ಸೀನಿಯಾರಿಟಿ ಪಟ್ಟಿಯನ್ನು ಜಾಗ್ರತೆ ತಯಾರ್ಮಾಡಬೇಕು ಎಂದು ಹೇಳಿ ನನ್ನ ಈ ನಾಲ್ಕು ಮಾತು ಮುಗಿಸುತ್ತೇನೆ.

†ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರೀಬಿದನೂರು).—ಮಾನ್ಯ ಸಭಾಪತಿಗಳೇ, ಈ ವರ್ಷದ ಬಜೆಟ್ಟಿನಲ್ಲಿ ಪಿ.ಡಬ್ಲ್ಯು.ಡಿ. ಇಲಾಖೆಗೆ ಒದಗಿಸಿರುವ ಹಣ ಬಹಳ ಕಡಿಮೆ. ಇಂದು ದೇಶದಲ್ಲಿ ಆಹಾರ ಸಮಸ್ಯೆ ಎಲ್ಲರ ಮುಂದೆ ನಿಂತುಕೊಂಡಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 18 ವರ್ಷ ಆಡಳಿತ ನಡೆಸಿದರೂ ಕೂಡ ಸರಕಾರದ ಮುಂದೆ ಮುಖ್ಯವಾಗಿ ಆಹಾರ ಸಮಸ್ಯೆ ಇದೆ. ಈ ಇಲಾಖೆಗೆ ಒದಗಿಸಿರತಕ್ಕ ಹಣ ಕಡಿಮೆಯಾಗಿದೆ. ಬಜೆಟ್ಟಿನಲ್ಲಿ ಹಣ ಒದಗಿಸಿರತಕ್ಕ ಕೆಲವು ಇಲಾಖೆಗಳಿಂದ ಪ್ರಯೋಜನವಿಲ್ಲ. ಅಂಥ ಇಲಾಖೆಗಳಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಕೆಲಸವಿಲ್ಲ. ತಿಂಗಳು ಮುಗಿದ ಬಳಿಕ ಸಂಬಳದ ದಾರಿ ನೋಡುತ್ತಿರುತ್ತಾರೆ. ಇದರಿಂದ ಜನರಿಗೆ ಒಳ್ಳೆಯದಾಗುವುದಿಲ್ಲ. ಇಂಥ ಇಲಾಖೆಗಳ ಮೇಲೆ ವ್ಯಯ ಮಾಡತಕ್ಕ ಹಣವನ್ನು ಅಲ್ಲಿ ಖರ್ಚು ಮಾಡದೆ ಅದನ್ನು ನೀರಾವರಿ ಕಾಮಗಾರಿಗಳಿಗೆ ಉಪಯೋಗಿಸಬೇಕು. ಯಾಕಂದರೆ, ಇಂದು ದೇಶದಲ್ಲಿ ಆಹಾರ ಸಮಸ್ಯೆ ಬೃಹದಾಕಾರವಾಗಿ ಬೆಳೆದುಕೊಂಡು ನಿಂತಿದೆ. ಈ ಸಮಸ್ಯೆಗೆ ಆದ್ಯ ಪ್ರಾಮುಖ್ಯತೆ ಕೊಡಬೇಕಾಗಿದೆ. ಎಲ್ಲ ಇಲಾಖೆಗಳ ಖರ್ಚನ್ನು ಈ ಒಂದು ಇಲಾಖೆಗೆ ದೊರಕಿಸಿಕೊಡಬೇಕೆಂದು ಸೂಚಿಸುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ನಡೆಯಬೇಕಾದ ಕೆಲಸದ ಬಗ್ಗೆ ಪಿ.ಡಬ್ಲ್ಯು.ಡಿ. ಬಹಳ ಅಶ್ರದ್ಧೆ ವಹಿಸಿದೆ. ಒಂದು ಅಣೆಕಟ್ಟೂ ನಮ್ಮ ತಾಲ್ಲೂಕಿನಲ್ಲಿ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ನೀರು ಹೆಚ್ಚಾಗಿದೆ. ಅದನ್ನು ಎಕ್ಸ್‌ಪ್ಲಾಯಿಟ್ ಮಾಡಿ ವಿನಿಯೋಗಿಸಬೇಕೆಂದು ಹೇಳುತ್ತೇನೆ. ಈ ಬಗ್ಗೆ ಸರ್ವೆ ಮಾಡಿಲ್ಲ. ನಮ್ಮ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಗೌರೀಬಿದನೂರು ತಾಲ್ಲೂಕಿನಲ್ಲಿ ಅಂಡರ್ ಗ್ರೌಂಡ್ ಪೆರೇನಿಯಲ್ ವಾಟರ್ ಸಪ್ಲೈ ವಿಪರೀತ ಇದೆ. ಇದನ್ನು ವಿನಿಯೋಗಿಸಿ ನಮ್ಮ ಒಂದು ತಾಲ್ಲೂಕಿನಲ್ಲಿ ಆಹಾರ ಧಾನ್ಯ ಬೆಳೆದರೆ ಇಡೀ ಜಿಲ್ಲೆಗೆ ಆಹಾರ ಧಾನ್ಯ ಒದಗಿಸಬಹುದು. ಅಷ್ಟು ಶಕ್ತಿ ನಮ್ಮ ತಾಲ್ಲೂಕಿಗೆ ಇದೆ. ಆದರೆ ಈ ಕೆಲಸಕ್ಕೆ ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲ. ಬೇರೆ ಅನೇಕ ಕೆಲಸಗಳನ್ನು ತೆಗೆದುಕೊಂಡಿದ್ದೀರಿ. ಆದರೆ ಯಾವ ಒಂದು ಕೆಲಸ ಕೂಡ ಕಂಪ್ಲೀಟ್ ಆಗಿಲ್ಲ. ಪ್ರಾರಂಭ ಮಾಡಿದ ಕೆಲಸ ಅರ್ಧಕ್ಕೆ ನಿಂತು ಹೋಗಿವೆ. ಈ ರೀತಿ ಮಾಡುವುದರಿಂದ ಏನೂ ಪ್ರಯೋಜನ ವಾಗುವುದಿಲ್ಲ. 'ಸ್ಪಿಲ್ ಓವರ್' ಬಗ್ಗೆ ಇರುವ 14 ಕೋಟಿ ರೂಪಾಯಿ ಈ ಕೆಲಸಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲವೇ ? ಇದಕ್ಕೆ ಕಾರಣ ಯಾರು ? ಹತ್ತಾರು ಕಾಲುವೆ ಕೆರೆ ಕೆಲಸ ತೆಗೆದುಕೊಂಡಿದ್ದೀರಿ. ಆದರೆ ಯಾವ ಕೆಲಸವೂ ಪೂರ್ತಿಯಾಗಿಲ್ಲ. ಪೇಪರ್ಸ್ ಯಾವದೋ ಗುಮಾಸ್ತನ ಕೈಗೆ ಸಿಕ್ಕು ಬಿಟ್ಟು ಎಲ್ಲಿಯೋ ಹೋಗುತ್ತವೆ. ಎಂಟು ಹತ್ತು ಇಂಥ ಕೆಲಸಗಳಿವೆ. ಎಸ್ಟಿಮೇಟು ಆಗಿದೆ, ಆದರೂ ಕೂಡ ಹೆಚ್ಚು ಹಣ ಖರ್ಚಾಗುತ್ತಿದೆ. ಅಲ್ಲಿ ಇರತಕ್ಕಂಥ ಸಿಬ್ಬಂದಿಗೆ ಕೆಲಸವಿಲ್ಲ. ಹೊಸದಾಗಿ ಬಜೆಟ್ಟಿನಲ್ಲಿ ಒದಗಿಸಿದ ಹಣ ಖರ್ಚು ಮಾಡೋಣ ಎಂದು ಮಾಮೂಲು ಕೆಲಸ ನಡೆಯುತ್ತಿದೆ. ಇದರಿಂದ ಜನಕ್ಕೆ ಮಾತ್ರ ತೊಂದರೆಯಾಗುತ್ತಿದೆ. ಯಾಕಂದರೆ ಯಾರಿಗೂ ಕೆಲಸದಲ್ಲಿ ಶ್ರದ್ಧೆಯಿಲ್ಲ. ನಮ್ಮ ತಾಲ್ಲೂಕಿಗೆ ಒಂದು ಸಲ ಚೀಫ್ ಎಂಜಿನಿಯರ್ ಅವರು ಬಂದಾಗ್ಗೆ ಅನ್ಯಾಯವಾಗಿ ನಿಂತು ಹೋದ ಕೆಲಸ ನೋಡಿ ತಕ್ಷಣ ಕೆಲಸ ನಡೆಸಲು ಸ್ಥಳದಲ್ಲೇ ತೀರ್ಮಾನ ಕೊಟ್ಟರು. ಇದರಿಂದ ಕೂಡಲೆ ಕೆಲಸ ಪ್ರಾರಂಭವಾಯಿತು. ಈ ರೀತಿ ಯುದ್ಧ ಕಾಲದಲ್ಲಿ ಜಾಗ್ರತೆ ಕೆಲಸ ಮಾಡುವ ಹಾಗೆ ಮನಸ್ಸು ಮಾಡಿ ಕೆಲಸ ಮಾಡಬೇಕು. ಜನಕ್ಕೆ ಸಂತೋಷವನ್ನುಂಟುಮಾಡಲು ಇಂಪೆಟಸ್ ಕೊಟ್ಟು ಟೆಂಪೋ ಕ್ರಿಯೇಟ್ ಮಾಡಬೇಕೆಂದು ವೀರೇಂದ್ರ ಪಾಟೀಲ್ ಅವರಿಗೆ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಇಂಥ ಹಳೇ ಕೆಲಸಗಳು ಬಹಳ ಇವೆ. ದಯವಿಟ್ಟು ತಾವು ಬಂದು ನೋಡಿ ಇದಕ್ಕೆ ಯಾರು ಯಾರು ಕಾರಣಕರ್ತರು ಎನ್ನುವುದನ್ನು ಕಂಡು ಹಿಡಿದು ಕೆಲಸ ತೆಗೆದುಕೊಳ್ಳುವ ಧಿಟ್ಟತನ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ನಮ್ಮ ತಾಲ್ಲೂಕಿನಲ್ಲಿ ಅಂಡರ್ ಗ್ರೌಂಡ್ ವಾಟರ್ ಸಪ್ಲೈ ಚೆನ್ನಾಗಿದೆ. ಆದುದರಿಂದ ಇಪ್ಪತ್ತು ಅಥವಾ ಮೂವತ್ತು ಅಡಿ ಕೆಳಗೆ ಹೋದರೆ ಬಾವಿಯಲ್ಲಿ ಬೇಕಾದಷ್ಟು ನೀರು ದೊರೆಯುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಸಾವಿರಾರು ಬಾವಿ ಕೆಲಸ ತೆಗೆದುಕೊಳ್ಳುವ ಯೋಜನೆ ಇದ್ದರೂ ಒಂದು ಬಾವಿ ಕೆಲಸ ಕೂಡ ತೆಗೆದುಕೊಂಡಿಲ್ಲ. ಬಾವಿ ತೆಗೆಯುವುದಕ್ಕೆ ದುಡ್ಡು ಕೇಳಿದರೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಒಂದು ಬಾವಿಯಿಂದ ಐದು ಎಕರೆ ಸಾಗುವಳಿ

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಮಾಡಬಹುದು. ನಮ್ಮ ತಾಲ್ಲೂಕಿನಲ್ಲಿ ಸಾವಿರಾರು ಬಾವಿಗಳನ್ನು ಮಾಡಬಹುದು. ಪೊಟೆನ್‌ಷಿಯಲ್ ಆಗಿರುವ ನೀರನ್ನು ಎಕ್ಸ್‌ಪ್ಲಾಯಿಟ್ ಮಾಡಬೇಕಾಗಿದೆ. ಇದೊಂದು ಸುಪ್ತ ನಿಧಿಯಂತಿದೆ. ನಮ್ಮ ಗೌರಿಬಿದನೂರು ತಾಲ್ಲೂಕು ಆಂಧ್ರ ಬಾರ್ಡರಿಗೆ ಹೊಂದಿಕೊಂಡಿರುವುದರಿಂದ ನಮ್ಮ ತಾಲ್ಲೂಕಿನಲ್ಲಿ ಮಳೆಯಿಂದ ಬರತಕ್ಕ ನೀರು ಹರಿದು ಆಂಧ್ರಕ್ಕೆ ಹೋಗುತ್ತದೆ. ಕಾಲುವೆ ಮಾಡಿ ಈ ನೀರನ್ನು ಉಪಯೋಗಿಸುವ ಹಾಗೆ ಮಾಡುವುದಾದರೆ ಅಲ್ಲಿಯ ಜನರಿಗೆ ಬಹಳ ಅನುಕೂಲವಾಗುತ್ತದೆ. ಹರಿದು ಹೋಗುವ ನೀರನ್ನು ತಡೆಗಟ್ಟಿ ಅದನ್ನು ಉಪಯೋಗಿಸಿದರೆ ಹೆಚ್ಚು ಬೆಳೆ ಬೆಳೆಯಬಹುದು. ಈ ನೀರು ಉಪಯೋಗಿಸುವ ಹಾಗೆ ಜಾಗ್ರತೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಆಗಬೇಕಾದ ಅನೇಕ ಕೆಲಸಗಳಲ್ಲಿ ಲ್ಯಾಂಡ್ ಅಕ್ವಿಜಿಷನ್ ವಿಚಾರದಲ್ಲಿ ನಾನು ಒಂದು ಪ್ರಶ್ನೆ ಕಳಿಸಿದ್ದೆ. ಅದಕ್ಕೆ ಉತ್ತರ ದೊರೆತಿಲ್ಲ. ಒಂದು ಕಾಲುವೆ ಮಾಡಿ ಬಿಟ್ಟಿದ್ದಾರೆ, ಅಲ್ಲಿ ಒಂದು ಫರ್ಲಾಂಗು ಜಮೀನು ಅಕ್ವೈರ್ ಮಾಡಬೇಕಾಗಿದೆ, ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮೋರಿ ಮಾಡಿದ್ದಾರೆ. ಇದಕ್ಕೆ ತಡೆ ಉಂಟಾಗಿರುವುದಕ್ಕೆ ಒಬ್ಬ ಪ್ರಬಲ ಪ್ರಭಾವಿ ವ್ಯಕ್ತಿ ಕಾರಣವಾಗಿದೆ. ಅವರು ತಮ್ಮ ಪ್ರಭಾವ ಬೀರಿ ಅಕ್ವಿಜಿಷನ್‌ಗೆ ಅಡಚಣೆ ಉಂಟುಮಾಡಿದ್ದಾರೆ. ಹಾಗೂ ಅಕ್ವೈರ್ ಮಾಡುವುದನ್ನು ಚಾಲೆಂಜ್ ಕೂಡ ಮಾಡುತ್ತಾರೆ. ಒಂದು ಫರ್ಲಾಂಗು ಜಮೀನು ತೆಗೆದುಕೊಳ್ಳಲು ಸಾಧ್ಯವಿಲ್ಲದೆ ಈ ಕೆಲಸ ನಿಂತು ಹೋಗಿದೆ. ಇದರಿಂದ ಬಹಳ ತೊಂದರೆಯಾಗಿದೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಕಾನೂನು ಬದಲಾವಣೆ ಮಾಡಬೇಕು ಎಂದು ಸೂಚಿಸುತ್ತೇನೆ. ಈ ಆರ್ಡರ್‌ನಲ್ಲಿರುವ ಲೋಪದೋಷಗಳನ್ನು ಸರಿಪಡಿಸಿದರೆ ಖಂಡಿತವಾಗಿ ಜಮೀನು ಅಕ್ವೈರ್ ಮಾಡುವುದು ಪ್ರಯಾಸವಾಗುವುದಿಲ್ಲ. ಒಟ್ಟಿನಲ್ಲಿ ನೀರಾವರಿ ಕಾಮಗಾರಿಗಳಿಗೆ ಹೆಚ್ಚು ಪ್ರಾಧಾನ್ಯ ಕೊಡತಕ್ಕದ್ದು ಅಗತ್ಯ ಎಂದು ಹೇಳಬಯಸುತ್ತೇನೆ. ಅಕ್ವಿಜಿಷನ್ ಮಾಡುವುದು ಒಂದು ದೊಡ್ಡ ಸಮಸ್ಯೆ ಆಗಿದೆ. ಈ ವಿಚಾರದಲ್ಲಿ ಸರಕಾರ ಚೆನ್ನಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ.

ಇನ್ನು ಕಂಟ್ರಾಕ್ಟರ್ಸ್ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಮಾತನಾಡಿ ಹೇಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಕಂಟ್ರಾಕ್ಟರ್ಸ್ ಇಲ್ಲ. ಕಂಟ್ರಾಕ್ಟರ್ಸ್ ಆಗುವುದು ಕೆಲವೇ ಜನರಿಗೆ ಅವಕಾಶ ಇದೆ, ಎಲ್ಲರಿಗೂ ಅವಕಾಶವಿಲ್ಲ. ಈ ರೀತಿ ಇರುವುದರಿಂದ ಅದು ಕೆಲವೇ ಜನರ ಮನಾಪಲಿ ಆಗಿದೆ. ಒಂದೆರಡು ಸಾವಿರ ರೂಪಾಯಿ ಸಣ್ಣ ಪುಟ್ಟ ಕೆಲಸ ಮಾಡತಕ್ಕವರು ಬಡವರು. ಈ ಕಂಟ್ರಾಕ್ಟರುಗಳಲ್ಲಿ ಎ, ಬಿ, ಸಿ, ಕ್ಲಾಸ್ ಎಂದು ಮಾಡಿದ್ದಾರೆ. ದೊಡ್ಡ ಕೆಲಸ ಎಲ್ಲರಿಗೂ ದೊರೆಯುವುದಿಲ್ಲ. ಈ ರೀತಿ ಕ್ಲಾಸ್ ಮಾಡಿರುವುದನ್ನು ತೆಗೆದುಹಾಕಬೇಕು. ಎಲ್ಲರಿಂದ ಡಿಪಾಜಿಟ್ ತೆಗೆದುಕೊಂಡು ಕೆಲಸ ಕೊಡುವುದು ಒಳ್ಳೆಯದು. ಚೆನ್ನಾಗಿ ಕೆಲಸ ಮಾಡುವವರಿಗೆ ಅವಕಾಶ ಮಾಡಿ ಕೊಡಬೇಕು. ಮನಾಪಲಿ ಮಾಡಿಕೊಂಡಿರುವುದನ್ನು ತೆಗೆದು ಹಾಕಿ ಅಂಥ ಪದ್ಧತಿ ತಪ್ಪಿಸಬೇಕು.

ಇನ್ನು ಸೇತುವೆಗಳ ವಿಚಾರ ಹೇಳುತ್ತೇನೆ. ನಮ್ಮ ಗೌರೀಬಿದನೂರಿನಲ್ಲಿ ಒಂದು ಸಕ್ಕರೆ ಕಂಪನಿ ಇದೆ, ಒಂದು ಕಾಲೇಜು ಇದೆ, ಒಂದು ಪಾಲಿಟೆಕ್ನಿಕ್ ಇದೆ. ಅನೇಕ ವಿದ್ಯಾರ್ಥಿಗಳು ಈ ಕಾಲಜಕ್ಕೆ ಬರುತ್ತಾರೆ. ಈ ಟೌನಿನಲ್ಲಿ ಬರುವುದಕ್ಕೆ ಆಗುವುದಿಲ್ಲ. ಯಾಕಂದರೆ ಎರಡು ಸೇತುವೆಗಳು ಆಗಬೇಕಾಗಿದೆ. ಬಜೆಟ್ಟಿನಲ್ಲಿ ಈ ಕಾಮಗಾರಿ ಸೇರಿಸಿಲ್ಲ. ಮುಂದಿನ ತಿಂಗಳಿನಲ್ಲಿ ದುಡ್ಡು ಬರುತ್ತದೆ ಎಂದು ಕೇಳಿದ್ದೇನೆ. ದುಡ್ಡು ಬಂದ ಕೂಡಲೆ ಈ ಎರಡು ಸೇತುವೆ ಮಾಡಿಸಿ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಯಾಕಂದರೆ ಈ ಸೇತುವೆಯಾಗುವುದರಿಂದ ಅನೇಕ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಕೊರಟಗೆರೆಯಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೂ ಸಹ ಬಹಳ ಅನುಕೂಲವಾಗುತ್ತದೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರ. ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಒಂದು ವಿಶಿಷ್ಟ ಪರಿಸ್ಥಿತಿ ಇದೆ. ರೆವಿನ್ಯೂ ಮಂತ್ರಿಗಳಿಗೆ ನಾನು ಒಂದು ಪ್ರಶ್ನೆ ಕಳಿಸಿದ್ದೆ. ಮಂತ್ರಿಗಳ ಪ್ರಭಾವದಿಂದ ಕೆಲವು ವ್ಯಕ್ತಿಗಳು ನಮ್ಮಲ್ಲಿ ನ್ಯಾಯಕ್ಕೆ ಮನ್ನಣೆ ಕೊಡುತ್ತಿಲ್ಲ. ಅನಾವಶ್ಯಕವಾಗಿ ಕಿರುಕಳ ಕೊಡುವುದಕ್ಕೆ ಪ್ರಾರಂಭವಾಗಿದೆ. ಮಂತ್ರಿಗಳ ಪ್ರಭಾವದಿಂದ ನ್ಯಾಯದ ಹಿಂದೆ ವ್ಯಕ್ತಿಗಳು ಹೊಂದಿಕೊಳ್ಳುವ ಹಾಗೆ ಆಗಿದೆ.

ಉದಾಹರಣೆಗೆ ಅಲ್ಲಿ ಈ ದಿವಸ 60 ಹಲ್ಲರ್ ಫ್ಲೋರ್ ಮಿಲ್ಲುಗಳಿವೆ. ಇವರುಗಳ್ಯಾರೂ ಸಕಾಲದಲ್ಲಿ ಲೈಸೆನ್ಸ್ ರಿನ್ಯೂವಲ್ಲಿಗೆ ಅರ್ಜಿಯನ್ನು ಹಾಕಿಲ್ಲ. ಆದರೆ ಇವರನ್ನೆಲ್ಲಾ ಕೈಬಿಟ್ಟು ಆ ಸಂಬಂಧಪಟ್ಟ ಅಧಿಕಾರಿಗಳು ಒಬ್ಬ ಮನುಷ್ಯನ ಮೇಲೆ ಪ್ರಾಸಿಕ್ಯೂಷನ್ ಹಾಕಿದ್ದಾರೆ. ಹೀಗೆ ಅಧಿಕಾರಿಗಳು ಅಲ್ಲಿ ತುಂಬಾ ಪಕ್ಷಪಾತ ಭಾವನೆಯನ್ನು ತೋರಿಸುತ್ತಿದ್ದಾರೆ. ಇದು ಸರಿಯಾದ್ದಲ್ಲ.

ಆದುದರಿಂದ ಸರ್ಕಾರದವರು ಸಂಬಂಧಪಟ್ಟ ಅಧಿಕ ರಿಗಳನ್ನು ಕರೆಸಿ ಏತಕ್ಕೆ ಹೀಗೆ ಒಬ್ಬನ ಮೇಲೆ ಪ್ರಾಸಿಕ್ಯೂಷನ್ ಹಾಕಲಾಗಿದೆ ಎಂದು ಸೂಕ್ತ ವಿಚಾರಣೆ ಮಾಡಬೇಕೆಂದು ಹೇಳಿ ಅವರಿಗೆ ಎಚ್ಚರಿಕೆ ಕೊಡಬೇಕೆಂದು ತಿಳಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೆ, ನಮ್ಮ ರಾಜ್ಯದಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು ಬಹಳ ಅತ್ಯಗತ್ಯ. ಆದರೆ ಈ ಬಾಬಿಗೆ ಒದಗಿಸಿರತಕ್ಕ ಹಣ ಬಹಳ ಕಡಮೆ, ಇದು ಯಾತಕ್ಕೂ ಸಾಲದು. ಈ ವಿಷಯವನ್ನ ಮಾನ್ಯ ಮಂತ್ರಿಗಳಿಗೆ ಎಲ್ಲಾ ಮಾನ್ಯ ಸದಸ್ಯರುಗಳೂ ಬಹಳ ಒತ್ತಾಯ ಪೂರ್ವಕವಾಗಿ ತಿಳಿಸಿದ್ದಾರೆ. ನನ್ನ ಅಭಿಪ್ರಾಯದಲ್ಲೂ ಕೂಡ ಸಣ್ಣ ನೀರಾವರಿ ಬಾಬಿಗೆ ಒದಗಿಸಿರತಕ್ಕ ಹಣ ಬಹಳ ಅಲ್ಪವಾದುದ್ದು ಅಂತಲೇ ಹೇಳ ಬಹುದು. ಇನ್ನು ದೊಡ್ಡ ನೀರಾವರಿ ಯೋಜನೆಗಳಿಗೇನೋ ಅಲ್ಪ ಸ್ವಲ್ಪ ಹಣವನ್ನು ಒದಗಿಸಿ ದ್ದಾರೆ. ಆದರೆ ಈ ಕಾರ್ಯವೂ ಕೂಡ ಅನೇಕ ಕಾರಣಗಳಿಂದ ಮುಂದುವರೆಯುತ್ತಿಲ್ಲ. ಇದಕ್ಕಿಂತಲೂ ತ್ವರಿತವಾಗಿ ಸಣ್ಣ ನೀರಾವರಿ ಕಾಮಗಾರಿಗಳನ್ನು ನಡೆಸಬೇಕಾದುದು ಅತ್ಯಗತ್ಯ. ಈ ಸಣ್ಣ ನೀರಾವರಿಗಳ ವಿಚಾರದಲ್ಲಿ ಮೊನ್ನೆತಾನೇ ಇದೇ ಸಭೆಯಲ್ಲಿ ಮಾತನಾಡುತ್ತಿದ್ದಾಗ ದೇಶದ ಸದ್ಯದ ಆಹಾರ ಪರಿಸ್ಥಿತಿಯಲ್ಲಿ ಅದನ್ನು ನೀಗುವುದಕ್ಕಾದರೂ ಇವುಗಳನ್ನು ಅತಿ ತ್ವರಿತವಾಗಿ ನಡೆಸಬೇಕೆಂದು ಎಲ್ಲಾ ಸದಸ್ಯರೂ ಒತ್ತಾಯ ಪೂರ್ವಕವಾಗಿ ತಿಳಿಸಿದ್ದಾರೆ. ನಾನು ಮೊನ್ನೆ ಇದೇ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆನು. ಅದನ್ನು ಇಲ್ಲಿ ಚರ್ಚೆ ಮಾಡುತ್ತಿದ್ದ ಕಾಲದಲ್ಲಿ ಸರ್ಕಾರದವರು ನನಗೆ ಜವಾಬನ್ನು ಕೊಡುತ್ತಾ ತಿಳಿಸಿದ್ದೇನೆಂದರೆ—ಈ ಬಾಬಿಗೆ ಹಿಂದೆ ಒದಗಿಸಿದ್ದ ಹಣವಿನ್ನೂ ಸಂಪೂರ್ಣವಾಗಿ ಖರ್ಚಾಗಿಲ್ಲ. ಅದು ಖರ್ಚಾಗದ ವಿನಾ ಇದಕ್ಕೆ ಬೇರೆ ಹಣ ವನ್ನು ಒದಗಿಸುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳಿದರು. ಆದರೆ ಇನ್ನೊಂದು ಸಂದರ್ಭದಲ್ಲಿ ಮಾತನಾಡುತ್ತ ಮಂತ್ರಿಗಳು ನಮ್ಮಲ್ಲಿ ಹಣದ ಅಭಾವವಿದೆ. ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ, ಅಲ್ಲಿಂದ ಹಣ ಬರುವವರೆಗೆ ನಾವು ಈ ಬಾಬಿಗೆ ಬೇರೆ ಹಣವನ್ನು ಒದಗಿಸುವುದಕ್ಕಾಗುವುದಿಲ್ಲ ಎಂತ ಹೇಳಿದ್ದಾರೆ. ಹೀಗೆ ಇವರು ಎರಡು ರೀತಿಯಲ್ಲಿ ವಾದ ಮಾಡಿದ್ದಾರೆ. ಆದುದರಿಂದ ಇವರ ಎರಡೂ ವಾದಗಳೂ ನನಗೆ ಸರಿಯೆಂದು ಕಾಣುವುದಿಲ್ಲ. ನಾನು ನನ್ನ ಒಂದು ಜಿಲ್ಲೆಯ ವಿಚಾರವನ್ನೇ ಹೇಳುವುದಾದರೆ : ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಸುಮಾರು 800 ಕೆರೆಗಳಿವೆ. ಅವುಗಳ ಬಗ್ಗೆ ಈ ದಿವಸ ಒದಗಿಸಿರತಕ್ಕ ಹಣ ಅತ್ಯಲ್ಪವಾದುದು. ಅಷ್ಟರಲ್ಲಿ ಯಾವ ಕೆಲಸವೂ ನಡೆಯು ವುದಿಲ್ಲ ಸಾಮಾನ್ಯವಾಗಿ ಒಂದೊಂದು ಕೆರೆಯ ದುರಸ್ತಿಗೂ ಸಂದರ್ಭಕ್ಕೆ ತಕ್ಕಂತೆ 6 ಸಾವಿರದಿಂದ ಹಿಡಿದು 15 ಸಾವಿರದವರೆಗೂ ಬೇಕಾಗಬಹುದು. ಆದರೆ ಇತ್ತೀಚೆಗೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಒಂದು ಕೆಲಸವನ್ನು ಪ್ರಾರಂಭ ಮಾಡಿದ ನಂತರ ಅದು ಪೂರ್ತಿ ಮುಗಿದ ವಿನಾ ಬೇರೆ ಕಾಮಗಾರಿಗಳನ್ನು ತೆಗೆದುಕೊಳ್ಳಬಾರದು ಒಂದು ಸರ್ಕ್ಯುಲರನ್ನು ಹೊರಡಿಸಿದ್ದಾ ರೆಂದು ಕೇಳುತ್ತೇನೆ. ಆದರೆ ಇದು ನ್ಯಾಯವಾದುದಲ್ಲ. ಕಾರಣಾಂತರಗಳಿಂದ ಒಂದು ಕಡೆ ಪ್ರಾರಂಭ ಮಾಡಿದ ಕೆಲಸಗಳಲ್ಲಿ ಕೆಲವು ಅರ್ಧದಲ್ಲಿ ನಿಂತಿರಬಹುದು, ಇನ್ನು ಕೆಲವು ಮುಕ್ಕಾಲು ಮುಗಿದಿರಬಹುದು, ಇನ್ನು ಕೆಲವು ಕೆಲವು ಅಧಿಕಾರಿಗಳ ಅಶ್ರದ್ಧೆಯಿಂದ ಪೂರ್ತಿಯಾಗದೆ ಹಾಗೇ ನಿಂತಿರಲೂ ಬಹುದು. ಹೀಗಿರುವಾಗ ಒಂದು ಕೆಲಸ ಪೂರ್ತಿಯಾಗದ ವಿನಾ ಬೇರೊಂದು ಕೆಲಸ ವನ್ನು ಪ್ರಾರಂಭಿಸಬಾರದೆಂಬುದು ಖಂಡಿತ ಸರಿಯಾದ ನೀತಿಯಲ್ಲ. ಕೆಲಸ ನಿಧಾನವಾಗುವುದಕ್ಕೆ ಕಾರಣರು ಯಾರು ಎಂಬುದನ್ನು ಕಂಡು ಹಿಡಿದು ಅವರಿಗೆ ಶಿಕ್ಷೆ ಮಾಡಹೆ ಕೆಲಸವನ್ನೇ ಮಾಡಬಾರ ದೆಂದು ಹೇಳತಕ್ಕದ್ದು ಸರಿಯಲ್ಲ. ದೇಶದಲ್ಲಿ ಆಹಾರ ಸಂಪತ್ತು ಹೆಚ್ಚಬೇಕು ಅನ್ನುವ ದೃಷ್ಟಿಯಿಂದ ಈ ಮೈನರ್ ಕೆರೆಗಳ ರೆಸ್ಟೋರೇಷನ್ ಕೆಲವು ಕಡೆ ಅಂದರೆ ಮಲೆನಾಡು ಪ್ರದೇಶದಲ್ಲಿ ಎಲ್ಲೆಲ್ಲಿ ಪಿಕಪ್ಪುಗಳನ್ನು ಹಾಕುವುದಕ್ಕೆ ಅವಕಾಶವಿದೆಯೋ ಅಂಥ ಕಡೆಗಳಲ್ಲಿ ಅವುಗಳನ್ನು ಮಾಡಬೇಕಾದ್ದು ಅತ್ಯಗತ್ಯ. ಇದರಿಂದ ದೇಶದ ಉತ್ಪನ್ನ ಹೆಚ್ಚುತ್ತದೆ ಅಂದರೆ, ನಾನು ಹೇಳುತ್ತಿರುವುದು ಎಲ್ಲಿ ಅತ್ಯಲ್ಪ ಖರ್ಚಿನಲ್ಲಿ ಹೆಚ್ಚು ಲಾಭದಾಯಕವಾದ ಕಾಮಗಾರಿಗಳನ್ನು ಮಾಡಲು ಅವಕಾಶವಿದೆಯೋ ಅಂಥ ಕಡೆಗಳಲ್ಲಾದರೂ ಈ ಕಾಮಗಾರಿಗಳನ್ನು ನಡೆಸತಕ್ಕ ಬಗ್ಗೆ ಈ ವರ್ಷವೇ ಹೆಚ್ಚಿನ ಹಣವನ್ನು ಮೀಸಲಾಗಿಟ್ಟು ಅವುಗಳನ್ನು ಕೈಗೊಳ್ಳಬೇಕಾದ್ದು ಅತ್ಯವಶ್ಯಕ.

ನಾನು ಇದೇ ಸಂದರ್ಭದಲ್ಲಿ ದೊಡ್ಡ ನೀರಾವರಿಗಳಿಗೆ ಸಂಬಂಧಪಟ್ಟ ಹಾಗೆ ಹೇಳಬೇಕೆಂದರೆ— ನಮ್ಮ ಹಾರಂಗಿ ಯೋಜನೆಯ ವಿಚಾರ ಬಂದಿದೆ. ಆದರೆ ಇದು ಒಂದು ದೊಡ್ಡ ಹಗರಣವಾಗೇ ನಿಂತಿದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲೇ ಇಂಥ ಒಂದು ಅತಿಲಾಭದಾಯಕವಾದ ಮತ್ತು ಉಪಯುಕ್ತವಾದ, ಇಷ್ಟು ಅತಿ ಕಡಿಮೆ ಖರ್ಚಿನಲ್ಲಿ ಆಗತಕ್ಕಂಥ ಪ್ರಾಜೆಕ್ಟ್ ಇಡೀ ದಕ್ಷಿಣ ಇಂಡಿಯಾದಲ್ಲೇ ಇಲ್ಲ ಎಂಬುದಾಗಿ ಹೇಳುತ್ತಿದ್ದರು. ಅಷ್ಟೇ ಅಲ್ಲ, ಇಲ್ಲಿಯವರೆಗೂ ಸರ್ಕಾರ ದವರು ಕಳೆದ 40-50 ವರ್ಷಗಳಿಂದ ಕೈಗೊಂಡಿರತಕ್ಕ ದೊಡ್ಡ ದೊಡ್ಡ ಯೋಜನೆಗಳೇನಿವೆ ಅವು

(ಶ್ರೀ ಜಿ. ಎ. ತಿಮ್ಮೇಗೌಡ)

ಗಳಲ್ಲಿ ಈ ಹಾರಂಗಿಯಷ್ಟು ಉಪಯುಕ್ತವಾದದು ಇನ್ನೊಂದಿಲ್ಲ ಎಂದು ಹೇಳಿದ್ದಾರೆ. ಇದು ಅಷ್ಟು ರೆಮ್ಯುನರೇಟೀವಾದದ್ದು. ಇದರ ಬಗ್ಗೆ ಈ ಹಿಂದೆ ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ ಒಂದು ಅಂದಾಜನ್ನು ಮಾಡಿದ್ದರು. ಆದರೆ ಅದು ನಿಂತು ಹೋಯಿತು. ಆದಾದ ಮೇಲೆ ಇದರ ಕಟ್ಟಡದ ಬಗ್ಗೆ ವಿವಾದವೆದ್ದು ಜಾಗವನ್ನು ಎರಡಾವರ್ತಿ ಬದಲಾವಣೆ ಮಾಡಿದರು. ಇತ್ತೀಚೆಗೆ ಕೇಂದ್ರ ಸರ್ಕಾರದ ಮಂತ್ರಿಗಳೂ ಮತ್ತು ಸಿ. ಡಬ್ಲ್ಯು. ಪಿ. ಸಿ. ಅವರು ಒಂದು ಸ್ಥಳಪರಿಶೀಲನೆ ಮಾಡಿ ಇದು ಮೊದಲಿದ್ದ ಜಾಗದಲ್ಲೇ ಇರಬೇಕೆಂದು ತಿಳಿಸಿದ್ದಾರೆಂಬುದಾಗಿ ನಾವು ಕೇಳುತ್ತಿದ್ದೇವೆ. ಅಂತೂ ಹೀಗೆ ಸ್ಥಳ ಬದಲಾವಣೆ ಹಾಗೂ ಕಟ್ಟಡದ ಎತ್ತರ ಇವುಗಳ ಬಗ್ಗೆ ವಿವಾದವೆದ್ದು ಇದು ಇಲ್ಲಿಯತನಕ ಕಾರ್ಯಗತವಾಗದೆ ಹಾಗೇ ಉಳಿದಿದೆ. ಇದರ ಪರಿಣಾಮ ವಾಗಿ ಇದರಿಂದ ನೀರಾವರಿಯಾಗಬೇಕಾಗಿದ್ದ ಸುಮಾರು ಒಂದು ಲಕ್ಷ ಐದು ಸಾವಿರ ಎಕರೆ ಜಮೀನು ಹಾಗೆ ಉಳಿದಿದೆ. ಹೀಗೆ 6-7 ವರ್ಷಗಳಾದರೂ ಇದು ತೀರ್ಮಾನವಾಗದೆ ನಿಂತಿರ ಕತ್ತದ್ದು ಬಹಳ ಶೋಚನೀಯ. ಆದರೆ ನಾನು ಇದರ ಬಗ್ಗೆ ಇತ್ತೀಚೆಗೆ ಇನ್ನೊಂದು ವಿಚಾರ ಕೇಳು ತ್ತಿದ್ದೇನೆ. ಹಾರಂಗಿಯ ಬಳಿ ಒಂದು ಕಟ್ಟೆಯನ್ನು ಹಾಕಿ ಆ ಕೊಡಗಿನವರನ್ನು ತೃಪ್ತಿಪಡಿಸುವುದು, ಇನ್ನೊಂದು ಕಡೆ ಇನ್ನೊಂದು ಕಟ್ಟೆಹಾಕಿ ಅದರಿಂದ ಮೈಸೂರಿನವರನ್ನು ತೃಪ್ತಿಪಡಿಸುವುದು ಎಂತ ಮಾಡಿದ್ದಾರಂತೆ. ಆದರೆ ಈ ಎರಡು ಕಟ್ಟೆಗಳಿಗೂ ಮಧ್ಯೆ ಒಂದು ಟನಲ್ಲನ್ನು ಹೊಡೆದು ಅಂದರೆ ಅದನ್ನು 600-700 ಅಡಿ ಫಾಸಲಿ ಆಳವಾಗಿ ಅದನ್ನು ತೋಡಿ ನೀರನ್ನು ಹೇಮಾವತಿಯಿಂದ ಹಾರಂಗಿಗೆ ತೆಗೆದುಕೊಂಡು ಹೋಗತಕ್ಕ ಒಂದು ಯೋಜನೆಯನ್ನು ಮಾಡಿದ್ದಾರೆಂದು ನಾನು ಕೇಳು ತ್ತಿದ್ದೇನೆ. ಹಾಗೇನಾದರೂ ಇದ್ದರೆ ಅದಕ್ಕೂ ಕೂಡ ದೊಡ್ಡ ಅಡ್ಡಿ ಆತಂಕಗಳು ಬರುತ್ತವೆಂದು, ಪ್ರಬಲ ವಿರೋಧಗಳು ಇದಕ್ಕೂ ಇರುತ್ತವೆ ಎಂದು ನಾನು ತಿಳಿಸಲಿಚ್ಛಿಸುತ್ತೇನೆ. ಇದರಿಂದ ನೀರು ಬಹಳ ಪೋಲಾಗುತ್ತದೆ. 600-700 ಅಡಿಗಳ ದೂರ ಸಾಗಿಸುವುದೆಂದರೇನು ? ಅಲ್ಲದೆ ಈ ಟನಲ್ ಬಹಳ ಆಳದಲ್ಲಿ ಹೋಗುವುದರಿಂದ ಮುಂದೆ ಬಾವಿಗಳಲ್ಲಿರತಕ್ಕ ನೀರೂ ಸಹಾ ಇಂಗಿ ಹೋಗು ವುದೆಂಬ ಒಂದು ಭಯ ಜನರಲ್ಲಿ ಈಗಾಗಲೇ ಮೂಡಿದೆ. ಆದುದರಿಂದ ಮೊದಲೇನು ಆ ಹಾರಂಗೀ ಯೋಜನೆಯನ್ನು ತೀರ್ಮಾನ ಮಾಡಲಾಗಿತ್ತೋ ಅದನ್ನೇ ಮುಂದುವರಿಸುವುದು ಉತ್ತಮ ಎಂದು ನಾನು ತಿಳಿಸಲಿಚ್ಛಿಸುತ್ತೇನೆ.

ಇನ್ನು ಕೊನೆಯದಾಗಿ ನಾನು ನನ್ನ ಜಿಲ್ಲೆಯಾದ ಹಾಸನದ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ದಿವಸ ಪಿ.ಡಬ್ಲ್ಯು. ಇಲಾಖೆಯವರು ಸಂಸ್ಥಾನದಲ್ಲಿ ಖರ್ಚು ಮಾಡುತ್ತಿರುವ ಹಣವೇನಿದೆ ಅದು ದೇಶದಲ್ಲಿ ಒಂದು ಸಮಗ್ರವಾಗಿ ಎಲ್ಲರಿಗೂ ಒಂದು ಸಮರೀತಿಯಾಗಿ ವಿನಿ ಯೋಗವಾಗುತ್ತಿಲ್ಲ. ಕೆಲವು ಕಡೆ ಹೊಸ ಕೆರೆಗಳನ್ನು ನಿರ್ಮಾಣ ಮಾಡಬೇಕಾಗುವುದು. ಇನ್ನು ಕೆಲವು ಕಡೆ ಹಳೇ ಕೆರೆಗಳನ್ನೇ ದುರಸ್ತಿ ಮಾಡಬೇಕಾಗುವುದು. ಇನ್ನು ಕೆಲವು ಭಾಗದಲ್ಲಿ ಕೆಲವು ಕೈಗಾರಿಕೆಗಳನ್ನು ಪ್ರಾರಂಭ ಮಾಡ ಬೇಕಾಗುವುದು. ಆದರೆ ಈ ಸಣ್ಣ ನೀರಾವರಿಗಳ ವಿಚಾರ ದಲ್ಲಿ ಹೇಳುವುದಾದರೆ—ಇವುಗಳನ್ನು ಕೈಗೊಳ್ಳತಕ್ಕ ಒಂದು ಹೆಚ್ಚಿನ ಅವಕಾಶ ಹಾಗೂ ಅನುಕೂಲ ಇರುವುದೆಂದರೆ ಅದು ನಮ್ಮ ಹಾಸನ, ಚಿಕ್ಕಮಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಇವುಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ ಎಂದು ಹೇಳುತ್ತೇನೆ. ದೇಶದ ಕೆಲವು ಭಾಗಗಳಲ್ಲಿ 40-50 ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಿದ್ದಾಗ್ಯೂ ಅವುಗಳಿಂದ ಒಂದೂವರೆ ಪರ್ಸೆಂಟ್ ರಿಟರ್ನ್ ಕೂಡಾ ಬರುವುದಿಲ್ಲ. ಆದರೆ ನಾನೀಗ ಹೇಳಿದ ಜಿಲ್ಲೆಗಳಲ್ಲಾದರೆ ಅತಿ ಕಡಮೆ ವೆಚ್ಚದಲ್ಲಿ 8 ಪರ್ಸೆಂಟಿನಿಂದ 11 ಪರ್ಸೆಂಟಿನ ವರೆಗೂ ರಿಟರ್ನ್ ಬರತಕ್ಕ ಅವಕಾಶವಿದೆ. ಆದುದರಿಂದ ಯಾವ ಯಾವ ಜಿಲ್ಲೆಗಳಲ್ಲಿ ಏನೇನು ಕೆಲಸ ಗಳನ್ನು ಕೈಗೊಳ್ಳಬೇಕೆಂಬುದನ್ನು ವಿವೇಚನೆಮಾಡಿ ಹಣವನ್ನು ಖರ್ಚು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಶ್ರೀ ಕಡಿದಾಳರವರು ಮಲೆನಾಡಿನ ಕಮ್ಯುನಿಕೇಷನ್ಸ್ ವಿಚಾರದಲ್ಲಿ ಏನು ಹೇಳಿದ್ದಾರೋ ಅದನ್ನು ನಾನೂ ಅನುಮೋದಿಸುತ್ತೇನೆ. ನಮ್ಮಲ್ಲಿ ಕೇರಳಾಪುರದ ಒಂದು ಸೇತುವೆ ಮತ್ತು ದೊಡ್ಡ ಅಣಸೋಗೆ ಹತ್ತಿರ ಒಂದು ಸೇತುವೆ ಈ ಎರಡೂ ಬಹಳ ಹಿಂದೆಯೇ ಮಂಜೂರಾಗಿ ಇವುಗಳಿಗೆ ಹಣವನ್ನು ಬಡ್ಜೆಟ್ಟಿನಲ್ಲಿ ಕೂಡ ಒದಗಿಸಿದ್ದರು. ಅದೇನು ಕಾರಣದಿಂದಲೋ ಅದನ್ನು ಇತ್ತೀಚಿನ ಬಡ್ಜೆಟ್‌ಗಳಲ್ಲಿ ಕೈಬಿಡಲಾಗಿದೆ. ಆದರೆ ದೊಡ್ಡ ಹನಸೋಗೆ ಸೇತುವೆ ವಿಚಾರದಲ್ಲಿ ಜಾಗದ ಬಗ್ಗೆ ಸ್ವಲ್ಪ ತಕರಾರಿತ್ತು. ಈಗ ಅದೂ ಸಹಾ ತೀರ್ಮಾನವಾಗಿದೆ. ಆದುದರಿಂದ ಬೇಗ ಈ ಎರಡು ಸೇತುವೆಗಳನ್ನೂ ಮಾಡಿಸಿಕೊಡಬೇಕೆಂದು ಕೇಳಿಕೊಂಡು ನಾನು ನನ್ನ ಮಾತುಗಳನ್ನು ಮುಗಿಸು ತ್ತೇನೆ.

1-30 P.M.

† ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರುಗುಪ್ಪ).—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮುಂದೆ ಇರುವ ಈ ಬೇಡಿಕೆಗಳನ್ನು ಅನುಮೋದಿಸುತ್ತಾ ನನ್ನ ಕೆಲವು ಸಲಹೆಗಳನ್ನು ಸರ್ಕಾರದ ಮುಂದೆ ಇಡಬಯಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರು ಅನೇಕರು ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ಅಲಕ್ಷ್ಯ ಮಾಡದೇ ಅವುಗಳನ್ನು ಕಾರ್ಯಗತ ಮಾಡಿ ಸರ್ಕಾರ ಇದು ಒಳ್ಳೆಯ ರಾಜ್ಯ ಎಂದು ಹೆಸರು ಪಡೆಯಲು ಪ್ರಯತ್ನ ಮಾಡುತ್ತವೆ ಎಂದು ನಾನು ಆಶಿಸುತ್ತೇನೆ. ಆಡಳಿತೆಯ ಬಗ್ಗೆ ಹೇಳುವುದಾದರೆ, ಪ್ರತಿಯೊಂದು ಭಾಗದಲ್ಲೂ ಆಡಳಿತ ಬಹಳ ವಿಳಂಬವಾಗಿ ನಡೆಯುತ್ತಾ ಇದೆ. ಇದಕ್ಕೆ ಅಧಿಕಾರಿಗಳಲ್ಲಿರತಕ್ಕ ಒಂದು ಅಲಸ್ಯ ಮನೋಭಾವವೇ ಕಾರಣ ವಾಗಿದೆ. ಅಲ್ಲದೇ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದಂತೆ ಕೆಲವು ಅಧಿಕಾರಿಗಳು ನವಾಬರಾಗಿದ್ದಾರೆ ಎನ್ನುವುದೂ ಕೂಡ ನಿಜವಾದ ಸಂಗತಿಯಾಗಿದೆ. ಅಧಿಕಾರಿಗಳಿಗೆ ಸೌಲತ್ತು ಮಾಡಿಕೊಡಬೇಕೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಅವರು ಜನರಿಗೆ ಸೌಲತ್ತನ್ನು ಮಾಡಿಕೊಡಬೇಕು, ಅವರಿಗೆ ಪ್ರತಿ ತಿಂಗಳೂ ಸಂಬಳ ಕೊಡುತ್ತಾ ಇರುವುದು ಇದಕ್ಕಾಗಿಯೇ, ಇದರಿಂದಲೇ ನಾವು ನಮ್ಮ ಜೀವನವನ್ನು ನಡೆಸುತ್ತಾ ಇದ್ದೇವೆ ಎಂಬ ಮನೋಭಾವ ಅವರಲ್ಲಿ ಬರದೇ ಇರುವುದರಿಂದ ಸರ್ಕಾರದವರು ಎಷ್ಟೇ ಪ್ಲಾನ್‌ಗಳನ್ನು ಹಾಕಿದರೂ ಕೂಡ ಯಶಸ್ವಿಯಾಗಿ ನಡೆಯದೇ ಆಡಳಿತದಲ್ಲಿ ತೊಂದರೆ ಪಡುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ. ಸರ್ಕಾರದ ಕೆಲಸಕಾರ್ಯಗಳೆಲ್ಲವೂ ವಿಳಂಬವಾಗುತ್ತಾ ಇವೆ. ಈಗ ಅನೇಕ ಕಾಗದ ಪತ್ರಗಳು ಪ್ರತಿಯೊಂದು ಕಚೇರಿಯಲ್ಲೂ 6 ತಿಂಗಳಿನಿಂದ ವಿಲೇ ಆಗದೇ ನಿಂತಿವೆ. ಅನೇಕ ಸಲ ಮಾನ್ಯ ಮುಖ್ಯಮಂತ್ರಿಗಳು ಹದಿನೈದು ದಿವಸದೊಳಗೆ ಕಾಗದ ಪತ್ರಗಳು ವಿಲೇ ಆಗುವಂತೆ ನೋಡಿಕೊಳ್ಳುತ್ತೇವೆ ಎಂದು ಈ ಸಭೆಯಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ, ಆದರೆ ಅದು ಕಾರ್ಯಗತವಾದಂತೆ ಕಂಡುಬರುತ್ತಾ ಇಲ್ಲ. ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರಿಂದ ಹಿಡಿದು ಗುಮಾಸ್ತರವರೆಗೂ ಸಹ ನೌಕರರ ಸಂಖ್ಯೆ ದಿನ ದಿನಕ್ಕೆ ಹೆಚ್ಚಾಗುತ್ತಾ ಇದೆ, ಅವರಿಗೆ ಅನಿವಾರ್ಯವಾಗಿ ಹಣ ಖರ್ಚಾಗುತ್ತಾ ಇದೆ. ಆದರೆ ಕೆಲಸ ಮಾತ್ರ ಆಗುತ್ತಾ ಇಲ್ಲ. ಸಣ್ಣ ಅಧಿಕಾರಿಗಳು ತಪ್ಪು ಮಾಡಿದರೆ ಅದನ್ನು ದೊಡ್ಡ ಅಧಿಕಾರಿಗಳಿಗೆ ಹೇಳಿದರೆ ಅವರು ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಬದಲಾಗಿ ಅವರನ್ನು ತಮ್ಮ ಉಡಿಲಿನಲ್ಲಿ ಇಟ್ಟುಕೊಳ್ಳು ತ್ತಾರೆ. ಈ ರೀತಿ ಅಧಿಕಾರಿಗಳು ತಮ್ಮ ಒಂದು ಕುಟುಂಬವನ್ನೇ ಮಾಡಿಕೊಂಡಿದ್ದಾರೆ. ಇದ ರಿಂದಾಗಿ ಆಡಳಿತೆಯಲ್ಲಿ ಸಡಿಲತೆ ಉಂಟಾಗಿದೆ ಎಂದು ಹೇಳಬೇಕಾಗಿದೆ. ನೆಹರೂ ಅವರು ಇದ್ದಾಗ ಹೇಳುತ್ತಾ ಇದ್ದರು 'ಆರಾಮ್ ಹರಾಮ್ ಹೈ' ಎಂದು ಆ ರೀತಿ ಪ್ರತಿಯೊಂದು ಕಚೇರಿಯಲ್ಲೂ ಬೋರ್ಡ್‌ನ್ನು ಹಾಕಿಸಬೇಕು. ಮತ್ತು ಯಾವ ಅಧಿಕಾರಿ ಅಥವಾ ಗುಮಾಸ್ತನೇ ಆಗಲಿ ಯಾವ ಕಾಗದವನ್ನೇ ಆಗಲಿ 15 ದಿವಸಗಳಿಗಿಂತಲೂ ಹೆಚ್ಚು ದಿವಸ ತನ್ನ ಹತ್ತಿರ ಇಟ್ಟುಕೊಳ್ಳಕೂಡದು ಆ ರೀತಿ ಇಟ್ಟುಕೊಂಡರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಹೇಳಿ ಎಚ್ಚರಿಕೆ ಕೊಡು ವಂತಹ ರೀತಿಯಲ್ಲಿ ಬಹಿರಂಗವಾಗಿ ಎಲ್ಲರ ಕಣ್ಣಿಗೂ ಕಾಣುವಂತೆ ಒಂದು ಬೋರ್ಡನ್ನು ಪ್ರತಿ ಯೊಂದು ಕಚೇರಿಯಲ್ಲೂ ಹಾಕತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಮತ್ತು ಆಯಾಯಾ ತಿಂಗಳಿನಲ್ಲಿ ಯಾವ ಯಾವ ಕಾಗದ ಪತ್ರಗಳನ್ನು ವಿಲೇ ಮಾಡಿದ್ದಾರೆ, ಎಷ್ಟು ಕಾಗದ ಪತ್ರಗಳು ಪೆಂಡಿಂಗ್ ಇವೆ ಎಷ್ಟು ವ್ಯವಹಾರ ನಡೆಸಿದ್ದಾರೆ ಎಂಬುದನ್ನು ಪರಿಶೀಲನೆ ಮಾಡಿ ಪ್ರತಿ ತಿಂಗಳೂ ಸಂಬಳ ಕೊಡಬೇಕೇ ಹೊರತು ಒಂದನೇ ತಾರೀಖು ಬಂದ ತಕ್ಷಣ ಎಷ್ಟೇ ಕೆಲಸ ಮಾಡಿರಲಿ ಮಾಡದೇ ಇರಲಿ ಸಂಬಳ ಕೊಡತಕ್ಕ ಕ್ರಮವನ್ನು ನಿಲ್ಲಿಸಬೇಕು. ಹಿಂದೆ ಮದರಾಸ್ ಸ್ಟೇಟ್‌ಅಫ್‌ನಲ್ಲಿ ದ್ದಾಗ ಇಂತಹ ಒಂದು ವಿಧಾನ ಇತ್ತು. ಆಗ ಕಾಗದ ಪತ್ರಗಳು ವಿಲೇ ಆಗುವುದು ನಿಧಾನ ವಾಗುತ್ತಾ ಇರಲಿಲ್ಲ. ಅಂತಹ ಒಂದು ಕ್ರಮವನ್ನು ಈಗಲೂ ತೆಗೆದುಕೊಂಡು ಬಂದು ಅಧಿಕಾರಿಗಳ ಮೇಲೆ ತಕ್ಕ ಚರ್ಯೆಯನ್ನು ತೆಗೆದುಕೊಂಡದ್ದೇ ಆದರೆ ಆಡಳಿತ ಸುಗಮವಾಗಿ ನಡೆಯುತ್ತದೆ ಆ ರೀತಿ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಇನ್ನು ನೀರಾವರಿ ವಿಷಯದಲ್ಲಿ ಒಂದೆರಡು ಮಾತನ್ನು ಹೇಳಬೇಕೆಂದು ಇದ್ದೇನೆ. ಯೋಜನೆ ಗಳೇನೋ ಆಗುತ್ತಾ ಇವೆ. ಆದರೆ ತುಂಗಭದ್ರಾ ಅಣೆಕಟ್ಟಿನಿಂದ ನಮಗೆ ಬಂದಿರುವ ಅನುಭವ ವನ್ನು ಹೇಳುವುದಾದರೆ, ಹನ್ನೆರಡು ವರ್ಷಗಳಾದರೂ ಕೂಡ ಅದರ ಆಯಕಟ್ಟು ಅರ್ಧದಷ್ಟು ಕೂಡ ಆಗಿಲ್ಲ. ಅನೇಕ ಸಲ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೇವೆ. ಅಸೆಂಬ್ಲಿಯಲ್ಲೂ ಕೂಡ ಹೇಳುತ್ತಾ ಬಂದಿದ್ದೇವೆ. ಅಲ್ಲಿಯ ಕ್ರಾಪ್ ಪ್ಯಾಟ್ರನ್ ಸರಿಯಾಗಿಲ್ಲ. ಅಲ್ಲಿಯ ಭೂಮಿಯ ಗುಣಕ್ಕೆ ಅನುಕೂಲವಾಗುತ್ತಾ ಇಲ್ಲ. ಮತ್ತು ನೀರನ್ನು ತೆಗೆದುಕೊಂಡು ಹೋಗತಕ್ಕ ಡಿಸ್ಟ್ರಿಬ್ಯೂಟರೀಸ್ ಸರಿಯಾಗಿಲ್ಲ. ಇದನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಅವರು ಅಲಕ್ಷ್ಯ ಮಾಡುತ್ತಾ ಇದ್ದಾರೆ, ಎಕ್ಸಿಕ್ಯೂಟೀವ್ ಇಂಜನಿಯರ ಮುಂದೆ ಹೇಳಿದರೆ ನಾವೇನು

(ಶ್ರೀ ಸಿ. ಎಂ. ರೇವಣಸಿದ್ದಯ್ಯ)

ಮಾಡುವುದಕ್ಕೆ ಅಧಿಕಾರ ಇಲ್ಲ ಎಂದು ಹೇಳುತ್ತಾರೆ, ಈ ರೀತಿ ಯಾರು ಅಲ್ಲಿ ಹೇಳುವ ಹಾಗಿಲ್ಲ ಕೇಳುವಹಾಗಿಲ್ಲ ಅಂತಹ ಪರಿಸ್ಥಿತಿ ಇದೆ ಎಂದು ಹೇಳುತ್ತಾ ಇದ್ದೇನೆ. ದೊಡ್ಡ ಅಧಿಕಾರಿಗಳಲ್ಲಿ ಕೇಳತಕ್ಕ ಮನೋಭಾವ ಹೊರಟು ಹೋಗಿದೆ ಎಂದು ಹೇಳುವುದಕ್ಕೆ ಒಂದು ನಿದರ್ಶನ ಹೇಳುವುದಾದರೆ, ಒಂದು ಹಳ್ಳಿಯಲ್ಲಿ ನಮಗೆ ನೀರು ಬಂದಿಲ್ಲ ಬಂದಲ್ಲಿ, ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾ ಇದ್ದರು. ಆಗ ನಾನು ಅಸಿಸ್ಟೆಂಟ್ ಇಂಜನಿಯರು, ಸೂಪರ್‌ವೈಜರು ಎಲ್ಲರನ್ನೂ ಕರೆದುಕೊಂಡು ಬಂದು ಅಲ್ಲಿನ ಪರಿಸ್ಥಿತಿಯನ್ನು ವಿವರಿಸಿ ಹೇಳಿದೆ. ಆಗ ಅವರು ರೈತರು ಮಾಡಬೇಕಾದ ಕೆಲಸ ಮಾಡಿಲ್ಲ ಎಂದು ಹೇಳಿ ನಮ್ಮ ಮೇಲೆಯೇ ರೇಗಿದರು. ಹೀಗಾಗಿ ಯಾರೂ ಕೂಡ ಅವರ ಜೊತೆಗೆ ಚರ್ಚೆಗೆ ಹೋಗಲಿಲ್ಲ. ಅಂತೂ ಈಗ ಡೆವಲಪ್‌ಮೆಂಟ್ ಚಟುವಟಿಕೆಗಳು ನಿಧಾನವಾಗುತ್ತಾ ಇರುವುದು ಕಂಡು ಬರುತ್ತಾ ಇದೆ.

ಪಿ.ಡಬ್ಲ್ಯೂ.ಡಿ. ಶಾಖೆಯಲ್ಲಿ ಅನೇಕ ಕಟ್ಟಡಗಳು ನಿರ್ಮಾಣವಾಗುತ್ತಾ ಇರುವುದು ಕಂಡು ಬರುತ್ತದೆ. ಬಳ್ಳಾರಿಯಲ್ಲಿ 20 ಲಕ್ಷ ರೂಪಾಯಿಗಳ ಒಂದು ಕಟ್ಟಡ ನಿರ್ಮಾಣವಾಗುತ್ತಾ ಇದೆ. ಬಸ್ ಸ್ಟ್ಯಾಂಡ್ ಮತ್ತು ಮಹಿಳಾ ಸಮಾಜದ ಕಟ್ಟಡ, ಸುಮಾರು ಎರಡು ವರ್ಷ ಆಯಿತು, ಇನ್ನೂ ಕೂಡ ಪೂರ್ತಿಯಾಗಿಲ್ಲ ಇದೇ ರೀತಿ ನಡೆಯುತ್ತಾ ಹೋದರೆ ಇನ್ನೂ ಹತ್ತು ವರ್ಷಗಳಾದರೂ ಕೂಡ ಆಗುವುದಿಲ್ಲ ಎಂದು ಅನಿಸುತ್ತಾ ಇದೆ. ಇದಕ್ಕೆ ಬದಲಾಗಿ ಒಕ್ಕಲಿಗರಿಗೆ ಈಗಿನ ಒಂದು ಕಷ್ಟ ಪರಿಸ್ಥಿತಿಯಲ್ಲಿ ವ್ಯವಸಾಯೋಪಕರಣಗಳನ್ನು ಒದಗಿಸಿಕೊಡಿ ಎಂದರೆ ಅದಕ್ಕೆ ಅಷ್ಟು ಹೆಚ್ಚು ಲಕ್ಷ್ಯ ಕೊಡುತ್ತಿಲ್ಲ, ಮತ್ತು ಹೆಚ್ಚು ಆಹಾರ ಧಾನ್ಯ ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂಬ ಮನೋಭಾವ ಅಧಿಕಾರಿಗಳಲ್ಲಿ ಇಲ್ಲ ಎಂದು ನನಗೆ ಅನಿಸುತ್ತಾ ಇದೆ.

ಇನ್ನು ಸಾಮಾನ್ಯ ಆಡಳಿತೆಯ ವಿಷಯದಲ್ಲಿ ಹೇಳುವುದಾದರೆ ಪೋಲೀಸ್ ಇಲಾಖೆಯವರ ಅತ್ಯಾಚಾರ ನಮ್ಮ ರೈತರ ಮೇಲೆ ಹಳ್ಳಿಗಳಲ್ಲಿ ಅನೇಕ ವಿಧವಾಗಿ ನಡೆಯುತ್ತಾ ಇದೆ. ಪೋಲೀಸ್‌ನವರು ಕುಡುಕರ ಸ್ನೇಹಿತರಾಗಿದ್ದಾರೆ, ಗೂಂಡಾಗಳ ಸ್ನೇಹಿತರಾಗಿದ್ದಾರೆ, ಬೇಕಾದರೆ ನಾನು ಮಂತ್ರಿಗಳಿಗೆ ಸಾಕ್ಷಿ ಕೊಡುತ್ತೇನೆ. ಇಂತಹ ಒಂದು ಪರಿಸ್ಥಿತಿ ಹೋಗಬೇಕು. ಇವತ್ತಿನ ದಿವಸ ನಮ್ಮ ರಾಜ್ಯ ರಾಮ ರಾಜ್ಯವಾಗಬೇಕೆಂಬುದು ಹೋಗಿ 'ರಾವಣ ರಾಜ್ಯ'ವಾಗಿದೆ ಎಂದು ಜನ ಹೇಳುತ್ತಾ ಇದ್ದಾರೆ ಇದನ್ನು ಸರಿಪಡಿಸುವ ಮನೋಭಾವ ತಮ್ಮಲ್ಲಿ ಉಂಟಾಗಬೇಕೆಂದು ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ಸಲಹೆಗಳನ್ನು ಮಾಡಬೇಕೆಂದು ಇಷ್ಟಪಡುತ್ತೇನೆ. ಸ್ವಾಮಿ, ಇವತ್ತು ದೇಶದಲ್ಲಿ ನೀರಾವರೀ ಬಗ್ಗೆ ಹೆಚ್ಚು ಹಣ ಖರ್ಚು ಮಾಡಬೇಕು ಹೆಚ್ಚು ನೀರಾವರಿಯಿಂದ ವ್ಯವಸಾಯದ ಅಭಿವೃದ್ಧಿ ಮಾಡಬೇಕೆಂದು ಹೇಳಿ ಎಲ್ಲರೂ ಕೂಡ ಒತ್ತಾಯ ಮಾಡುತ್ತಾ ಇದ್ದಾರೆ. ನೀರಾವರಿಗೆ ಹೆಚ್ಚು ಹಣವನ್ನು ಖರ್ಚು ಮಾಡುವುದು ಬಹಳ ಒಳ್ಳೆಯದು. ನಮ್ಮ ಹಾಸನ ಜಿಲ್ಲೆಯಲ್ಲಿ ಹೇಮಾವತಿ ಯೋಜನೆ ಮತ್ತು ಯಗಚಿ ಯೋಜನೆಯನ್ನು ಸರ್ಕಾರದವರು ಹಾಕಿ ಅಲ್ಲಿ ಅಣೆಕಟ್ಟನ್ನು ಕಟ್ಟಬೇಕೆಂದು ತೀರ್ಮಾನಿಸಿ ಅದನ್ನು ಈ ಸಭೆಯ ಮುಂದೆ ಅನೇಕ ಸಾರಿ ಹೇಳಿದ್ದಾರೆ. ಹೇಮಾವತಿ ಯೋಜನೆ ವಿಷಯ ಸುಮಾರು ಆರೇಳು ವರ್ಷಗಳಿಂದ ಸಭೆ ಮುಂದೆ ಬರುತ್ತಾ ಇದೆ ಈ ಸಾರಿ ಶುರು ಮಾಡುತ್ತೇವೆ ಮುಂದಿನ ಸಾರಿ ಶುರು ಮಾಡುತ್ತೇವೆ ಎಂದು ಹೇಳುತ್ತಾ ಬಂದು ಇದುವರೆಗೂ ಕೂಡ ಶುರು ಮಾಡಿಲ್ಲ, ಈಗ ಎರಡು ವರ್ಷಗಳಿಂದ ಬರೀ ಒಂದು ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ತೋರಿಸುತ್ತಾ ಇದ್ದೀರಿ. ಹೇಮಾವತಿ ಯೋಜನೆ ನಿಲ್ಲಿಸಬೇಕೆಂದು ನಾವು ಪ್ರತಿಭಟಿಸಿದಾಗ ನಿಲ್ಲಿಸಲು ಸಾಧ್ಯವಿಲ್ಲ, ನಮ್ಮ ರಾಜ್ಯದಲ್ಲಿ ನೀರಾವರಿ ಕೆಲಸ ಕಡಮೆಯಾಗಿದೆ, ಆದುದರಿಂದ ಆದಷ್ಟು ಬೇಗ ಕಾರ್ಯಗತಮಾಡಬೇಕು ಎಂದು ಮುಖ್ಯ ಮಂತ್ರಿಗಳು ಹೇಳಿದರು, ಅದಕ್ಕೆ ನಾವು ಒಪ್ಪಿದೆವು. ಆದರೆ ಇದುವರೆಗೆ ಆ ಬಗ್ಗೆ ಯಾವ ಕ್ರಮವನ್ನೂ ಕೈಕೊಂಡಿಲ್ಲ. ಹಾಗೆಯೇ ಯಗಚಿ ನದಿ ಯೋಜನೆ ವಿಚಾರದಲ್ಲೂ ನಿಧಾನ ಮಾಡಿದ್ದಾರೆ. ಈ ನೀರಾವರಿ ಯೋಜನೆಗಳನ್ನು ಕಟ್ಟುವ ಬಗ್ಗೆ ಅನೇಕ ವರ್ಷಗಳ ಮೊದಲೇ ಕಟ್ಟುತ್ತೇವೆಂದು ಹೇಳುವುದರಿಂದ ರೈತರಿಗೆ ಎಷ್ಟು ಅನುಕೂಲವಾಗಿದೆ ಎಂದರೆ, ಹಿಂದೆ ತಾವು ಬೆಳೆಯುತ್ತಿದ್ದಷ್ಟು ಧಾನ್ಯವನ್ನೂ ಕೂಡ ಬೆಳೆಯುವುದಕ್ಕೆ ಅವಕಾಶವಾಗಿರುವುದಿಲ್ಲ, ಕಾರಣ ಅಣೆಕಟ್ಟು ಕಟ್ಟಿದ್ದರಿಂದ ಜಮೀನು ಕೆಲವು ಮುಳುಗಡೆಯಾಗುತ್ತದೆಂದು ಸರಕಾರ ಸಾಲ ಕೊಡುವುದಿಲ್ಲ, ಕೋ-ಆಪರೇಟಿವ್ ಬ್ಯಾಂಕಾಗಲಿ ಅಥವಾ ಶ್ರೀಮಂತರಾಗಲಿ ರೈತರಿಗೆ ಸಾಲ ಕೊಡುವುದಿಲ್ಲ, ಸಕಾಲದಲ್ಲಿ ಬೀಜ, ಗೊಬ್ಬರ ದೊರೆಯುತ್ತಿಲ್ಲ. ಹೀಗಾಗಿ ಉತ್ತಮ ಬೆಳೆ ತೆಗೆಯಲು ಸಾಧ್ಯವಾ

ಗಿಲ್ಲ. ಇದರಿಂದ ಆಹಾರದ ಉತ್ಪತ್ತಿಗೆ ಹೆಚ್ಚು ಧಕ್ಕೆಯಾಗುತ್ತಿದೆ. ಯೋಜನೆಗಳೇನಿವೆ ಅವಕ್ಕೆ ಹೆಚ್ಚು ಗಮನಕೊಟ್ಟು ಆದಷ್ಟು ಬೇಗ ಕಾರ್ಯರೂಪಕ್ಕೆ ತರಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಯಗಚಿ ನದಿ ಅಣೆಕಟ್ಟಿಗೆ ಸರಕಾರ ಗೊತ್ತುಮಾಡಿದ್ದ ಸ್ಥಳದ ಜೊತೆಗೆ ಇನ್ನೊಂದು ಸ್ಥಳವನ್ನು ಕೂಡ ಸರ್ವೆ ಮಾಡಿ ಅದು ಉಪಯುಕ್ತವಾಗಿ ಕಂಡರೆ ಅದನ್ನು ತೆಗೆದುಕೊಳ್ಳಬೇಕೆಂದು ಮುಖ್ಯ ಮಂತ್ರಿಗಳನ್ನು ಪ್ರಾರ್ಥಿಸಿದಾಗ ಅವರು ಸರ್ವೆ ಮಾಡಿಸುವುದಾಗಿ ಭರವಸೆ ಕೊಟ್ಟರು ಆದರೆ ಒಂದು ವರ್ಷದಿಂದ ಸರ್ವೆ ಮಾಡಿಸದೆ ಮೊದಲು ನಿರ್ಧರಿಸಿದ್ದ ಸ್ಥಳದಲ್ಲೇ ಕಟ್ಟುವುದಾಗಿ ಹೇಳುತ್ತಿರುವುದು ಅನ್ಯಾಯ. ಇದನ್ನು ಪುನಃ ಯೋಚನೆ ಮಾಡಿ ಬೇರೆ ಸ್ಥಳವನ್ನು ಕೂಡ ಸರ್ವೆಮಾಡಿ ಸೂಕ್ತವಾಗಿ ಕಾಣುವುದನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಸಣ್ಣ ನೀರಾವರಿ ಯೋಜನೆ ವಿಷಯದಲ್ಲಿ ಶ್ರೀ ಜಿ. ಎ. ತಿಮ್ಮಪ್ಪಗೌಡರು ಒತ್ತಾಯ ಮಾಡಿದುದನ್ನು ಅನುಮೋದಿಸುತ್ತಾ ಹಾಸನ ಜಿಲ್ಲೆಯಲ್ಲಿ ಸುಮಾರು 6 ಸಾವಿರದ ಮೇಲ್ಪಟ್ಟು ಕೆರೆಗಳಿವೆ. ಆದರೆ ಅವುಗಳ ರಿಪೇರಿಗಾಗಿ ಸರ್ಕಾರ ಉದಾಸೀನ ಮಾಡುತ್ತಿದೆ. ಪಂಪ್‌ಸೆಟ್‌ಗಳನ್ನು ಕಳೆದ ಒಂದು ವರ್ಷದಿಂದ ಒದಗಿಸಿಲ್ಲ. ಪಂಪುಸೆಟ್ಟುಗಳು ಅನೇಕರಿಗೆ ಮಂಜೂರಾದರೂ ಅವರಿಗೆ ವಿದ್ಯುಚ್ಛಕ್ತಿ ಇಲ್ಲ. ಕೆಲವರಿಗೆ ಬಾವಿಗಳಿಲ್ಲ, ಬಾವಿ, ವಿದ್ಯುಚ್ಛಕ್ತಿ, ಲೈನು, ಹಾಕಿರುವವರಿಗೆ ಪಂಪುಸೆಟ್ಟು ದೊರಕಿಲ್ಲ. ಮಲೆನಾಡಿನಲ್ಲಿ ಪಂಪುಸೆಟ್ಟುಗಳಿಂದ ಪ್ರಯೋಜನವಾಗುವುದಿಲ್ಲ. ಅಲ್ಲಿ ಬಾವಿ ತೆಗೆಯಲು 12-13 ಸಾವಿರ ರೂಪಾಯಿ ಬೇಕು. ಸರಕಾರ ಕೊಡುವ ಹಣದಲ್ಲಿ ಬಾವಿ ತೆಗೆಯುವುದಕ್ಕಾಗುವುದಿಲ್ಲ. ಆದುದರಿಂದ ಮಲೆನಾಡು ಪ್ರದೇಶದಲ್ಲಿರುವ ಸಣ್ಣ ಕೆರೆಗಳನ್ನು ಕಡಮೆ ಖರ್ಚಿನಲ್ಲಿ ರಿಪೇರಿ ಮಾಡಿದರೆ ಹೆಚ್ಚು ಬೆಳೆ ಬೆಳೆಯಬಹುದು. ನಮ್ಮಲ್ಲಿ ಹೆಚ್ಚು ಕೆರೆಗಳಿದ್ದರೂ ಕೂಡ ಹಾಸನ ಡಿವಿಜನ್ನಿನಲ್ಲಿ ಒಂದೇ ಡಿವಿಜನ್ ಕೊಟ್ಟಿದ್ದೀರಿ. ಎರಡು ಡಿವಿಜನ್ನುಗಳಾದರೂ ಬೇಕು. 3-4 ವರ್ಷಗಳಿಂದ ಇದಕ್ಕೆ ಒತ್ತಾಯಮಾಡಿದರೂ ಎಲ್ಲಾ ಜಿಲ್ಲೆಗಳಿಗೂ 2 ಡಿವಿಜನ್ನುಗಳನ್ನು ಕೊಟ್ಟು ಹಾಸನ ಡಿವಿಜನ್ನನ್ನು ಉದಾಸೀನದಿಂದ ಕಂಡಿರುವುದನ್ನು ನೋಡಿದರೆ ವ್ಯಸನವಾಗುತ್ತದೆ. ನಮ್ಮಲ್ಲಿ ಅಣೆಕಟ್ಟಿಲ್ಲದೆ ಕೆರೆ ಮತ್ತು ಕಟ್ಟೆಗಳ ಸೌಲಭ್ಯವಿದ್ದರೂ ಒಂದು ಲಕ್ಷ ರೂಪಾಯಿ ಕೂಡ ನಮ್ಮ ಜಿಲ್ಲೆಗೆ ಒದಗಿಸಿಲ್ಲದಿರುವುದಕ್ಕೆ ಏನು ಕಾರಣವೋ ಅರ್ಥವಾಗುವುದಿಲ್ಲ. ನಮಗೆ ಹೆಚ್ಚು ರೂರಲ್ ಕಮ್ಯೂನಿಕೇಷನ್ ಬೇಕು, ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಾದಷ್ಟು ರಸ್ತೆಗಳನ್ನು ಮಾಡಬೇಕು. ನಮ್ಮ ಗ್ರಾಮಗಳು ಹೆಚ್ಚಾಗಿ ಮಲೆನಾಡಿನಲ್ಲಿರುವುದರಿಂದ ಬೆಳೆದ ಬೆಳೆಯನ್ನು ಮತ್ತು ಇತರ ಪದಾರ್ಥಗಳನ್ನು ಮಾರಾಟಮಾಡುವುದಕ್ಕೆ ಸರಿಯಾದ ಮಾರ್ಗ ಸೌಕರ್ಯವಿಲ್ಲದೆ ತೊಂದರೆಯಾಗಿದೆ. ಇದನ್ನು ಗಮನಿಸಿ ಆಹಾರ ಪರಿಸ್ಥಿತಿ ಸುಧಾರಿಸಲು ಈ ರಸ್ತೆಗಳನ್ನು ಮಾಡಲು ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಸೂಚಿಸುತ್ತೇನೆ. ಒಂದು ವರ್ಷದಿಂದ ಪಂಪುಸೆಟ್ಟು ಕೊಡುವುದನ್ನು ನಿಲ್ಲಿಸಿದ್ದಾರೆ. ಅನೇಕರು ಬಾವಿ ತೆಗೆದಿದ್ದಾರೆ, ಅವರಿಗೆ ಪಂಪುಸೆಟ್ಟಿಲ್ಲ. ಪಂಪುಸೆಟ್ಟು ದೊರೆತಿರುವವರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಿಲ್ಲ, ಹೀಗೆ ತೊಂದರೆಯಾಗಿದೆ. ಆದುದರಿಂದ ಬಾವಿ ಯಾರು ತೆಗೆದಿದ್ದಾರೆಂದು ವಿಚಾರಿಸಿ ಆದಷ್ಟು ಜಾಗ್ರತೆ ಪಂಪುಸೆಟ್ಟು ಕೊಟ್ಟು ವಿದ್ಯುಚ್ಛಕ್ತಿಯನ್ನೊದಗಿಸಬೇಕು. ಇದಕ್ಕಾಗಿ ಹೆಚ್ಚು ಹಣ ತೆಗೆದುಕೊಂಡಿದ್ದಾರೆ. ಆದಷ್ಟು ಬೇಗ ಅವಶ್ಯಕತೆಗಳನ್ನು ಒದಗಿಸಿ ಹೆಚ್ಚು ಬೆಳೆಯಲು ಅವಕಾಶ ಮಾಡಿಕೊಡಬೇಕೆಂದು ಸೂಚಿಸುತ್ತೇನೆ.

ಆಡಳಿತದ ಲೋಪಗಳ ವಿಚಾರವನ್ನು ರೇವಣಸಿದ್ದಯ್ಯನವರು ಜೋರಾಗಿ ಹೇಳಿದರು. ರೈತರು ಅರ್ಜಿಯನ್ನು ಸರಕಾರಕ್ಕೆ ಅಥವಾ ಅಧಿಕಾರಿಗಳಿಗೆ ಕೊಟ್ಟರೆ ಅದರ ಕಡೆ ಯಾರೂ ಗಮನಕೊಡುವುದಿಲ್ಲ, ಅಧಿಕಾರಿಗಳ ಮೇಲೆ ಪ್ರಭಾವ ಬೀರದೆ ಯಾವ ಕೆಲಸವಾಗುತ್ತಿಲ್ಲ. ಪ್ರಭಾವ ಬೀರಲು ನಮ್ಮ ರಾಜ್ಯದಲ್ಲಿ ಅವಕಾಶವಿರಬಾರದೆಂದು ಮುಖ್ಯ ಮಂತ್ರಿಗಳೇನೋ ಹೇಳುತ್ತಾರೆ. ಆದರೆ ಪ್ರಭಾವ ಬೀರದೆ ಯಾವ ಕೆಲಸವೂ ಆಗುತ್ತಿಲ್ಲ, ಅದಿಲ್ಲದೆ ರಿಕಾರ್ಡು ಹೊರಕ್ಕೆ ಬರುವುದೇ ಇಲ್ಲ. ಆದುದರಿಂದ ಸರಕಾರದಲ್ಲಿರುವ ನಿಧಾನಗತಿಯನ್ನು ಕಡಮೆಮಾಡಬೇಕು. ಪ್ರಭಾವಶಾಲಿಗಳು ಶ್ರೀಮಂತರು, ಮುಂದಾಳುಗಳು ಹೋದರೆ ಅವರ ಕೆಲಸ ಬೇಗ ಆಗುತ್ತದೆ, ಅದೇ ಬಡವರ ಕೆಲಸ ಆಗುವುದೇ ಕಷ್ಟ. ಆದುದರಿಂದ ಆಡಳಿತದಲ್ಲಿ ನಿಧಾನ ಮತ್ತು ಅಕ್ರಮಗಳನ್ನು ತಪ್ಪಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಸಂಜೀವನಾಥ ಐಕಳ (ಸುರತ್ಕಲ್).—ಮಾನ್ಯ ಅಧ್ಯಕ್ಷರೇ, ಸಮುದ್ರದಷ್ಟು ವಿಶಾಲವಾದ ಸಾರ್ವಜನಿಕ ಕಾಮಗಾರಿಗಳ ವಿಷಯವನ್ನು ಕೇವಲ ಕೆಲವು ಮಾತುಗಳಲ್ಲಿ ಹೇಳುವುದು ಬಹಳ ಕಷ್ಟ. ಆದರೂ ವಿದ್ಯುಚ್ಛಕ್ತಿ, ಕೃಷಿ ಉತ್ಪತ್ತಿ ರಸ್ತೆ ಮತ್ತು ಸುಂಕಗಳು, ಪಣಂಬೂರು ಬಂದರಿನ ರಚನೆ ಮತ್ತು ಆಡಳಿತದ ದೋಷ ಮುಂತಾದುವುಗಳ ಬಗ್ಗೆ ಮಾತನಾಡಬೇಕೆಂದಿದ್ದೇನೆ.

ನಮ್ಮ ಜಿಲ್ಲೆಯಲ್ಲಿ ತುಂಬಾ ನದಿಗಳಿವೆ. ಆದರೆ ಅವುಗಳ ನೀರು ಸಮುದ್ರದ ಪಾಲಾಗುತ್ತಿದೆ. ಅದನ್ನು ಕೃಷಿ ಉತ್ಪತ್ತಿಗಾಗಿ ಯೋಗ್ಯ ರೀತಿಯಿಂದ ಉಪಯೋಗಿಸಲು ಪ್ರಯತ್ನ ಮಾಡಿಲ್ಲ. ಈ

(ಶ್ರೀ ಸಂಜೀವನಾಥ ಐಕಳ)

ಬಗ್ಗೆ ಅನೇಕ ವರ್ಷಗಳಿಂದ ಹೇಳಿದರೂ ಕೂಡ ಸರಕಾರ ತೃಪ್ತಿವಹಿಸಿಲ್ಲ. ಮುಖ್ಯವಾಗಿ ಕೃಷಿ ಉತ್ಪತ್ತಿಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ನಮ್ಮ ಜಿಲ್ಲೆಯಲ್ಲಿರುವಷ್ಟು ಅವಕಾಶ ಬೇರೆ ಎಲ್ಲಿಯೂ ಕೂಡ ಇಲ್ಲ. ಒಂದನೆ ಬೆಳೆಯಲ್ಲಿ 3,71,434 ಎಕರೆಗಳಲ್ಲಿ ಎರಡನೇ ಬೆಳೆಯಲ್ಲಿ 1,35,556 ಎಕರೆ, ಮೂರನೆಯ ಬೆಳೆಯಲ್ಲಿ 20,272 ಎಕರೆಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಭತ್ತ ಬೆಳೆಯುವದು. ಆದರೆ ನದಿ ನೀರಿನ ಉಪಯೋಗ ದೊರೆತರೆ ಎರಡು ಮತ್ತು ಮೂರನೆಯ ಬೆಳೆಯನ್ನು ಈಗಿನ ಎರಡರಷ್ಟು ಹೆಚ್ಚು ಬೆಳೆಯಲು ಅವಕಾಶವಿದೆ. ಈಗಾಗಲೆ 680 ಗ್ರಾಮಗಳೇನಿವೆ ಅವುಗಳಲ್ಲಿ 229 ಗ್ರಾಮಗಳಲ್ಲಿ ಹೆಚ್ಚು ಕಡಮೆ 771 ಅರ್ಜಿಗಳನ್ನು ಕೇವಲ ಪಂಪುಸೆಟ್ಟುಗಳಿಗಾಗಿ ಕೊಡಲ್ಪಟ್ಟಿವೆ. ಒಂದು ಗ್ರಾಮಕ್ಕೆ ಸರಾಸರಿ ಮೂರು ಪಂಪ್‌ಸೆಟ್ ಮೇಲೆ ಅರ್ಜಿಗಳು ಬಂದಿವೆ. 680 ಗ್ರಾಮಗಳಲ್ಲಿ ವಿದ್ಯುಚ್ಛಕ್ತಿಗೆ ಅವಕಾಶವನ್ನು ಕೊಟ್ಟರೆ ಸರಾಸರಿಯಾಗಿ ಒಂದೊಂದು ಗ್ರಾಮಕ್ಕೆ ಐದು ಅರ್ಜಿಗಳು ಬರಬಹುದು. 246 ಪಂಪು ಸೆಟ್ಟುಗಳಿಗೆ ಬಂದಂಥ ಅರ್ಜಿಗಳಲ್ಲಿ ಕೇವಲ 179ಕ್ಕೆ ಮಾತ್ರ ಕರಂಟ್ ಕೊಟ್ಟಿದೆ. ಬಾಕಿಯುದಕ್ಕೆ ಕೊಟ್ಟಿಲ್ಲ. ಇದರಲ್ಲಿ ಕೆಲವರು ಮೂರು ನಾಲ್ಕು ವರ್ಷಗಳ ಹಿಂದೆ ಪಂಪ ಸೆಟ್ಟುಗಳನ್ನು ಹಾಕಿದ್ದು, ಅರ್ಜಿಗಳನ್ನು ಕಳಿಸಿದ್ದರೂ ಅವರಿಗೆ ಕರೆಂಟ್ ಕೊಟ್ಟಿಲ್ಲ. ಹೊಸದಾಗಿ ಸರ್ವೆ ಮಾಡಿ ಎಸ್ಟಿಮೇಟ್ ವಗೈರೆ ಮಾಡುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೋ ಏನೋ ಗೊತ್ತಾಗಲಿಲ್ಲ. ಒಂದು ಪಂಪ್‌ಸೆಟ್ ಹಾಕಿದರೆ ಅದರಿಂದ ಏಳೂವರೆ ಎಕರೆ ಜಮೀನನ್ನು ಸಾಗುವಳಿ ಮಾಡಬಹುದು. ಒಂದು ಎಕರೆಯಲ್ಲಿ ಸರಾಸರಿ ಮುಕ್ಕಾಲು ಟನ್ ಆಹಾರವನ್ನು ಬೆಳೆಯಬಹುದು. ಒಂದು ಎಕರೆಗೆ ಅರ್ಧ ಟನ್ ಉತ್ಪಾದನೆಯಾಗುತ್ತದೆ ಎಂದು ಲೆಕ್ಕ ಹಾಕಿಕೊಂಡರೂ ಒಂದು ಪಂಪ್‌ಸೆಟ್‌ನಿಂದ ನಾಲ್ಕು ಟನ್ ಆಹಾರವನ್ನು ಹೆಚ್ಚಾಗಿ ಬೆಳೆಸಬಹುದು. ಈ ಅಂಕಿ ಸಂಖ್ಯೆಗಳನ್ನು ಗಮನದಲ್ಲಿಟ್ಟುಕೊಂಡು 680 ಗ್ರಾಮಗಳಿಗೆ ಐದು ಪಂಪ್‌ಸೆಟ್‌ಗಳ ಪ್ರಕಾರ ಲೆಕ್ಕ ಹಾಕಿದರೆ ಒಂದು ವರ್ಷಕ್ಕೆ ನಮ್ಮ ಜಿಲ್ಲೆ ಒಂದರಿಂದಲೇ ಮೂರು ಲಕ್ಷ ಟನ್ ಆಹಾರವನ್ನು ಹೆಚ್ಚಾಗಿ ಬೆಳೆಸಲಿಕ್ಕೆ ಸಾಧ್ಯವಾಗುತ್ತದೆ.

ನಮ್ಮ ಜಿಲ್ಲೆಯಲ್ಲಿರುವ ವೈಶಿಷ್ಟ್ಯ ಬೇರೆಲ್ಲಿಯೂ ಇಲ್ಲ. ಸಣ್ಣ ದೊಡ್ಡ ನದಿಗಳು, ಕೆರೆಗಳು, ಬಾವಿಗಳು ತುಂಬ ಇವೆ. ಇಲ್ಲಿಯ ಜನರು ಬಹಳ ಉದ್ಯೋಗಶೀಲರು. ಕಾರ್ಯಾರ್ಥಿಗಳು. ಅವರಿಗೆ ಆ ಜಿಲ್ಲೆಯಲ್ಲಿ ಹೆಚ್ಚು ಆಹಾರ ಧಾನ್ಯವನ್ನು ಬೆಳೆದು ತೋರಿಸಬೇಕು ಎನ್ನುವ ಇಚ್ಛೆಯುಳ್ಳವರಾಗಿದ್ದಾರೆ. ಇಲ್ಲಿಗೆ ಒಂದೂವರೆ ವರ್ಷಗಳಿಂದ ಕೆಲಸ ಮಾಡಲು ಅಧಿಕಾರಿಗಳನ್ನು ನೇಮಿಸಿದ್ದರೆ ತಾನೆ ? ಕಳೆದ ತಿಂಗಳು 15 ಜನ ಅಧಿಕಾರಿಗಳನ್ನು ನೇಮಿಸಿದ್ದಾರೆ. ಅವರ ಕರ್ತವ್ಯಗಳೇನು, ಅವರ ಪಾತ್ರವೇನು ಎನ್ನುವುದರ ಬಗ್ಗೆ ಅವರಿಗೆ ವಿಶಿಷ್ಟ ಕಾರ್ಯಕ್ರಮಗಳನ್ನು ತಿಳಿಸದೆ ಆ ಅಧಿಕಾರಿಗಳು ಇನ್ನೂ ಏನು ಮಾಡುವುದು ಎಂದು ತಿಳಿಯದೆ ಇದ್ದಾರೆ. ಈ ರೀತಿಯಾಗಿ ನಮ್ಮ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿಯು ಒಂದು ಉತ್ತಮ ಪಾತ್ರವನ್ನು ಆಹಾರದ ಉತ್ಪಾದನೆಯಲ್ಲಿ ವಹಿಸಬಹುದು. ನಮ್ಮ ಜಿಲ್ಲೆಯಲ್ಲಿನ ಆಹಾರದ ಕೊರತೆ ಕೇವಲ ನೂರಕ್ಕೆ 8–10 ಭಾಗ ಮಾತ್ರ. ಈ ಕೊರತೆಯನ್ನು ನೀಗಿ ಬೇರೆ ಜಿಲ್ಲೆಗಳಿಗೆ ಸಹ ನಮ್ಮ ಜಿಲ್ಲೆಯು ಆಹಾರವನ್ನು ಒದಗಿಸಬಲ್ಲದು ಎಂಬುದನ್ನು ಸರ್ಕಾರ ತಿಳಿಯಬೇಕಾಗಿದೆ.

ವಿದ್ಯುಚ್ಛಕ್ತಿಯನ್ನು ನಮ್ಮ ಕಡೆಗೆ ಒದಗಿಸುವ ಸಂಬಂಧದಲ್ಲಿ 43 ಸ್ಕೀಂಗಳು 16 ಲಕ್ಷ ರೂಪಾಯಿ ಅಂದಾಜಿನವು ಮಂಜೂರಾಗಿವೆ. ಅವುಗಳನ್ನು ತೆಗೆದುಕೊಂಡಿಲ್ಲ. ನಾವು ಕೇಳಿದರೆ ಮಂತ್ರಿಗಳು ಹೇಳುತ್ತಾರೆ. ಕಂಬಗಳಿಲ್ಲ, ತಂತಿ ಇಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲ ಎಂದು. ಹೀಗೆ ಕುಂಟು ನೆಪಗಳನ್ನು ಹಾಕಿಕೊಂಡು ಕೆಲಸ ಮಾಡದೆ ಇರುವುದರಿಂದ ಅನೇಕ ಜನ ರೈತರು ಇಟ್ಟುಕೊಂಡಂಥ ಪಂಪ್‌ಸೆಟ್ಟುಗಳು ಮಣ್ಣು ಪಾಲಾಗಿ ತುಕ್ಕು ಹಿಡಿಯುವ ಸಂದರ್ಭ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಕಳೆದ ಡಿಸೆಂಬರ್ ತಿಂಗಳಿನಲ್ಲಿ ಕೆಲವು ಕಡೆ ಪಂಪ್‌ಸೆಟ್‌ಗಳನ್ನು ಉದ್ಘಾಟನೆ ಮಾಡಿದ್ದಾರೆ. ಆದರೆ ವಿದ್ಯುತ್ತನ್ನು ಕೊಡದೆ ಇರುವ ಕಡೆ ಪಂಪ್‌ಸೆಟ್‌ಗಳನ್ನು ಕೊಂಡುಕೊಂಡಿರುವವರು ಬಹಳ ತೊಂದರೆಪಡುತ್ತಿದ್ದಾರೆ. ಆಹಾರದ ಉತ್ಪತ್ತಿಯ ಕಡೆಗೆ ಹೆಚ್ಚು ಗಮನ ಕೊಡಬೇಕಾದ ಈಗಿನ ಸನ್ನಿವೇಶದಲ್ಲಿ ಸರ್ಕಾರದವರು ಪಂಪ್‌ಸೆಟ್‌ಗಳನ್ನು ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಗಮನಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ನಮ್ಮ ಜಿಲ್ಲೆಯ ರಸ್ತೆಗಳಿಗೆ ಸಂಕಗಳು, ಕಾಸವೇಗಳು ಮತ್ತು ಕಲ್‌ವರ್ಟುಗಳು ಆಗಬೇಕಾಗಿವೆ. ಕರಾವಳಿ ತೀರದಲ್ಲಿ ಕೆಲವು ಸಂಕಗಳಾಗಿವೆ. ಹಿಂದುಳಿದ ತಾಲ್ಲೂಕುಗಳಾದ ಕುಂದಾಪುರ, ಕಾರ್ಕಳ, ಬೆಳ್ತಂಗಡಿ, ಪುತ್ತೂರು ತಾಲ್ಲೂಕಿನ ಅರ್ಧ ಗ್ರಾಮಗಳು ಈ ಪ್ರದೇಶದಲ್ಲಿ ಸಂಕಗಳು ಅಥವಾ ಸಣ್ಣ ಮೋರಿಗಳು ಇಲ್ಲದೆ ಮಳೆಗಾಲದ ಆರು ತಿಂಗಳಲ್ಲಿ ಜನ ಸಂಪರ್ಕಕ್ಕೆ ತುಂಬ ತೊಂದರೆಯಾಗಿದೆ. ಇದು ಬಹಳ ಅಗತ್ಯವಾದ ವಿಷಯವಾಗಿದೆ. ಕೆಲವು ಜನರ ಮೋಹಕ್ಕೆ ಬಲಿಬಿದ್ದು

ಕೆಲವು ರಸ್ತೆಗಳನ್ನು ಮಾಡಿದ್ದಾರೆ. ಕಲ್ಲಡ್ಕದಿಂದ ಉಳ್ಳಾಲಕ್ಕೆ ಹೋಗುವ ರಸ್ತೆ ಒಂದು ಗುಡ್ಡದ ಮೇಲೆ ಹಾದು ಹೋಗುತ್ತದೆ. ಆ ರಸ್ತೆಗೆ 12-13 ಲಕ್ಷ ರೂಪಾಯಿ ಅಂದಾಜು ಮಾಡಿ ಕೆಲವು ಜನರ ಪ್ರಭಾವ ಅಥವಾ ಮೋಹಕ್ಕೆ ಬಲಿಬಿದ್ದು ಉದ್ದದ ಬಯಲು ಪ್ರದೇಶದಲ್ಲಿ ತೆಗೆದುಕೊಂಡು ಹೋಗಿ 200 ಅಡಿ ಎತ್ತರದ ಗುಡ್ಡವನ್ನು ಕಡಿದು ರಸ್ತೆ ಮಾಡುವಂಥದ್ದಕ್ಕೆ ನಮ್ಮ ಸರ್ಕಾರ ಕಾರ್ಯಕ್ರಮ ಕೈಕೊಂಡು ಈಗ ಅದಕ್ಕೆ 29 ಲಕ್ಷ ರೂಪಾಯಿ ಖರ್ಚಾಗಿ ಇನ್ನೂ ಕೆಲಸ ಉಳಿದಿದೆ. ಅದು ಪೂರ್ಣ ವಾಗುವ ಹೊತ್ತಿಗೆ ಎಷ್ಟಾಗುತ್ತದೆಯೊ ಏನೋ ಗೊತ್ತಿಲ್ಲ. ಈ ರಸ್ತೆಯ ವಿಚಾರವಾಗಿ ಮೇಲ್ಮನೆ ಯಲ್ಲಿಯೂ ಒಬ್ಬ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆಗಳಲ್ಲಿ ಸಂಕ ಗಳು ಹಾಗೂ ಮೋರಿಗಳಿಲ್ಲದೆ ತೊಂದರೆಯಾಗಿದೆ. ಈ ಕೆಲಸವನ್ನು ಅಗತ್ಯವಾಗಿ ಕೈಕೊಳ್ಳಬೇಕು ಎಂದು ಹೇಳಬೇಕಾಗಿದೆ.

ಶೃಂಗೇರಿಯಿಂದ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹೋಗುವ ಒಂದು ರಸ್ತೆ ಬಹಳ ಅಗತ್ಯವಾಗಿದೆ. ಮಲೆನಾಡಿನ ಅಭಿವೃದ್ಧಿಗೆ ಇದು ಬಹಳ ಮುಖ್ಯವಾದುದು. ಈಗಾಗಲೇ ಅಲ್ಲಲ್ಲಿ ರಸ್ತೆ ಇದೆ. ಮಧ್ಯೆ ಮಧ್ಯೆ ರಸ್ತೆ ಇಲ್ಲದೆ ಇರುವ ಕಡೆ ಮಿಸಿಂಗ್ ಲಿಂಕ್ಸ್ ಸೇರಿಸಿದರೆ ಶೃಂಗೇರಿಯಿಂದ ಧರ್ಮ ಸ್ಥಳ ಮಾರ್ಗವಾಗಿ ಸುಬ್ರಹ್ಮಣ್ಯಕ್ಕೆ ಹೋಗುವ ಒಳ್ಳೆಯ ಗಾಡಿ ರಸ್ತೆ ಆಗುತ್ತದೆ. ಈ ಭಾಗದಲ್ಲಿ ನಿಸರ್ಗದ ರಮಣೀಯ ದೃಶ್ಯವನ್ನು ನೋಡುವುದಕ್ಕೆ ಸಹ ಅನುಕೂಲವಾಗುತ್ತದೆ. ಧರ್ಮಸ್ಥಳ ಮತ್ತು ಸುಬ್ರಹ್ಮಣ್ಯ ಎರಡೂ ಪುಣ್ಯ ಕ್ಷೇತ್ರಗಳು. ತಾವು ಮಾಡಿದಂಥ ಪಾಪವನ್ನು ತೊಡೆಯಲು ಈ ಪುಣ್ಯ ಕ್ಷೇತ್ರಗಳಿಗೆ ಯಾತ್ರಾರ್ಥಿಗಳು ಬರುವುದಕ್ಕೂ ಈ ರಸ್ತೆ ಸೌಕರ್ಯವನ್ನು ಕಲ್ಪಿಸುತ್ತದೆ.

ಇನ್ನು ಪಣಂಬೂರು ಬಂದರು ರಚನೆಯಲ್ಲಿ ಹೊಸದಾಗಿ ಸ್ವಾಧೀನ ಮಾಡಿಕೊಳ್ಳಬೇಕು ಎನ್ನುವ 1,500 ಎಕರೆ ಭೂಮಿಯ ವಿಚಾರವಾಗಿ ಸೂಕ್ಷ್ಮವಾಗಿ ಹೇಳಬಯಸುತ್ತೇನೆ. ನನ್ನ ಹತ್ತಿರ ಅದಕ್ಕೆ ಸಂಬಂಧಪಟ್ಟ ಭೂಪಟವಿದೆ. ನಮ್ಮ ಮಂತ್ರಿಗಳಿಗೆ ಮುಂಚಿತವಾಗಿ ಮಾಡಿಕೊಡಲು ಅದನ್ನು ತೋರಿಸಿ ಹೇಳುತ್ತೇನೆ (ಮಾನ್ಯ ಸದಸ್ಯರು ಒಂದು ಭೂಪಟವನ್ನು ಸಭೆಯಲ್ಲಿ ತೋರಿಸು ತ್ತಿದ್ದರು.) ಪಣಂಬೂರು ಬಳಿ ಬಂದರು ನಿರ್ಮಾಣಕ್ಕಾಗಿ ಈಗಾಗಲೇ 1,200 ಎಕರೆ ಭೂಮಿ ಯನ್ನು ವಶಪಡಿಸಿಕೊಂಡಿದ್ದಾರೆ. ಅದರ ಜೊತೆಗೆ ಹೊಸದಾಗಿ 1,500 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಬೇಕೆಂದಿರುವುದರಲ್ಲಿ 800 ಎಕರೆ ಜಮೀನು ವರ್ಷಕ್ಕೆ ಮೂರು ಬೆಳೆ ಬರುವಂಥದ್ದು, 200-250 ಎಕರೆ ಪ್ರದೇಶ ನಿಬಿಡವಾದ ಜನಗಳಿಂದ ಕೂಡಿರುವಂಥದ್ದು, ಇನ್ನುಳಿದ 200-300 ಎಕರೆ ಪ್ರದೇಶ ಖಾಲಿ ಪ್ರದೇಶವಾಗಿದೆ. ಹೊಸದಾಗಿ ವಶಪಡಿಸಿಕೊಳ್ಳಬೇಕೆಂದಿರುವ ಭೂಮಿ ಏಕೆ ಬೇಕು ಎನ್ನುವುದು ಗೊತ್ತಾಗಿಲ್ಲ. ಈ ಜಾಗವನ್ನು ಸ್ವಾಧೀನ ಮಾಡಿಕೊಳ್ಳುವ ಅಗತ್ಯವಿಲ್ಲ. ಈ ಜಾಗವನ್ನು ಕೇವಲ ದುರುದ್ದೇಶದಿಂದ ಅಥವಾ ಹಟಸಾಧನೆಗಾಗಿ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಹೇಳುವಂಥ ಪರಿಸ್ಥಿತಿ ಇದೆ. ಈ 1,500 ಎಕರೆ ಭೂಮಿ ಬಂದರು ವಿಸ್ತರಣೆಗೆ ಬೇಕಾಗಿಲ್ಲ. ಈಗಾಗಲೇ ತೆಗೆದುಕೊಂಡಿರುವ 1,200 ಎಕರೆ ಸಾಕಾ ಗುತ್ತದೆ. ಈ ಜಾಗವನ್ನು ಅಲ್ಲಿಯ ಜನ ಬಿಟ್ಟುಕೊಟ್ಟಿದ್ದಾರೆ ಮತ್ತು ಕೆಲಸ ಸಹ ಷುರು ಆಗಿದೆ. ಈಗಲೂ ಹೇಳುತ್ತಿದ್ದೇನೆ. ಹೊಸದಾಗಿ ಬಿಟ್ಟುಕೊಟ್ಟಿದ್ದ 1,200 ಎಕರೆಯಲ್ಲಿ ಏನು ಕೆಲಸವೂ ಇನ್ನು ಪ್ರಾರಂಭವಾಗಿಲ್ಲ. ಕೇವಲ ಸರ್ಕಾರದಲ್ಲಿ ಮುಂದೆ ಬಂದಂಥ ಅಧಿಕಾರಿಗಳ ಮನೆಗಳಿಗಾಗಿ 35 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬಹಳ ಹಿಂದೆ ಕೊಟ್ಟಿದ್ದ ಕೆಲಸಗಳು ಮಾತ್ರ ನಡೆಯು ತ್ತಿರುವುದು ಕಾಣುತ್ತವೆಯೇ ಹೊರತು ಬೇರೆ ಇನ್ನೇನೂ ಕಾಣುವುದಿಲ್ಲ. ನಿರಾಶ್ರಿತರ ವಿಷಯವಾಗಿ ಬೇರೆ ಸಂದರ್ಭ ಸಿಕ್ಕಿದಾಗ ಮಾತನಾಡುತ್ತೇನೆ.

2-00 P.M.

ಇನ್ನು ಬಂದರುಗಳ ವಿಷಯ. ಇವುಗಳ ಅಭಿವೃದ್ಧಿಯ ಬಗ್ಗೆ ಆದಷ್ಟು ಶೀಘ್ರವಾಗಿ ಎಲ್ಲ ಪ್ರಯತ್ನಗಳನ್ನೂ ಮಾಡಬೇಕೆಂಬ ಮನಸ್ಸು ನಮಗೆಲ್ಲರಿಗೂ ಇದೆ, ಜನಗಳೆಲ್ಲರಿಗೂ ಸಹ ಇದೆ. ಆದರೆ ಸರ್ಕಾರದವರು ಹೊಸದಾಗಿ ಹೆಚ್ಚಿಗೆ ಜಮೀನುಗಳನ್ನು ತೆಗೆದುಕೊಳ್ಳದೆ ಈಗ ಸಿಕ್ಕಿದ ಜಾಗ ಗಳಲ್ಲಿ ಬಂದರು ಕೆಲಸಗಳನ್ನು ಪ್ರಾರಂಭಮಾಡಿ ಅವುಗಳ ರಚನೆ ಮಾಡಲಿಕ್ಕೆ ಹೋಗುತ್ತಿದ್ದಾರೆ ಅವು ಪೂರ್ತಿಯಾದನಂತರ ಅವಶ್ಯಕವಾಗಿ ಬೇಕಾಗಿದ್ದಂಥ ಹಳೆ ಜಾಗವನ್ನು ಬಿಟ್ಟುಕೊಡುತ್ತಾರೆ. ಆದರೆ ಸರ್ಕಾರ ಈ ಕೆಲಸವನ್ನು ಪ್ರಾರಂಭಮಾಡಿರುವುದರಿಂದ ಇನ್ನು ಹೊಸದಾಗಿ ಬೇಕಾದ 1,500 ಎಕರೆ ಜಾಗದಲ್ಲಿ ಈ ಬಂದರುಗಳ ನಿರ್ಮಾಣಕ್ಕೆ ಸ್ವಲ್ಪವೂ ಬಿಟ್ಟುಕೊಡುವುದಕ್ಕೆ ಸಾಧ್ಯವಿಲ್ಲ. ಆ ರೀತಿ ರೈತರಿಂದ ಆ ಜಾಗವನ್ನು ತೆಗೆದುಕೊಳ್ಳುವುದೂ ಸಹ ತೀರಾ ತಪ್ಪು ಎಂಬುದಾಗಿ ನಾನು ಹೇಳ ಬಯಸುತ್ತೇನೆ.

ಇಷ್ಟು ಹೇಳಿ ನನಗೆ ಕಾಲಾವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲ್ಮಲ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದಿರುವ ಬೇಡಿಕೆಗಳ ಮೇಲೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಯಚೂರು ಜಿಲ್ಲೆಯೊಳಗೆ ಇದುವರೆಗೆ ಸಣ್ಣ ನೀರಾವರಿ ಯೋಜನೆಗಳ ಕೆಲಸ ಕಾರ್ಯಗಳು ಏನೂ ಆಗಿಲ್ಲ. ಬಾವಿಗಳೂ ಸಹ ಆಗಿಲ್ಲ, ಕೇವಲ ಒಂದೊಂದು ಸಣ್ಣ ಸಣ್ಣ ಕೆರೆ, ಕುಂಟೆಗಳಾಗಲೀ ಆಗಿಲ್ಲ. ಮಾನ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಹಿಂದೆ ಭೇಟಿ ಇತ್ತಾಗ ರೈತರ ಮುಂದೆ ಹಾಗೂ ನನ್ನ ಮುಂದೆ ನಮ್ಮ ಕ್ಷೇತ್ರಕ್ಕೆ ಬೇಕಾದಷ್ಟು ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿ ಬಂದರು. ಆದರೆ ಇದುವರೆಗೂ ಯಾವುದೂ ಇಲ್ಲ. ರಾಯಚೂರು ಜಿಲ್ಲೆ ಬಹಳ ಹಿಂದುಳಿದ ಪ್ರದೇಶ. ಆದ್ದರಿಂದ ಎಲ್ಲಾ ಮಂತ್ರಿಗಳೂ ಆಗಾಗ್ಗೆ ನಮ್ಮ ಜಿಲ್ಲೆಗೆ ಭೇಟಿ ಕೊಡುತ್ತಿದ್ದರೆ ಬಹಳ ಒಳ್ಳೆಯದಾಗುತ್ತದೆ. ನಮ್ಮ ಮುಖ್ಯಮಂತ್ರಿಗಳಂತೂ ರಾಯಚೂರು ಜಿಲ್ಲೆಗೆ ಇನ್ನೂ ಇದುವರೆಗೂ ಬಂದಿಲ್ಲ. ಹಣಕಾಸಿನ ಮಂತ್ರಿಗಳಾದ ಶ್ರೀಮಾರ್ಕ ಜತ್ತಿಯವರೂ ಸಹ ಇದುವರೆಗೂ ಬಂದಿಲ್ಲ. ನಾಳೆ ಹೋಗುತ್ತಿದ್ದಾರೆಂದು ಕಾಣುತ್ತದೆ. ಸಣ್ಣ ಸಣ್ಣ ನೀರಾವರಿ ಬಾವಿಗಳು, ಸಣ್ಣ ಸಣ್ಣ ಕೆರೆ, ಕುಂಟೆಗಳನ್ನು ತೀವ್ರವಾಗಿ ಇಲ್ಲಿ ಮಾಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ. ಈ ರೀತಿ ಏಕೆ ಹೇಳುತ್ತಿದ್ದೇನೆಂದರೆ ನಮ್ಮೆಲ್ಲರತಕ್ಕ ಪ್ರತಿಯೊಬ್ಬರಿಗೂ ರಾಯಚೂರು ಜಿಲ್ಲೆ ಬಹಳ ಹಿಂದುಳಿದ ಪ್ರದೇಶವೆಂಬುದು ಗೊತ್ತಿದೆ. ಮಾನ್ಯ ಮಂತ್ರಿವರ್ಗದವರೆಲ್ಲರಿಗೂ ಸಹ ಗೊತ್ತಿದೆ. ಆದ್ದರಿಂದ ಅಧಿಕಾರಿಗಳಾದವರು ನಮ್ಮ ರಾಯಚೂರು ಜಿಲ್ಲೆಯಲ್ಲಿಯೇ ಕುಳಿತು ಹೆಚ್ಚಿನ ಗಮನ ಕೊಟ್ಟು ಅಲ್ಲಿನ ರೈತರಿಂದ ಹೆಚ್ಚಿನ ಕೆಲಸ ಕಾರ್ಯಗಳು ನಡೆಯುವಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯ ಬಗ್ಗೆ ಹೇಳುವುದಾದರೆ, ರಾಯಚೂರಿನಿಂದ ಬೂದ್ದಿಪಾಡುವರೆಗೆ ರಸ್ತೆಗಳಾಗಿಲ್ಲ. ಅಲ್ಲಿ ಮೋಟರ್ ರೋಡನ್ನು ಹಾಕಬೇಕು. ಏಕೆಂದರೆ ಸುತ್ತಮುತ್ತಲಿರುವ ಹಳ್ಳಿಗಳಿಂದ ಜನರು ಬರುವುದಕ್ಕೆ ಹೋಗುವುದಕ್ಕೆ ಬಹಳ ಅಸಾಧ್ಯವಾಗಿದೆ. ಸೇತುವೆಗಳಂತೂ ಇಲ್ಲ. ಎಷ್ಟೋ ಸಣ್ಣ ಸಣ್ಣ ರಸ್ತೆಗಳು ಕೊಚ್ಚಿಹೋಗಿವೆ. ಆ ರೀತಿ ಮಾಡಿದರೆ ಖಾಸಗೀ ಬಸ್ಸುಗಳು ಓಡಾಡುವುದಕ್ಕೆ ಕಷ್ಟವಾಗುವುದಿಲ್ಲ. ಇಲ್ಲದಿದ್ದರೆ ಅಲ್ಲಿ ಬಸ್ಸುಗಳು ಹೋಗಿಬರುವುದಕ್ಕೆ ತುಂಬಾ ತೊಂದರೆಯಾಗುತ್ತದೆ. ಅದಕ್ಕಾಗಿ ಈ ರಸ್ತೆಯನ್ನು ಕೂಡಲೇ ಮೋಟರ್ ರೋಡಾಗಿ ಮಾಡಬೇಕೆಂದು ಬೇಡುತ್ತೇನೆ. ಹಾಗೆಯೇ ರಾಯಚೂರಿನಿಂದ ಆರಸಿನಿಗಿಯವರೆಗೂ ಇರುವ ರಸ್ತೆಯಲ್ಲಿ ಕಲ್ವರ್ಟ್ಸ್ ಆಗಬೇಕು. ಅದು ಮೋಟರ್ ರೋಡ್ ಸಹ ಆಗಬೇಕು. ರಾಯಚೂರಿನಿಂದ ಕುರುಡಿವರೆಗೆ ಒಂದು ರಸ್ತೆಯಾಗಬೇಕು. ಅಲ್ಲದೆ ರಾಯಚೂರಿನಿಂದ ಶಿರಗನೀಡಿ ರಸ್ತೆಯಲ್ಲಿ ಕಲ್ವರ್ಟ್ ಆಗಿಲ್ಲ, ಅದು ಮೋಟರ್ ರೋಡ್ ಸಹ ಆಗಿಲ್ಲ ಅದನ್ನು ಸಹ ತೀವ್ರವಾಗಿ ತೆಗೆದುಕೊಳ್ಳಬೇಕು.

ಇನ್ನೊಂದು ವಿಚಾರ. ಆಳಯಂಕಟಾಪುರದ ಹತ್ತಿರ ಒಂದು ದೊಡ್ಡ ಕಾಲುವೆ ಇದೆ. ಅಲ್ಲಿಂದ ಹಳ್ಳಿಗಳಿಗೆ ಹೋಗುವುದಕ್ಕೆ ರಸ್ತೆ ಇಲ್ಲ. ಸುಮಾರು ಐದಾರು ಮೈಲಿಗಳಷ್ಟು ಸುತ್ತಿಕೊಂಡು ಬರಬೇಕು ರೈತರಿಗಂತೂ ಇದು ಅಗಾಧವಾದ ಕಷ್ಟ. ಇದುವರೆಗೂ ಅಲ್ಲಿ ಒಂದು ಸೇತುವೆ ಕಟ್ಟತಕ್ಕ ಕೆಲಸವೇನೂ ಆಗಿಲ್ಲ. ಅದನ್ನು ಪೂರ್ತಿಯಾಗಿ ಕಟ್ಟಲು ತೀವ್ರ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಚಂದ್ರಬಂಡಕೆರೆ ಮಳೆಗಾಲದಲ್ಲಿ ಒಡೆದುಹೋಯಿತು. ಎಷ್ಟೋ ಎಕರೆಗಳಷ್ಟು ಜಮೀನಿಗೆ ನೀರಾವರಿ ಸೌಕರ್ಯ ಒದಗುತ್ತಿತ್ತು. ಅದನ್ನು ತೀವ್ರವಾಗಿ ಸರಿಮಾಡಿ ದೊಡ್ಡ ಕೆರೆಯನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಇದರ ಅಚ್ಚುಕಟ್ಟಿನಲ್ಲಿ 2 ಬೆಳೆ ಬೆಳೆಯಬಹುದು. ಹೆಗ್ಗಳಾಪುರದಿಂದ ವೆಂಕಟರಾಯಪುರಕ್ಕೆ ಹೋಗುವ ರಸ್ತೆಯು ಏರಿಯಮೇಲೆ ಮಳೆಗಾಲದಲ್ಲಿ ಹೋಗಿ ಬರುವುದಕ್ಕೆ ತುಂಬಾ ಕಷ್ಟವಾಗಿರುವುದರಿಂದ ಅಲ್ಲಿ 10 ಮೈಲಿಗಳಷ್ಟು ದೂರ ಒಂದು ಹೊಸ ರಸ್ತೆಯನ್ನು ತೀವ್ರವಾಗಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕಟ್ಲಾಟ್‌ಕೂರ್ ಕೆರೆ ಮಳೆಗಾಲದಲ್ಲಿ ಒಡೆದು ಹೋಗಿರುವುದರಿಂದ ಅದನ್ನೂ ಸಹ ರಿಪೇರಿ ಮಾಡಬೇಕು. ಏಕೆಂದರೆ ಅಲ್ಲಿಯೂ ಅಚ್ಚುಕಟ್ಟು ಜಾಸ್ತಿ ಇದೆ. ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿಸುವುದು, ಬಾವಿಗಳನ್ನು ತೋಡಿಸುವುದು—ಇವು ಬಹಳ ಜರೂರಾಗಿ ಆಗಬೇಕು. ಪಿ.ಡಬ್ಲ್ಯು.ಡಿ. ಮಂತ್ರಿಗಳು ಬಹಳ ಬುದ್ಧಿವಂತರಿದ್ದಾರೆ. ಎಲ್ಲಾ ಕಡೆಗಳನ್ನೂ ಒಂದೇ ದೃಷ್ಟಿಯಿಂದ ನೋಡುವವರು. ಆದರೆ ಹಣಕಾಸಿನ ಶಕ್ತಿ ಇರುವವರಿಗೆ ಏನೋ ಹಿಂದುಮುಂದು ಆಗುತ್ತದೆ. ಇವರು ಹಾಗಲ್ಲ. ಎಲ್ಲಾ ಕಡೆಯೂ ಒಂದೇ ದೃಷ್ಟಿಯಿಂದ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಕೆಲವರು ರಾಯಚೂರ್ ಮತ್ತು ಬಿದರ್ ಜಿಲ್ಲೆಗಳ ಬಗ್ಗೆ ಹೆಚ್ಚು ಗಮನಕೊಡುತ್ತಾರೆಂದು ಹೇಳಿದರು. ಹಾಗೇನೂ ಇಲ್ಲ. ಉತ್ಸಾಹದಿಂದ ಅನೇಕ ಕೆಲಸ ಕಾರ್ಯಗಳನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಚೀಫ್ ಇಂಜಿನಿಯರ್ ಸಹ ಬಹಳ ಉತ್ತೇಜನದಿಂದ ಕೆಲಸ ಮಾಡುತ್ತಿದ್ದಾರೆ. ಅವರು ಬಹಳ ಒಳ್ಳೆಯವರಿದ್ದಾರೆಂಬುದಾಗಿ ನನಗೆ ಕಂಡುಬಂದಿದೆ.

ಇನ್ನು ವಿದ್ಯುಚ್ಛಕ್ತಿ ನಮ್ಮ ಜಿಲ್ಲೆಗೆ ಸರಬರಾಜು ಮಾಡುತ್ತಿರುವುದು ಬಹಳ ಕಡಿಮೆ. ಅದನ್ನು ನಮ್ಮ ಜಿಲ್ಲೆಯಲ್ಲಿ ಇನ್ನೂ ಅಭಿವೃದ್ಧಿ ಮಾಡಿಲ್ಲ. ಆ ರೀತಿ ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ನಮ್ಮ ಜಿಲ್ಲೆಗೂ ಸರಬರಾಜು ಮಾಡಿದರೆ ಹೆಚ್ಚಿನ ಅನುಕೂಲಗಳಾಗುತ್ತವೆಂದು ನಾನು ಮನವಿ ಮಾಡುತ್ತೇನೆ.

ಇನ್ನು ಪ್ರೊಮೋಷನ್ನುಗಳ ಬಗ್ಗೆ ಹೇಳುವುದಾದರೆ ಅವನ್ನು ನ್ಯಾಯವಾಗಿ ಎಲ್ಲರಿಗೂ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ಅದನ್ನು ಕೊಡುವಾಗ ಸೀನಿಯಾರಿಟಿ ಪ್ರಕಾರ ಮಾಡಬೇಕು. ಸೀನಿಯಾರಿಟಿ ಪಟ್ಟಿಯನ್ನು ಸಹ ಪರಿಪೂರ್ಣವಾದ ರೀತಿಯಲ್ಲಿ ತೀವ್ರವಾಗಿ ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri R. M. DESAI** (Bilgi).—Sir, while welcoming the list of demands which has been placed before us, I would like to make some observations. Thanks to the Finance Minister who has given us this detailed aspect of the financial picture of our State. Looking to the fact that the budget is a deficit budget and no new taxes have been proposed, I think we will have to devise ways and means of finding out the required money and we will have to find out where we can make savings. I would like to point out some items where we can make savings, particularly the establisment sections. Under the Mysore Inam Abolitioin Act, I think the work has been almost completed in many of the districts: to give an example, 9 villages in Hassan, 9 villages in Shimoga and 10 villages in Mandya. Now for only 20 villages there are 2 Deputy Commissioners with their establishments working. When almost all work is over now, I think we can reduce the size of the establisments and effect a saving. Then, in many other departments also the staff position in the establishments can be reviewed and ths size reduced. This should be thought of in an ingenious manner rather than on a general scale because some of the departments are actually overworked already. So it is going to be a difficult task to reduce the size of the staff in these establishments. I think this work can very well be entrusted to the Finance Department which can find out ways and means of adjusting the matter. In fixing the size of the staff in the establishment we will have to take into consideration the workload in proportion to the amount spent and also the responsibilities handled by the officers concerned in their respective department.

Then, coming to agricultural income tax, I think most of the amount collected as agricultural income tax is spent on the establishment for this collection and so this does not seem to be remunerative. To reduce the expenditure on establishment I have one suggestion to make. If you think of this levy of this tax on a flat rate per acre on the cash crops grown, we can dispense with practically all the staff for collection of agricultural income tax and at the same time the tax will be easily collected also. This will be one way of effecting savings in establishment. At present some of these establishments do not have sufficint work. According to the latest order of the Finance Department some of the areas from Belgaum District have been tagged on to Bijapur District for the purpose of this tax because the workload in

(SRI R. M. DESAI)

Bijupur District is less whereas it is more in Belgaum District. In order to avoid these discrepancies, if we adopt a flat rate tax on the cash crops on the basis of acreage we can collect more and at the same time there will be a saving on establishment also.

Then, Sir, it is observed that some of the amounts alloted by the Centre for our plans are not completely spent and they are allowed to lapse. To quote the case of the Agriculture Department between the years 1961-62 and 1963-64 for 13 projects for the last 3 years the Centre allotted Rs. 138.16 lakhs out of which we have been able to spend only Rs. 75.81 lakhs and actually we had to surrender the remaining amount though we want to spend more and more on agriculture. This one example will show with what speed our Agriculture Department is working, Then, Sir, to implemnt the soil conservation scheme a lot of amount has been given to us but there is no staff to carry out the work. When lot of amount is pouring from the Centre we are not in a position to utilize the amount and effect correspondings savings from our own budget.

Coming next to public works and irrigation I want to point out one or two things. We have got some projects where betterment levy is levied. Our ryots had some grievance and the Government was able to redress them. Thanks to the Government. Coming to the budget provision, we have not been fortunate to get any more works for our district. Our Public works Minister has not been kind to our district.

On page 310 of the budget book there is one item "construction of a low level causeway across the Krishna near Galgali on Yedahalli Galgali Ayingi Road" for which a provision of Rs. 11,59,300 had been made. Some amount has already been spent on this, but after some time that work was stopped on account of the envisaged Almatti submersion. Again this has been taken up. I would like to know when the work will be completed.

Then in our taluk some of the nallas are not crossable. For instance, from Bagalkot to Jamhandi there is a nalla which is not crossable and sometime back our Finance Minister was held up at this nalla. So he knows the position and in spite of that I do not know why no provision has been made for constructing a bridge across this nala. I request the Govenment to take up this scheme at an early date.

Then, Sir Jamkhandi to Bagalkot is a major road and only some portion of it has been blacktopped and a small portion remains to be blacktopped. I request the Government to give us a little more fund to blacktop this road.

Then I would like to refer to some of the major roads which connect Bijapur and Dharwar and Saundatti and Dharwar. This is very badly neglected especially at Chinchgandi. I hope the Government would take steps to repair this portion.

(The bell was rung by the Speaker)

I have many more points to deal with, but since the time is up, I do not want to refer to them now.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು).—ಮಾನ್ಯ ಅಧ್ಯಕ್ಷರೆ, ಇವೊತ್ತು ಈ ಸಭೆಯ ಮುಂದೆ ಮಂಡಿಸಿರತಕ್ಕ 12 ಡಿಮ್ಯಾಂಡುಗಳಿಗೆ 72,22,00,000 ರೂಪಾಯಿಗಳ ಮೊತ್ತವನ್ನು ಕೇಳಿದ್ದಾರೆ. ಇದರಲ್ಲಿ ಡಿಮ್ಯಾಂಡ್ ನಂಬರ್ 10 ರಲ್ಲಿ ಎಂದರೆ ಸಾಮಾನ್ಯ ಆಡಳಿತ ಶಾಖೆಯಲ್ಲಿ ನಡೆಯುತಕ್ಕ ವ್ಯವಹಾರವನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಮತ್ತು ಬಹಳ ಖೇದವಾಗುತ್ತದೆ. ಈ ಡಿಮ್ಯಾಂಡ್ ನಂಬರ್ 10ರಲ್ಲಿ 3,25,87,200 ರೂಪಾಯಿಗಳ ಬೇಡಿಕೆಯನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಈ ಇಲಾಖೆಯಲ್ಲಿ ಹಣ ದುರುಪಯೋಗವಾಗುತ್ತದೆ ಎನ್ನುವುದು ಚೆನ್ನಾಗಿ ಅರ್ಥವಾಗುತ್ತದೆ. ಇದರಲ್ಲಿ ಮುಖ್ಯವಾಗಿ ಹೇಳುವುದಾದರೆ, ಕಳೆದ ವರ್ಷ 34 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರತಕ್ಕಂಥ ಒಂದು ಹೆಡ್‌ನಲ್ಲಿ 1964-65ನೇ ಸಾಲಿನಲ್ಲಿ ಎರಡು ಲಕ್ಷ 93 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದನ್ನು ನೋಡಿದರೆ ಏನು ಅರ್ಥವಾಗುತ್ತದೆ ಎಂದರೆ ಸಮಾಜ ವಾದವನ್ನು ಕಾಂಗ್ರೆಸ್‌ನವರು ಒಪ್ಪಿಕೊಂಡಿದ್ದಾರೆ.

ತತ್ವಕ್ಕೆ ಬಹು ವಿರೋಧವಾಗಿ ಈ ಒಂದು ಅಂಕಿ ಅಂಶಗಳು ಎದ್ದು ಕಾಣುತ್ತಿವೆ. ಇದರ ವ್ಯವಹಾರ ಎಷ್ಟರಮಟ್ಟಿಗೆ ಇದೆಯೆಂದರೆ, ಇವರು ಸಮಾಜವಾದ ಸಮಾಜವನ್ನು ಬಾಯಿನಲ್ಲಿ ಹೇಳ ತಕ್ಕಂಥವರೆ ಹೊರತು ಕಾರ್ಯತಃ ಮಾಡಿ ತೋರಿಸತಕ್ಕಂಥ ಶಕ್ತಿ ಉಳ್ಳವರಲ್ಲವೆಂದು, ಅಥವ ಇವರ ಕೃತಿಗೂ, ಮನೋಭಿಪ್ರಾಯಕ್ಕೂ ಹೊಂದಾಣಿಕೆಯಾಗದೆ ಇರುತ್ತದೆ. ತಾವು ಆಯವ್ಯಯದ ಅಂಕಿ ಅಂಶಗಳ ಕಡೆ ಕಣ್ಣು ಓಡಿಸಿದರೆ ಗೊತ್ತಾಗುತ್ತದೆ. ಒಂದು ಪೋಸ್ಟಿಗೆ 12 ಲಕ್ಷ 80 ಸಾವಿರ ರೂಪಾಯಿಗಳು ಖರ್ಚಾಗುತ್ತಿದೆ. ಬಹುಶಃ ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ಈ ಹುದ್ದೆ ಇರಲಿಲ್ಲ. ಅದನ್ನು ಹೊಸದಾಗಿ ಕ್ರಿಯೇಟ್ ಮಾಡಿದ್ದಾರೆ.

ಅಧ್ಯಕ್ಷರು.—ಯಾವುದು ?

ಶ್ರೀ ಬಿ. ಕೆ. ಪುಟ್ಟಯ್ಯ.—ಗವರ್ನರ್ ಹುದ್ದೆ. ಗವರ್ನರ್ ಎಂಬ ನಾಮಧೇಯವನ್ನು ಕೊಟ್ಟು ಸುಮಾರು 12 ಲಕ್ಷ 80 ಸಾವಿರ ರೂಪಾಯಿಯನ್ನು ಈ ಹುದ್ದೆಗಾಗಿ ಖರ್ಚುಮಾಡುತ್ತಾ ಇದ್ದಾರೆ.

MR. SPEAKER.—I do not allow it ; without knowing why does the Member say it ?

ಶ್ರೀ ಬಿ. ಕೆ. ಪುಟ್ಟಯ್ಯ.—ತಾವು ಹೇಳುವುದನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತೇನೆ.

ಇನ್ನೂ ಒಂದರ ಮೇಲೆ ಖರ್ಚುಮಾಡುತ್ತಿದ್ದಾರೆ. ಕಳೆದ ವರ್ಷ 1963-64ರಲ್ಲಿ ಮಂತ್ರಿಗಳಿಗಾಗಿ 7,55,172 ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಕಳೆದ ವರ್ಷ ಇಟ್ಟಿರತಕ್ಕಂಥಾದ್ದು 12,93,000. ಆದರೆ ಖರ್ಚಾಗಿರುವುದು 16,60,700. ಈ ವರ್ಷ ಇಟ್ಟಿರತಕ್ಕಂಥಾದ್ದು 15,50,000 ರೂಪಾಯಿ. ಒಬ್ಬೊಬ್ಬ ಮಂತ್ರಿಗೂ ಸುಮಾರು 70 ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ, ಒಬ್ಬೊಬ್ಬ ಉಪಮಂತ್ರಿಗೂ 50 ಸಾವಿರ ರೂಪಾಯಿ ಖರ್ಚುಮಾಡಿದ್ದಾರೆ. ಜೊತೆಗೆ ಪಾರ್ಲಿಮೆಂಟರಿ ಸೆಕ್ರೆಟರಿಗಳೂ ಸೇರಿದ್ದಾರೆ ಅನ್ನುವ ವಿವರ ಕೊಟ್ಟಿದ್ದಾರೆ. ಟೆಲಿಫೋನ್, ಮನೆ ಬಾಡಿಗೆ, ಸಿಬ್ಬಂದಿ, ಮತ್ತಿತರ ಖರ್ಚನ್ನೂ ಇದರಲ್ಲಿ ಕಾಣಿಸಿದ್ದಾರೆ. ಇವುಗಳ ತಪಸೀಲು ವಿವರಗಳನ್ನು ಎಲ್ಲೆಲ್ಲಿ ಹುಡುಕಿದರೂ ನನಗೆ ಪತ್ತೆಯಾಗಲಿಲ್ಲ. ಒಬ್ಬ ಮಂತ್ರಿಗೆ 70 ಸಾವಿರ ರೂಪಾಯಿ ಖರ್ಚುಮಾಡತಕ್ಕಂಥ, ಒಬ್ಬ ಉಪಮಂತ್ರಿಗೆ ವರ್ಷಕ್ಕೆ 50 ಸಾವಿರ ರೂಪಾಯಿ ಖರ್ಚುಮಾಡತಕ್ಕಂಥ ತಮ್ಮ ಆಡಳಿತದಲ್ಲಿ ನಾವು ನಿರೀಕ್ಷಣೆ ಮಾಡುವುದೇನು ? ಕೆಲವು ಉಪಮಂತ್ರಿಗಳಿಗೆ ದಿನಕ್ಕೆ 1 ಕಾಗದ ಇರತಕ್ಕಂಥ ಉಪಮಂತ್ರಿಗಳೂ ನಮ್ಮ ರಾಜ್ಯದಲ್ಲಿದ್ದಾರೆ. ಇವರಲ್ಲದೆ ಇಬ್ಬರು ಪಾರ್ಲಿಮೆಂಟರಿ ಸೆಕ್ರೆಟರಿಗಳನ್ನು ಇಟ್ಟುಕೊಂಡು ನಮ್ಮ ಆಡಳಿತ ಸಾಗಿಸುತ್ತಾ ಇದ್ದೇವೆ.

ಇನ್ನೂ ಕೆಲವು ವ್ಯವಹಾರಗಳನ್ನು ತೆಗೆದುಕೊಳ್ಳುವುದಕ್ಕೆ ಹೋದರೆ, ದೇಶದಲ್ಲಿ ಅಭಿವೃದ್ಧಿ ಕಾರ್ಯ ಎಷ್ಟರಮಟ್ಟಿಗೆ ಸಾಗುತ್ತಾ ಇದೆ ಅನ್ನುವುದಕ್ಕೆ ಒಂದು ಉದಾಹರಣೆ ಹೇಳಬೇಕಾಗಿದೆ. ಕಳೆದ ವರ್ಷ ಕಾಳಿ ನದಿಗಾಗಿ 50 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟು, ಅದರಲ್ಲಿ ತಾವು ಏನೊಂದೂ ಖರ್ಚು ಮಾಡಿಲ್ಲ. ಈ ವರ್ಷ ಕೂಡ ಅದಕ್ಕಾಗಿ 50 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ನಾಲ್ಕು ಜನ ಮಂತ್ರಿಗಳು ಆ ಬಾಬಿಗಾಗಿ ಇದ್ದುಕೊಂಡು ಕೆಲಸ ಎಷ್ಟರಮಟ್ಟಿಗೆ ಸಾಗಿದೆಯೆಂದರೆ ತೋರಿಸುವುದಕ್ಕೆ ಇನ್ನೂ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ. ಈ ಡಿಪಾರ್ಟ್‌ಮೆಂಟಿಗೆ ಖರ್ಚುಮಾಡಿರತಕ್ಕಂಥ 1963-64ರಲ್ಲಿ ಎಷ್ಟು ಎಂದರೆ 13 ಕೋಟಿ 90 ಲಕ್ಷ ರೂಪಾಯಿಗಳು. 1964-65ರಲ್ಲಿ ಬಜೆಟ್ ಎಸ್ಟಿಮೇಟ್ ಅಮೌಂಟ್ ಎಷ್ಟು ಎಂದರೆ 16 ಕೋಟಿ ರೂಪಾಯಿಗಳು, ರಿವೈಸ್ಡ್ ಎಸ್ಟಿಮೇಟ್

(ಶ್ರೀ ಬಿ. ಕೆ. ಪುಟ್ಟಯ್ಯ)

ಎಷ್ಟು ಅಂದರೆ 10 ಕೋಟಿ 87 ಲಕ್ಷ ಟರ್ನ್‌ಓವರ್ ಆಗಿರತಕ್ಕಂಥ ಕೆಲಸದ ಕಾಂಗಾರಿ ಹೇಳಬೇಕಾಗಿದೆ. ಸಂಬಳ ಸಾರಿಗೆಗಳು ಎಷ್ಟು ಹೆಚ್ಚಾಗಿದೆಯೋ ಅದಕ್ಕೆ ಸಮಕಟ್ಟುವ ಕೆಲಸ ನಡೆದಿಲ್ಲ; ಅದಕ್ಕೆ ಬದಲಾಗಿ, ನಿರೀಕ್ಷೆಗಿಂತ ಕಡಿಮೆಯಾಗಿ ಆಗಿರತಕ್ಕಂಥ ದೃಶ್ಯವನ್ನು ನೋಡುತ್ತಾ ಇದ್ದೇವೆ. ಇದರಲ್ಲಿ ಹೇಳಬೇಕೆಂದರೆ ನೀವು ಮಂತ್ರಿಮಂಡಲವನ್ನು ಉಳಿಸಿಕೊಂಡು ಹೋಗುವುದರಲ್ಲಿ ಆಸಕ್ತರಾಗಿದ್ದೀರಿ ಎಂದು, ಮಂತ್ರಿಗಳಮೇಲೆ ಹಿಂದಿಗಿಂತ ಜಾಸ್ತಿ ಖರ್ಚುಮಾಡುತ್ತಿರುವುದು ನಿಮ್ಮ ಸೀಟುಗಳನ್ನು ಭದ್ರಮಾಡಿಕೊಂಡು ಕೂತುಕೊಳ್ಳುವುದಕ್ಕೆ, ಈ ದೃಷ್ಟಿಯಿಂದ 7 ಲಕ್ಷ ಇದ್ದ ಖರ್ಚನ್ನು 16 ಲಕ್ಷ ಮಾಡಿದ್ದೀರಿ. ನಾಲ್ಕು ಜನ ಮಂತ್ರಿಗಳಿದ್ದಾಗ್ಯೂ, ಈ ಡಿಪಾರ್ಟ್‌ಮೆಂಟ್ ಸಾಧಿಸಿರತಕ್ಕಂಥ ಕೆಲಸವೇನು ? 16 ಕೋಟಿ ರೂಪಾಯಿ ತೆಗೆದಿಟ್ಟು, ಕೇವಲ 10 ಕೋಟಿ ರೂಪಾಯಿ ಖರ್ಚುಮಾಡಿದ್ದಾರೆ. ಆರು ಕೋಟಿ ರೂಪಾಯಿ ಉಳಿಸಿದ್ದರೆ, ಕೆಲಸ ಮಾಡಿಲ್ಲವೆಂದು ಈ ಒಂದು ಉದಾಹರಣೆಯ ಮುಖಾಂತರ ವ್ಯಕ್ತವಾಗುತ್ತದೆ. ಪೇಜ್ 523ರಲ್ಲಿ ನೋಡಿ. ಪಿ.ಡಬ್ಲ್ಯು.ಡಿ.ಗೆ 16 ಕೋಟಿ ರೂಪಾಯಿ ಪ್ರೊವೈಡ್ ಮಾಡಿ, 6 ಕೋಟಿ ಕಡಿಮೆ ಖರ್ಚುಮಾಡಿದರೆ ಕೆಲಸ ಆಗುವುದರ ಬಗ್ಗೆ ನಿಮಗೆ ಎಷ್ಟು ಉತ್ಸಾಹವಿದೆಯೆಂದು ಹೇಳೋಣ. ಎಲ್ಲಿ ಬೇಡವೋ, ಅಲ್ಲಿ ಅನಾವಶ್ಯಕವಾಗಿ ಹಣ ಖರ್ಚಾಗುತ್ತಾ ಇದೆ. General Administration ಒಂದು ಬಾಬಿಗೆ 3 ಕೋಟಿ ರೂಪಾಯಿ ಖರ್ಚಾಗುತ್ತಿದ್ದರೆ, ಅದರಲ್ಲಿ ಒಂದು ಕೋಟಿ ರೂಪಾಯಿಯನ್ನಾದರೂ ಉಳಿಸಬಹುದು. ಎಲ್ಲೆಲ್ಲಿ ಎಷ್ಟೆಷ್ಟರ ಮಟ್ಟಿಗೆ ಈ ಹುದ್ದೆಗಳು ಜಾಸ್ತಿಯಾಗಿವೆ, ಈ ಆಫೀಸರುಗಳು ಅನಾವಶ್ಯಕವಾಗಿದ್ದಾರೆನ್ನುವುದು ತಮಗೂ ಗೊತ್ತಿದೆ, ಆದರೆ ಕಣ್ಣುಮುಚ್ಚಿಕೊಂಡಿದ್ದೀರಿ. ಸರ್ಕಾರಕ್ಕೆ ಬೇಕಾದಷ್ಟು ಖರ್ಚು ಅನಾವಶ್ಯಕವಾಗಿ ಆಗುತ್ತಿದೆ. ಎಸ್ಟಾಬ್ಲಿಷ್‌ಮೆಂಟಿನಲ್ಲಿ 30 ಪರ್ಸೆಂಟ್ ಜಾಸ್ತಿ ಇದೆ, ಅದನ್ನು ರಿಟ್ರೆಂಚ್ ಮಾಡಬಹುದೆಂದು ಆರ್ಥಿಕ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆದರೂ ಜಾಸ್ತಿ ಮಾಡುತ್ತಾ ಇದ್ದಾರೆ. ತಾವು ಕಣ್ಣುಬಿಟ್ಟು ನೋಡಿದಲ್ಲಿ, 391 ಲಕ್ಷ ರೂಪಾಯಿ ಡಿಫಿಸಿಟ್ಟಿನಲ್ಲಿ, ಸುಲಭವಾಗಿ 1 ಕೋಟಿ ರೂಪಾಯಿಯನ್ನು ಸಿಬ್ಬಂದಿ ವರ್ಗವನ್ನು ಕಡಿಮೆ ಮಾಡುವುದರ ಕಡೆ ಗಮನ ಕೊಡುವುದಾದರೆ ಉಳಿಸಬಹುದು.

ಇದೇ ಅಲ್ಲದೆ ಇನ್ನೂ ಕೆಲವು ಡಿಮ್ಯಾಂಡುಗಳನ್ನು ಮಂಡಿಸಿದ್ದೀರಿ. ಯಾವ ಡಿಮ್ಯಾಂಡು ನೋಡಿದರೂ ಕೂಡ ಅಗಾಧವಾದ ಎಸ್ಟಾಬ್ಲಿಷ್‌ಮೆಂಟನ್ನು ನೋಡುತ್ತಾ ಇರುತ್ತೇವೆ. ಆದರೂ ಅದಕ್ಕೆ ಒದಗಿಸತಕ್ಕಂಥ ಹಣ ವಿಸ್ತಾರವಾಗುತ್ತಿರುವುದನ್ನು ನೋಡುತ್ತಿದ್ದೇವೆ ತಾವು ಇಂಡಿಯಾ ಸರ್ಕಾರದಿಂದ ಕೆಲವು ಹಣ ಪಡೆಯಬೇಕು ಅಂತ ಕೇಳಿದ್ದೀರಿ. ತಾವು 16 ಕೋಟಿ ರೂಪಾಯಿ ಮಾಡುವಂಥ ಖರ್ಚಿನಲ್ಲಿ 10 ಕೋಟಿ ಖರ್ಚು ಮಾಡಿರುವುದರಿಂದ, ಸೆಂಟ್ರಲ್ ಗವರ್ನ್‌ಮೆಂಟಿನಿಂದ ಬರತಕ್ಕಂಥ ಗ್ರಾಂಟಿನಲ್ಲಿ ಎಷ್ಟೋ ಲ್ಯಾಪ್ಸ್ ಮಾಡಿಕೊಂಡಿದ್ದೀರೆಂದು ಇದರಲ್ಲಿಯೇ ಅರ್ಥವಾಗುತ್ತದೆ. ಇದರ ಅರ್ಥ ಮಾಡಿಕೊಳ್ಳುವುದಾದರೆ, ತಾವು ಶ್ರದ್ಧಾಭಕ್ತಿಯಿಂದ ಕೆಲಸಮಾಡುತ್ತಿಲ್ಲ; ಇದು ತಮ್ಮ ಅಂಕಿ ಅಂಶಗಳ ಮುಖಾಂತರವೇ ವೇದ್ಯವಾಗುತ್ತಾ ಇದೆ. ನಾವು ಪದೇ ಪದೇ ಹೇಳುತ್ತಿರುತ್ತೇವೆ, ತಾವು ಕೂಡ ಈಚೆಗೆ ಕಣ್ಣುಬಿಟ್ಟು ನೋಡಿರುತ್ತೀರಿ. ಎಸ್ಟಾಬ್ಲಿಶ್‌ಮೆಂಟ್ ಹೆಚ್ಚಾಗಿದೆ ಅನ್ನುವುದು ತಮಗೆ ಮನವರಿಕೆಯಾಗಿದ್ದರೂ ಸಹ, ಕೆಲವು ಹುದ್ದೆಗಳನ್ನು ನಿರ್ಮಿಸುತ್ತಲೇ ಇರುತ್ತೀರಿ. ಈ ಡಿವಿಜನಲ್ ಕಮೀಷನರ ಹುದ್ದೆ ತಮ್ಮ ಕಾಲದಲ್ಲಿಯೇ ಆದದ್ದು. ಡೆಪ್ಯುಟಿ ಕಮಿಷನರೇ ಸಾಕಾಗಿದೆ. ಈ ಡಿವಿಜನಲ್ ಕಮಿಷನರನ್ನು ಆಫೀಸನ್ನು ವಜಾಮಾಡಿ ಎಂದು ಒತ್ತಾಯಮಾಡಿ ಮತ್ತೆ ಹೇಳುತ್ತೇನೆ. ಒಂದಲ್ಲ ಒಂದು ರೀತಿಯಲ್ಲಿ ಹುದ್ದೆಗಳನ್ನು ಅನಾವಶ್ಯಕವಾಗಿ ಸೃಷ್ಟಿಮಾಡಿ ಎಸ್ಟಾಬ್ಲಿಶ್‌ಮೆಂಟನ್ನು ಜಾಸ್ತಿ ಮಾಡುತ್ತಿದ್ದೀರಿ, ಮೊದಲು ಸಾವಿರವಾಗಿ ಆಮೇಲೆ ಲಕ್ಷವಾಗಿ, ಕ್ರಮೇಣ ಕೋಟಿಗೆ ಖರ್ಚು ಏರುತ್ತದೆ, ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಖರ್ಚನ್ನೂ ಕಡಿಮೆ ಮಾಡಿ, ದೇಶದ ಅಭ್ಯುದಯದ ಕಡೆ ಹೆಚ್ಚು ಗಮನವನ್ನು ಹರಿಸಬೇಕು.

2-30 P.M.

Sri TIRUMALA DEVA RAYA (Gangavati).—Sir, I would like to speak a few words about the Public Works Department. No doubt, every year in all spheres of this Department such as major and minor irrigation works, roads and buildings, a huge amount is provided and spent. But I have a little doubt whether we are getting satisfactory returns or not. I do not understand why there are different rates for the same work in the same place. The rates are different for irrigation, regular P.W.D.

Blocks and when a petty contractor gets a little profit I am sure in the case of big contractor he must be getting huge profit. Therefore, I request the Government to consider this matter and do something to economise expenditure. Most of the works have been sanctioned and even amounts have been provided in the budget and the works are held up. Inspite of tenders being called, no contractor is coming forward to take up work. In such cases why not the department take up the work so that they can provide some work for the unemployed Supervisors who are going hither and thither for work. We want to increase food production but some of these irrigation projects are held up for reasons of not complying with the requirements. In the Ex-Hyderabad State, old canals and tanks were maintained by the Government. Inspite of several representations to the Government and to the concerned authorities and even to the ministers, till now no action is taken resulting in a great loss to the agriculturists. When the Government is collecting land revenue, it is their bounden duty to see that the canals and other things are kept in proper condition so that agriculturists are not put to loss or any grievance. I hope the Government will consider and do something to repair old canals and other tanks which are the responsibility of the Government.

The intention of the sugarcane cess was to develop sugarcane area, such as constructing approach roads, research stations, dispensaries, etc. But unfortunately the Supreme Courts has nullified it. In place of it, sugarcane purchase tax is levied with the same intention. But it goes into the consolidated fund and it is not being specifically spent for sugarcane etc., There is only one factory in Raichur District. Even now the sugarcane growers have to carry the cane on their heads or in carts and bring them to the road side and load into a lorry. Therefore, I request the Government that sugarcane purchase tax amount be utilised for development of the area. When it is fully developed, the amount can been utilised for some other purpose.

Next I wish to say about Tungabhadra Project. It is not fully developed and only heavy irrigation is fully developed. Therefore, I request the Government to constitute a body like Tungabadra Corporation or some other Board and give some statutory powers so that they can take decisions and see that the area is developed. Hyderabad Karnatak area is backward and every year only a small amount is spent. We require a number of roads and tanks. It is a famines-tricken area. We want some irrigation works. As a famine relief measure Kirshna, Project may be taken up so that it will relieve famine in that area. With these few words, I thank the Speaker and conclude my speech.

† SRI D. PARAMESWARAPPA (Honnali).—Mr. Speaker, while supporting the Demands, I choose to speak on Demand Nos. 10, 31 and 47, General Administration, Public Works and Electricity Schemes. So far as General Administration is concerned, we have heard so far

(SRI D. PARAMESWARAPPA)

different views. Sir, not to speak of any 'isms' about administration. I would like to say that under general administration, no conscientious person can deny that there has been corruption, and inefficiency in the administration. According to me, this corruption and ineffieiency are in the nature of cancer in the system of administration. Unless this cancer is rooted out, there is no safety for the country. We will have to analyse and find out the reasons for this corruption and inefficiency in the administration. At the same time while thanking the Government for having initiated machinery to check corruption and inefficiency, still I find no improvement in that direction. If we analyse and try to find reasons, it would be obvious. There is frustration in the minds of employees of all cadres. There is frustration because of defective cadre and recruitment rules; frustration because promotions are made according to whims and fancies of authorities; frustration because there is inadequacy of pay to the officials. These are facts which we cannot deny. Why I am stressing on this point is, in order to improve efficiency, we will have to bring the level of pay scales into higher level. If we consider the cost of living nowadays, it is highly impossible to make both ends meet especially in the case of non-gazetted officials. Just imagine a Second Division Clerk getting a meagre pay of Rs. 80 or 90. How can he lead a happy life especially in a city like Bangalore? That is why there has been frustration in the minds of officials and this frustration is responsible for corruption and inefficiency.

Sir, another reason why there is this inefficiency is, that the Government has been adhering to this formula of bringing legislation, passing some Acts year by year there by creating Departments for the intimidation of those Acts. As far as I know, we have gone beyond the optimum point in creating employment. In the year 1952, we have reached the optimum point and since then every year there has been addition of establishment to the administration. Therefore, my submission is that in order to improve the efficiency in the administration, it is better to minimise the staff and to pay more to the officials and extract more work. That is my concrete suggesion to the Government. Reference have already been made with regard to the way in which the administration is working in our State. There has been delay in the disposal of papers at all levels. To quote an instance, so far as the offices of Tahsildars, Deputy Commissioners and at Secretariat level, are concerned, I regret to state that on 16th January 1965, I, in the capacity of a Council for a certain person, presented a petition to one of the responsible persons. So far, that petition is not to be traced. It is a stamped petition with enclosures. Just imagine how efficient the administration might be?

SRI B. D. JATTI.—Sir, according to the Hon'ble Member, what should be the percentage of disposal of files per month? Then, we can understand whether we are disposing the files properly or not.

Sri D. PARAMESHWARAPPA.— Sir, I have not calculated. I am prepared to say that if some time is given to me.

While quoting this instance, my intention is not otherwise, but to bring it to the notice of the Government that such things should not happen. If people at the helm of affairs are very strict or very honest, naturally the subordinates will be honest. In the interest of the efficiency of administration, I once again stress that it is necessary to minimiss the staff and improve the pay structure of the officials in order to extract more work and improve the efficiency.

I will now proceed to Demand No. 31, *i.e.*, P.W.D. This Department is considered to be one of the most important Departments, because it is the Department which creates Tanks to irrigate lands, it is the Department which creates Ports and Harbours, it is the Department which creates buildings for the Legislators, for the Ministers and for the Presiding Officers, and it is the Department which lends its skill to the public in the construction of fine buildings. According to me, this Department is a creative Department. Therefore, I submit that this Department should work most efficiently and there should be no elements to collude with this Department. So far as Public Works Department is concerned, the way in which it is working, I think, books can be written. I would like on this occasion to bring to the notice of the Hon'ble Minister concerned that in order to avoid the delays that are being caused in the execution of the works, some steps should be taken. Sir, in this Department, there has been a practice of calling for tenders for the execution of the works. In my opinion, this system of calling for tenders is fraght with danger of mal-practices, because if we call for tender, than there is every likelihood of the Contractor and the officer being in collusion and every likelihood of wastage of money. In the alternative, if the work is carried on on a piece-work basis, there is every likelihood of its being completed much earlier. I think, that is the opinion furnished by some of the honest Engineers in the State. In order to complete the work as early as possible, the work should be carried on on piece-work system. So, insted of continuing this system of calling for tenders, it is better that the work is taken up on piece-work system.

There are three types of irrigation, minor, medium and major. So far as minor irrigation is concerned, I need not repeat what has been already said by the other Members of this House. So far as major irrigation is concerned, I would like to bring to the notice of the Government that I have, on several occasions, brought to their notice that major irrigation projects have created ticklish problems and they are not yielding quick results. On the other hand, the results that they are yielding are very remote. I am reminded of a Kannada proverb in this connection: "ಹೊಟ್ಟೆಗೆ ಹಿಟ್ಟಿಲ್ಲ ಆದರೂ ಕೂಡ ಜುಟ್ಟಿಗೆ ಮಲ್ಲಿಗೆ ಹೂವು ಬೇಕು." So, when the country has got to devote its attention towards food production and in the direction of food production, quicker results are

(SRI D. PARPMESHWARAPPA)

required, the Government can very well postpone for some time more undertaking these big projects and give priority to minor irrigation. It is very strange that our Hon'ble Minister for Finance has not made adequate provision for minor irrigation in the Budget, and I request him to revise his opinion and make more provision for undertaking these works. Under major irrigation, in my constituency, there are a number of villages affected under Bhadra and Tunga channels.

I have got an eye-witness in Sri Alur Hanumanthappa, Deputy Minister for Minor Irrigation who happened to visit my constituency on 4-9-1964. I forced him to visit one village.

Mr. SPEAKER.—Let not the Hon'ble Member mention on the Floor of the House that he forced him.

Sri D. PARAMESWARAPPA.—Beeragondanahally was an affected area and he was an eye-witness to that tragic scene wherein people were living almost under water. Sir, so far in that direction nothing has been done. I do not know whether under democracy, human beings can be treated as animals.

Mr. SPEAKER.—Only fishes live under water; not even other animals.

Sri D. PARAMESWARAPPA.—Therefore, I once again draw the attention of the Government to this fact since it pertains to health of the people and see that some immediate relief is given to such people by shifting such villages under the channels. With these remarks, I thank the Chair for having given me an opportunity to speak.

ಶ್ರೀ ಕೆ. ಎಚ್. ರಂಗನಾಥ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ನಾನು ಈಗ ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ನಾನು ಕೆಲವು ಸಲಹೆಗಳನ್ನು ಮಾಡ ಬಯಸುತ್ತೇನೆ.

ಇದುವರೆಗೂ ಮಾತನಾಡಿರತಕ್ಕ ಎಲ್ಲ ಮಾನ್ಯ ಸದಸ್ಯರುಗಳೂ ಇತ್ತೀಚೆಗೆ ನಮ್ಮ ಆಡಳಿತ ಸಡಿಲವಾಗುತ್ತಿದೆ, ಅದು ಶಿಥಿಲವಾಗುತ್ತಿದೆ ಎಂಬುದಾಗಿ ಏಕಾಭಿಪ್ರಾಯಕ್ಕೆ ಬಂದಿದ್ದಾರೆ. ನನ್ನ ಭಾವನೆಯೂ ಕೂಡ ಹಾಗೇ ಇದೆ, ಈ ಅಭಿಪ್ರಾಯವನ್ನು ಪುಷ್ಟೀಕರಿಸತಕ್ಕ ರೀತಿಯಲ್ಲಿ ನಮ್ಮ ಸರ್ಕಾರದವರು ಇತ್ತೀಚೆಗೆ ರಾಜ್ಯದಲ್ಲಿ ಒಂದು ವಿಜಲೆನ್ಸ್ ಸಮಿತಿಯನ್ನು ನೇಮಕ ಮಾಡಿದ್ದಾರೆ. ಹಾಗೂ ಅದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದಾರೆ. ಈ ಹಿಂದೆ ನಮ್ಮ ಸರ್ಕಾರದವರು ಆ ಅಂಟೀಕರಪ್ಷನ್ ಮತ್ತು ಎಫಿಷಿಯನ್ಸಿ ಆಡಿಟ್ ಇಲಾಖೆಗಳನ್ನು ಮಾಡಿ ಏನು ಪ್ರತಿಫಲವನ್ನು ಪಡೆದರೋ ಅದೇ ಪ್ರತಿಫಲ ಈ ವಿಜಲೆನ್ಸ್ ಸಮಿತಿಯಿಂದಲೂ ಬರಬಹುದು. ಹೀಗೆ ಈ ಇಲಾಖೆಗಳನ್ನು ಮಾಡುವುದರಿಂದಲೇ ಈ ರೋಗವನ್ನು ಪರಿಹಾರ ಮಾಡುತ್ತೇವೆಂದು ಹೇಳತಕ್ಕದ್ದು ಸರಿಯಲ್ಲ. ಇವುಗಳಿಂದ ದೇಶಕ್ಕೆ ಖಂಡಿತವಾಗಿಯೂ ಒಳ್ಳೆಯದಾಗುವುದಿಲ್ಲ. ಅದುದರಿಂದ ಇದನ್ನು ನಿವಾರಣೆ ಮಾಡತಕ್ಕ ಬಗ್ಗೆ ಸರ್ಕಾರ ಒಂದು ನೇರವಾದ ಮಾರ್ಗವನ್ನು ಕಂಡುಹಿಡಿಯಬೇಕಾದ್ದು ಅವಶ್ಯಕ. ಈ ದಿವಸ ಯಾರು ಯಾರು ಯಾರು ಹೆಚ್ಚು ಸಂಬಳಗಳನ್ನು ತೆಗೆದುಕೊಳ್ಳುತ್ತಿದ್ದಾರೋ, ಯಾರು ಆಡಳಿತದಲ್ಲಿ ಒಂದು ಹೆಚ್ಚಿನ ಜವಾಬ್ದಾರಿಯ ಸ್ಥಾನದಲ್ಲಿದ್ದಾರೋ ಅಂಥ ಅಧಿಕಾರಿಗಳೇ ಹೆಚ್ಚು ತಪ್ಪುಗಳನ್ನು ಮಾಡುತ್ತಿದ್ದಾರೆ. ಇದನ್ನು ಹೇಳುವುದರಲ್ಲಿ ಏನೂ ಅತಿಶಯೋಕ್ತಿಯಿಲ್ಲ. ಈ ದಿವಸ ನಾವು ಈ ಸೆಕ್ರೆಟೇರಿಯಟ್ ಮತ್ತು ಇದಕ್ಕೆ ಹೊಂದಿರತಕ್ಕ ಆಫೀಸುಗಳಿಗೆಲ್ಲಾ ಅಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿಗೆ ಒಂದು ಕೋಟಿ ಚಿಲ್ಲರೆ ರೂಪಾಯಿಗಳನ್ನ ಸಂಬಳಸಾರಿಗೆ ರೂಪದಲ್ಲಿ ಕೊಡುತ್ತಿದ್ದೇವೆ. ಈ ದಿವಸ ಈ ಸೆಕ್ರುಟೇರಿಯಟ್ಟಿನಲ್ಲಿ ಸುಮಾರು ನೂರಾರು ಜನ ಅಂಡರ್

ಸೆಕ್ರಟೆರಿಗಳಿದ್ದಾರೆ. ಇಷ್ಟಿದ್ದಾಗ್ಯೂ ಸರ್ಕಾರಕ್ಕೆ ಬರತಕ್ಕ ಪ್ರತಿ ಒಂದು ಕಾಗದಪತ್ರವೂ ನಾನಾ ರೂಪದಲ್ಲಿ ನಾನಾ ರೀತಿಯಲ್ಲಿ ವಿಲೇ ಆಗುವುದರಲ್ಲಿ ತಡವಾಗುತ್ತಿದೆ. ಇವರಿಂದ ಸಾಮಾನ್ಯ ಜನರಿಗೇನೂ ಉಪಯೋಗವಾಗುತ್ತಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿಯಲೇ ಬೇಕು. ಆದರೆ ಆ ವಿಜಿಲನ್ಸ್ ಸಮಿತಿಯಿಂದ ಇದನ್ನು ತಪ್ಪಿಸುವುದಕ್ಕೂ ಸಾಧ್ಯವಿಲ್ಲ, ಇಂಥ ಒಂದು ಲೋಪದೋಷವನ್ನು ತಡೆಗಟ್ಟುವುದಕ್ಕೆ ಇವುಗಳು ಒಂದು ಸರಿಯಾದ ಮಾರ್ಗವಲ್ಲ. ಈ ದಿವಸ ಸೆಕ್ರೆಟೇರಿಯಟ್ಟಿನಿಂದ ಹಿಡಿದು ಜಿಲ್ಲಾಧಿಕಾರಿಗಳ ಕಛೇರಿಯವರೆಗೂ ಕಾಗದಪತ್ರಗಳ ವಿಲೇವಾರಿ ನಿಧಾನವಾಗುತ್ತಿದೆ ಎಂದರೆ ಇದಕ್ಕೆ ಇತಿಮಿತಿಯೇ ಇರುವುದಿಲ್ಲ. ಇಂಥ ವಿಚಾರದಲ್ಲಿ ಜನ ಸಾಮಾನ್ಯರೇನಾದರೂ ಮೇಲಧಿಕಾರಿಗಳಿಗೆ ದೂರನ್ನು ಕೊಟ್ಟರೆ ಅಧಿಕಾರಿಗಳು ಅದನ್ನು ಬಹಳ ಲಘುವಾಗಿ ಕಾಣುತ್ತಾರೆ. ಇಂಥದನ್ನು ವಿಚಾರಣೆ ಮಾಡಬೇಕೆಂದು ನಾವು ಸರ್ಕಾರಕ್ಕೆ ಅರ್ಜಿ ಹಾಕಿದರೆ ಆ ಅರ್ಜಿಯನ್ನು ನಾವು ಯಾರಮೇಲೆ ಆಪಾದನೆಯನ್ನು ಮಾಡಿರುತ್ತೇವೋ ಅಂಥ ವ್ಯಕ್ತಿಯ ಕಡೆಗೇ ಕಳುಹಿಸಿಕೊಡುತ್ತಾರೆ. ಹೀಗಾಗಿ ಈ ಆಪಾದನೆಗಳ ಬಗ್ಗೆ ಅವರಿಗೆ ಯಾವ ಒಂದು ಹೆದರಿಕೆಯೂ ಇಲ್ಲದಂತಾಗಿದೆ. ಆದುದರಿಂದ ಈ ವಿಚಾರದಲ್ಲಿ ಸರ್ಕಾರದವರು ಸೂಕ್ತ ವಿಚಾರಣೆ ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಮೈಸೂರು ಸಂಸ್ಥಾನದಲ್ಲಿರಲ್ಲಿಕ್ಕ ನಿಮ್ಮ ವರ್ಗದ ಜನರಿಗೆ ಅಂದರೆ ಅಧಿಕಾರಿಗಳಿಗೆ ಸರಿಯಾದ ನ್ಯಾಯ ದೊರಕುತ್ತಿಲ್ಲ. ಇದು ನನ್ನ ಖಚಿತವಾದ ಅಭಿಪ್ರಾಯ. ಈ ದಿವಸ ಜಾರಿಯಲ್ಲಿರತಕ್ಕ ರೆಕ್ರೂಟ್‌ಮೆಂಟ್ ಪಾಲಿಸಿ ಪ್ರಕಾರ ಷೆಡ್ಯೂಲ್ಡ್‌ಕ್ಯಾಸ್ಟಿನವರಿಗೆ 16 ಪರ್ಸೆಂಟು ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ 3 ಪರ್ಸೆಂಟು ಹೀಗೆ ಒಟ್ಟು 18 ಪರ್ಸೆಂಟು ಕೋಟಾ ನಿಗದಿಮಾಡಿದ್ದಾರೋ ಅದು ಅವರಿಗೆ ನಿಗದಿಯಾದ ರೂಪದಲ್ಲಿ ಸಿಗುತ್ತಿಲ್ಲ. ರಾಜ್ಯಗಳ ವಿಲೀನೀಕರಣ ವಾದ ಮೇಲೆ ಇಲಾಖೆಗಳಲ್ಲಿ ಇರುವ ಜಾಗವನ್ನು ಕ್ಲಾಸಿಫಿಕೇಷನ್ ಮಾಡಿಲ್ಲ, ಆ ಬಳಿಕ ಈ ಜನರು ಪಿ. ಎಸ್. ಸಿ. ಗೂ ಮತ್ತು ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿಗಳಿಗೂ ಅರ್ಜಿಯನ್ನು ಹಾಕಿದರೆ ಇವರಿಗೆ ದೊರೆಯಬೇಕಾಗಿದ್ದ ಕೋಟಾ ಇದ್ದಾಗ್ಯೂ ಅದು ಇವರಿಗೆ ದೊರೆಯದೆ ಅದು ಲ್ಯಾಪ್ಸಾಗು ತ್ತಿದೆ. ಈ ರಿಜರ್ವೇಷನನ್ನು ಸರ್ಕಾರದವರು ಯಾವ ರೀತಿ ವಿಲೇವಾರಿ ಮಾಡಬೇಕೆಂದು ಪ್ಲಾನ್ ಮಾಡಿದ್ದಾರೆಂದರೆ : 1956 ರಿಂದ ಇತ್ತೀಚೆಗೆ ಯಾರು, ಅಂದರೆ 1960–61 ರಲ್ಲಿ ಈ ಬಗ್ಗೆ ಒಂದು ಆಜ್ಞೆಯನ್ನು ಹೊರಡಿಸಿ ಅದರಲ್ಲಿ ಏನು ಹೇಳಿದ್ದಾರೆಂದರೆ—ತಾ : 1-1-1960 ರೊಳಗೇ ಯಾರು ಯಾರು ನೌಕರಿಗಳಿಗೆ ಸೇರಿರುತ್ತಾರೋ ಅಂಥವರನ್ನು ಮಾತ್ರ ರೆಗ್ಯುಲರೈಜ್‌ಮಾಡಬೇಕೆಂದು ಹೇಳಿ ದ್ದಾರೆ. ಈ ಒಂದು ಆಜ್ಞೆಯಿಂದ ನಿಮ್ಮ ವರ್ಗದ ಜನರಿಗೆ ತೊಂದರೆಯಾಗಿದೆ. ಇದನ್ನು ನಾನೀಗ ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ವರ್ಗದವರಿಗೆ ರಿಜರ್ವೇಷನ್ ಮೂಲಕ ನಿಗದಿ ಮಾಡಿರತಕ್ಕ ಸ್ಥಾನಗಳು ಭರ್ತಿಯಾಗದೆ ಹಾಗೇ ಅವುಗಳೇನಾದರೂ ಉಳಿದಲ್ಲಿ ಅವನ್ನು ಲ್ಯಾಪ್ಸ್ ಮಾಡದಂತೆ ಆ ಜನರಿಂದ ಅವು ಭರ್ತಿಯಾಗುವ ತನಕ ಅವುಗಳನ್ನು ಕ್ಯಾರೀಫಾರ್ವರ್ಡ್ ಮಾಡಬೇಕೆಂದು ಮೊನ್ನೆತಾನೆ ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿದೆ. ಆ ವಿಚಾರ ಈ ವಾರದ ಮೈಸೂರು ಗೆಜೆಟ್ಟಿನಲ್ಲಿ ಬಂದಿದೆ, ನಮ್ಮ ರಾಜ್ಯ ಸರ್ಕಾರದ ಅಭಿಪ್ರಾಯವೂ ಅದೇ ಆಗಿದೆ. ಆದರೆ ಇದನ್ನು ಜಾರಿಗೆ ತರತಕ್ಕ ಬಗ್ಗೆ ಸ್ವಲ್ಪ ಅಲಕ್ಷ್ಯದಿಂದಿದ್ದಾರೆ. ಆದರೆ ನಮ್ಮ ಸರ್ಕಾರದವರು ರಾಜ್ಯ ಸರ್ಕಾರದ ಅನುಮತಿಯನ್ನು ಪಡೆಯದೆ ಆ ಸ್ಥಾನಗಳನ್ನು ಹಾಗೇ ಕ್ಯಾರೀಫಾರ್ವರ್ಡ್ ಮಾಡಕೂಡದೆಂದು ಹೇಳಿ ದ್ದಾರೆ. ಇದರಿಂದ ಆ ಜನರಿಗೆ ಬಹಳ ಅನ್ಯಾಯವಾಗುತ್ತಿದೆ. ಹೀಗಾಗಿ ಸಾಮಾನ್ಯವಾಗಿ ಆ ನಿಮ್ಮ ವರ್ಗದವರು ಬಯಸಿದ್ದಷ್ಟು ರಕ್ಷಣೆ ಈ ದಿವಸ ಅವರಿಗೆ ದೊರೆಯುತ್ತಿಲ್ಲ.

ಇನ್ನು ಈ ದಿವಸ ಈ ಜನಾಂಗದ ಕೆಲವು ಐ. ಎ. ಎಸ್. ಅಧಿಕಾರಿಗಳೂ ಮತ್ತು ಡಿ. ಸಿ. ಗಳೂ ಮತ್ತು ತಾಶೀಲ್ದಾರರುಗಳೂ ಆಗಿ ಕೆಲಸಮಾಡುತ್ತಿದ್ದಾರೆ. ಇವರಿಗೆ ಯಾರ ಮೇಲೂ ವೈಯಕ್ತಿಕ ದ್ವೇಷವಿಲ್ಲ, ಇವರಿಗೆ ಯಾರಮೇಲೂ ಅಷ್ಟು ಅಭಿಮಾನವೂ ಇಲ್ಲ, ಈ ಜನಾಂಗದಲ್ಲಿ ಕಂಟ್ರಾಕ್ಟ್ ವಗೈರೆ ಕೆಲಸಗಳನ್ನು ಮಾಡತಕ್ಕ ಜನರೂ ಇಲ್ಲ, ದೊಡ್ಡ ವ್ಯಾಪಾರಮಾಡತಕ್ಕಂಥ ಜನರೂ ಇವರಲಿಲ್ಲ, ಹೀಗೆಲ್ಲಾ ಇರುವುದರಿಂದ ಇವರಿಗೆ ಒಂದು ವೈಯಕ್ತಿಕ ದೃಷ್ಟಿಯಿಂದ ಯಾರ ಬಗ್ಗೆಯೂ ಒಂದು ರಾಜಕೀಯದ ಕ್ಲಿಕ್‌ನ್ನು ಮಾಡತಕ್ಕ ಹವ್ಯಾಸವೂ ಇವರಿಗಿರುವುದಿಲ್ಲ. ಇಷ್ಟೆಲ್ಲಾ ಇದ್ದರೂ ಈ ಜನಾಂಗದ ನೌಕರರನ್ನು ಅಂದರೆ ಈ ಜನಾಂಗಕ್ಕೆ ಸೇರಿದವರನ್ನು ತಿಂಗಳು ತಿಂಗಳಿಗೆ ಒಂದು ಕಡೆ ಯಿಂದ ಇನ್ನೊಂದು ಕಡೆಗೆ ಬದಲಾವಣೆಮಾಡತಕ್ಕ ಪರಿಪಾಟ ಮಾಡುತ್ತಿದ್ದಾರೆ. ಇದನ್ನು ನಾನು ಕಣ್ಣಾರೆ ನೋಡಿದ್ದೇನೆ.

ಇವತ್ತಿನ ದಿವಸ ನಿಮ್ಮ ವರ್ಗದವರಿಗೆ, ಅಧಿಕಾರಿಗಳಿಗೆ ತೊಂದರೆಯಾಗುತ್ತಾ ಇದೆ, ಅದನ್ನು ...ಾರಣೆ ಮಾಡಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

(ಶ್ರೀ ಕೆ. ಎಚ್. ರಂಗನಾಥ)

3-00 P.M.

ಸ್ವಾಮೀ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿಬಯಸುತ್ತೇನೆ, ಬೆಂಗಳೂರು ಅರ್ಬನ್ ಜಿಲ್ಲೆಯ ಜಿಲ್ಲಾ ಅಧಿಕಾರಿಗಳ ವಿಷಯದಲ್ಲಿ ಒಂದು ಖಚಿತವಾದ ಅಭಿಪ್ರಾಯ ಬಂದಿದೆ. ಉದಾಹರಣೆಗೆ ಹೇಳುವುದಾದರೆ, ಅವರನ್ನು ಟ್ರಸ್ಟ್‌ಬೋರ್ಡ್ ಚೇರ್ಮನ್ ಆಗಿ ಮಾಡಿದ್ದೀರಿ. ಆ ಸ್ಥಾನವನ್ನು ಅವರು ದುರುಪಯೋಗ ಮಾಡಿಕೊಳ್ಳುತ್ತಾ ಇದ್ದಾರೆ ಎಂದು ಹೇಳಿ ಖಚಿತವಾದ ವರ್ತಮಾನ ಬಂದಿದೆ. ಅವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಪ್ರೈವೇಟ್ ಲೇ ಔಟ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಅದರಿಂದ ಹೆಚ್ಚು ಹಣ ಸಂಪಾದನೆ ಮಾಡುವುದಕ್ಕೆ ಅನುಕೂಲ ಮಾಡಿಕೊಡುತ್ತಾ ಇದ್ದಾರೆ ಎಂದು ವದಂತಿ ಇದೆ, ಅದನ್ನು ಸರ್ಕಾರದವರು ವಿಚಾರಣೆ ಮಾಡಬೇಕು. ಸಮಾನ್ಯವಾಗಿ ಒಂದು-ಎರಡು ಎಕರೆ ಇರತಕ್ಕ ಬಡವರ ಜಮೀನನ್ನು ಟ್ರಸ್ಟ್ ಬೋರ್ಡಿನವರು ಅಕ್ವೈರ್ ಮಾಡಿಕೊಳ್ಳುತ್ತೇವೆ. ಎಂದು ನೋಟಿಫಿಕೇಷನ್ ಹೊರಡಿಸಿ ಅಕ್ವೈರ್ ಮಾಡಿಕೊಂಡು ಬಿಡುತ್ತಾರೆ. ಅದೇ ಶ್ರೀಮಂತರಾಗಿರತಕ್ಕ ಜನಗಳಿಗೆ 3—4—5 ಎಕರೆಯವರೆಗೂ ಕೂಡ ಪ್ರೈವೇಟ್ ಲೇ ಔಟ್ಸ್ ಮಾಡುವುದಕ್ಕೆ ಅವಕಾಶ ಕೊಡುತ್ತಾ ಇರತಕ್ಕ ಈ ಒಂದು ನೀತಿ ಏನಿದೆ ಇದು ಸರಿಯಾದ ನೀತಿಯಲ್ಲ, ಇದನ್ನು ಸರ್ಕಾರದವರು ವಿಚಾರಮಾಡಬೇಕೆಂದು ಹೇಳುತ್ತೇನೆ. ಈ ವಿಷಯದಲ್ಲಿ ನನ್ನ ಅಭಿಪ್ರಾಯವೇನೆಂದರೆ, ಈ ಟ್ರಸ್ಟ್‌ಬೋರ್ಡಿಗೆ ಬೇರೊಬ್ಬ ಛೇರ್ಮನ್‌ರನ್ನು ಹಾಕಬೇಕು. ಏಕೆಂದರೆ ಈಗ ಇರುವವರು ಟ್ರಸ್ಟ್‌ಬೋರ್ಡ್ ಛೇರ್ಮನ್ ಆಗಿ ನೋ ಅಬ್ಜಕ್ಷನ್ ಸರ್ಟಿಫಿಕೇಟ್ ಕೊಡುತ್ತಾರೆ, ಡೆಪ್ಯೂಟಿ ಕಮಿಷನರ್ ಆಗಿ ಅಗ್ರಿಕಲ್ಚರಲ್ ಲ್ಯಾಂಡ್‌ನ್ನು ನಾನ್ ಅಗ್ರಿಕಲ್ಚರಲ್ ಪರ್‌ಪಸ್‌ಗೆ ಕೊಡುತ್ತಾರೆ, ಇದನ್ನು ವಿಚಾರಣೆ ಮಾಡಬೇಕೆಂದು ಹೇಳುತ್ತೇನೆ.

ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿ ಸರಿಯಾಗಿ ಎಸ್ಟಿಮೇಟ್ಸ್ ಆಗುತ್ತಾ ಇಲ್ಲ, ಬಹಳ ನಿಧಾನವಾಗುತ್ತಾ ಇದೆ. ಹೀಗೆ ಆಗುವುದರಿಂದ ಏನು ಕಾಲಮಿತಿ ಇಟ್ಟುಕೊಂಡಿದ್ದೀರೋ ಆ ಕಾಲದಲ್ಲಿ ಯಾವ ಕೆಲಸವೂ ಆಗುವುದಕ್ಕೆ ಸಾಧ್ಯವಿಲ್ಲ, ಹಗಲೆಲ್ಲಾ ಎಸ್ಟಿಮೇಟ್ಸ್ ರಿವೈಸ್ ಆಗುವುದನ್ನು ನಾವು ನೋಡುತ್ತಾ ಇದ್ದೇವೆ.

ಇನ್ನು ಮಲೆನಾಡಿನ ಬಗ್ಗೆ ಮಾತನಾಡುತ್ತಾ ಷೆಡ್ಯೂಲ್ ಆಫ್ ರೇಟ್ಸ್ ಮೈದಾನದಲ್ಲಿರುವುದು ಮಲೆನಾಡಿನಲ್ಲಿ ಇರುವುದರಿಂದ ಕಂಟ್ರ್ಯಾಕ್ಟ್‌ದಾರರು ಬರುತ್ತಾ ಇಲ್ಲ, ಇದನ್ನು ಸರಿಪಡಿಸಿ ಕೆಲಸಕಾರ್ಯಗಳು ಜಾಗ್ರತೆಯಾಗುವಂತೆ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮೀ, ನಮ್ಮ ತುಮಕೂರು ಜಿಲ್ಲೆ ಯಾವಾಗಲೂ ಮಳೆ ಬಹಳ ಕಡಿಮೆ ಬೀಳುವ ಪ್ರದೇಶ. ಮಡೇನಹಳ್ಳಿ ಅಂತ ಹೇಳಿ ಒಂದು ಹಳ್ಳಿ ಇದೆ, ಅಲ್ಲಿ ಒಂದು ನೀರಾವರಿ ಕೆಲಸವಾಗಬೇಕಾಗಿತ್ತು, ಅದು ಇಲ್ಲಿಯವರೆಗೆ ಕೂಡ ಆಗಿಲ್ಲ. ಏನಾದರೂ ಒಂದು ಆಕ್ಷೇಪಣೆಯನ್ನು ಹಾಕಿ ವಾಪಸ್ಸು ಕಳುಹಿಸುತ್ತಾ ಇದ್ದಾರೆ. ಯಾವ ಕೆರೆಯನ್ನೂ ಕೂಡ ಹಳೇ ಮೈಸೂರು ಪ್ರದೇಶದಲ್ಲಿ ಕಟ್ಟಿಸಬಾರದು ಎಂದು ಯೋಚನೆ ಮಾಡಿದ್ದೀರೋ ಏನೋ ಎಂದು ನನಗೆ ಭಾಸವಾಗುತ್ತಾ ಇದೆ. ಹಳೇ ಮೈಸೂರು ಆಗಲಿ, ಹೊಸ ಮೈಸೂರು ಆಗಲಿ ಎಲ್ಲ ಭಾಗದಲ್ಲೂ ಒಂದೇ ರೀತಿಯಲ್ಲಿ ನಡೆಯಬೇಕೆಂದು ಹೇಳುತ್ತಿದ್ದರೂ ಕೂಡ ಆ ರೀತಿ ಆಗದೆ ಹಳೇ ಮೈಸೂರಿನ ಕೆಲಸ ಕಾರ್ಯಗಳು ಬಹಳ ನಿಧಾನವಾಗುತ್ತಾ ಇವೆ.

[MR. DEPUTY SPEAKER in the Chair.]

ಒಂದು ಭಾಗದಲ್ಲಿ ಹೆಚ್ಚು ಕೆಲಸಕಾರ್ಯಗಳನ್ನು ಮಾಡುವುದು, ಇನ್ನೊಂದು ಭಾಗದಲ್ಲಿ ಆ ರೀತಿ ಮಾಡದೇ ಇರುವುದರಿಂದ ಮಾಡಬೇಕಾಗಿರತಕ್ಕ ಕೆಲಸಗಳಿಗೆ ಹಣದ ಕೊರತೆ ಬರುತ್ತದೆ. ನಮಗೆ ಈಗ ಹಣದ ಕೊರತೆ ಬಹಳವಾಗಿದೆ. ಅದರ ಜೊತೆಗೆ ಕಂಟ್ರಾಕ್ಟ್‌ದಾರರ ಹಾವಳಿ ಕೂಡ ಬಹಳ ಹೆಚ್ಚಾಗಿದೆ, ಅದನ್ನು ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ. ಬೋಚೇನಹಳ್ಳಿಯ ಒಂದು ನಿದರ್ಶನವನ್ನು ಕೊಡುವುದಾದರೆ ಅಲ್ಲಿಯ ಕೆಲಸ ಇನ್ನೂವರೆಗೂ ಕೂಡ ಪೂರ್ತಿಯಾಗಿಲ್ಲ, ಆಗುವ ಲಕ್ಷಣ ಕೂಡ ಕಾಣುತ್ತಾ ಇಲ್ಲ. ಅದಕ್ಕೆ ಇದುವರೆಗೂ ಕೂಡ ಖರ್ಚು ಮಾಡಿದ ಹಣಕ್ಕೆ ರಿಟರ್ನ್ ಬರಬೇಕಾದರೆ ಅಚ್ಚುಕಟ್ಟಿಗೆ ನೀರು ಬರಬೇಕು. ನೀರು ಬರದೇ ಇದ್ದರೆ ರೈತರು ಕಾಂಟ್ರಿಬ್ಯೂಷನ್ ಕೊಡುವುದಿಲ್ಲ, ಹೀಗಾಗಿ ಒಂದಲ್ಲ ಒಂದು ಅನಾನುಕೂಲವಾಗುತ್ತಾ ಇದೆ. ಆದ್ದರಿಂದ ಅ

ಪ್ರದೇಶದಿಂದ ಸುಭಿಕ್ಷ ಪ್ರದೇಶದ ಕಡೆಗೆ ಹೋಗುವುದು ಒಳ್ಳೆಯದೆಂದು ಕಾಣುತ್ತದೆ. ಪೂರ್ವ ದಿಕ್ಕಿನಿಂದ ಪಶ್ಚಿಮ ದಿಕ್ಕಿಗೆ ಹೋದರೆ ಸುಭಿಕ್ಷವಾಗಿರುತ್ತದೆ ಎಂದು ಹೇಳಿದರೆ ಅದು ಸ್ವಲ್ಪ ಅಭಾಸವಾಗಿ ಕಾಣಬಹುದು. ಈಗ ಇರತಕ್ಕ ಒಂದು ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದು ಹೇಗೆ ಎಂಬುದು ನಮಗೇ ಹೊತ್ತಿದೆ. ಆದರೆ ಅದು ಸಫಲವಾಗದೇ ಇರುವುದಕ್ಕೆ ಕಾರಣ ಎರಡು, ಒಂದನೆಯದು ಅದು ಸುಲಭಸಾಧ್ಯವಾದ್ದಲ್ಲ, ಎರಡನೆಯದು ದುರಾಡಳಿತ. ಇದರಿಂದ ಕಾಂಗ್ರೆಸ್ ರಾಜ್ಯ ಚೂರು ಚೂರು ಆಗುವಂತೆ ಆಗಿದೆ. ಸ್ವಾತಂತ್ರ್ಯ ಬಂದ ಲಾಗಾಯ್ತು ಇವತ್ತಿನವರೆಗೂ ದುರಾಡಳಿತ ನಡೆದದ್ದರಿಂದ ಇವತ್ತು ಅದನ್ನು ಸರಿಮಾಡಬೇಕಾಗಿದೆ. ಎರಡನೆಯದು ಮನುಷ್ಯನಲ್ಲೂ ಕೂಡ ಒಂದು ದೌರ್ಬಲ್ಯ ಇದೆ. ಅದು ಪ್ರತಿಯೊಬ್ಬ ಮನುಷ್ಯನಲ್ಲೂ ಇರುತ್ತದೆ. ಅದರಿಂದ' ಈ ತರಹ ಒಂದು ಬಿಗುಮಾನ, ಒಂದು ತರಹ ಬಿನ್ನಾಣ, ಒಂದು ತರಹ ಹೆಮ್ಮೆ, ಒಂದು ತರಹ ದುರಾಶೆ, ಒಂದು ತರಹ ನೆಣ ಬಂದಿದೆ. ನೆಣ ಎಂದರೆ ಏನೆಂಬುದನ್ನು ಹೇಳುತ್ತೇನೆ ಅದನ್ನು ನಮ್ಮ ಕಡೆ ಉಪಯೋಗಿಸುವುದು ಜಾಸ್ತಿ. ನೆಣ ಎಂದರೆ ದೇಶದ ಜನರು ತಮ್ಮನ್ನು ಎಂದೂ ಶಿಕ್ಷಿಸುವುದಿಲ್ಲ ಎಂದು ಆ ಭರವಸೆಯಿಂದ ಅಸಾಧ್ಯವಾಗಿ ದಬ್ಬಾಳಿಕೆ ಮಾಡುವುದು. ಅಂಥವರು ನಿರ್ಭಯವಾಗಿ ದಬ್ಬಾಳಿಕೆ ನಡೆಸುವುದಕ್ಕೆ ನೆಣ ಎಂದು ಹೇಳುತ್ತಾರೆ. ನೀವು ರೈತರ ಜೀವನ ನೋಡಿಲ್ಲ. ಮಂತ್ರಿಗಳು ಬಂದರೆ ನೆಣ ಬಂದಿದ್ದು ಎಂದು ಹೇಳುತ್ತಾರೆ. ಅವರು ಅನುಕಂಪ ಮತ್ತು ಮಾನವೀಯತೆಯನ್ನು ಕಳೆದುಕೊಂಡಿದ್ದಾರೆ. ಆದರಿಂದ ಖಂಡಿತ ಒಳ್ಳೆಯ ಕೆಲಸವಾಗುವುದಿಲ್ಲ. ಅದುದರಿಂದ ಹೇಳುವುದು ಇಷ್ಟೆ: ಇಷ್ಟು ದಿವಸಗಳಿಂದ ನೀವು ಏನೇನು ಮಾಡಿದ್ದೀರಿ ? ಮುಂದೆ ಕೂಡ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ದಾರಿ ಇರುತ್ತದೆ. ನಮ್ಮ ತಾಲ್ಲೂಕಿನಲ್ಲಿ ಜನರಿಗೆ ಅನುಕೂಲವಾಗುವಂತೆ ಒಡೆದಿರುವ ಕೆರೆ ಕಟ್ಟುವುದಕ್ಕೆ ಕೂಡ ಅವಕಾಶ ಮಾಡಿಲ್ಲ, ಜನರು ಪಾಪರಾಗುವ ಸ್ಥಿತಿ ಬಂದಿದೆ. ಅಲ್ಲಿ ಮಡೇನಹಳ್ಳಿ ಕೆರೆ, ಓಚೇನಹಳ್ಳಿ ಕೆರೆ ಮತ್ತು ಅರಗೆರೆ ಈ 3 ಕೆರೆಗಳಲ್ಲಿ ಎರಡು ಒಡೆದು ಹೋಗಿವೆ. ಅವನ್ನು ರಿಪೇರಿ ಮಾಡಿ ಇನ್ನೊಂದು ಕೆರೆಯನ್ನು ಪೂರ್ಣಮಾಡಬೇಕಾಗಿದೆ. ಅಲ್ಲದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಜಾಗ್ರತೆ ಈ ಕೆಲಸ ಮಾಡಿಕೊಡಬೇಕಾಗಿ ವಿನಂತಿ ಮಾಡುತ್ತೇನೆ.

† ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷರೇ, ನಾನು ಕೇವಲ ಎರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ವಿಷಯದಲ್ಲಿ ಹೆಚ್ಚು ಆದಾಯ ಬರುವಂತೆ ಮಾಡಿಕೊಳ್ಳಬೇಕು. ದೀರ್ಘವಾಗಿ ಆಲೋಚನೆ ಮಾಡಿ ಬಡಜನರನ್ನು ಶೋಷಣೆ ಮಾಡದೆ ಹೆಚ್ಚು ಆದಾಯವನ್ನು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಮತ್ತು ಅಮ್ಯೂಸ್‌ಮೆಂಟ್ ಟ್ಯಾಕ್ಸ್‌ನಿಂದ ಪಡೆದುಕೊಳ್ಳಬಹುದು. ಶ್ರೀಮಂತ ವರ್ಗಕ್ಕೆ ಕೆಲವು ರಿಯಾಯಿತಿ ಕೊಟ್ಟಿದ್ದೀರಿ. ಆಲೋಚನೆ ಮಾಡಿ ಈ ಬಾಬುಗಳಿಂದ ಹೆಚ್ಚು ಉತ್ಪತ್ತಿ ಬರುವಂತೆ ವ್ಯವಸ್ಥೆ ಮಾಡಬೇಕು.

ಆಡಳಿತ ಕೆಟ್ಟುಹೋಗಿದೆ ಎಂದು ಕೆಲವರು ಹೇಳುತ್ತಾರೆ. ಇದು ಹೊರಗಿನವರ ಅಭಿಪ್ರಾಯ. ಜನರಿಗೆ ಕಷ್ಟವಿದೆ. ಮೈಸೂರು ಕಾಂಗ್ರೆಸ್ ವಿಷಯದಲ್ಲಿ these are days for them for political honeymoon and political diversion ಎಂದು ಹೇಳುತ್ತಾರೆ. ಪೊಲಿಟಿಕಲ್ ಪಕ್ಷಗಳಿಂದ ಕೆಲವರು ಬಂದಿದ್ದಾರೆ; ಪೊಲಿಟಿಕಲ್ ಹನಿಮೂನ್ ನಡೆಯುತ್ತಿದೆ. ಕೆಲವು ಮಂತ್ರಿಗಳಿಗೆ ತಮ್ಮ ಕೆಲಸಗಳ ಕಡೆ ಪೂರ್ಣವಾಗಿ ಗಮನ ಕೊಡುವುದಕ್ಕಾಗುವುದಿಲ್ಲ. ಈ ರೀತಿ ಕೆಲವರು ಮಾತನಾಡಿಕೊಳ್ಳುತ್ತಿದ್ದಾರೆ. 70–80 ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳುವಾಗ ಪೊಲಿಟಿಕಲ್ ಹನಿಮೂನ್ ಮತ್ತು ಪೊಲಿಟಿಕಲ್ ಡೈವರ್ಷನ್‌ಗೆ ಅವಕಾಶ ತಪ್ಪಿಸಿ ದೇಶಾಭಿವೃದ್ಧಿಗಾಗಿ ಹೆಚ್ಚು ಗಮನಕೊಡಬೇಕು.

ಅಧಿಕಾರಿಗಳಲ್ಲಿ ಎರಡು ಕೇಡರ್ ಇವೆ, ಎನ್.ಜಿ.ಓ. ಮತ್ತು ಜಿ.ಓ. ಎಂದು. ಜಿ.ಓ.ಗಳಲ್ಲಿ ಕೂಡ ಸಮಾಧಾನ ಕಾಣುತ್ತಿಲ್ಲ. ಸೂಪರ್ ಜಿ.ಓ. ಎಂದು ಇನ್ನೊಂದು ಕೇಡರ್ ಮಾಡಿ 3 ಭಾಗ ಮಾಡಿದರೆ ಸಮಾಧಾನವಾಗಬಹುದೇನೋ. ಎನ್.ಜಿ.ಓ.ಗಳಿಗೆ ಹೆಚ್ಚು ಡಿ.ಎ. ಮೊದಲಾದ ಅನುಕೂಲ ಕಲ್ಪಿಸಿಕೊಡಬೇಕು. ಲೋಯರ್ ಕೇಡರಿನವರಿಗೂ ಮತ್ತು ಗೆಜೆಟೆಡ್ ನೌಕರರಲ್ಲಿ ಕಡಮೆ ದರ್ಜೆಯವರಿಗೂ ಸ್ವಲ್ಪ ಸಹಾಯಮಾಡಬೇಕು.

ಈಗ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟುಗಳಿಗೆ ಕೋಟಿಗಟ್ಟಲೆ ಖರ್ಚಿದೆ. ಶರಾವತಿ ಪ್ರಾಜೆಕ್ಟ್ ಕಾಳಿನದಿ ಪ್ರಾಜೆಕ್ಟ್ ಮುಂತಾದುವುಗಳಲ್ಲಿ ಯಾವುದನ್ನೂ ಬೇಗ ಸಮರ್ಪಕವಾಗಿ ಮಾಡುವುದಿಲ್ಲ. ಕೋತಿ ಮೊಸರನ್ನ ಕಲಸಿದಹಾಗೆ ಮಾಡಬಾರದು. ಎಲ್ಲಾ ಕಡೆಗಳಲ್ಲೂ ರಿವರ್‌ಬೋರ್ಡ್ ಮಾಡಿ ಅದಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿ ಸರಕಾರ ಅದಕ್ಕೆ ಗ್ಯಾರಂಟಿ ಕೊಡುತ್ತದೆ. ಆ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಬೋರ್ಡಿಗೆ ಬೇಕಾದ ಅನುಕೂಲ ಮಾಡಿಕೊಡಬೇಕು. ಒಂದೊಂದು ನದಿಯ ವೈಶಿಷ್ಟ್ಯ ಒಂದೊಂದು ರೀತಿ ಇರುತ್ತದೆ. ಶರಾವತಿ ಪ್ರಾಜೆಕ್ಟ್ ತೆಗೆದುಕೊಳ್ಳಿ, ಕೆಲವು ಪ್ರದೇಶ ಮುಳುಗಡೆಯಾಗಿದೆ, ಕೆಲವು ತೊಂದರೆಗಳು ಬರುತ್ತಿವೆ—ಹೀಗೆ ನಾನಾ ಸಮಸ್ಯೆಗಳಿವೆ. ರಿವರ್‌ಬೋರ್ಡ್ ಮಾಡಿದರೆ ಅದು ಎಲ್ಲವನ್ನೂ ನೋಡಿ ಸರಿಯಾದ ಕ್ರಮ ಕೈಕೊಳ್ಳುತ್ತದೆ. ಅದಕ್ಕೆ ವಹಿಸಿದರೆ ಗೌರವ ಮತ್ತು ಪ್ರಗತಿಯಾಗುತ್ತದೆ. ಮೈನರ್ ಇರಿಗೇಷನಿಗೆ ಹೆಚ್ಚು ಗಮನ ಕೊಡಬೇಕು. ಸುಮ್ಮನೆ ಕೋಟಿಗಟ್ಟಲೆ ಖರ್ಚುಮಾಡಿ ದೊಡ್ಡ ಪ್ರಾಜೆಕ್ಟುಗಳನ್ನು ಮಾಡಿದರೆ ಪ್ರಯೋಜನ ಪಡೆಯಲು ಬಹಳ ವರ್ಷ ಕಾಯಬೇಕು. ಮೈನರ್ ಇರಿಗೇಷನ್ ಕೆಲಸಕ್ಕೆ ಫಾರಿನ್ ಎಕ್ಸ್‌ಛೇಂಜ್ ಬೇಕಾಗಿಲ್ಲ, ರಿಟರ್ನ್ ತಕ್ಷಣ ಬರುತ್ತದೆ. ಆಹಾರ ಪರಿಸ್ಥಿತಿ ಈಗ ಬಹಳ ಕ್ಲಿಷ್ಟವಾಗಿದೆ. ಆದುದರಿಂದ ಆದಷ್ಟು ಶೀಘ್ರವಾಗಿ 50 ಕೋಟಿ ಖರ್ಚಾದರೂ ಪರವಾಗಿಲ್ಲ, ಆದಷ್ಟು ಬೇಗ ಆ ಕೆಲಸ ಮಾಡಬೇಕು. ಅದರಿಂದ ಗ್ರಾಮಾಂತರಗಳವರಿಗೆ ಕೆಲಸವೂ ಸಿಕ್ಕಿದಹಾಗಾಗುತ್ತದೆ, ದೇಶಕ್ಕೂ ಒಳ್ಳೆಯದು, ಹಳ್ಳಿಯವರಿಗೂ ಅನುಕೂಲವಾಗುತ್ತದೆ. ಈಗ ಜನರು ಅರಳಿಕಟ್ಟೆಯಮೇಲೆ ಕುಳಿತು ಸರಕಾರವನ್ನು ಬಯ್ಯುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡದಂತೆ ಪ್ರತಿಯೊಂದು ಊರಿನಲ್ಲೂ ಕೂಡ ಕೆರೆ ಕೆಲಸವನ್ನಾದರೂ ಕೈಕೊಂಡರೆ ಅಲ್ಲಿನ ಜನರಿಗೆ ಮಣ್ಣು ಹೊರುವ ಕೆಲಸವನ್ನಾದರೂ ದೊರೆಯುತ್ತದೆ.

ರೂರಲ್ ಎಲೆಕ್ಟ್ರಿಫಿಕೇಷನ್ ವಿಚಾರ ಮೊದಲಿನಿಂದಲೂ ಹೇಳುತ್ತಿದ್ದೇನೆ. ಈಗ ಶರಾವತಿ ಪ್ರಾಜೆಕ್ಟಿನಿಂದ ಬೇಕಾದಷ್ಟು ಪವರ್ ಉತ್ಪತ್ತಿಯಾಗುತ್ತದೆ. ಅದು ದೇಶಾದ್ಯಂತ ಬೇಕಾಗಿದೆ. ಅದನ್ನು ಗ್ರಾಮಾಂತರ ಪ್ರದೇಶಗಳಿಗೆ ಒದಗಿಸುವುದು ಬಹಳ ಮುಖ್ಯವಾದುದು. ವ್ಯವಸಾಯಕ್ಕೆ ಮತ್ತು ದೀಪಗಳಿಗೆ ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸುವುದು ಸರಕಾರದ ಆದ್ಯ ಕರ್ತವ್ಯ. ಸರಕಾರ ಯಾವುದೇ ಮಾಡಬೇಕಾದರೂ ನೇರವಾಗಿ ಮಾಡಲು ಕಷ್ಟವಾಗುತ್ತದೆ, ಅದು ಇಲಾಖೆಯ ಮೂಲಕ ಅಥವಾ ಅಧಿಕಾರಿಗಳ ಮೂಲಕ ಮಾಡಬೇಕಾಗುತ್ತದೆ. ಅದನ್ನು ತಪ್ಪಿಸಲು ರೂರಲ್ ಎಲೆಕ್ಟ್ರಿಫಿಕೇಷನ್‌ಗೆ ಕೋ-ಆಪರೇಟೀವ್ಸ್ ಸ್ಥಾಪನೆಮಾಡಬೇಕು. ರಷ್ಯಾ, ಅಮೇರಿಕ ಮುಂತಾದ ಕಡೆಗಳಲ್ಲಿ ಹಾಗೆ ಮಾಡಿದ್ದಾರೆ. ಈಗ ಹತ್ತು ವರ್ಷಗಳಾದರೂ ಜನರ ಬೇಡಿಕೆಯನ್ನು ಪೂರೈಸುವುದಕ್ಕಾಗುವುದಿಲ್ಲ. ಕೋಆಪರೇಟೀವ್ಸ್ ಮಾಡಿದರೆ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ತನ್ನು ಪೂರೈಸಿ ಜೀವನ ಸೌಕರ್ಯ ಕಲ್ಪಿಸಲು ಸಾಧ್ಯವಿದೆ.

ಪಬ್ಲಿಕ್ ವರ್ಕ್ಸ್ ಇಲಾಖೆಗೆ ಬಂದರೆ ಗ್ರಾಮಾಂತರದ ರಸ್ತೆಗಳನ್ನು ಉಪೇಕ್ಷೆ ಮಾಡಿದ್ದಾರೆಂದು ಮೊದಲಿನಿಂದಲೂ ಹೇಳುತ್ತಿದ್ದಾರೆ. ಈ ಇಲಾಖೆಯಲ್ಲಿ 10 ಕೋಟಿ ಖರ್ಚುಮಾಡಿದರೆ ಸಾಲದು, 250 ಕೋಟಿ ಆದಾಯವಿರುವಾಗ, ನಮ್ಮಲ್ಲಿ ಇಂಡಿಯಾದೇಶದ ಎಂಟನೆಯ ಒಂದು ಭಾಗದ ಪ್ರದೇಶವಿರುವಾಗ ಕೇವಲ 10 ಸಾವಿರ ಮೈಲಿ ರಸ್ತೆ ಮಾಡಿದರೆ ಹೊಳೆಯಲ್ಲಿ ಹುಣಿಸೆಹಣ್ಣನ್ನು ಕಿವುಚಿದ ಹಾಗಾಗುತ್ತದೆ. ಇನ್ನೂ 10 ಕೋಟಿಯಾದರೂ ಖರ್ಚುಮಾಡಿ ಅರ್ಧಕ್ಕೆ ನಿಲ್ಲಿಸಿರುವ ಕೆಲಸಗಳನ್ನು ಪೂರ್ಣಮಾಡಬೇಕು. ಹೊಸದಾಗಿ ಯಾವುದಾದರೂ ಬೇಕಾದರೆ ಮಾಡಿ, ಇಲ್ಲದಿದ್ದರೆ ಬಿಡಿ. ಮಂತ್ರಿಗಳು ಪ್ರವಾಸ ಹೋದಾಗ ಟಿ.ಬಿ. ಗಳಲ್ಲಿ ತಂಗಬಾರದು. ಪಂಚಾಯಿತಿ ಹಾಲಿನಲ್ಲಿ ನಿಲ್ಲಬೇಕು ; ಚಾವಡಿಗಳಲ್ಲಿ ತಂಗಬೇಕು. ಹಳ್ಳಿಗಳಲ್ಲೇ ಕ್ಯಾಂಪ್ ಮಾಡಿದರೆ ಜನರ ಕಷ್ಟ ಗೊತ್ತಾಗಿ ಅದನ್ನು ನಿವಾರಣೆ ಮಾಡಬಹುದು. ಗ್ರಾಮಾಂತರ ರಸ್ತೆಗಳ ಕಡೆ ಹೆಚ್ಚು ಗಮನಕೊಡಬೇಕು.

ಬಡ್ಜೆಟ್ಟಿನ ಅಂಕಿಅಂಶಗಳು ಅರಳಿಮರದ ಎಲೆಗಳನ್ನು ಲೆಕ್ಕಮಾಡಿದಂತಿರುತ್ತವೆ, ಒಂದು ದಿವಸ ಎಲೆ ಲೆಕ್ಕಮಾಡಿದರೆ ಇನ್ನೊಂದು ದಿವಸ ನೋಡಿದರೆ ಹೆಚ್ಚುಕಡಮೆಯಾಗಿರುತ್ತವೆ, ಒಂದು ದಿನ ಚಿಗುರಿರುತ್ತದೆ, ಇನ್ನೊಂದು ದಿವಸ ಒಣ ಎಲೆ ಉದುರಿರುತ್ತವೆ, ಹೀಗಾಗಿ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಬಡ್ಜೆಟ್ ಕೂಡ ಅಷ್ಟೇ. ಅಡೀಷನಲ್ ಡಿಮ್ಯಾಂಡ್, ಎಕ್ಸೆಸ್ ಡಿಮ್ಯಾಂಡ್, ಸಪ್ಲಿಮೆಂಟರಿ ಡಿಮ್ಯಾಂಡ್ ತಂದು ಹೆಚ್ಚುಕಡಮೆ ಮಾಡುತ್ತಾರೆ. ಅದನ್ನು ತಲೆಕೆಡಿಸಿಕೊಂಡು ನೋಡಬೇಕಾಗಿಲ್ಲ. ನಾನು ಸಲಹೆ ಮಾಡುವುದು ಇಷ್ಟೆ: ಪ್ರಜಾಪ್ರಭುತ್ವ ರಾಷ್ಟ್ರವಾದ ಬ್ರಿಟನನಲ್ಲಿ ಕೂಡ ಬಜೆಟ್ ಫಿಗರ್ಸ್‌ಗೆ ಬಹಳ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಬಜೆಟ್‌ನಲ್ಲಿ ಕಾಣಿಸದೆ ಇದ್ದರೆ, ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಇಲ್ಲದೆ ಇದ್ದರೆ, ಶಾಸನ ಸಭೆಯ ಒಪ್ಪಿಗೆ ಇಲ್ಲದೆ ಇದ್ದರೆ ಯಾವ ಖರ್ಚನ್ನು ಮಾಡುವುದಕ್ಕೂ ಅವಕಾಶ ಸರ್ಕಾರದವರು ಕೊಡುವುದಿಲ್ಲ. ಮಾನ್ಯ ಮಂತ್ರಿಗಳು ಅಧಿಕಾರಿಗಳಿಗೆ ಸ್ಟ್ರಿಕ್ಟ್ ಇನ್‌ಸ್ಟ್ರಕ್ಷನ್ಸ್ ಕೊಟ್ಟು ಎಲ್ಲಿಯೂ ಕೂಡ ಬಜೆಟ್ಟಿನಲ್ಲಿ ತೋರಿಸಿರುವುದನ್ನು ಮೀರಿ ಖರ್ಚು ಮಾಡಬಾರದು ಎಂದು ಆದೇಶವನ್ನು ಕೊಡಬೇಕು. ಸಪ್ಲಿಮೆಂಟರಿ ಡಿಮಾಂಡ್ಸ್ ಮತ್ತು ಎಕ್ಸೆಸ್ ಡಿಮಾಂಡ್ಸ್ ತರತಕ್ಕದ್ದು ನಾಚಿಕೆಗೇಡು. ಬ್ರಿಟನ್‌ನಲ್ಲಿ ಹತ್ತು ಪೌಂಡ್‌ಗಳಿಗೆ ಕೂಡ ಸಪ್ಲಿಮೆಂಟರಿ ಡಿಮಾಂಡ್ ಸಭೆಯ ಮುಂದೆ ಬಂದಂಥ ಸನ್ನಿವೇಶ ಯಾವುದೂ ಇಲ್ಲ.

ಪಬ್ಲಿಕ್ ಹೆಲ್ತ್ ವಿಷಯದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜು ವ್ಯವಸ್ಥೆಗಾಗಿ ಮುನಿಸಿಪಾಲಿಟಿಗಳಿಗೆ ಸಾಲವನ್ನು ಕೊಡಲಾಗುತ್ತಿದೆ. ಇದ್ದಕ್ಕೆ ಬೇಕಾದ ಹಣವನ್ನು ಸರ್ಕಾರ ಪೂರೈಕೆ ಮಾಡುವುದಕ್ಕಾಗುವುದಿಲ್ಲ. ಪಟ್ಟಣಗಳು ಬಹಳ ಬೇಗ ಬೆಳೆಯುತ್ತಿವೆ ಮತ್ತು ಅಲ್ಲಿ ಸಮಸ್ಯೆಗಳೂ ವಿಪರೀತವಾಗಿ ಉದ್ಭವವಾಗುತ್ತಿವೆ. ಇದರಿಂದ ಸರ್ಕಾರದವರು ಮುನಿಸಿಪಾಲಿಟಿಗಳ ಆವಶ್ಯಕತೆಗಳಿಗೆ ಹಣವನ್ನು ಪೂರೈಸುವುದಕ್ಕೆ ಆಗುವುದಿಲ್ಲ. ಈಗ ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡಲು ಒಂದು ಮಂಡಳಿಯನ್ನು ರಚನೆ ಮಾಡಿರುವ ಹಾಗೆ ಯಾವುದಾದರೂ ಒಂದು ಮಂಡಳಿಯನ್ನು ಮಾಡಿ ಮುನಿಸಿಪಾಲಿಟಿಗಳಿಗೆ ಸಾಲ ಮತ್ತು ಇತರ ರೀತಿಯಲ್ಲಿ ಹಣದ ಪೂರೈಕೆ ಮಾಡಲು ವ್ಯವಸ್ಥೆ ಆಗಬೇಕು ಎಂದು ಸಲಹೆ ಮಾಡುತ್ತೇನೆ. ಈಗ ಸರ್ಕಾರ ಬೇಕಾದಷ್ಟು ಸಾಲಗಳನ್ನು ಕೊಟ್ಟಿದೆ. ಅದನ್ನು ವಸೂಲ್ಮಾಡಿಲ್ಲ. ಸರ್ಕಾರಕ್ಕೆ ಬೇಕಾದಷ್ಟು ಸಾಲ ವಾಪಸ್ಸು ಬರಬೇಕಾಗಿದೆ, ನಮಗೂ ಕೂಡ ಅದನ್ನೆಲ್ಲ ನೋಡಿ ಕಣ್ಣು ಕೆಂಪಗಾಗುತ್ತದೆ.

ಬಂದರುಗಳ ವಿಷಯವಾಗಿ ಒಂದೇ ಒಂದು ಮಾತು ಹೇಳುತ್ತೇನೆ. ಕೋಟ್ಯಂತರ ರೂಪಾಯಿಗಳನ್ನು ಕಸ್ಟಂಸ್ ರೂಪದಲ್ಲಿ ರಾಜ್ಯದಿಂದ ಕೊಡಲಾಗುತ್ತಿದೆ. ಇದರಲ್ಲಿ ನಮಗೆ ಯಾವ ಭಾಗವನ್ನೂ ಕೊಡುತ್ತಿಲ್ಲ. ಆದಷ್ಟು ಶೀಘ್ರವಾಗಿ ಒಂದು ಬಂದರು ಆದರೆ ಹೆಚ್ಚು ಹೆಚ್ಚಾಗಿ ಕಸ್ಟಂಸ್‌ನಿಂದ ಉತ್ಪತ್ತಿ ಬರುವುದಕ್ಕೆ ಅವಕಾಶವಾಗಿ ನಮ್ಮ ರಾಜ್ಯಕ್ಕೆ ಫೈನಾನ್ಷಿಯಲ್ ಸ್ಟೆಬಿಲಿಟಿ ದೊರೆಯುತ್ತದೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮ್ಮನ್ನು ವಂದಿಸುತ್ತೇನೆ.

† ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯಲ್ಲಿ ಹಣ್ಣ ಕಡಮೆಯಾಗಿದೆ. ಆದರೆ ಅಧಿಕಾರಿಗಳ ಸಂಖ್ಯೆ ಮತ್ತು ಮಂತ್ರಿಗಳ ಸಂಖ್ಯೆ ದಿನೇ ದಿನೇ ಏರುತ್ತಿದೆ. ಏಕೆ ಹೀಗಾಯಿತು ಎಂದರೆ ಇವರಿಗೆ ಯಾವ ವಿಧವಾದ ಪ್ಲಾನ್ ಆಗಲಿಲ್ಲ, ಪ್ರೋಗ್ರಾಂ ಆಗಲಿಲ್ಲ ಇಲ್ಲ. ಹಿಂದೆ ಮಂತ್ರಿಗಳಾಗಿದ್ದ ಮಾನ್ಯ ಚನ್ನಬಸಪ್ಪನವರು ನಮಗೆ ತಾಂತ್ರಿಕ ಸಿಬ್ಬಂದಿ ಸಿಕ್ಕುವುದಿಲ್ಲ, ಸಿಬ್ಬಂದಿ ಇದ್ದರೆ ಎಷ್ಟು ಕೆರೆ ಬೇಕಾದರೂ, ಎಷ್ಟು ರಸ್ತೆ ಬೇಕಾದರೂ ಮಾಡುತ್ತಿದ್ದೆವು, ನಮ್ಮಲ್ಲಿ ಹಣಕ್ಕೆ ಅಭಾವವಿಲ್ಲ ಎಂದು ಇದೇ ಸಭೆಯಲ್ಲಿ ಬೇಕಾದಷ್ಟು ಸಲ ಹೇಳಿದ್ದಾರೆ. ಈಗ ನಮ್ಮ ಮಂತ್ರಿಗಳು ಹೇಳುತ್ತಾರೆ, ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆ, ಕೇಂದ್ರ ಸರ್ಕಾರವನ್ನು ಹಣ ಕೇಳುತ್ತಿದ್ದೇವೆ, ಅವರು ಕೊಟ್ಟಿಲ್ಲ. ಅವರಿಂದ ಹಣ ಸಿಕ್ಕುವವರೆಗೂ ಈಗಿರುವ ಸಿಬ್ಬಂದಿಯನ್ನು ಕಡಮೆ ಮಾಡಿದರೆ ತಕ್ಷಣ ಬೇಕು ಎಂದಾಗ ಸಿಕ್ಕುವುದಿಲ್ಲ ಎನ್ನುವ ಅನುಮಾನದ ಮೇಲೆ ತಮ್ಮ ಅನುಯಾಯಿಗಳನ್ನು ಮೇಲೆ ಏರಿಸುವುದಕ್ಕೆ ಒಂದು ದಾರಿ ಮಾಡಿಕೊಂಡಿದ್ದಾರೆ ಎಂದು ಕಾಣುತ್ತದೆ. ಇತರ ರಾಜ್ಯಗಳಲ್ಲಿ 10-15 ಲಕ್ಷ ವರ್ಕ್ ಲೋಡ್ ಇದ್ದರೆ ಒಂದು ಸಬ್-ಡಿವಿಜನ್ ಇರುತ್ತದೆ. ಇಲ್ಲಿ ಎರಡು ಲಕ್ಷಕ್ಕೇ ಒಂದು ಸಬ್-ಡಿವಿಜನ್ ಇದೆ. ಈ ರೀತಿಯಾಗಿ ಹಣ ಕಡಮೆ ಇದ್ದರೂ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಆಗುವುದಕ್ಕೆ ದಾರಿ ಮಾಡಿ ಕೊಟ್ಟಿದ್ದಾರೆ. ಒಂದು ಸಬ್-ಡಿವಿಜನ್ನಿಗೆ ಹತ್ತು ಲಕ್ಷಕ್ಕಿಂತ ಕಡಮೆ ವರ್ಕ್ ಲೋಡ್ ಇರಬಾರದು.

ಹನ್ನೆರಡೂವರೆ ಕೋಟಿ ರೂಪಾಯಿಗಳಷ್ಟು ಹಿಂದಿನ ಕೆಲಸಗಳಿವೆ, ಅದಕ್ಕೆ ಹಣ ಬೇಕು ಎಂದರೆ ಇವತ್ತು ಒದಗಿಸಿರುವ ಹಣ ಒಂದು ಕೋಟಿ 30 ಲಕ್ಷ ರೂಪಾಯಿ. ಅಂದ ಮೇಲೆ ಎಷ್ಟು ವರ್ಷಗಳಿಗೆ ಈ ಕೆಲಸಗಳನ್ನು ಮುಗಿಸುತ್ತೇವೆನ್ನುವುದನ್ನು ಲೆಕ್ಕ ಹಾಕಬೇಕು. ಈ ರೀತಿ ಆದರೆ ನಮ್ಮ ದೇಶದ ನೀರಾವರಿ ಯೋಜನೆಗಳು ಎಷ್ಟರಮಟ್ಟಿಗೆ ಇವರ ಕೈಯಲ್ಲಿ ಸಾಗಬಹುದು. ನಮ್ಮಲ್ಲಿ ಆಹಾರ ಸಮಸ್ಯೆ ಇದೆ ಎಂದು ಬಾಯಲ್ಲಿ ಹೇಳುವಾಗ ಅನೇಕ ಕೆಲಸಕಾರ್ಯಗಳಿಗೆ ಹಣವನ್ನು ಕೊಟ್ಟು ದೇಶದಲ್ಲಿ ಆಹಾರೋತ್ಪತ್ತಿಯನ್ನು ಜಾಸ್ತಿ ಮಾಡಬೇಕೇ ವಿನಾ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದರಿಂದ ದೇಶದ ಮುಂದೆ ಇರತಕ್ಕ ಸಮಸ್ಯೆ ಪರಿಹಾರವಾಗುವುದಿಲ್ಲ. ಹೊರ ರಾಷ್ಟ್ರಗಳಿಂದ ನಾವು ಆಹಾರವನ್ನು ತರುತ್ತಿದ್ದೇವೆ. ಅದರ ಬದಲು ನೀರಾವರಿಗೆ ಹೆಚ್ಚು ಹಣವನ್ನು ಕೊಟ್ಟು ಎಷ್ಟು ಆಹಾರ ಉತ್ಪತ್ತಿಯನ್ನು ಹೆಚ್ಚು ಮಾಡಬಹುದು ಎನ್ನುವುದಕ್ಕೆ ತೀವ್ರವಾದ ಗಮನ ಕೊಟ್ಟು ಮೈನರ್ ಇರಿಗೇಷನ್ನಿಗೆ ಹೆಚ್ಚು ಹಣವನ್ನು ಕೊಡಬೇಕು. ಸಣ್ಣ ನೀರಾವರಿಗಾಗಿ ನಮ್ಮಲ್ಲಿ ಒಬ್ಬ ಉಪಮಂತ್ರಿಗಳಿದ್ದಾರೆ. ಅವರು ಬಹಳ ಒಳ್ಳೆಯವರು. ನಾವು ಕೊಟ್ಟ ಅರ್ಜಿಗಳನ್ನೆಲ್ಲ ಅವರು ಬಹಳ ಸಹಾನುಭೂತಿಯಿಂದ ಸಂಬಂಧಪಟ್ಟ ಚೀಫ್ ಇಂಜನಿಯರಿಗೆ ಕಳಿಸುತ್ತಾರೆ. ಅಲ್ಲಿಂದ ಅದು ಸೂಪರಿಂಟೆಂಡಿಂಗ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್, ಸಬ್ ಓವರ್‌ಸಿಯರ್ ಅವರಲ್ಲಿಗೆ ಬರುತ್ತದೆ. ಇದಕ್ಕೆ ವಿಪರೀತ ಕಾಲಹರಣ ಆಗುತ್ತದೆ. ಈ ಸಣ್ಣ ನೀರಾವರಿಯ ಉಪಮಂತ್ರಿಗಳು ಬಂದಮೇಲೆ ನಾವು ಹೇಳಿದ ಹಾಗೆಲ್ಲ ಕೇಳುತ್ತಾರೆ, ಆಫೀಸಿನಲ್ಲಿ ಕುಳಿತುಕೊಂಡು ಚೆನ್ನಾಗಿ ಮಾತನಾಡುತ್ತಾರೆ. ನಾವು ಕೊಟ್ಟ ಅರ್ಜಿಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ರವಾನೆ ಮಾಡಲು 30-40 ಸಾವಿರ ರೂಪಾಯಿ ಸ್ಟ್ಯಾಂಪ್‌ಗಾಗಿ ಖರ್ಚಾಗಿರ

(ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ)

ಬಹುದು, ಆದರಲ್ಲ ಏನಾದರೂ ಕಾರ್ಯಗತವಾಗಿದೆಯೇ ಎಂದರೆ ಏನೂ ಹೇಳಲಿಕ್ಕೆ ಬರುವುದಿಲ್ಲ. ಇದನ್ನೆಲ್ಲ ನೋಡಿದರೆ ವ್ಯಥೆಯಾಗುತ್ತದೆ. ಹಣವನ್ನು ಪಡೆಯಲು ಮಾರ್ಗವನ್ನು ಕೇಳಿ, ನಾವು ಹೇಳುತ್ತೇವೆ. ದೇಶದಲ್ಲಿ ಪಾನ ನಿರೋಧವನ್ನು ತೆಗೆಯಿರಿ, ಎನ್. ಇ. ಎಸ್. ತೆಗೆಯಿರಿ, ಬೇಕಾದಷ್ಟು ಹಣ ಉಳಿಯುತ್ತದೆ. ಯಾರೋ ಕೇಂದ್ರ ಸರ್ಕಾರದಲ್ಲಿ ಕುಳಿತುಕೊಂಡು ಮಾಡಿರುವ ಯೋಜನೆಯ ಪ್ರಕಾರ ಸರ್ಕಾರ ಇಲ್ಲಿ ಅಧಿಕಾರಿಗಳನ್ನು ನಿರ್ಮಾಣ ಮಾಡಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಅಧಿಕಾರಿಗಳ ಸಂಖ್ಯೆ ಹೆಚ್ಚಾಗಿದೆ. ಎನ್. ಇ. ಎಸ್. ಇನಾಂ ಅಬಾಲಿಷನ್, ಸರ್ವೆ ಸೆಟಲ್‌ಮೆಂಟ್, ಮಲೇರಿಯಾ ನಿವಾರಣೆ, ಎಂದು ಅನೇಕ ಆಫೀಸುಗಳನು ಮಾಡಿ ಪ್ರತಿಯೊಂದು ಊರಿನಲ್ಲಿಯೂ ಎಕ್‌ಟೆನ್‌ಷನ್‌ಗಳಲ್ಲಿರುವ ಅರ್ಧಮನೆಗಳು ಇವರಿಗೆ ಆಗುತ್ತಿವೆ. ಆದರೆ ಇದರಿಂದ ದೇಶಕ್ಕೆ ಏನು ಪ್ರಯೋಜನವಾಗಿದೆ ಎಂದರೆ ಹೇಳುವುದಕ್ಕೆ ಯಾರೂ ತಯಾರಾಗಿಲ್ಲ ಎಂದು ಕಾಣುತ್ತದೆ. ಭಾಷಣ ಮಾಡುವಾಗ ಹಣದ ರೂಪದಲ್ಲಿ 15 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ; 20 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳಬಹುದು. ಅದು ನಿರ್ವಿವಾದವಾದುದು. ಆದರೆ ಖರ್ಚು ಮಾಡಿದ ಹಣಕ್ಕೆ ಅದೇ ರೀತಿಯಾಗಿ ಏನಾದರೂ ಪ್ರತಿಫಲ ಬರಬೇಕು ಎಂಬ ಉದ್ದೇಶದಿಂದ ಕೆಲಸ ಮಾಡಬೇಕು.

ಇಂಜಿನಿಯರಿಂಗ್ ಇಲಾಖೆಯಲ್ಲಿ ಹಣ ಉಳಿಯಬೇಕಾದರೆ ಈಗ ಜಾರಿಯಲ್ಲಿರುವ ಲೈಸೆನ್ಸ್ ಪದ್ಧತಿ ಹೋಗಬೇಕು. ಹಿಂದೆ ಇದ್ದ ಮಂತ್ರಿಗಳು ಈ ಪದ್ಧತಿಯನ್ನು ಜಾರಿಗೆ ತಂದರು ಎಂದು ಈಗಿನ ಮಂತ್ರಿಗಳು ಹೇಳುತ್ತಾರೆ. ಅವರು ಏನೋ ಒಂದು ಉದ್ದೇಶದಿಂದ ಹಾಗೆ ಮಾಡಿದರು. ಅವರು ಮಾಡಿರುವುದರಲ್ಲಿ ತಪ್ಪು ಆಗಿರುವುದನ್ನು ಏಕೆ ತಿದ್ದಿಕೊಳ್ಳಬಾರದು ? ಅದನ್ನು ತಿದ್ದಿಕೊಳ್ಳಬೇಕಾದ್ದು ಈ ಸರ್ಕಾರದ ಕರ್ತವ್ಯ. ಒಬ್ಬನಿಗೆ ಲೈಸೆನ್ಸ್ ಕೊಡಬೇಕಾದರೆ ಅವನಿಂದ ಬ್ಯಾಂಕ್ ಸೆಕ್ಯೂರಿಟಿ, ಸಾಲ್‌ವೆನ್ಸಿ ಸರ್ಟಿಫಿಕೇಟ್, ಮುಂತಾದುವನ್ನು ಕೇಳುತ್ತಾರೆ. ಇದನ್ನೆಲ್ಲ ಕೊಡುವವನಿಗೆ ಕೆಲಸ ಮಾಡಿಸುವುದರಲ್ಲಿ ಅನುಭವವಿದೆಯೆ ಎನ್ನುವುದನ್ನು ಹೇಗೆ ತಿಳಿಯುವುದಕ್ಕೆ ಅವಕಾಶ ಮಾಡಿಕೊಳ್ಳಲಾಗಿದೆ ? ಆದುದರಿಂದ ಈಗ ಇರುವ ಲೈಸೆನ್ಸ್ ಪದ್ಧತಿಯನ್ನು ವಜಾ ಮಾಡಿ ಯಾರಿಗೆ ಕೆಲಸ ಮಾಡುವ ಚೈತನ್ಯವಿದೆಯೋ ಅವರು ಟೆಂಡರುಗಳನ್ನು ಹಾಕಲಿ. ಟೆಂಡರ್ ಹಾಕಿರುವವನು ನಿಯಮಿತ ಕಾಲದಲ್ಲಿ ಕೆಲಸವನ್ನು ಮುಗಿಸದೆ ಹೋದರೆ ಅವನಿಗೆ ಎಷ್ಟು ಜುಲ್ಮಾನೆ ಹಾಕಬೇಕು, ಅಥವಾ ಅವನ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬಹುದು. ಲೈಸೆನ್ಸ್ ಪದ್ಧತಿ ಒಳ್ಳೆಯದು ಎಂದರೆ ಆದರಿಂದ ಉತ್ತಮವಾಗಿ ಕೆಲಸ ನಡೆಯುತ್ತಿದೆಯೇ ? ಬೆಂಗಳೂರಿನಲ್ಲಿ ಒಬ್ಬ ಕಂಟ್ರಾಕ್ಟರ್ ಇರುತ್ತಾನೆ. ಅವನಿಗೆ ಒಬ್ಬ ಸಬ್ ಕಂಟ್ರಾಕ್ಟರ್, ಅವನಿಗೆ ಇನ್ನೊಬ್ಬ ಸಬ್ ಕಂಟ್ರಾಕ್ಟರ್ ಹೀಗೆ ಇಟ್ಟುಕೊಂಡು ಕೆಲಸ ಮಾಡುತ್ತಾರೆ. ನಮ್ಮ ಊರಿನಲ್ಲಿ ಹೀಗೆ ಸಹ ನಡೆಯುತ್ತಿಲ್ಲ. ಸಂದರ್ಭ ಬಂದರೆ ಕೆಲಸವನ್ನು ಅಲ್ಲಿರುವ ಸಬ್-ಓವರ್‌ಸಿಯರ್‌ಗೇ ವಹಿಸುತ್ತಾರೆ. ಈ ರೀತಿ ನಮ್ಮಲ್ಲಿ ನಡೆಯುತ್ತದೆ. ಅದರಿಂದ ಏನೂ ಪ್ರಯೋಜನವಾಗುತ್ತಾ ಇಲ್ಲ. ಈಗ ಸರ್ಕಾರದವರು ರೈತರಿಂದ ಡಬ್ಬಲ್ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಆದರೆ ಅದು ಎಷ್ಟರಮಟ್ಟಿಗೆ ಸದುಪಯೋಗವಾಗುತ್ತಿದೆ ಎಂಬುದನ್ನು ನೋಡಬೇಕು. ರೈತರಿಗೆ ಎಷ್ಟರಮಟ್ಟಿಗೆ ನೀರಾವರಿ ಅನುಕೂಲತೆ ಒದಗಿಸಿದ್ದಾರೆಂಬುದನ್ನು ನೋಡಬೇಕು. ಪಕ್ಕದ ರಾಜ್ಯದಲ್ಲಿ ಶೇಕಡ 15ರಷ್ಟು ಭೂಮಿ ನೀರಾವರಿಯಾಗಿರುವಾಗ ನಮ್ಮ ದೇಶದಲ್ಲಿ ಬಹಳ ಕಡಿಮೆ ಮಟ್ಟದಲ್ಲಿ ಭೂಮಿ ನೀರಾವರಿಯಾಗುತ್ತಿದೆ. ಆದರೂ ಹೆಚ್ಚಿಗೆ ಯಾವ ಪ್ರಾಜೆಕ್ಟನ್ನೂ ಕಾರ್ಯಗತಮಾಡುತ್ತಾ ಇಲ್ಲ. ಹಿಂದೆ ಮಿರ್ಜಾ ಅವರು ದಿವಾನರಾಗಿದ್ದ ಕಾಲದಲ್ಲಿ ಗುರೂರು ಅಣೆಕಟ್ಟನ್ನು ಸರ್ವೆ ಮಾಡಿದ್ದರು. ಅದನ್ನು ಪುನ: ಸರ್ವೆ ಮಾಡುತ್ತಿದ್ದಾರೆ. ಅದಕ್ಕೆ ಬುದ್ಧಿವಂತರಾದ ಅಧಿಕಾರಿಗಳನ್ನು ಹಾಕುತ್ತಿದ್ದಾರೆ. ಅದು ಮುಂದಿನ ವರ್ಷ ಸಿದ್ಧವಾಗುತ್ತದೆಂದು ಸರ್ಕಾರದವರು ಹೇಳುತ್ತಿದ್ದಾರೆ. ಈ ರೀತಿ ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಂಡು ಸರ್ಕಾರದ ಹಣವನ್ನು ಕೇವಲ ಎಸ್ಟಾಬ್ಲಿಷ್‌ಮೆಂಟಿಗೆ ಖರ್ಚುಮಾಡಿ ದೇಶವನ್ನೇ ಹಾಳುಮಾಡುತ್ತಿದ್ದಾರೆ. ಸಣ್ಣ ನೀರಾವರಿ ಮಂತ್ರಿಗಳು ನನ್ನ ಕ್ಷೇತ್ರದಲ್ಲಿ 300 ಎಕರೆ ಜಮೀನಿಗೆ ಅನುಕೂಲವಾಗುವಂತೆ ಒಂದೂವರೆ ಲಕ್ಷ ರೂಪಾಯಿಗಳಲ್ಲಿ ಒಂದು ಪ್ರಾಜೆಕ್ಟನ್ನು ನಿರ್ಮಾಣಮಾಡಿದರು. ಆದರೆ ಅಲ್ಲಿ ಮಣ್ಣಿನಲ್ಲಿ ದೋಷವಿದ್ದುದರಿಂದ ಆರು ವರ್ಷಗಳಿಂದ ಏನು ಬೆಳೆಯನ್ನೂ ಬೆಳೆಯುತ್ತಿಲ್ಲ. ಇದನ್ನು ಸರಿಪಡಿಸಲು ಮೂರು ನಾಲ್ಕು ಸಲ ಅಂದಾಜುಮಾಡಿದ್ದಾರೆ. ಅದರಿಂದೇನೂ ಪ್ರಯೋಜನವಾಗಲಿಲ್ಲ. ಈಗ ನೋಡಿದರೆ ಮಂತ್ರಿಗಳು ಕೆಲಸವನ್ನು ತಕ್ಷಣ ನಿಲ್ಲಿಸಿ ಎಂಬುದಾಗಿ ಹೇಳಿದ್ದಾರೆ. ರೈತರು ಬೆಂಗಳೂರಿಗೆ ಬಂದು ಈ ವಿಚಾರವಾಗಿ ಅರ್ಜಿ ಕೊಟ್ಟಿದ್ದಾರೆ. ಈ ರೀತಿ ಕೆಲಸ ನಿಧಾನವಾಗಿಯಾದರೆ ಜನರ ಪ್ರತಿನಿಧಿಗಳಾಗಿ ನಾವು

ಏನು ಮಾಡಬೇಕು ? ಹಿಂದೆ ಪ್ರಶ್ನೋತ್ತರ ಕಾಲದಲ್ಲಿ ಸರ್ಕಾರದವರು ನಿಲ್ಲಿಸಿದ್ದ ಕೆಲಸವನ್ನು ಶ್ರೀಮಾನ್ ಭಾಸ್ಕರಶೆಟ್ಟಿಯವರು ತಾವೇ ನಡೆಸುತ್ತಿದ್ದೇವೆಂದು ಹೇಳಿದರು. ಅಂದಮೇಲೆ ಈ ಸರ್ಕಾರ ಏಕೆ ಇರಬೇಕು, ಈ ಶಾಸನಸಭೆ ಏಕೆ ಇರಬೇಕು, ಮಂತ್ರಿಗಳಾಗಿ ಇವರು ಏಕೆ ಇರಬೇಕು ? ಇವರಿಗೆ ಈ ದೇಶದಲ್ಲಿ ಇನ್ನೂ ಉಳಿಯಬೇಕೆಂಬ ಭಾವನೆ ಇದ್ದರೆ ಇವರು ಕೈಗೊಂಡಿರ ತಕ್ಕ ಕಾರ್ಯಗಳಲ್ಲಿ ನ್ಯಾಯವಾಗಿ ನಡೆಯಬೇಕು. ಇವರು ಅಧಿಕಾರ ಬಿಟ್ಟು ಹೋಗುವುದರೊಳಗಾಗಿ ದೇಶವನ್ನೆಲ್ಲಾ ಹಾಳುಮಾಡಿ ಹೋಗೋಣವೆಂದಿದ್ದಾರೆ.

ಇನ್ನು ಉಡುಪಿ ಜಿಲ್ಲೆಯ ಒಂದು ಡಿವಿಷನ್ನಿಗೆ 38 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಮಿಕ್ಕ ಡಿವಿಜನ್ನುಗಳಲ್ಲಿ ಆರೀತಿಯಾಗಿ ಒದಗಿಸದೇ ಇರಲು ಕಾರಣವೇನು ? ಪಿ. ಡಬ್ಲ್ಯು. ಡಿ ಮಂತ್ರಿಗಳು, ಉಪಮಂತ್ರಿಗಳು ಮತ್ತು ಪಾರ್ಲಿಮೆಂಟರಿ ಸೆಕ್ರೆಟರಿಗಳು ಟೂರುಗಳು ಹೋದಾಗ್ಗೆ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಅವರ ಕಡೆಯವರೇ ಅಲ್ಲಿ ಸೇರುವುದರಿಂದ ಅಹವಾಲು ಹೇಳಿ ಕೊಳ್ಳಲು ಹೋದ ಜನರಿಗೆ ಅವಕಾಶವೇ ಇರುವುದಿಲ್ಲ. ಇದರಿಂದ ಜನರಿಗೆ ಬಹಳ ಅನಾನುಕೂಲ ವಾಗಿದೆ. ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಅಧ್ಯಕ್ಷರು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆಲೂರು ಹನುಮಂತಪ್ಪ (ಸಣ್ಣ ನೀರಾವರಿ ಶಾಖೆಯ ಉಪಮಂತ್ರಿಗಳು).—ಅಧ್ಯಕ್ಷರೇ, ನಾನು ಹೆಚ್ಚು ಹೊತ್ತು ತೆಗೆದುಕೊಂಡು ಇಲ್ಲಿ ಹೇಳುವ ಪರಿಸ್ಥಿತಿ ಇಲ್ಲ. ಮಾನ್ಯ ಮಂತ್ರಿಗಳೂ ಹಾಗೂ ಮುಖ್ಯ ಮಂತ್ರಿಗಳು ಅನೇಕ ವಿಷಯಗಳನ್ನು ಪ್ರಸ್ತಾಪಮಾಡುವವರಾಗಿದ್ದಾರೆ. ಸಣ್ಣ ನೀರಾವರಿಗೆ ಸಂಬಂಧಪಟ್ಟಹಾಗೆ ಕೆಲವು ಮಾತುಗಳನ್ನು ಇಲ್ಲಿ ಹೇಳಬೇಕೆಂದು ನಾನು ಅವಕಾಶ ವನ್ನು ತೆಗೆದುಕೊಳ್ಳುತ್ತೇನೆ. ಈಗತಾನೇ ಭಾಷಣ ಮಾಡುತ್ತಾ ಶ್ರೀಮಾನ್ ಕೆ. ಪಿ. ರೇವಣ ಸಿದ್ದಪ್ಪ ನವರು ಸಣ್ಣ ನೀರಾವರಿ ಕೆಲಸದ ಬಗ್ಗೆ ಮತ್ತು ಕೆಲಸದ ತೀವ್ರತೆ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಅದನ್ನೆಲ್ಲಾ ನಾನು ಸಹ ಒಪ್ಪುತ್ತೇನೆ. ಮಾನ್ಯ ಸದಸ್ಯರಿಗೆ ಆ ಬಗ್ಗೆ ಎಷ್ಟು ತೀವ್ರತೆ ಇದೆಯೋ ಅದಕ್ಕಿಂತಲೂ ಹೆಚ್ಚಾಗಿ ಸರ್ಕಾರಕ್ಕೆ ಇದೆಯೆಂದು ಹೇಳಿದರೆ ಮಾನ್ಯ ಸದಸ್ಯರು ಅನ್ಯಥಾ ಭಾವನೆ ಮಾಡಬಾರದು. ಮಾನ್ಯ ಸದಸ್ಯರ ಗಮನಕ್ಕೆ ಒಂದು ಅಂಶವನ್ನು ತರಬಯಸುತ್ತೇನೆ. ಒಂದು, ಎರಡನೇ ಪಾಂಚವಾರ್ಷಿಕ ಯೋಜನೆಗಳಲ್ಲಿ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಎಷ್ಟು ಹಣವನ್ನು ಖರ್ಚುಮಾಡಿದ್ದೇವೆ ಹಾಗೂ ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಬಾಬಿಗೆ ಎಷ್ಟು ಹಣವನ್ನು ಖರ್ಚುಮಾಡಿದ್ದೇವೆ, ಮತ್ತು ನಾಲ್ಕನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣ ಖರ್ಚುಮಾಡಬೇಕು—ಈ ಮೂರು ಪ್ಲಾನ್ ಟಾರ್ಜೆಟ್ಟಿನಲ್ಲಿ ಇದುವರೆಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೇವೆಂಬ ಬಗ್ಗೆ ಅಂಕಿ ಅಂಶಗಳನ್ನು ನೋಡಿದರೆ ಚೆನ್ನಾಗಿ ವೇದ್ಯವಾಗುತ್ತದೆ. ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 415 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಟಾರ್ಜೆಟ್ ಅಚೀವ್ ಮಾಡಿರತಕ್ಕದ್ದು ಹೊಸ ಅಚ್ಚು ಕಟ್ಟಿಗೆ ನೀರನ್ನು ಒದಗಿಸಿರುವುದು 16,826 ಎಕರೆಗಳಷ್ಟು ಜಮೀನಿಗೆ. ಸುಮಾರು 2ಲಕ್ಷ 59ಸಾವಿರದ 877 ರೂಪಾಯಿಗಳು ಖರ್ಚಾಗಿದೆ. ಇನ್ನು ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 673 ಲಕ್ಷ ರೂಪಾಯಿಗಳು ಖರ್ಚಾಗಿದೆ. ಪ್ಲಾನ್ ಟಾರ್ಜೆಟ್‌ನಲ್ಲಿ 41ಸಾವಿರದ 963 ಎಕರೆಗಳಷ್ಟು ಜಮೀನು ಹೊಸ ಅಚ್‌ಕಟ್ಟು ಆಗುವಷ್ಟು ಕೊಟ್ಟಿ ದ್ದೇವೆ. ಅದಕ್ಕೆ 1ಲಕ್ಷ 11ಸಾವಿರದ 441ರೂಪಾಯಿಗಳು ಖರ್ಚಾಗಿದೆ. ಮೂರನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ವರ್ಷಕ್ಕೆ 12ಕೋಟಿ 42 ಲಕ್ಷ ರೂಪಾಯಿಗಳು ಖರ್ಚಾಗಿದೆ. ಮೂರನೆ ಯೋಜನೆಯಲ್ಲಿ ಈಗಾಗಲೇ 850ಲಕ್ಷ ರೂಪಾಯಿಗಳನ್ನು ಒದಗಿಸಿದೆ. 1963—64ನೇ ಸಾಲಿನಲ್ಲಿ 8ಕೋಟಿ 68ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಇನ್ನು ಫಿಜಿಕಲ್ ಅಚೀವ್ ಮೆಂಟ್‌ನಲ್ಲಿ ಪ್ರತಿಫಲ 1964—65ನೇ ಸಾಲಿನಲ್ಲಿ 75ಸಾವಿರ ಎಕರೆ ಹಳೆಯ ಅಚ್ಚುಕಟ್ಟಿಗೆ ನೀರಿನ ಪೂರೈಕೆಯಾಗಿ ಸುಮಾರು 24ಸಾವಿರ ಎಕರೆ ಹೊಸ ಅಚ್ಚುಕಟ್ಟಿಗೆ ನೀರಿನ ಪೂರೈಕೆಯಾಗಿದೆ. ಇಷ್ಟು ಪ್ಲಾನ್ ಹಣವ ಪೂರೈಕೆ ಮತ್ತು ಅದರ ಫಿಸಿಕಲ್ ಅಚೀವ್‌ಮೆಂಟ್ ಆಯಿತು. ಇನ್ನು ಸಣ್ಣ ನೀರಾವರಿಗೆ ಇಟ್ಟಂಥ ಹಣ 16ಕೋಟಿ ರೂಪಾಯಿಗಳು. ಈ ಮೂರನೆಯ ಪಾಂಚವಾರ್ಷಿಕ ಯೋಜನೆಗೆ 16ಕೋಟಿ ರೂಪಾಯಿಗಳೂ ಸಹ ಖರ್ಚಾಗುವಾಗ 1963—64ನೇ ಸಾಲಿನಲ್ಲಿ 3ಕೋಟಿ ರೂಪಾಯಿಗಳಷ್ಟು ಹಣ ಕೇಂದ್ರದಿಂದ ನೆರವು ಬಂತು. ಅದೇ ಸಾಲಿನಲ್ಲಿ 2ಕೋಟಿ 65ಲಕ್ಷ ರೂಪಾಯಿಗಳ ಹೆಚ್ಚಿನ ಹಣ ಬಂತು. ಆದರೆ 1964--65ನೇ ಸಾಲಿನಲ್ಲಿ 3 ಕೋಟಿ 75ಲಕ್ಷ ರೂಪಾಯಿ ಗಳಷ್ಟು ಹೆಚ್ಚಿನ ಹಣ ಬಂತು. ಹೀಗೆ ಸುಮಾರು 25ಕೋಟಿ ರೂಪಾಯಿಗಳಷ್ಟು ಸಣ್ಣ ನೀರಾವರಿ ಯೋಜನೆಗಳಿಗಾಗಿ ಖರ್ಚಾಗಿಯೂ ಇನ್ನೂ ದೇಶದಲ್ಲಿ ಆಹಾರ ಸಮಸ್ಯೆ ಇದ್ದೇ ಇದೆ. ಆದ್ದರಿಂದ ಸಣ್ಣ ನೀರಾವರಿ ಯೋಜನೆಗಳು ಅತಿ ತೀವ್ರತೆಯಿಂದ ಫಲ ಕೊಡುವ ಹಾಗೆ ಮಾಡಲು ತಕ್ಕ ಕಾಮ ಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಬೇಕೆಂದು ಸರ್ಕಾರದವರು ಹೆಚ್ಚಿನ ಅಧ್ಯತೆ ಕೊಟ್ಟು ಅವುಗಳಿಂದ

(ಶ್ರೀ ಆಲೂರು ಹನುಮಂತಪ್ಪ)

ಅದಷ್ಟು ಜಾಗ್ರತೆಯಾಗಿ ರೈತರಿಗೆ ಸೌಕರ್ಯ ಕಲ್ಪಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕಾಗಿ ಈ ವರ್ಷಕ್ಕೆ ಅಂದರೆ 1964—65ನೇ ಸಾಲಿಗೆ ಹೊಸ ಕೆಲಸಗಳನ್ನು ತಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲವೆಂಬುದಾಗಿ ನಾನು ಅಭಿಪ್ರಾಯಪಡುತ್ತೇನೆ. ಅದೇ ಅಭಿಪ್ರಾಯವನ್ನು ಸರ್ಕಾರದವರೂ ಹೊಂದಿ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿದ್ದಾರೆ. ಹಳೆಯ ಕೆಲಸಗಳ ಜೊತೆಗೆ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ಸದಸ್ಯರು ಅವಕಾಶಮಾಡಿಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋದಾಗ, ಅಲ್ಲಿನ ಸದಸ್ಯರು ಇಲ್ಲಿಗೆ ಬಂದಾಗ್ಗೆ ಹಾಗೂ ಕೇಂದ್ರದ ವ್ಯವಸಾಯ ಸಚಿವರು ಇಲ್ಲಿಗೆ ಬಂದಾಗ್ಗೆ ಈ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಮೈಸೂರು ಪ್ರಾಂತ್ಯದಲ್ಲಿ ಇಡೀ ಇಂಡಿಯಾ ದೇಶದಲ್ಲಿ ಹೆಚ್ಚಿನ ಕೆಲಸಗಳನ್ನು ಮಾಡಿದ್ದಾರೆ, ಆದರೆ ಹಣದ ಮುಗ್ಗಟ್ಟಿನಿಂದ ಹೆಚ್ಚು ಕೊಡುವುದಕ್ಕೆ ಸಾಧ್ಯವಾಗಿಲ್ಲವೆಂದು ಹೇಳುತ್ತಿದ್ದಾರೆ. ಈಗಾಗಲೇ 12 ಕೋಟಿ ರೂಪಾಯಿಗಳ ಹಳೆಯ ಕೆಲಸಗಳನ್ನು ಅದಷ್ಟು ಬೇಗ ಪೂರ್ಣಗೊಳಿಸಬೇಕು, ಹಳೆಯ ಕೆಲಸಗಳಿಗೆ ಹೆಚ್ಚು ಹಣ ಹಾಕಬೇಕೆಂದು ಕೆಲವರು ಹೇಳಿದರು. ಇನ್ನು ಕೆಲವರು ತಿರುಪತಿಯಲ್ಲಿ ಕ್ಷೌರ ಮಾಡುವ ಹಾಗೆ ಇವರು ಸಣ್ಣಪುಟ್ಟ ಕೆಲಸಕಾರ್ಯಗಳನ್ನು ಇಲ್ಲಿ ಮಾಡುತ್ತಿದ್ದಾರೆಂದು ಇನ್ನೂ ಹೊಸ ಕೆಲಸಗಳನ್ನು ಮಂಜೂರುಮಾಡಿಲ್ಲವೆಂದೂ ಶ್ರೀಮಾನ್ ರೇವಣ್ಣ ಸಿದ್ದಪ್ಪನವರು ಹೇಳಿದರು. ಆ ಬಗ್ಗೆ ನನ್ನ ಮುಂದೆ ಅಂಕಿಅಂಶಗಳಿವೆ. 1962—63ನೇ ಸಾಲಿನಲ್ಲಿ 19 ಜಿಲ್ಲೆಗಳಿಗೆ ಸಂಬಂಧಪಟ್ಟ ಹಾಗೆ ಸುಮಾರು 317 ಲಕ್ಷ ರೂಪಾಯಿಗಳಷ್ಟು ಹೊಸ ಎಸ್ಟಿಮೇಟುಗಳನ್ನು ಮಂಜೂರು ಮಾಡಿದ್ದಾರೆ. 1963—64ನೇ ಸಾಲಿನಲ್ಲಿ ಸುಮಾರು 454ಲಕ್ಷ ರೂಪಾಯಿಗಳಷ್ಟು ಹೊಸ ಕೆಲಸಗಳನ್ನು ಮಾಡಿದ್ದಾರೆ. ಪ್ರತಿಯೊಂದು ಜಿಲ್ಲೆಗೂ ಸಂಬಂಧಪಟ್ಟ ಹಾಗೆ ಕೆಲವು ಅಂಕಿ ಅಂಶಗಳು ನನ್ನಲ್ಲಿವೆ. ಸುಮಾರು 48 ಸಾವಿರ 285 ಎಕರೆಗಳಿಗೆ ಆಗುವಷ್ಟು ಅಚ್ಚುಕಟ್ಟಿನ ಹೊಸ ಕೆಲಸಗಳನ್ನು ಮಾಡಿದ್ದೇವೆ. ಇಷ್ಟಾದರೂ ಇನ್ನೂ ಮಾಡಬೇಕಾದ ಹೊಸ ಕೆಲಸಗಳು ಸುಮಾರು 1500 ಇವೆ. 15ಕೋಟಿ ರೂಪಾಯಿಗಳಷ್ಟು ಕೆಲಸಗಳ ಅಂದಾಜು 175 ತಾಲ್ಲೂಕುಗಳಿಗೆ ಸಂಬಂಧಪಟ್ಟ ಹಾಗೆ ಈಗ ಹೊಸದಾಗಿ ಸಿದ್ಧವಾಗಿದೆ. ಇದರ ಜೊತೆಯಲ್ಲಿ ಮಾಸ್ಟರ್ ಪ್ಲಾನ್ ಸಹ ಸಿದ್ಧವಾಗಿದೆ. ಅನೇಕ ಸಂದರ್ಭಗಳಲ್ಲಿ ಕೆಲವಾರು ಕೆಲಸಗಳನ್ನು ಎಷ್ಟು ಬೇಗ ಮುಗಿಸಬೇಕೋ ಅಷ್ಟು ಬೇಗ ಮುಗಿಸುತ್ತಿದ್ದೇವೆಂಬುದಾಗಿ ಉತ್ತರ ಕೊಡುವಾಗ ಸರ್ಕಾರದವರು ಹೇಳಿದ್ದಾರೆ.

ಹಾಗೆ ಹೇಳಿದಾಗ ಮಾನ್ಯ ಸದಸ್ಯರು ಕೆಲವರು ಪ್ರಸ್ತಾಪ ಮಾಡಿದರು, ಆ ಬೃಹತ್ ಯೋಜನೆಯನ್ನು ಎಷ್ಟು ಬೇಗ ಮುಗಿಸುತ್ತೀರಿ ಎಂದು. 80 ಕೋಟಿ 8 ಲಕ್ಷ ಎಕರೆಗೆ ಹೊಸದಾಗಿ ನೀರನ್ನು ಒದಗಿಸಿ ಈಗ ನಮ್ಮ ದೇಶದಲ್ಲಿ ನೀರಾವರಿ 7 ಪರ್ಸೆಂಟ್ ಏನಿದೆ ಅದು ಇಡೀ ದೇಶದ ನೀರಾವರಿಯು 24 ಪರ್ಸೆಂಟಿಗೆ ಮುಟ್ಟಬೇಕೆಂಬ ತೀವ್ರತೆ ಮತ್ತು ಕಾತುರತೆ ಸರ್ಕಾರಕ್ಕೆ ಪೂರ್ಣವಾಗಿ ಇದೆ. ಅದನ್ನು ಆದಷ್ಟು ಬೇಗ ಮಾಡುವುದಕ್ಕೆ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿ ಒಂದು ಕರಡು ಪ್ರತಿಯನ್ನು ತಯಾರು ಮಾಡಿದ್ದೇವೆ. ಅದಕ್ಕೆ ಆಗಬೇಕಾದ ಹಣವನ್ನು ಒದಗಿಸಬೇಕೆಂದಿದ್ದೇವೆ. ಇದರ ಜೊತೆಗೆ ಫ್ಲಡ್ಸ್ ವರ್ಕಿಗೆ ಸಂಬಂಧಪಟ್ಟಹಾಗೆ 16 ಕೋಟಿ ರೂಪಾಯಿಗಳ ಒಂದು ಅಂದಾಜನ್ನು ತಯಾರು ಮಾಡಿ ಅದನ್ನು ಕೇಂದ್ರ ಸರ್ಕಾರದ ಪ್ರವಾಹ ಪೀಡಿತ ಪರಿಹಾರ ಸಮಿತಿ ಏನಿದೆ ಅವರ ಮುಂದೆ ಅದನ್ನು ಮಂಡಿಸಿದ್ದೇವೆ. ಅವರು ಅದನ್ನು ಒಪ್ಪಿಕೊಂಡಿದ್ದಾರೆ.

ಇನ್ನು ಕೆರೆಗಳ ದುರಸ್ತಿಯ ವಿಷಯದಲ್ಲಿ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಕೆರೆಗಳ ದುರಸ್ತಿಯನ್ನು ಮಾಡತಕ್ಕ ವಿಧಾನದಲ್ಲಿ ಎರಡು ಮೂರು ವಿಧಾನಗಳಿವೆ. ಬುಲ್ಡೋಜರು ಮತ್ತು ಟ್ರ್ಯಾಕ್ಟರುಗಳಿಂದ ಕೆರೆಗಳಲ್ಲಿ ಮಣ್ಣು ತೆಗೆಸುವುದು ಒಂದು ಮಾರ್ಗ, ಕೆರೆಯ ಏರಿಯನ್ನು ದುರಸ್ತು ಮಾಡುವುದು ಒಂದು ಮಾರ್ಗ ಮತ್ತು ಕೋಡಿಯನ್ನು ಸ್ವಲ್ಪ ಅಗಲ ಮಾಡುವುದು ಒಂದು ಮಾರ್ಗ. ಈಗ ನಮ್ಮ ದೇಶದಲ್ಲಿರತಕ್ಕ ಕೆರೆಗಳು ನೂರಾರು ವರ್ಷಗಳ ಹಿಂದೆ ನಿರ್ಮಾಣವಾದಂತವುಗಳು. ಇವುಗಳನ್ನೆಲ್ಲಾ ಒಂದು ಸ್ಥಿತಿಗೆ ತರಬೇಕಾದರೆ ಸುಮಾರು 20 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆ ಕೆರೆಗಳು ಯಾವ ಯಾವ ಸ್ಥಳದಲ್ಲಿ ಹೇಗಿವೆ ಎಂಬುದನ್ನು ಸರ್ಕಾರದವರು ಅರ್ಥ ಮಾಡಿಕೊಂಡಿದ್ದಾರೆ. ಆ ಕೆರೆಗಳನ್ನು ವರ್ಷೇ ವರ್ಷೇ ಎಷ್ಟೆಷ್ಟು ಕೆರೆಗಳು ಎಂದು ತೆಗೆದುಕೊಂಡು ಆ ಕೆರೆಗಳ ಕೆಲಸವನ್ನು, ದುರಸ್ತಿಯನ್ನು ಮಾಡಬೇಕಾಗುತ್ತದೆ. ಹಿಂದಿನ ವರ್ಷ ನಮಗುಂಟಾದ ಒಂದು ಅನುಭವದಿಂದ ಹೇಳುವುದಾದರೆ, ಅನೇಕ ಕೆರೆಗಳು ಒಡೆದುಹೋದುವು. ಈ ಒಡೆದು ಹೋದ ಕೆರೆಗಳ ಪೈಕಿ ಒಂದೆರಡು ಕೆರೆಗಳ ಅಂಗಳದಲ್ಲಿ ರೈತರಿಗೆ ಸೇರಿದಂತಹ ಜಮೀನಿಗೆ ತೊಂದರೆಯಾಗುತ್ತದೆ ಎನ್ನುವ ಮನವಿಗಳು ಬಂದದ್ದರಿಂದ ಆ ಕೆರೆಗಳ ಕೆಲಸವನ್ನು ತೆಗೆದುಕೊಂಡಿಲ್ಲ. ಇನ್ನ ಬಾಕಿ ಒಡೆದುಹೋದ ಎಲ್ಲಾ ಕೆರೆಗಳ ರಿಪೇರಿಯನ್ನು ಮಾಡಿದೆ. ಯಾವುದನ್ನೂ ನಿಲ್ಲಿಸಿಲ್ಲ ಒಡೆದುಹೋದ ಕೆರೆಗಳಿಗೆ ರಿಂಗ್‌ಬಂಡ್ ಹಾಕುವುದು ರಿಪೇರಿ ಮಾಡುವುದು

ಈ ಕೆಲಸಗಳಿಗೆಲ್ಲಾ ಅಧಿಕಾರಿಗಳ ಮತ್ತು ಸಾರ್ವಜನಿಕರ ಸಹಾಯವನ್ನು ಪಡೆದುಕೊಂಡು ತಕ್ಷಣ ಆ ಕೆಲಸವನ್ನು ಮಾಡಿ ರೈತರಿಗೆ ಸರ್ಕಾರದವರು ನೀರನ್ನು ಒದಗಿಸಿದ್ದಾರೆ. ಗೋರೀಬಿದನೂರಿನಲ್ಲಿ ಒಂದು ಕೆರೆಯು ಒಡೆದುಹೋಗಿತ್ತು. ಆ ಕೆಲಸವನ್ನೂ ಕೂಡ ನಾವು ಬೇಗ ಮಾಡಿಕೊಟ್ಟಿದ್ದೇವೆ.

ಇನ್ನು ಮೈನರ್ ಇರಿಗೇಷನ್ ಡಿವಿಜನ್ನಿನ ಕೆಲಸವನ್ನು ಇನ್ನೂ ಸ್ವಲ್ಪ ಉತ್ತಮಪಡಿಸಬೇಕೆಂದು ಮಾನ್ಯ ಸದಸ್ಯರು ಕೆಲವರು ಸಲಹೆಯನ್ನು ಕೊಟ್ಟರು. ಈಗ ನಾವು ಟ್ಯಾಂಕ್ ಮಾನ್ಯುಯಲ್ ತಯಾರು ಮಾಡಿದ್ದೇವೆ. ಅದರಲ್ಲಿ ಟ್ಯಾಂಕ್ ರಿಜಿಸ್ಟ್ರೇಷನ್ ಮಾಡಬೇಕೆಂದು ಇದೆ. ಮಾಸ್ಟರ್ ಪ್ಲಾನಿನಲ್ಲಿರತಕ್ಕ ಕೆಲಸಗಳನ್ನು ಆಯಾ ಸ್ಥಳಗಳಿಗೆ ಅನುಗುಣವಾಗಿ ಸೇರಿಸಿ ಅವಕಾಶವಾದರೆ ಪ್ಲಾನು ಮತ್ತು ಎಸ್ಟಿಮೇಟುಗಳನ್ನು ತಯಾರು ಮಾಡಿ ಒಂದು ಪ್ರಯಾರಿಟಿ ಲಿಸ್ಟನ್ನು ಸರ್ಕಾರದ ಮುಂದೆ ಇಡಬೇಕೆಂಬ ದೊಡ್ಡ ಜವಾಬ್ದಾರಿ ಕೆಲಸ ಇದೆ. ಮೈನರ್ ಇರಿಗೇಷನ್ನಿಗೆ ಸಂಬಂಧಪಟ್ಟಹಾಗೆ ಮಾಡಬೇಕಾದಂತಹ ಕೆಲಸಗಳು ಅನೇಕ ಇದೆ. ಅಂತೂ ಆದಷ್ಟು ಬೇಗ ಜಮೀನುಗಳಿಗೆ ನೀರನ್ನು ಒದಗಿಸಿಕೊಡಬೇಕಾಗಿದೆ. ಇದರಲ್ಲಿ ಬಹಳ ಪ್ರಾಮುಖ್ಯವಾಗಿ ಈಗಿನ ಇರಿಗೇಷನ್ ಆಕ್ಟ್ ಪ್ರಕಾರ 40 ಎಕರೆಗೆ ಒಂದು ಚಾನಲ್ ಮಾಡತಕ್ಕಂಥ ವ್ಯವಸ್ಥೆ ಇದೆ. ಮೊದಲು ಅದನ್ನು ರೈತರೇ ಮಾಡಿ ಕೊಳ್ಳಬೇಕಾಗಿತ್ತು. ಈಗ ಚಾನಲ್ ಮಾಡತಕ್ಕದ್ದನ್ನು ಇರಿಗೇಷನ್ ಆಕ್ಟಿನಲ್ಲಿ ಅಳವಡಿಸಿದ್ದೇವೆ. ಎಲ್ಲಾ ಕೆಲಸಗಳನ್ನು ಸರ್ಕಾರದವರೇ ಮಾಡಿಸಿಕೊಟ್ಟು ಅದಕ್ಕೆ ತಗಲತಕ್ಕ ಖರ್ಚನ್ನು ಕಂದಾಯದ ರೂಪದಲ್ಲಿ ವಸೂಲು ಮಾಡಬೇಕೆಂದು ಪ್ರಾವಿಜನ್ ಮಾಡಿದ್ದೇವೆ. ಆದ್ದರಿಂದ ಆ ಕೆಲಸ ಮಾಡುವುದು ತಡವಾಗುವುದಿಲ್ಲ ಎಂದು ನಾನು ಈ ಸಭೆಗೆ ಭರವಸೆಯನ್ನು ಕೊಡುತ್ತೇನೆ.

ಇನ್ನು ಈ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟಹಾಗೆ ಲ್ಯಾಂಡ್ ಅಕ್ವೈರ್ ಮಾಡಿಕೊಳ್ಳತಕ್ಕ ಪ್ರಸಂಗ ಬಂದಾಗ ಕೆಲಸಗಳನ್ನ ಮಾಡತಕ್ಕದ್ದು ಸ್ವಲ್ಪ ವಿಳಂಬವಾಗುತ್ತದೆ. ಲ್ಯಾಂಡ್ ಅಕ್ವಿಜಿಷನ್ ಎಷ್ಟು ಬೇಗ ಮುಗಿಯುತ್ತದೆಯೋ ಅಷ್ಟು ಬೇಗ ಕೆಲಸ ಮುಗಿಯುತ್ತದೆ. ಅದರಲ್ಲಿ ಏನೂ ಅನುಮಾನವಿಲ್ಲ. ಮೂರು ನಾಲ್ಕು ವರ್ಷಗಳ ಹಿಂದೆ ತೆಗೆದುಕೊಂಡಂತಹ ಕೆಲಸಗಳನ್ನೂ ಮತ್ತು ಹೊಸಕೆಲಸಗಳನ್ನೂ ತೆಗೆದುಕೊಂಡು 8 ಲಕ್ಷ ಮತ್ತು 10 ಲಕ್ಷ ರೂಪಾಯಿಗಳ ಕೆಲಸಗಳನ್ನು ಒಂದೊಂದು ಕೆಲಸವನ್ನು 4 ತಿಂಗಳು 6 ತಿಂಗಳು 9 ತಿಂಗಳುಗಳಲ್ಲಿ ಆ ಕೆಲಸಗಳನ್ನು ಮುಗಿಸಿದೆ. ಇಂತಹ ಕೆಲಸಗಳನ್ನು ಇಷ್ಟೊಂದು ಜಾಗ್ರತೆಯಾಗಿ ಚೆನ್ನಾಗಿ ಮಾಡಿ ಮುಗಿಸಿದಂತಹ ಇಂಜಿನಿಯರುಗಳು ಮತ್ತು ಸಿಬ್ಬಂದಿವರ್ಗ ಏನಿದೆ ಅದರ ವಿಷಯದಲ್ಲಿ ನಾವು ಮೆಚ್ಚಿಗೆಯನ್ನು ವ್ಯಕ್ತಪಡಿಸಬೇಕಾಗಿದೆ. ಇಷ್ಟೊಂದು ಮಹತ್ತರವಾದ ಕೆಲಸಗಳನ್ನು ಅವರು ಬೇಗ ಮಾಡಿ ಮುಗಿಸುವುದಕ್ಕೋಸ್ಕರ ಅವರ ವಿಷಯದಲ್ಲಿ ಒಂದು ಒಳ್ಳೆಯ ಮಾತನ್ನು ಹೇಳತಕ್ಕದ್ದು ಸೂಕ್ತ ಎಂದು ನನಗನ್ನಿಸುತ್ತದೆ.

ಇನ್ನು ಲಿಫ್ಟ್ ಇರಿಗೇಷನ್ ಬಗ್ಗೆ ಮಾನ್ಯ ಸದಸ್ಯರು ಕೆಲವರು ಪ್ರಸ್ತಾಪ ಮಾಡಿದ್ದಾರೆ. ಆ ಸಂಬಂಧದಲ್ಲಿ 98 ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಒಂದು ಕೋಟಿ 42 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ತಯಾರುಮಾಡಿದ್ದೇವೆ. ಇದರಿಂದ 24 ಸಾವಿರ ಎಕರೆಗಳಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ. ಈ ಅಂದಾಜನ್ನು ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಲಿಫ್ಟ್ ಇರಿಗೇಷನ್ ವ್ಯವಸ್ಥೆಯನ್ನು ಮಾಡಬೇಕಾದುದು ಜರೂರು ಇದೆ, ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ನಮ್ಮ ಮುಖ್ಯಮಂತ್ರಿಗಳು ಡಿಲ್ಲಿಗೆ ಹೋದಾಗ ಕೇಂದ್ರ ಸರ್ಕಾರದವರೊಡನೆ ಪ್ರಸ್ತಾಪ ಮಾಡಿದ್ದಾರೆ. ಆದಷ್ಟು ಬೇಗ ಈ ಕೆಲಸಕ್ಕೆ ಹೆಚ್ಚಿನ ಹಣ ನಮಗೆ ಬರುತ್ತದೆ ಎಂಬ ನಿರೀಕ್ಷಣೆಯಲ್ಲಿ ನಾವು ಇದ್ದೇವೆ. ಈಗಾಗಲೇ ಶರಾವತಿಯ ಕೆಲಸಕಾರ್ಯಗಳು ಮುಗಿದು ಅದು ನಮ್ಮ ಕೈಗೆ ಸೇರಿದೆ. ಅಲ್ಲಿ ಈಗ ಉತ್ಪಾದನೆಯಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ಗ್ರಾಮಾಂತರ ಪ್ರದೇಶದ ದೀಪಗಳಿಗೆ. ನೀರಾವರಿ ಪಂಪುಸೆಟ್ಟುಗಳಿಗೆ ಮತ್ತು ಲಿಫ್ಟ್ ಇರಿಗೇಷನ್ ಪಂಪುಸೆಟ್ಟುಗಳಿಗೆ ಒದಗಿಸುವುದಕ್ಕೆ ಸಿದ್ಧವಾಗಿದೆ. ಅದಕ್ಕೆ ಬೇಕಾದ ಪಂಪುಸೆಟ್ಟುಗಳು,ಟ್ರಾನ್ಸ್ ಫಾರಮರ್‌ಗಳು, ವೈರುಗಳು, ಪೋಲುಗಳು ಇತ್ಯಾದಿಗಳು ಹೆಚ್ಚಿಗೆ ಬೇಕಾಗಿದ್ದು ಅವುಗಳನ್ನು ಬೇರೆ ಕಡೆಯಿಂದ ತರಿಸಿ ಪೂರೈಕೆಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳೂ ಸಹ ಹೇಳಿದ್ದಾರೆ. ಈಗಾಗಲೇ ನಾವು 6753 ಪಂಪು ಸೆಟ್ಟುಗಳನ್ನು ರೈತರಿಗೆ ಹಂಚಿದ್ದೇವೆ. 112 ಲಕ್ಷ ರೂಪಾಯಿಗಳನ್ನು ಬಾವಿಗಳಿಗೋಸ್ಕರ ಎಲ್ಲಾ ಭಾಗಗಳಲ್ಲೂ ನಾವು ಹಂಚಿದ್ದೇವೆ. ಈಗಾಗಲೇ ಪ್ರಾರಂಭ ಮಾಡಿರತಕ್ಕ 34ಸಾವಿರ ಬಾವಿಗಳ ಪೈಕಿ 22ಸಾವಿರ ಬಾವಿಗಳ ಕೆಲಸ ಈಗಾಗಲೇ ಪೂರ್ತಿಯಾಗಿದೆ. ಕೇಂದ್ರ ಸರ್ಕಾರದವರು ಹಳೆಯ ಬಾವಿ ಮತ್ತು ಹೊಸ ಬಾವಿಗಳಿಗೂ ಹಣವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಮೊನ್ನೆ ನಡೆದ ಜಿಲ್ಲಾಧಿಕಾರಿಗಳ ಮೀಟಿಂಗ್‌ನಲ್ಲಿ ಬಾವಿಗಳಿಗೋಸ್ಕರ ರೈತರಿಂದ ಬಂದ ಅರ್ಜಿಗಳ ಪೈಕಿ ಹೊಸ ಬಾವಿಗಳ ನಿರ್ಮಾಣಕ್ಕೆ ಹೆಚ್ಚಿನ ಹಣವನ್ನು ಕೊಡಬೇಕೆಂದು ನಾವು ಹೇಳಿದ್ದೇವೆ. ಕಮ್ಯುನಿಟಿ ಲಿಫ್ಟ್ ಇರಿಗೇಷನ್ ಬಾವಿಗಳು ಕಡ್ಡಾಯವಾಗಿ ಆದಷ್ಟು

(ಶ್ರೀ ಆಲೂರು ಹನುಮಂತಪ್ಪ)

ಜಾರಿಗೆ ಬರಬೇಕೆಂದು ಮಾನ್ಯಸದಸ್ಯರು ಒತ್ತಾಯ ಮಾಡಿರುವುದು ನಮಗೆ ಮನವರಿಕೆಯಾಗಿದೆ. ಇದರ ಬಗ್ಗೆ ಆದಷ್ಟು ತೀವ್ರವಾಗಿ ಒಂದು ಕಾನೂನನ್ನು ಮಾಡಬೇಕಾಗಿದೆ. ಅದನ್ನು ಮಾಡು ವುದಕ್ಕೆ ನಾವು ಪ್ರಯತ್ನಮಾಡುತ್ತಿದ್ದೇವೆ.

ಇನ್ನು ಕೆರೆಗಳ ರೆಸ್ಟೋರೇಷನ್ ಮಾಡತಕ್ಕ ಬಗ್ಗೆ ಒಂದು ಮಾತನ್ನು ಹೇಳಬೇಕಾದದು ಸೂಕ್ತ. ಸಾಮಾನ್ಯವಾಗಿ ಕೆರೆಗಳ ಆಳ ಬಹಳ ಮಟ್ಟಿಗೆ ಕಡಿಮೆಯಾಗಿದೆ. ಕೆರೆಗಳ ಪ್ರಮಾಣ ಕಡಿಮೆಯಾಗಿದೆ ಎನ್ನುವುದು ನಿರ್ವಿವಾದವಾದ ವಿಷಯ. ಎಕ್ಕಲು ಮಣ್ಣು ಕೆರೆಯಲ್ಲಿ ಬಂದು ತುಂಬಿಕೊಂಡಿ ರುತ್ತದೆ. ಇದರ ದೆಸೆಯಿಂದ ಕೆರೆಗಳ ಪ್ರಮಾಣ, ಆಳ ಅರ್ಧಭಾಗ ಕಡಿಮೆಯಾಗಿದೆ. ಈ ರೀತಿ ಆಳ ಕಡಿಮೆಯಾಗಿರುವುದನ್ನು ಜಾಸ್ತಿ ಆಳ ಮಾಡತಕ್ಕಂಥ ಪ್ರಶ್ನೆ ಉದ್ಭವವಾಗುತ್ತದೆ. ಈಗ ಹೂಳು ತುಂಬಿಕೊಂಡು ಆಳ ಕಡಿಮೆಯಾಗಿರತಕ್ಕ ಕೆರೆಗಳ ರೆಸ್ಟೋರೇಷನ್ ಮಾಡಬೇಕಾದರೆ ಬರೀ ಬುಲ್ಡೋ ಜರ್‌ನಿಂದಲೇ ಆ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಬೇರೆ ರೀತಿಯ ಒಂದು ವ್ಯವಸ್ಥೆಯನ್ನು ಕೂಡ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಕೆರೆಗಳ ಅಂಗಳದಲ್ಲಿರತಕ್ಕ ಸುಮಾರು ಒಂದು ಲಕ್ಷ ಅಥವಾ 50 ಸಾವಿರ ಎಕರೆ ಜಮೀನನ್ನು ರಕ್ಲಮೇಷನ್ ಮಾಡತಕ್ಕ ಒಂದು ವ್ಯವಸ್ಥೆ ಯನ್ನು ಮಾಡಿದರೆ ಅದು ಬಹು ಭಾಗ ಪ್ರತಿಫಲವನ್ನು ಕೊಡತಕ್ಕ ಒಂದು ಯೋಜನೆಯಾಗುತ್ತದೆ. ಈ ಒಂದು ಪ್ರಶ್ನೆಯನ್ನು ಉದಾಹರಣೆಯ ರೂಪವಾಗಿ ತೆಗೆದುಕೊಂಡು ಮಾಡಬೇಕೆಂದು ಸರ್ಕಾ ರಕ್ಕೆ ಮನವರಿಕೆಯಾಗಿದೆ. ಈ ಕೆಲಸವನ್ನು ಹೆಚ್ಚು ತೀವ್ರವಾಗಿ ಮಾಡಬೇಕೆಂದು ಅನ್ನಿಸುತ್ತದೆ. ಜೊತೆಗೆ ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಎಲ್ಲೋ ಒಂದು ಕೆರೆ ಕಟ್ಟುತ್ತಾ ಇದ್ದರೆ, ಅಲ್ಲಿ ಸ್ವಲ್ಪ ಮಟ್ಟಿಗೆ ಅನಾನುಕೂಲವಾಗಿದೆಯೆಂದು ಅಲ್ಲಿಯ ಇಂಜನಿಯರು ಗಳಿಗೆ ಮತ್ತು ಸರ್ಕಾರದವರಿಗೂ ತಿಳಿಸಿದರು, ಕೆಲಸ ನಿಂತಿಲ್ಲವೆಂದು ಸ್ವಲ್ಪಮಟ್ಟಿಗೆ ಎಲ್ಲಿಯಾದರೂ ಜೀಪ್ ಬಿಟ್ಟಿದ್ದರೆ, ಅಲ್ಲಿ ಕೆಲಸ ನಡೆಯುತ್ತಿದೆ ಎಂಬ ಶಂಕೆ ಸದಸ್ಯರ ಮನಸ್ಸಿಗೆ ಬಂದಿರಬಹುದು. ಕೆಲಸ ಮಾಡಬೇಡಿ ಎಂದು ಹೇಳಿದರೆ ಸಾಮಾನ್ಯವಾಗಿ ಮಾಡುವುದಿಲ್ಲ. ಇಂಜನಿಯರುಗಳಿಗೆ ಅದು ಅವರ ಮನೆಯ ಕೆಲಸವಲ್ಲ. ಅದು ಸಾರ್ವಜನಿಕರ ಕೆಲಸ, ಅಲ್ಲಿ ಬೇಡ ನಿಲ್ಲಿಸಿ, ಅಂತ ಹೇಳಿ, ಎಲ್ಲಿ ಮಾಡಿ ಅಂದರೆ ಅಲ್ಲಿ ಮಾಡುತ್ತಾರೆ. ಸಾಮಾನ್ಯವಾಗಿ ಸರ್ಕಾರದಿಂದ ಒಂದು ಆದೇಶ ಹೋದಾಗ ಅದನ್ನು ಯಾರೂ ಮೀರಿ ಮಾಡುತ್ತಾರೆಂದು ಹೇಳುವುದು ಸೂಕ್ತವಲ್ಲ. ಒಂದು ವೇಳೆ ಆ ತರಹ ಭಾವನೆ ಬಂದಿದ್ದರೆ, ಕೆಲಸವನ್ನು ಕೈಬಿಡಬೇಕೆಂದು ಸಂಬಂಧಪಟ್ಟ ಚೀಫ್ ಇಂಜನಿಯರಿಗೆ, ಸೂಪರಿಂಡೆಂಟಿಂಗ್ ಇಂಜನಿಯರಿಗೆ ತಿಳಿಸಿದರೆ, ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ.

ನೀರಾವರಿ ಬಾವಿಗಳ ಬಗ್ಗೆ ಕೆಲವರು ಮಾತನಾಡಿದರು, ಆದಷ್ಟು ಬೇಗ ಒಂದು ಗ್ರಾಮಕ್ಕೆ ಒಂದು ಒಳ್ಳೆಯ ಕೆರೆ ನಿರ್ಮಾಣವಾಗಿ, ಇರತಕ್ಕಂತ ಕೆರೆ ದುರಸ್ತಿಯಾಗಿ, ಸರಿಯಾದ ರೀತಿಯಲ್ಲಿ ರೆಸ್ಟೋರೇಷನ್ ಆಗಬೇಕೆಂಬುದು ನಮ್ಮ ಅಪೇಕ್ಷೆ. ಬ್ರೀಚ್ ಆಗಿರತಕ್ಕಂತ ಕೆರೆಗಳನ್ನು ನೋಡಿ ಕೊಳ್ಳಲಿಲ್ಲವೆಂದು ಹೇಳಿದರು. ನನಗೆ ಅನಿಸುತ್ತದೆ, ಅವರು ಯಾವುದಾದರೂ ನಿದರ್ಶನವನ್ನು ಕೊಡುವುದಾದರೆ, ಆ ಕೆಲಸ ಏತಕ್ಕೆ ನಿಂತಿದೆಯೆಂದು ತೀವ್ರತೆಯಿಂದ ಪರಿಶೀಲನೆ ಮಾಡುತ್ತೇವೆ. ಹಾಗೆ ಯಾವ ಕೆಲಸವೂ ನಿಂತಿಲ್ಲ. ಈ ದಿವಸ 25 ಸಾವಿರ ಗ್ರಾಮಗಳು ನಮ್ಮ ರಾಜ್ಯದಲ್ಲಿವೆ. ಒಂದು ಗ್ರಾಮಕ್ಕೆ 25 ಸಾವಿರ ರೂಪಾಯಿ ಖರ್ಚು ಮಾಡುತ್ತೇವೆಂದರೆ, 60 ಕೋಟಿ ರೂಪಾಯಿ ಬೇಕಾಗುತ್ತದೆ, ವರ್ಷಕ್ಕೆ 4—5 ಕೋಟಿ ರೂಪಾಯಿಯಾದರೂ ಬೇಕು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಕೇಂದ್ರ ಸರ್ಕಾರದಿಂದ 7 ಕೋಟಿ ರೂಪಾಯಿ ಬೇಕೆಂದು ಎಸ್ಟಿಮೇಟ್ ಮಾಡಿದರೆ, 4 ಕೋಟಿ ರೂಪಾಯಿ ಕೊಟ್ಟರು, ಅದನ್ನು ಖರ್ಚು ಮಾಡಿದೆವು. ಕೇಂದ್ರ ಸರ್ಕಾರ ಈ ವರ್ಷ 7 ಪರ್ಸೆಂಟ್ ಕೊಟ್ಟರು, ಅದೂ ಸಾಲದು 21 ಪರ್ಸೆಂಟ್‌ವರೆಗಾದರೂ ಹೆಚ್ಚು ಹಣ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ದೆಹಲಿಯಲ್ಲಿ ನೀರಾವರಿ ಬಗ್ಗೆ ಮಾತುಕತೆ ನಡೆಸಿದುದರ ಫಲವಾಗಿ ಕೇಂದ್ರ ಸರ್ಕಾರದ ಅಧಿಕಾರಿಗಳಾಗಲಿ, ಪ್ಲಾನಿಂಗ್ ಕಮಿಷನ್ನಿನವರಾಗಲಿ, ಅದರ ಛೇರ್ಮನ್ ಅಥವಾ ವೈಸ್ ಛೇರ್ಮನ್ನಾಗಲಿ ಈ ವಿಷಯ ವನ್ನು ಮನದಟ್ಟು ಮಾಡಿಕೊಂಡಿದ್ದಾರೆ, ಆದ್ದರಿಂದ ಈ ವರ್ಷ 1965—66ರಲ್ಲಿ ಹೆಚ್ಚು ಹಣ ನಿರೀಕ್ಷೆ ಮಾಡುತ್ತಾ ಇದ್ದೇವೆ. ಅಧಿಕಾರಿಗಳು, ಕಂಟ್ರಾಕ್ಟರುಗಳ ಕೆಲಸ ತೀವ್ರವಾಗಿ ಮುಗಿಸು ತ್ತಿಲ್ಲವೆಂದು ಮಾನ್ಯ ಸದಸ್ಯರುಗಳು ಹೇಳಿದರು. ನಮ್ಮ ಮುಖ್ಯ ಮಂತ್ರಿಗಳು ಹೇಳಿದರು. ಹೊಸ ಕೆಲಸಗಳನ್ನು ತೆಗೆದುಕೊಳ್ಳಲು ಕೇಂದ್ರ ಸರಕಾರದಿಂದ ಹೆಚ್ಚು ಸಹಾಯವನ್ನು ಕೇಳಿಕೊಂಡಿದ್ದೇವೆ, ಹೆಚ್ಚು ಹಣ ನಮಗೆ ಬರತಕ್ಕಂಥ ನಿರೀಕ್ಷೆ ಇದೆ. ಅದು ಬರುತ್ತಲೂ ಎಲ್ಲೆಲ್ಲಿ ಕೆಲಸವಾಗಬೇಕೋ ಅಲ್ಲಲ್ಲಿ ಕಾರ್ಯಕ್ರಮ ಹಾಕಿಕೊಂಡು ಕೆಲಸ ತೆಗೆದುಕೊಳ್ಳಲಾಗುತ್ತದೆ. ಹೋದ ವರ್ಷ ಬರಗಾಲ

ಪ್ರದೇಶಗಳಲ್ಲಿ ಈ ಎಲ್ಲಾ ಕೆಲಸಗಳನ್ನು ಆದಷ್ಟು ಬೇಗ ಮಾಡಿಕೊಟ್ಟಿತು. ಕೆಲಸ ಕುಂಠಿತವಾಗ ಬಾರದು ಅನ್ನುವುದೇ ಸರ್ಕಾರದ ಉದ್ದೇಶ.

ಶ್ರೀ ರೇವಣಸಿದ್ಧಪ್ಪನವರು, ಒಂದೊಂದು ತಾಲ್ಲೂಕಿಗೆ ಸಬ್‌ಡಿವಿಜನ್ ಆಫೀಸರುಗಳು, ಸಿಬ್ಬಂದಿ ಇರುವುದು ಜಾಸ್ತಿ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಸಿಬ್ಬಂದಿಗೆ ಖರ್ಚು ಮಾಡತಕ್ಕಂಥಾದ್ದು 7 ಪರ್ಸೆಂಟ್. ಆದರೆ ಮದ್ರಾಸ್ ಮತ್ತು ಆಂಧ್ರ ಪ್ರದೇಶದಲ್ಲಿ ಖರ್ಚು ಮಾಡತಕ್ಕಂಥಾದ್ದು 13 ಪರ್ಸೆಂಟ್ ಅಂದಮೇಲೆ ನಮ್ಮ ರಾಜ್ಯದಲ್ಲಿ ಖರ್ಚು ಮಾಡುವುದು ಕಡಿಮೆ, ಅದನ್ನು ಇನ್ನೂ ಹೆಚ್ಚು ಮಾಡುವುದಕ್ಕೆ ಅವಕಾಶವಿದೆಯೆಂದ ಹಾಗಾಯಿತು. ಈ ಸಿಬ್ಬಂದಿ ಇರತಕ್ಕದ್ದು ಬರೀ ಮೈನರ್ ಇರಿಗೇಷನ್ ಕೆಲಸಕ್ಕೆ, ಆ ಕಾರಣದಿಂದ ಕಡಿಮೆ ಮಾಡಬೇಕು ಎಂದು ಕೆಲವರು ತಿಳಿದುಕೊಂಡ ಹಾಗಿದೆ. ರಸ್ತೆ, ಬ್ರಿಜಸ್ ಮುಂತಾದ ಪಿ.ಡಬ್ಲ್ಯು.ಡಿ. ಮುನಿಸಿಪಾಲಿಟಿಗೆ ಸಂಬಂಧಪಟ್ಟ ಎಲ್ಲಾ ಕೆಲಸವನ್ನೂ ಸಬ್‌ಡಿವಿಜನ್ನಿನವರು ನೋಡಿಕೊಳ್ಳುತ್ತಿದ್ದಾರೆ; ಆದ್ದರಿಂದ ಆ ಸಿಬ್ಬಂದಿಯನ್ನು ಇನ್ನೂ ಹೆಚ್ಚು ಮಾಡತಕ್ಕ ಒಂದು ಪ್ರಶ್ನೆ ಇದೆ. ಸರಿಯಾದ workload ಇಲ್ಲದೇನೇ ಯಾವ ಅಧಿಕಾರಿಯೂ ಇಲ್ಲ. ಅವರು ಮನೆಯಲ್ಲಿ ಕೂಡುವ ಹಾಗೇ ಇಲ್ಲ. ಮಳೆಗಾಲದಲ್ಲಿ ಯಾವ ಅಸಿಸ್ಟೆಂಟ್ ಇಂಜನಿಯರೂ, ಸೂಪರ್‌ವೈಜರೂ ನಿದ್ರೆ ಮಾಡುವ ಪರಿಸ್ಥಿತಿಯಲ್ಲಿಲ್ಲ, ಎಲ್ಲಿ ಯಾವ ಕೆರೆ ಒಡೆದು ಹೋಗಿ ನಷ್ಟವಾಗುತ್ತದೆ, ಎಂಬ ಭಯದಲ್ಲಿಯೇ ಇರುತ್ತಾರೆ. ಕೆಲವರು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಲು ಪ್ರಯತ್ನ ಮಾಡುತ್ತೇವೆ. ಇಷ್ಟು ಹೇಳಲು ಅವಕಾಶಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಯವರು).—ಸ್ವಾಮಿ, ಅಧ್ಯಕ್ಷರೇ, ಈ ಪೋರ್ಟ್‌ಫೋಲಿಯೋ ಬಗ್ಗೆ ಮಾತನಾಡಿರತಕ್ಕಂಥ ಸದಸ್ಯರೆಲ್ಲರೂ ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವರು ಟೀಕೆಗಳನ್ನೂ ಮಾಡಿದ್ದಾರೆ. ಆ ಟೀಕೆಗಳು ಎಷ್ಟರಮಟ್ಟಿಗೆ ಸಾಧುವೋ, ಆದರೆ ಅವುಗಳನ್ನು ಸ್ವಾಗತಿಸುತ್ತೇನೆ. ಮುಖ್ಯವಾಗಿ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಬಹಳ ಜನ ಮಾತನಾಡಿದ್ದಾರೆ. ಹೊಸದಾಗಿ ನೀರಾವರಿ ಕೆರೆಗಳನ್ನು ಕಟ್ಟಿಕೊಡತಕ್ಕಂಥಾದ್ದು, ಹಳೆಯ ಕೆರೆಗಳನ್ನು ರಿಪೇರಿ ಮಾಡತಕ್ಕಂಥಾದ್ದು, ಹಾಗೂ ಬಾವಿಗಳ ಕೆಲಸ, ಪಂಪ್ ಕೊಡುತಕ್ಕಂಥಾದ್ದು ಇದಕ್ಕೆ ಸಂಬಂಧಿಸಿರುವುದು. ಈ ಬಗ್ಗೆ ನನ್ನ ಸ್ನೇಹಿತರಾದ ಉಪಸಚಿವರು ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾರೆ. ಅದು ಸಾಕು ಅಂತ ಕಾಣುತ್ತದೆ. ಇಷ್ಟು ಮಾತ್ರ ನಾನು ಸರ್ಕಾರದ ಪರವಾಗಿ ಹೇಳಬಲ್ಲೆ. ನಮ್ಮ ಶಕ್ತಿಮೀರಿ ಈ ಸಣ್ಣ ನೀರಾವರಿಗಳಿಗೆ ಸಹಾಯ ಮಾಡಿದ್ದೇವೆ; ಸೇವೆ ಸಲ್ಲಿಸಿದ್ದೇವೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರವನ್ನು ನಾವು ಕೃತಜ್ಞತೆಯಿಂದ ವಂದಿಸಬೇಕಾಗಿದೆ. ಸುಮಾರು 8 ಕೋಟಿ ರೂಪಾಯಿಗಳವರೆಗೂ ನಮಗೆ ಸಹಾಯ ಮಾಡಿದ್ದಾರೆ. ಸ್ವಲ್ಪಮಟ್ಟಿನ ಅನ್ಯಾಯ ಕೇಂದ್ರ ಸರ್ಕಾರದಿಂದ ಮೈಸೂರು ಸರ್ಕಾರಕ್ಕೆ ಹಣಕಾಸಿನ ವಿಚಾರದಲ್ಲಿ ಆಗಿದೆ. ಕೇಂದ್ರದಿಂದ ಬರತಕ್ಕಂಥ ಸಹಾಯದಲ್ಲಿ, ಪ್ಲಾನಿನಲ್ಲಿ ನಮಗೆ ಕಡಿಮೆ ಕೊಟ್ಟಿದ್ದರು. ಮದ್ರಾಸ್, ಆಂಧ್ರಗಳಿಗೆ ಶೇಕಡ 66 ಕೊಟ್ಟು ನಮಗೆ ಶೇಕಡ 56 ಕೊಟ್ಟಿದ್ದರು. ಹೀಗಾಗಿ ನಮಗೆ ಸುಮಾರು 22 ಕೋಟಿ ರೂಪಾಯಿ ಲುಕ್ಸಾನು ಆಗಿತ್ತು. ಆದ್ದರಿಂದಲೇ ನಮಗೆ ಹೀಗೆ ಕೊಟ್ಟಿದ್ದಾರೆಂದು ನನಗನಿಸುತ್ತದೆ. ಬರೀ ಸಣ್ಣ ನೀರಾವರಿಗೋಸ್ಕರವಾಗಿ 8 ಕೋಟಿ ರೂಪಾಯಿಗಿಂತಲೂ ಸ್ವಲ್ಪ ಹೆಚ್ಚು ಕೊಟ್ಟಿದ್ದಾರೆ. ಒಳ್ಳೆಯ ಕೆಲಸವೂ ಆಗಿದೆ, ಅದು ಒಂದು ಹೆಮ್ಮೆಯಿಂದ ಹೇಳತಕ್ಕಂಥ ಮಾತು. ಆದರೆ ಮೈಸೂರಿನಲ್ಲಿ ಸಣ್ಣ ನೀರಾವರಿ ಕೆಲಸ ಎಷ್ಟು ಆಗಬೇಕಾಗಿತ್ತೋ ಅಷ್ಟು ಆಗಿಲ್ಲ. ಎಲ್ಲಿ ಉಳಿದು ಹೋಗಿದೆ ಅದನ್ನು ಹಂಚಿಕೊಟ್ಟಿದ್ದೇವೆ. ಮಾಡತಕ್ಕ ಕೆಲಸ ಬಹಳವಿದೆ. ಮೈಸೂರು ರಾಜ್ಯದಲ್ಲಿ ಇನ್ನೂ ಹೆಚ್ಚಿನ ನೀರಾವರಿ ಕೆಲಸವಾಗಬೇಕು, ಇದಕ್ಕೆ ನಾಲ್ಕರಷ್ಟು ಹೆಚ್ಚಿಗೆ ಆಗತಕ್ಕಂಥಾದ್ದು ಅವಶ್ಯಕ. ನಾನಾ ರೀತಿಯಿಂದ ಆಗಬೇಕಾಗಿದೆ. ಅನೇಕ ಕೆರೆಗಳು ಒಡೆದುಹೋಗಿವೆ; ಅವು ಹತ್ತಾರು ವರ್ಷಗಳಿಂದ ರಿಪೇರಿಯಾಗಿಲ್ಲ. ಹೀಗಾಗಿ ಕೆಲವು ಜನ ರೈತರು ಕಂದಾಯ ಕೊಡುತ್ತಾ ಇದ್ದರೂ ನೀರು ಸಿಗುತ್ತಾ ಇಲ್ಲ. ಇದನ್ನು ನೋಡುತ್ತಾ ಇದ್ದೇವೆ; ಇದು ಸರ್ಕಾರದ ಅನುಭವಕ್ಕೆ ಬಂದಿದೆ. ಇವತ್ತಿನ ಪ್ರಶ್ನೆ, ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕು ಹೊಸ ಕೆರೆಗಳನ್ನು ಅನ್ನುತ್ತಾರೆ. ಹಳೆಯ ಕೆರೆ ರಿಪೇರಿಗಳನ್ನೂ ತೆಗೆದುಕೊಂಡಿದ್ದೇವೆ, ಅದಕ್ಕೂ ಖರ್ಚು ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ನಮ್ಮ ವಿಚಾರದಲ್ಲಿ ಒಂದು ಹೇಳುತ್ತಿದ್ದಾರೆ: ''ನೀವು ನಿಮ್ಮ ಶಕ್ತಿಮೀರಿ ಕೆಲಸ ತೆಗೆದುಕೊಂಡಿದ್ದೀರಿ'' ಎಂದು. ಆದ್ದರಿಂದ ಸಾಕಷ್ಟು ನೀರಾವರಿ ಪ್ರಯೋಜನವಾಗಿಲ್ಲವೆಂದು. ನೀರಾವರಿ ಕಾಂಗಾರಿ ಕೆಲಸ ಜಾಸ್ತಿಯಾಗಿಲ್ಲ, ಬಹಳ ಪ್ರಯೋಜನವಾಗಿಲ್ಲವೆಂಬ ಏನು ಒಂದು ಆಕ್ಷೇಪಣೆ ಮಾಡಿದರು. ಅದು ಸರಿಯಲ್ಲ ನಾವು ಹಾಗೆ ಆಗಿಲ್ಲವೆಂದು ಅವರಿಗೆ ತಿಳಿಸಿರುತ್ತೇವೆ. ಅನೇಕ ಕಡೆಗಳಲ್ಲಿ ಈಗ ನೀರು ತೆಗೆದುಕೊಂಡು ನೀರಾವರಿಯಾಗಿದೆ. ಬಹುಶಃ ಮೈಸೂರು ಜಿಲ್ಲೆಯಲ್ಲಿ

(ಶ್ರೀ ಎಸ್. ನಿಜಲಿಂಗಪ್ಪ)

12 ಸಾವಿರ ಎಕರೆ ನೀರಾವರಿ ಜಾಸ್ತಿಯಾಗಿದೆ. ಎರಡು ವರ್ಷದಿಂದ ಅನೇಕ ರೀತಿಯಲ್ಲಿ ಎಲ್ಲ ಕಡೆಗಳಲ್ಲಿಯೂ ಕೆಲಸ ನಡೆದಿದೆ. ಬೆಳೆದಿದ್ದಾರೆ. ಆಹಾರದ ದೃಷ್ಟಿಯಿಂದ ಹೆಚ್ಚಿಗೆ ನೀರಾವರಿ ಯಾಗಬೇಕು. ಈ ದೃಷ್ಟಿಯಿಂದ ನಾವು ಮಾಡುವ ಕೆಲಸ ಬಹಳವಿದೆ. ಒಡೆದು ಹೋಗಿರತಕ್ಕ, ರಿಪೇರಿಯಾಗಿರತಕ್ಕಂಥ ಕೆರೆಗಳನ್ನು ತೆಗೆದುಕೊಂಡು ಪೂರೈಸುತ್ತೇವೆ. ಅದರ ಜೊತೆಯಲ್ಲಿ ಸಾಧ್ಯ ವಾದಷ್ಟುಗೆ ಹೊಸ ಕೆರೆಗಳನ್ನು ತೆಗೆದುಕೊಂಡು ಪೂರೈಸುವುದೂ ಸಾಧ್ಯ. ಆದರೆ ಮಾನ್ಯ ಸದಸ್ಯರನ್ನ ನಾನು ಕೇಳುವುದಿಷ್ಟೆ. ನೀವೆಲ್ಲರೂ ಒಂದೊಂದು ಬೇಕು, ಎರಡೆರಡು ಬೇಕು ಎಂದು ಕೇಳತಕ್ಕಂಥಾದ್ದು ನ್ಯಾಯ; ಯೋಗ್ಯ, ಸರಿ.

4-00 P.M.

ಆದರೆ ನಾವು ಶಕ್ತಿ ಮೀರಿ ಮಾಡುವುದಕ್ಕಾಗುವುದಿಲ್ಲ. ಈಗ ಏನೋ ಅನೇಕ ಕಡೆಗಳಲ್ಲಿ ರಿಪೇರಿ ಕೆಲಸಗಳನ್ನು ಮಾಡುತ್ತ ಇದ್ದೇವೆ. ಇನ್ನೊಂದು ವಿಚಾರ ಏನು ಎಂದರೆ, ಹೊಸ ಕೆರೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದ್ದರೆ ಮಾಡಬಹುದು. ತಾವುಗಳು ಇಂತಿಂತಹ ಜಾಗದಲ್ಲಿ ಕೆರೆಗಳು ಬೇಕು ಎಂದು ಕೇಳುವ ಕೇಳಿಕೆಗಳು ನ್ಯಾಯವಾದವು, ಅವನ್ನು ಸಹಾನುಭೂತಿಯಿಂದ ನಾವು ಪರಿಶೀಲನೆ ಮಾಡಿ ನೋಡಬೇಕು. ಅದಕ್ಕೆ ತಮ್ಮಂತಹವರ ಸಹಕಾರವೂ ಬೇಕು. ಬಾವಿಗಳನ್ನು ತೆಗೆಸಿದ್ದಾರೆ ಅಲ್ಲಿ ಪವರು ಇಲ್ಲ. ಪವರು ಇದೆ ಅಲ್ಲಿ ಬಾವಿಗಳನ್ನು ತೆಗೆಸಿಲ್ಲ. ಹೀಗೆ ಅನೇಕ ಕಡೆಗಳಲ್ಲಿ ಆಗಿದೆ. ಇದು ಏಕೆ ಆಗಿದೆ ಎಂದರೆ ಅಧಿಕಾರಿಗಳು ಅಲ್ಲಿನ ಜನರೊಂದಿಗೆ ಸೇರಿಕೊಂಡು ತುಂಬಾ ಉತ್ಸಾಹದಿಂದ ಇಲ್ಲಿ ಪವರು ಬರುತ್ತದೆ ಎಂದು ಬಾವಿಗಳನ್ನು ತೆಗೆಸಿದ್ದಾರೆ. ಆದರೆ ಇನ್ನೂ ಪವರು ಬಂದಿಲ್ಲ ಆದಷ್ಟು ಮಟ್ಟಿಗೆ ವೈರುಗಳು ಇವೆ, ಪೋಲುಗಳೂ ಬಂದಿವೆ, ಲೈನನ್ನೂ ಎಳೆಯುತ್ತಿದ್ದಾರೆ. ಇದು ಹೇಗೆ ಆಗಿದೆ ಎಂದರೆ ಹಲ್ಲಿದ್ದರೆ ಕಡಲೆ ಇಲ್ಲ, ಕಡಲೆ ಇದ್ದವರಿಗೆ ಹಲ್ಲು ಇಲ್ಲ ಎನ್ನುವಂತೆ ಆಗಿದೆ. ಇದನ್ನು ಆದಷ್ಟು ಜಾಗ್ರತೆಯಾಗಿ ಪೂರೈಸುತ್ತೇವೆ. ಇದಕ್ಕೆ ಮುಖ್ಯ ಕಾರಣ ನಮ್ಮಲ್ಲಿ ಸಾಕಷ್ಟು ಪವರು ಇಲ್ಲ, ಕೆಲವು ಕಾರಣಗಳಿಂದಾಗಿ ಪವರ್ ಬರುವುದು ಸ್ವಲ್ಪ ತಡವಾಯಿತು. ಇದರಿಂದ ಕೆಲವು ಜನಕ್ಕೆ ಅನಾನುಕೂಲಗಳಾದವು. ಈಗ ನಮ್ಮಲ್ಲಿ ಶರಾವತಿ ಯೋಜನೆಯಾಗಿರುವುದರಿಂದ ನಮಗೆ ಸುಮಾರು ಪ್ರತಿ ವರ್ಷವೂ ಎರಡು, ಎರಡುವರೆ ಲಕ್ಷ ಕಿಲೋ ವಾಟುಗಳಷ್ಟು ಪವರು ಉತ್ಪಾದನೆಯಾಗುತ್ತದೆ. ಇನ್ನು ಏಳೆಂಟು ವರ್ಷಗಳಲ್ಲಿ ಆ ಕೊರತೆ ಬರಲಿಕ್ಕಿಲ್ಲ. ಇನ್ನು ಕೆಲವರು ಇಲ್ಲಿ ಹೇಳಿದರು, ಹಣವನ್ನು ಎಷ್ಟು ಒದಗಿಸಿದ್ದೀರೋ ಅಷ್ಟನ್ನೂ ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ ಎಂದು. ಕಾಳಿ ನದಿಯೋಜನೆಗಾಗಿ ಇಷ್ಟು ಹಣ ಖರ್ಚು ಮಾಡುವುದು ಸೂಕ್ತವಲ್ಲ. ನಾವು ಸುಮಾರು 50 ಲಕ್ಷದಷ್ಟು ಖರ್ಚು ಮಾಡಬೇಕೆಂದು ಒಂದು ಅಂದಾಜು ಹಾಕಿದ್ದೇವೆ. ಅದನ್ನು ಹಾಕಿಕೊಳ್ಳದೇ ಅಲ್ಲಿ ಯಾವ ಕೆಲಸವನ್ನೂ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ನೀವೆಲ್ಲಾ ನೋಡಿರುವಹಾಗೆ ಈಗ ಅಲ್ಲಿ ಕೆಲಸಗಳು ಪ್ರಾರಂಭವಾಗಿವೆ. ಯಾವ ಒಂದು ರೀತಿಯಾದ ಅಂದಾಜೂ ಇಲ್ಲದೆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಕಾಳಿ ನದಿ ಯೋಜನೆಗಾಗಿ ಈಗ ಸಾಕಷ್ಟು ಕೆಲಸಗಳು ನಡೆಯುತ್ತಿವೆ. ಹಾಗೆ ಕೆಲಸ ನಡೆಸುತ್ತಿದ್ದರೂ ಅದೂ ನಮಗೆ ಸಮಾಧಾನವಾಗಿಲ್ಲ. ಇದನ್ನು ಕೇಂದ್ರದವರು ಒಪ್ಪಬೇಕಾಗಿತ್ತು, ಅದರಿಂದಾಗಿ ಇದಕ್ಕೆ 50 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಬೇಕೆಂದಿದ್ದರೂ ಒಂದು ಲಕ್ಷದಷ್ಟು ಖರ್ಚು ಮಾಡುವುದಕ್ಕೆ ಆಗಲಿಲ್ಲ. ಇನ್ನು ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ 16 ಕೋಟಿಯಷ್ಟು ಖರ್ಚು ಮಾಡಬೇಕೆಂದು ಒದಗಿಸಿದ್ದರೂ ಕೂಡ ಹತ್ತು ಕೋಟಿಯಷ್ಟನ್ನೂ ಖರ್ಚು ಮಾಡುವುದಕ್ಕೆ ಆಗಲಿಲ್ಲ ಎಂದು ಹೇಳಿದರು. ಕೆಲಸಗಳನ್ನು ಆದಷ್ಟು ಜಾಗ್ರತೆಯಾಗಿ ಮುಗಿಸಬೇಕೆಂದು ಇರುತ್ತೇವೆ. ನಾನಾ ಕಾರಣಗಳಿಂದಾಗಿ ತಡವಾಗುತ್ತದೆ. ಕೆಲಸ ಮಾಡುವುದಕ್ಕೆ ಆಸಕ್ತಿಯಿಲ್ಲ ಎಂದು ಹೇಳುವುದು ಸರಿಯಲ್ಲ. ಆದರೆ ಇಲ್ಲಿ ಕೆಲಸಗಳು ನಡೆಯುತ್ತಿವೆ. ಬಹುಶಃ ಪವರು ಪ್ರಾಜೆಕ್ಟುಗಳು ಮೊದಲು ಹೆಚ್ಚಾಗಿ ನಡೆಯುತ್ತಿರಲಿಲ್ಲ. ಈಗ ನಡೆಯುತ್ತಿವೆ, ಇದನ್ನು ತರಾತುರಿಯಿಂದ ನಡೆಸುವುದು ನಮ್ಮ ಜವಾಬುದಾರಿ. ಈಗ ಬಾರಾಪೊಳೆ ಯೋಜನೆ ಎಂದು ಇದೆ, ಇದರ ಬಗ್ಗೆ ಕೇರಳ ಸರಕಾರದೊಡನೆ ಮಾತನಾಡಿದ್ದೇನೆ. ಮೈಸೂರು ಸರಕಾರದ ಕಡೆಯಿಂದ ಬಾರಾಪೊಳೆ ಕೆಲಸವನ್ನು ಪ್ರಾರಂಭ ಮಾಡಿದರೆ ನಾವು ಅದಕ್ಕೆ ಅಡ್ಡಿ ಬರುವುದಿಲ್ಲ ಎಂದು ಹೇಳಿದ್ದಾರೆ. ಇದರಿಂದ ಅವರಿಗೆ ಸುಮಾರು 60,000 ಎಕರೆಗಳಷ್ಟು ಭೂಮಿ ನೀರಾವರಿಯಾಗುತ್ತದೆ. ಇವೊತ್ತೇನೋ ಕೇರಳದಲ್ಲಿ ನಾನಾ ಕಾರಣಗಳಿಂದಾಗಿ ಅಲ್ಲಿನ ಆಡಳಿತ ಒಂದು ತರಹವಾಗಿದೆ. ಇದನ್ನು ಮಾಡಿದರೆ ನಮಗೆ 10 ಸಾವಿರ

ಕಿಲೋ ವಾಟುಗಳಷ್ಟು ಪವರು ಬರುತ್ತದೆ, ಹಾಗೇ ನಾವು ಗೋವಕ್ಕೆ ಕೂಡ ಪವರನ್ನು ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ನಮಗೆ ಒಂದು ರೀತಿಯಾದ ಇನಿಷಿಯೇಟೀವ್ ಬಂದರೆ ಅದೇ ರೀತಿ ಬಾರಾಪೊಳೆ ಯೋಜನೆಯನ್ನು ಒತ್ತಾಯ ಮಾಡಿ ಸೇರಿಸಿಕೊಳ್ಳಬಹುದು. ಇಲ್ಲದೇ ಹೋದರೆ ಆಗುವುದಿಲ್ಲ. ಬಹುಶಃ ಅಲ್ಲಿ ಈಗ ಒಂದೆರಡು ವರ್ಷಗಳಿಂದ ಏನೋ ಕಾರಣಗಳಿಂದಾಗಿ ಸರಕಾರ ಸುಗಮವಾಗಿ ನಡೆಯುತ್ತಿಲ್ಲ. ಆದರೆ ನಮ್ಮ ಕೇರಳದ ಸ್ನೇಹಿತರು ನಮಗೆ ಸಹಾಯ ಮಾಡಲು ಸಿದ್ಧರಾಗಿದ್ದಾರೆ.

ಇನ್ನೊಂದು ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದು ಮೊನ್ನೆ ತಾನೇ ಕೇಂದ್ರ ನೀರಾವರಿ ಸಚಿವರಾದ ಶ್ರೀಮಾನ್ ಕೆ. ಎಲ್. ರಾವ್ ರವರು ಇಲ್ಲಿಗೆ ಬಂದಿದ್ದರು. ಅವರು ಘಟಪ್ರಭಾ ಹಾಗೂ ಮಲಪ್ರಭಾ ಇವೆರಡನ್ನೂ ನೋಡಿಕೊಂಡು ಬಂದಿದ್ದಾರೆ. ಘಟಪ್ರಭಾದ ಬಗ್ಗೆ ನಾಲೆಯನ್ನು ಎತ್ತರಮಾಡಿ ಅಲ್ಲಿ ಕಟ್ಟಬೇಕೇ ಬೇಡವೇ ಎನ್ನುವುದನ್ನು ಅವರು ಚೀಫ್ ಇಂಜನೀಯರವರೊಡನೆ ಎರಡು ರಾಜ್ಯಗಳ ಸಂಬಂದಪಟ್ಟ ಅಧಿಕಾರಿಗಳೊಡನೆ ಕಲೆತು ಸುಮಾರು ನಾಲ್ಕೈದು ಗಂಟೆಗಳ ಕಾಲ ಚರ್ಚೆ ಮಾಡಿ ಅವರು ಅಖೈರು ತೀರ್ಮಾನ ಕೊಟ್ಟಿದ್ದಾರೆ. ಮಲಪ್ರಭಾದ ಬಗ್ಗೆ ಕೆಲವು ವಿಚಾರಗಳನ್ನು ತಿಳಿದುಕೊಳ್ಳಬೇಕಾಗಿದೆ. ಮಲಪ್ರಭಾದ ವಿಚಾರದಲ್ಲಿ ಒಂದ ಕೆನಾಲನ್ನು ಮಾಡುವ ಬಗ್ಗೆ ಮತ್ತು ಒಂದು ಟನ್ನಲ್ ಮಾಡುವ ವಿಚಾರವೂ ಇದೆ. ಸಣ್ಣ ನೀರಾವರಿ ಯೋಜನೆಗಳು ನಮಗೆ ಎಷ್ಟು ಮುಖ್ಯವೋ ದೊಡ್ಡ ನೀರಾವರಿ ಯೋಜನೆಗಳೂ ಅಷ್ಟೇ ನಮಗೆ ಅತ್ಯಂತ ಅವಶ್ಯಕ. ಇದನ್ನು ಎರಡನೇ ಸ್ಥಾನಕ್ಕೆ ಇಡುವುದಕ್ಕಾಗುವುದಿಲ್ಲ. ಒಂದು ದೃಷ್ಟಿಯಿಂದ ಮಲಪ್ರಭಾ, ಘಟಪ್ರಭಾ ಹಾಗೂ ಕೃಷ್ಣಾ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಅಲ್ಲದೆ ಈ ದೊಡ್ಡ ಯೋಜನೆಗಳನ್ನೆಲ್ಲಾ ಕೇಂದ್ರದವರೇ ವಹಿಸಿಕೊಂಡುಮಾಡಬೇಕೆಂದು ಒತ್ತಾಯ ಮಾಡುತ್ತಲಿದ್ದೇವೆ. ಏಕೆಂದರೆ, ನಮಗೆ ಒದಗಿಸಲು ಸಾಕಷ್ಟು ಹಣ ಸಿಗುತ್ತಿಲ್ಲ. ಕೇಂದ್ರದವರು ಸಹಾಯ ಮಾಡುತ್ತಿದ್ದಾರೆ. ಕೇಂದ್ರದವರೇ ಇವನ್ನು ತೆಗೆದುಕೊಂಡು ಮಾಡುವಂತಾದರೆ ನಾವುಗಳು ಹತ್ತು ವರ್ಷದಲ್ಲಿ ಆಗುವ ಕೆಲಸವನ್ನು ಐದು ವರ್ಷಗಳಲ್ಲಿಯೇ ಮುಗಿಸಲು ಅನುಕೂಲವಾಗಬಹುದು. ನಾವೇ ಎಲ್ಲ ಯೋಜನೆಗಳನ್ನೂ ಮಾಡಬೇಕು ಎಂದು ಮಾಡಿದರೆ ನಮಗೆ ಅದನ್ನು ಪೂರೈಸಲು ಸುಮಾರು 20-25 ವರ್ಷಗಳಿಗಿಂತ ಹೆಚ್ಚು ಕಾಲ ಬೇಕಾಗುತ್ತದೆ. ಆದುದರಿಂದ ಸಾಧ್ಯವಾದಷ್ಟು ಮಟ್ಟಿಗೆ ಇಂತಹ ದೊಡ್ಡ ಯೋಜನೆಗಳನ್ನು ಕೇಂದ್ರದವರೇ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಬಹುಶಃ ಅವರೂ ಒಪ್ಪಬಹುದು.

ಇನ್ನು ಹಾರಂಗಿ ಹಾಗೂ ಹೇಮಾವತಿ ಯೋಜನೆಗಳನ್ನು ತೆಗೆದುಕೊಳ್ಳಬೇಕು. ಹೇಮಾವತಿ ಯೋಜನೆ ಮಾಡುತ್ತೇವೆ. ಹಾರಂಗಿ ಯೋಜನೆಯಲ್ಲಿ ಕೆಲಸ ನಡೆಯುತ್ತಿದ್ದುದು ಈಗ ನಿಂತು ಹೋಗಿದೆ. ಕಾರಣವೇನು ಎಂದರೆ, ಇಲ್ಲಿ ಕಟ್ಟೆ ಕಟ್ಟಕೂಡದು ಇಲ್ಲಿ ಕಟ್ಟಿದರೆ ಕೃಷ್ಣರಾಜನಗರ ಜನಕ್ಕೆ ಅನಾನುಕೂಲಗಳಾಗುತ್ತದೆ ಎಂದು ನಿಷ್ಕಾರಣವಾಗಿ ಜನರನ್ನು ಹೆದರಿಸಿ, ಇದು ಆಗಕೂಡದು ಎಂದು ಪ್ರಚಾರ ಮಾಡುತ್ತಿದ್ದಾರೆ. ಆದುದರಿಂದ ಇದು ನಿಂತು ಹೋಗಿದೆ. ಇವರೆಲ್ಲರೂ ಸಮಾಧಾನಕ್ಕೆ ಬಂದ ಮೇಲೆ ಇದನ್ನು ಆದಷ್ಟು ಜಾಗ್ರತೆಯಾಗಿ ಮಾಡಬೇಕೆಂದು ಇದೆ. ಹೇಮಾವತಿ ಯೋಜನೆಯನ್ನು ನಡೆಸುತ್ತೇವೆ. ಇದು ಹೇಗಾಗಿದೆ ಎಂದರೆ' ಸೇವ್ ಮಿ ಫ್ರಾಂ ಮೈ ಫ್ರೆಂಡ್ಸ್', ಎನ್ನುವಂತೆ ಆಗುತ್ತದೆ. ಈ ಕೆಲಸಗಳನ್ನು ಮಾಡುವಾಗ ಇದಕ್ಕೆ ಸಂಬಂಧಪಟ್ಟ ಚೀಫ್ ಇಂಜನೀಯರವರಿಗೆ ಮತ್ತು ಇತರ ಅಧಿಕಾರಿಗಳಿಗೆ ಇಲ್ಲಿ ಕ್ವಾರ್ಟರುಗಳನ್ನು ಕಟ್ಟಬೇಕೆಂದು ಇತ್ತು. ಅದಕ್ಕಾಗಿ ಅಲ್ಲಿ ಅಕ್ವಿಸಿಷನ್ನು ಇತ್ಯಾದಿ ಕೆಲಸಗಳನ್ನು ಮಾಡಬೇಕು. ನಮ್ಮ ಸ್ನೇಹಿತರಿಗೆ ಗೊತ್ತಿರುವಂತೆ ಅಲ್ಲಿನ ಜನ ಭೂಮಿಯನ್ನು ಕೊಡುವುದಕ್ಕೆ ಅಡ್ಡಿ ಪಡಿಸುವುದು ಇಲ್ಲವೇ ಹೆಚ್ಚು ಪರಿಹಾರದ ಹಣವನ್ನು ಕೊಡಬೇಕೆಂದು ಕೇಳುವುದು, ಹೀಗೆಲ್ಲಾ ಆದುದರಿಂದ ಅಲ್ಲಿ ಕೆಲಸ ನಡೆಸುವುದು ಸ್ವಲ್ಪ ನಿಧಾನವಾಗಿದೆ. ನಾನು ತಮ್ಮಲ್ಲಿ ಕೇಳುವುದು ಇಂತಹ ಕೆಲಸಗಳು ಬಂದಾಗ ದಯಮಾಡಿ ನೀವು ನಮ್ಮ ಅಧಿಕಾರಿಗಳಲ್ಲಿಗೆ ಹೋಗಿ ಅವರಿಗೆ ಸಹಾಯ ಮಾಡಬಹುದು. ಇಂತಹ ಕೆಲಸಗಳನ್ನು ಮಾಡುವುದರಿಂದ ಇಲ್ಲಿಯ ಜನಕ್ಕೆ ಅನುಕೂಲವಾಗುತ್ತದೆ ಮತ್ತು ಇದಕ್ಕೆ ನ್ಯಾಯವಾದ ಪರಿಹಾರದ ಹಣವನ್ನು ಕೊಡಿಸುತ್ತೇವೆಂದು ಜನತೆಗೂ ಸಹಾಯ ಮಾಡಬಹುದು. ತಾವುಗಳೇ ಇಲ್ಲಿಗೆ ಬಂದಾಗ ಸುಮಾರು ಎಷ್ಟು ಭೂಮಿಯನ್ನು ಇಲ್ಲಿ ಅಕ್ವೈರು ಮಾಡಿರುತ್ತಾರೋ ಅದಕ್ಕೆ ನ್ಯಾಯವಾಗಿ ಎಷ್ಟು ಪರಿಹಾರ ಕೊಡಬೇಕೆಂದು ತಾವು ಸಲಹೆ ಕೊಡುತ್ತೀರೋ ಅದನ್ನು ನಾವು ಕೊಡುವುದಕ್ಕೆ ಸಿದ್ಧರಾಗಿದ್ದೇವೆ ಎಂದು ಇಲ್ಲಿ ನಾನು ತಿಳಿಸಲು ಇಷ್ಟಪಡುತ್ತೇನೆ. ಮಂಗಳೂರಿನಲ್ಲಿರುವ ಒಬ್ಬ ಸದಸ್ಯರು ನಮಗೆ ಪೋರ್ಟು ಮಾಡಲು ಸುಮಾರು 1,200 ಎಕರೆಗಳಷ್ಟು ಭೂಮಿ ಮಾತ್ರ ಬೇಕಾಗಿದೆ. ಇಲ್ಲಿ 3,000 ಎಕರೆಗಳಷ್ಟು ಭೂಮಿ ಕೇಳುವುದು ಸರಿಯಲ್ಲ ಎಂದು ಹೇಳಿ ಅಲ್ಲಿದ್ದ ಜನ ಮೊದಲು ಎಷ್ಟು ಭೂಮಿ ಬೇಕಾದರೂ.

(ಶ್ರೀ ಎಸ್. ನಿಜಲಿಂಗಪ್ಪ)

ಕೊಡಲು ಸಿದ್ಧವಿದ್ದಾಗ ಅವರನ್ನು ಕೊಡಲು ಅಸ್ತಿ ಮಾಡುವುದು ಮತ್ತು ಒಂದಕ್ಕೆರಡರಷ್ಟು ಪರಿಹಾರದ ಮೊಬಲಗಳನ್ನು ಕೇಳುವುದು ಇವೆಲ್ಲಾ ತೊಂದರೆಗಳು ಮಧ್ಯದಲ್ಲಿ ಬಂದವು. ಸುಮಾರು ಒಂದು ಭೂಮಿಗೆ 500ರೂಪಾಯಿನಷ್ಟೇ ಬೆಲೆ ಇದ್ದರೆ 5,000 ರೂಪಾಯಿಗಳಷ್ಟು ಎಂದು ಹೇಳಿಬಿಡು ತ್ತಾರೆ. ಯಾವಾಗಲೂ ಇಂತಹ ದೊಡ್ಡ ಪ್ರಮಾಣದ ಕೆಲಸಗಳನ್ನು ತೆಗೆದುಕೊಳ್ಳುವಾಗ ಮೊದಲೇ ಯೋಚಿಸಿ ಸಾಕಾದಷ್ಟು ಭೂಮಿ ತೆಗೆದುಕೊಂಡು ಆಕ್ವೈರು ಮಾಡಿಕೊಳ್ಳಬೇಕು. ಮಧ್ಯ ಮಧ್ಯದಲ್ಲಿ ಇನ್ನೂ ಹೆಚ್ಚು ಭೂಮಿಬೇಕೆಂದು ಆಕ್ವೈರು ಮಾಡಲು ಆಗುವುದಿಲ್ಲ. ಯಾವಾಗಲೋ ಒಂದು ಸಾರಿ ಹೀಗೆ ಕೆಲಸ ಮಾಡಬೇಕಾಗಿ ಬರುತ್ತದೆ. ಆದಕ್ಕೆ ಅಲ್ಲಿರುವ ಜನ ಸರಿಯಾಗಿ ತಿಳಿದುಕೊಳ್ಳದೆ ಇಲ್ಲದ ತೊಂದರೆಗಳನ್ನು ಕೊಡುತ್ತಿರುತ್ತಾರೆ. ಸುಮಾರು ಇಲ್ಲಿ 1,200 ಎಕರೆಗಳಿಂದ 3,000 ಎಕರೆಗಳಷ್ಟು ಜಾಗವನ್ನು ಫ್ಯೂಚರ್ ಡೆವಲಪ್‌ಮೆಂಟಿಗಾಗಿ ತೆಗೆದುಕೊಳ್ಳಬೇಕೆಂದಿದ್ದೇವೆ. ಇಲ್ಲಿ ಒಂದು ಫರ್ಟಿಲೈಸರ್ ಫ್ಯಾಕ್ಟರಿಯನ್ನು ತೆಗೆಯಬೇಕೆಂದಿದ್ದೇವೆ. ಪ್ಯಾಕೇಜ್ ಬೋರ್ಡ್ ಸ್ಕೀಂ ಮಾಡ ಬೇಕೆಂದಿದೆ. ಅಲ್ಯೂಮಿನಿಯಂ ಪ್ರಾಜೆಕ್ಟು ಇವೆಲ್ಲ ಮಾಡಲು ಇಲ್ಲಿ ನೀರಿದೆ, ಜಾಗವಿದೆ ಈ ಮೂರು ವಿಷಯಗಳಲ್ಲಿ ಇಲ್ಲಿ ಕೆಲಸ ಮಾಡಬೇಕೆಂದು ಇದೆ. ಇವುಗಳಿಂದ ಹೆಚ್ಚಿನ ಉತ್ಪತ್ತಿಯಾಗುತ್ತದೆ. ದೊಡ್ಡ ದೊಡ್ಡ ಕೈಗಾರಿಕೆಗಳು ಜಾಸ್ತಿಯಾಗತಕ್ಕ ಪ್ರದೇಶಗಳಾಗಿವೆ. ಇಲ್ಲಿ ಕನಸನ್ನು ತೆಗೆದು ನನಸಾಗುವಂತಹ ಕೆಲಸಗಳನ್ನು ಮಾಡುತ್ತಲಿದ್ದೇವೆ. ಹಾಗೇ ನಮ್ಮಲ್ಲಿರುವ ಹೇಮಾವತಿ ಯೋಜನೆಯೂ ಕೂಡ ಆಗುತ್ತದೆ. ಆದಷ್ಟು ಬೇಗ ಹಾರಂಗಿ ಯೋಜನೆ ಕೆಲಸವನ್ನೂ ಮಾಡ ಬೇಕೆಂದಿದ್ದೇವೆ, ಅನಾವಶ್ಯಕವಾಗಿ ಸರಕಾರದ ಮೂಗಿನ ಮೇಲೆ ಮಸಿ ಬಳಿಯಬೇಕೆಂದು ಕೆಲವರು ಮಾಡುವಂತೆ ಮಾಡಿದರೆ ಅದು ಸರಿಯಾದುದಲ್ಲ. ನಾವು ಹಾರಂಗಿ ಯೋಜನೆ ಕೆಲಸವನ್ನು ಮಾಡಲು ಸಿದ್ಧರಾಗಿದ್ದೇವೆ. ಮತ್ತೆ ಪುನಃ ಕೇಂದ್ರ ಸರಕಾರದವರು ಹೇಳಿದಂತೆ ಬೇರೆ ಒಂದು ಅಂದಾಜನ್ನು ತಯಾರು ಮಾಡಿದ್ದೇವೆ. ಹೆಚ್ಚು ಜನಕ್ಕೆ ಅನ್ಯಾಯವಾಗದಂತೆ ಹಾಸನದವರಿಗಾಗಲೀ ಅಥವಾ ಕೃಷ್ಣರಾಜನಗರದವರಿಗಾಗಲೀ ಅಥವಾ ಕೊಡಗಿನ ಕಾಫೀ ತೋಟದವರಿಗಾಗಲೀ ಯಾವ ಕೆಡಕು ಗಳೂ ಆಗದಂತೆ ಈ ಯೋಜನೆ ಮಾಡಬೇಕೆಂದಿದ್ದೇವೆ. ಸಾಧ್ಯವಾದಮಟ್ಟಿಗೂ ಈ ಯೋಜನೆಯನ್ನು ಹೆಚ್ಚು ಜನಕ್ಕೆ ಅನಾನುಕೂಲವಾಗದ ರೀತಿಯಲ್ಲಿ ಮಾಡಿ, ಇಲ್ಲಿನ ರೈತರ ಕಷ್ಟವನ್ನು ಬಗೆಹರಿಸ ಬೇಕೆಂದು ಯೋಚನೆ ಮಾಡಿದ್ದೇವೆ.

ಒಬ್ಬ ಸದಸ್ಯರು.—ಎಗಚಿ ಪ್ರಾಜೆಕ್ಟ್ ಬಗ್ಗೆ ಹೇಳಬೇಕೆಂದು ಕೋರುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಎಗಚಿ ಪ್ರಾಜೆಕ್ಟು ನನ್ನ ಜಿಲ್ಲೆಗೆ ಸೇರಿದ್ದು. ಇದನ್ನು ಮಾಡಿದರೆ ಇಲ್ಲಿನ ಜನಕ್ಕೆ ಬಹು ಅನುಕೂಲವಾಗುತ್ತದೆ. ನನ್ನ ಜಿಲ್ಲೆಗೆ ಸೇರಿದುದರಿಂದ ಸರಕಾರ ಇದನ್ನು ಬೇಗ ಮಾಡುತ್ತಿದೆ ಎಂದು ಯಾರೂ ತಪ್ಪು ತಿಳಿದುಕೊಳ್ಳಬೇಡಿ. ಇದರಿಂದ ನಮ್ಮ ಜಿಲ್ಲೆಯಲ್ಲಿ ಸುಮಾರು 21, 22, ಅಥವಾ 25, ಸಾವಿರ ಎಕರೆ ಗಳಷ್ಟು ಭೂಮಿಗೆ ಮಾತ್ರ ನೀರು ಸಿಗುತ್ತದೆ. ಇದಲ್ಲದೆ ಹಾಸನ ಮತ್ತು ತುಮಕೂರು ಜಿಲ್ಲೆಗಳಿಗೂ ಸ್ವಲ್ಪ ನೀರು ಸಿಗುತ್ತದೆ. ಇದೆಲ್ಲಾ ಸೇರಿ ಸುಮಾರು 75,000 ಎಕರೆಗಳಿಗೆ ಇದರಿಂದ ನೀರು ಸಿಗುತ್ತೆ ಎನ್ನುವ ಒಂದು ಅಂದಾಜನ್ನು ಮಾಡಿದ್ದಾರೆ. ಇದನ್ನು ಇನ್ನೂ ಪರೀಕ್ಷೆ ಮಾಡುತ್ತಿದ್ದೇವೆ. ನಮ್ಮ ಚಿತ್ರದುರ್ಗ ಜಿಲ್ಲೆ ಬಡ ಜನರಿಂದ ಕೂಡಿದ ಜಿಲ್ಲೆ, ರಾಜ್ಯದಲ್ಲೆಲ್ಲಲ್ಲಾ ಬಹಳ ಕಡಿಮೆ ಮಳೆ ಬರತಕ್ಕ ಈ ಜಿಲ್ಲೆಯಲ್ಲಿ ಬಡ ಜನರೇ ಹೆಚ್ಚಾಗಿದ್ದಾರೆ. ಆದಾಗ್ಯೂ ಸ್ವಲ್ಪ ಮಟ್ಟಿಗೆ ಹಾಸನ ಜಿಲ್ಲೆಗೂ ಅನುಕೂಲ ಸಿಗುವುದರಿಂದ ಇಲ್ಲಿನ ಜನಕ್ಕೆ ಹೆಚ್ಚಿನ ಅನುಕೂಲ ಮಾಡಿಕೊಡವುದು ಆವಶ್ಯಕ ಎಂದು ಇಲ್ಲಿ ಹೇಳುತ್ತೇನೆ. ಸಣ್ಣ ದೊಡ್ಡ ನೀರಾವರಿ ಯೋಜನೆಗಳ ಮೂಲಕ ಹೆಚ್ಚಿಗೆ ಆಹಾರ ಬೆಳೆಯಲು ಅನುಕೂಲವಾಗಿದೆ. ಇದಕ್ಕಾಗಿ ಏನೇನು ಮಾಡ ಬೇಕಾಗಿತ್ತೋ ಅದನ್ನು ಮಾಡಲು ಸರಕಾರಕ್ಕೆ ಸಾಧ್ಯವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಲಂಚರುಷವತ್ತು ಬಗ್ಗೆ ಹೇಳುವುದಾದರೆ, ಲಂಚರುಷವತ್ತು ಮೊದಲಿನಿಂದಲೂ ಇದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೂ ಇದೆ, ಅದಕ್ಕೂ ಪೂರ್ವದಲ್ಲಿ ಸಹ ಇದ್ದಿತು. ಇದು ಬಹಳ ಹಿಂದಿನ ಕಾಲದಿಂದ ಅಂದರೆ 1881 ರಿಂದಲೂ ಇದ್ದೇ ಇದೆ. ಇದನ್ನು ತಡೆಗಟ್ಟುವುದಕ್ಕೆ ಸರಕಾರ ಎಲ್ಲಾ ಪ್ರಯತ್ನ ಮಾಡಿದೆ. ಹಿಂದಕ್ಕೆ ಹಳೇ ಮೈಸೂರಿನಲ್ಲಿ 1880ರಿಂದ ರೆಪ್ರೆಜೆಂಟೇಟಿವ್ ಅಸೆಂಬ್ಲಿ—ಪ್ರಜಾಪ್ರತಿನಿಧಿ ಸಭೆ ಇದ್ದಿತು. ಆಗಿನಿಂದಲೂ ಸಹ ಈ ದೂರು ಇದೆ. ಯಾವುದು ಸಾಮಾನ್ಯವಾಗಿ ಇರತಕ್ಕದ್ದೋ ಅದು ಇರುತ್ತದೆ. ಬಹುಶಃ ಅದು ಮನುಷ್ಯ ಸ್ವಭಾವ ಎಂದು ಹೇಳಬಹುದು. ತನಗೆ ಎಷ್ಟು ಬರುತ್ತದೋ ಅದಕ್ಕೂ ಹೆಚ್ಚಿಗೆ ಪಡೆಯಲು ಕೈ ಹಾಕತಕ್ಕಂಥಾದ್ದು ನಡೆದುಕೊಂಡು ಬಂದಿದೆ. ವಿದ್ಯಾವಂತರು ಜಾಸ್ತಿಯಾಗಿದ್ದರೂ ಕೂಡ ರಾಷ್ಟ್ರದ ಕೆಲಸ ಮಾಡು

ತ್ತಿರುವಾಗ್ಗೆ ಪ್ರಭಾವಕ್ಕೆ ಒಳಗಾಗಿ ಕರ್ತವ್ಯದಲ್ಲಿ ಲೋಪದೋಷ ಉಂಟಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಏನಾದರೂ ತೆಗೆದುಕೊಳ್ಳದೆ ನಿಷ್ಠೆಯಿಂದ ಕೆಲಸಮಾಡುವುದಿಲ್ಲ. ಇದು ಪ್ರಪಂಚದಲ್ಲಿ ಎಲ್ಲಾ ಕಡೆ ಇರುತ್ತದೆ. ಪೂರ್ವ ಕಾಲದಲ್ಲಿ ಅಮಲ್ದಾರರ ಕೆಲಸ ತೆಗೆದುಕೊಳ್ಳಬೇಕಾದರೆ ತಿಂಗಳಿಗೆ 180 ರೂಪಾಯಿ ಸಂಬಳ ದೊರೆತರೆ ಮೇಲಿನ ಸಂಬಳ ಎಷ್ಟು ಎಂದು ಕೇಳುತ್ತಿದ್ದರು. ಅದು ಎಲ್ಲ ಜನರಿಗೂ ಗೊತ್ತಿದೆ. 'ಊಪರ್ ಕ್ಯಾ ಹೈ' ಎಂದು ಆಗಿನ ಕಾಲದಲ್ಲಿ ಕೇಳುತ್ತಿದ್ದರು. ಸಂಬಳ ಅಷ್ಟೇ ತೆಗೆದುಕೊಂಡು ಯಾರೂ ಇರಲಿಲ್ಲ. ಅಮಲ್ದಾರರಾಗಲಿ ಗುಮಾಸ್ತರಾಗಲಿ ಮಾಮೂಲು ಎಂದು ಇಟ್ಟುಕೊಂಡಿದ್ದರು. ಅದರಲ್ಲಿಯೂ ಪಿ.ಡಬ್ಲ್ಯು.ಡಿ. ಡಿಪಾರ್ಟಮೆಂಟಿನಲ್ಲಿ ಈ ಮಾಮೂಲು ಹಾವಳಿ ಹೆಚ್ಚಾಗಿದ್ದಿತು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಒಂದು ಸಂತೋಷದ ಮಾತು ಅಂದರೆ, ಇವತ್ತಿನ ದಿವಸ ಯಾರೂ ಮಾಮೂಲು ಕೊಡಿ ಎಂದು ಧೈರ್ಯವಾಗಿ ಕೇಳತಕ್ಕಂಥವರು ಇಲ್ಲ. ಮೇಲಿನ ಸಂಬಳ ಯಾರಿಗೂ ಕೇಳುವ ಧೈರ್ಯ ಇಲ್ಲ. ಆ ದೃಷ್ಟಿಯಿಂದ ನೀತಿಯ ದೃಷ್ಟಿಯಿಂದ ಸರಕಾರದ ಆಡಳಿತದಲ್ಲಿ ಅನುಕೂಲವಾಗಿದೆ. ಜನ ಇಂದು ಯೋಚನೆ ಮಾಡುತ್ತಾರೆ. ಯಾರು ಲಂಚ ಕೊಡುತ್ತಿದ್ದರೋ ಅವರು ಇದನ್ನು ಮಾಡುತ್ತೇವೆ ಎಂದು ಹೆಮ್ಮೆಯಿಂದ ಹೇಳತಕ್ಕದ್ದು ಹೋಗಿದೆ. ಹೊಸದಾಗಿ ಬಂದಿರತಕ್ಕ ಅಧಿಕಾರಿಗಳು ಪಾಪ ಭೀರುಗಳಾಗಿದ್ದಾರೆ. ಇಂಥ ಸಂದರ್ಭದಲ್ಲಿ ಅವರು ಹಿಂದುಮುಂದು ನೋಡುತ್ತಾರೆ. ಹಳಬರು ಕೆಲವರು ತೆಗೆದುಕೊಳ್ಳುತ್ತಲೇ ಇದ್ದಾರೆ. ತೆಗೆದು ಕೊಳ್ಳದೇ ಇರತಕ್ಕಂಥಾದ್ದು ತಪ್ಪು ಎಂದು ಅವರು ಹೇಳುತ್ತಾರೆ. ಇಂದು ಜನಸಾಮಾನ್ಯರಲ್ಲಿಯೂ ಕೂಡ ಮಾಮೂಲು ಕೊಡುವುದು ತೆಗೆದುಕೊಳ್ಳುವುದು ಇದು ಪಾಪ ಎಂಬ ಭಾವನೆ ಉಂಟಾಗಿದೆ. ಇದು ಒಳ್ಳೆಯದಲ್ಲ ಎಂದು ತಿಳಿದುಕೊಂಡಿದ್ದಾರೆ. ಹಿಂದಿನ ಪದ್ಧತಿ ಈಗ ಹೋಗಿದೆ, ಎಲ್ಲರೂ ಉತ್ತಮ ಸ್ಥಿತಿಗೆ ಬರುತ್ತಾ ಇದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದೇ ರೀತಿ ಎಲ್ಲರೂ ತಿಳಿದುಕೊಳ್ಳಬೇಕಾದುದು ಅವಶ್ಯಕ. ಹಿಂದಕ್ಕೆ ಸಾಮಾನ್ಯವಾಗಿ ಮಾಮೂಲು ಅಂದರೆ ಒಂದೋ ಎರಡೋ ರೂಪಾಯಿ ಇಲ್ಲವೆ ಎಂಟಾಣೆ ಇಡುತ್ತಿದ್ದರು. ಹಿಂದಕ್ಕೆ ಒಬ್ಬ ಭಿಕಾರಿಗೆ ಒಂದಾಣೆ ದಾನ ಧರ್ಮ ಕೊಡುತ್ತಿದ್ದರೆ, ಇಂದಿನ ಪರಿಸ್ಥಿತಿಯಲ್ಲಿ 20 ನಯೇ ಪೈಸಾ ಕೊಡುತ್ತೇವೆ. ಯಾಕೆಂದರೆ ಹಣದ ಬೆಲೆ ಇಂದು ಕಡಿಮೆಯಾಗಿದೆ. ಆದುದರಿಂದ ಒಂದೆರಡು ಕೊಡುತ್ತಿದ್ದ ಕಡೆ ಇಂದು ಹತ್ತು ರೂಪಾಯಿ ಕೊಡಬೇಕಾಗುತ್ತದೆ. ಇಂದು ಪರಿಸ್ಥಿತಿಯಲ್ಲಿ ಬದಲಾವಣೆಯಾಗಿದೆ. ವಾಲ್ಯೂಂ ಆಫ್ ಕರಪ್ಷನ್ ಈಗ ಕಡಿಮೆಯಾಗಿದೆ. ಅಧಿಕಾರಿಗಳು ಮಾಮೂಲು ತೆಗೆದುಕೊಳ್ಳಲು ಹೆದರುತ್ತಾರೆ. ಜನಸಾಮಾನ್ಯರೂ ಕೂಡ ಕೊಡಲು ಹೆದರುತ್ತಾರೆ. ಮಾಮೂಲು ಕೊಡುವುದಕ್ಕೆ ಹೋದರೆ ಎಲ್ಲಿ ಎಕ್ಸ್‌ಪೋಜ್ ಮಾಡುತ್ತಾರೋ ಎಂದು ಜನ ಹೆದರುತ್ತಾರೆ. ಆದರೆ ಇದನ್ನು ಹೇಳತಕ್ಕಂಥ ಜನ ಕಡಿಮೆಯಾಗಿದ್ದಾರೆ. ಹಿಂದಕ್ಕೆ ಎಂಟಾಣೆಗೆ ಸಮಾಧಾನವಾಗುತ್ತಿದ್ದ ಕಡೆ ಇಂದು 20 ರೂಪಾಯಿ ಕೇಳುತ್ತಾರೆ. ಇದು ಇಲ್ಲವೇ ಇಲ್ಲ ಎಂದು ಮಾತ್ರ ಹೇಳುವುದಕ್ಕಾಗುವುದಿಲ್ಲ. ಆದರೆ ಅದನ್ನೇ ದೊಡ್ಡದು ಮಾಡಿ ಹೇಳುವುದು ಸರಿಯಲ್ಲ. ಅನೇಕ ಪ್ರಾಮಾಣಿಕ ನೌಕರರು ಇದ್ದಾರೆ. ಸರಕಾರ ಕೈಕೊಂಡಿರುವ ಕ್ರಮಗಳ ಪರಿಣಾಮವಾಗಿ ಲಂಚ ಮಾಮೂಲುಗಳ ಪ್ರಮಾಣ ಸಾಮಾನ್ಯವಾಗಿ ಕಡಿಮೆಯಾಗಿದೆ. ಪಿ.ಡಬ್ಲ್ಯು.ಡಿ.ನಲ್ಲಿ ಜನ ಲಂಚ ತೆಗೆದುಕೊಳ್ಳುತ್ತಾ ಇಲ್ಲ. ಮೊನ್ನೆ ದಿನ ಶ್ರೀ ವೀರೇಂದ್ರ ಪಾಟೀಲರವರು ನನಗೆ ತಿಳಿಸಿದ್ದಾರೆ. ನಾಲ್ಕೈದು ದಿವಸಗಳ ಕೆಳಗೆ ಎಕ್ಸಿಕ್ಯೂಟಿವ್ ಎಂಜಿನಿಯರ್ ಹಾಗೂ ಅಸಿಸ್ಟಂಟ್ ಎಂಜಿನಿಯರ್ ಇಬ್ಬರೂ ಮಾಡಬಾರದ ಕೆಲಸ ಮಾಡಿದ್ದಾರೆ. ಅವರಿಗೆ ಶಿಕ್ಷೆ ಮಾಡುತ್ತೇವೆ. ಈಗಾಗಲೇ ಅವರನ್ನು ಸಸ್ಪೆಂಡ್ ಮಾಡಿದ್ದಾರೆಂದು ಕಾಣುತ್ತದೆ. ಆದರೆ ನಮ್ಮ ಕಡೆ ಬಂದು ಇಂಥ ಸಂಗತಿಯನ್ನು ಹೇಳತಕ್ಕಂಥ ಜನ ಬೇಕು. ಹೇಳ ತಕ್ಕಂಥ ಜನ ಇಲ್ಲದಿದ್ದರೆ ಆಕ್ಷೇಪಣೆ ಮಾಡಲು ಬರುವುದಿಲ್ಲ. ಯಾರಾದರೂ ಬಂದು ನಮಗೆ ಹೇಳಿದರೆ ನಿಜವಾಗಿಯೂ ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಲು ಸರಕಾರ ಯಾವಾಗಲೂ ಸಿದ್ಧವಾಗಿದೆ. ನಾವು ಹಿಂದೆ ಮುಂದೆ ನೋಡುವುದಿಲ್ಲ. ತಪ್ಪಿತಸ್ಥ ಅಧಿಕಾರಿ ನೌಕರರ ಬಗ್ಗೆ ಯಾರಾದರೂ ದೂರು ನೀಡಿದರೆ, ಕೂಡಲೇ ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಕ್ರಮ ಕೈಕೊಳ್ಳಲಾಗುವುದು. ನನ್ನ ಮೇಲೆ ಕೆಲವರು ಶಾಸಕರು ಮಾಡಿದ ಭ್ರಷ್ಟಾಚಾರದ ಆಪಾದನೆಗಳು ಬಿದ್ದು ಹೋಗಿವೆ. ಯಾರ ಮೇಲೂ ಯಾರೂ ಸುಳ್ಳು ಆಪಾದನೆ ಮಾಡಬಾರದು. ಇಲ್ಲದ್ದನ್ನು ಹೇಳಿಬಿಟ್ಟರೆ ಅದು ಸರಿಯಲ್ಲ. ಎಲ್ಲರೂ ಕೆಟ್ಟವರು ಎಂಬ ಮನೋವೃತ್ತಿ ಬೆಳೆದುಕೊಂಡು ಬಂದಿದೆ. ಇದರಿಂದ ಒಳ್ಳೆಯವರಿಗೆ ಕೂಡ ಭಯ ಉಂಟಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಪ್ರಜಾಭಿಪ್ರಾಯ ತಿಳಿಸಬೇಕು, ಟೀಕೆ ಮಾಡತಕ್ಕದ್ದು ಸಹ ಬೇಕು. ಆದರೆ ಅಲ್ಲದ ಸಲ್ಲದ ಟೀಕೆ ಮಾಡುವುದು ಬೇಡ. ಟೀಕೆ ಮಾಡುವುದರಲ್ಲಿ ಘನತೆ ಗಾಂಭೀರ್ಯ ಬೇಕು. ನ್ಯಾಯವಾದುದನ್ನು ಹೇಳಬೇಕು. ಖಂಡಿತವಾಗಿ ಅದಕ್ಕೆ ಗಮನ ಕೊಡುತ್ತೇವೆ. ಜನರಿಂದ ಆರಿಸಿ ಬಂದಂಥ ಪ್ರತಿನಿಧಿಗಳು ಜವಾಬ್ದಾರಿಯುಳ್ಳವರು ಆಗಿದ್ದೀರಿ. ಹೇಳುವ ಹಕ್ಕು ನಿಮಗೆ ಇದೆ. ನೀವು ಹೇಳಿದ್ದನ್ನು ನಾವು ಸಾಕಷ್ಟು ಜವಾಬ್ದಾರಿ ದೃಷ್ಟಿಯಿಂದ ನೋಡುತ್ತೇವೆ. ವಿಚಾರ ಮಾಡು ತ್ತೇವೆ. ಶಿಕ್ಷೆಗೆ ಅರ್ಹರಾಗಿದ್ದರೆ ಖಂಡಿತವಾಗಿ ಶಿಕ್ಷೆ ಮಾಡುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ.

(ಶ್ರೀ ಎಸ್. ನಿಜಲಿಂಗಪ್ಪ)

ಇನ್ನೊಂದು, ವಿಷಯ. ಸೀನಿಯಾರಿಟಿ ಬಗ್ಗೆ ಬಹಳ ತೊಂದರೆಯಾಗಿದೆ. ಅದು ನನಗೆ ಗೊತ್ತಿದೆ. ಅಂತರ ರಾಜ್ಯ ಸೀನಿಯಾರಿಟಿಯ ಈ ಕಾರ್ಯ ಕಳೆದ ಎಂಟು ವರ್ಷಗಳಿಂದ ಮುಗಿಯದಿರುವುದನ್ನು ಒಪ್ಪುತ್ತೇನೆ. 1956 ನವೆಂಬರ್ ಒಂದನೇ ತಾರೀಖಿನಿಂದ 8 ವರ್ಷ ನಾಲ್ಕೈದು ತಿಂಗಳುಗಳಾಯಿತು. ಈ ಪ್ರಶ್ನೆ ಬಹು ಮಟ್ಟಿಗೆ ಬೆಳೆದುಕೊಂಡು ಬಂದಿದೆ. ಈಗ ಅದು ಪರಿಹಾರವಾಗುತ್ತಾ ಇದೆ. ಇದಕ್ಕೆ ರಾಜ್ಯ ಸರಕಾರ ಕಾರಣವಲ್ಲ. ಸೀನಿಯಾರಿಟಿ ಪಟ್ಟಿಯನ್ನು ಕೇಂದ್ರ ಸರಕಾರಕ್ಕೆ ಕಳಿಸಬೇಕು. ಇದನ್ನು ನಿರ್ಧರಿಸುವುದು ಅವರದೇ ಕೊನೆಯ ಅಧಿಕಾರ. ಗೆಜೆಟೆಡ್, ನಾನ್-ಗೆಜೆಟೆಡ್ ಅಧಿಕಾರಿಗಳ ಸೀನಿಯಾರಿಟಿ ಪಟ್ಟಿಯನ್ನು ಕಳಿಸಿ ಕೊಡುತ್ತೇವೆ. ಯಾರಿಗಾದರೂ ಅನ್ಯಾಯವಾಗಿದ್ದರೆ ಅವರು ನಮಗೆ ಬರೆದು ತಿಳಿಸುವುದನ್ನು ಅವರಿಗೆ ಕಳಿಸಿ ಕೊಡುತ್ತೇವೆ. ಇದನ್ನು ಅನೇಕ ಸಲ ಹೇಳಿದೆ. ಇನ್ನೊಂದು ವಿಷಯವನ್ನು ಈ ಸೀನಿಯಾರಿಟಿ ಪಟ್ಟಿಯ ವಿಷಯದಲ್ಲಿ ತಮಗೆ ತಿಳಿಸಲು ಬಯಸುತ್ತೇನೆ. ನಾನು ಹಳೇ ಮೈಸೂರಿನವನು. ಹಳೇ ಮೈಸೂರು ಅಧಿಕಾರಿಗಳಿಗೆ ಬೆಂಬಲ ಕೊಡುತ್ತಿದ್ದೇನೆ, ಅಂತರ ರಾಜ್ಯ ಸೀನಿಯಾರಿಟಿ ವಿಚಾರದಲ್ಲಿ ಮುಂಬಯಿ ಕರ್ನಾಟಕದವರಿಗೆ ಅನ್ಯಾಯ ಮಾಡುತ್ತಿರುವೆ ಎಂದು ಮುಂಬಯಿ ಕರ್ನಾಟಕದವರೊಬ್ಬರು ನನಗೆ ಬೆದರಿಕೆ ಪತ್ರ ಬರೆದಿದ್ದಾರೆ. ಈ ರೀತಿ ಅವರು ಆಪಾದಿಸಿ 'ಈ ಮೂಲಕ ತಮ್ಮ ರಕ್ತ ಕುದಿಯುತ್ತಿದೆ, ಹೀಗೆ ಅನ್ಯಾಯ ಮಾಡಿದರೆ ನಿನ್ನ ರಕ್ತ ಹೀರುತ್ತೇನೆ' ಎಂದು ಮುಂಬಯಿ ಕರ್ನಾಟಕದವರೊಬ್ಬರು ತಮ್ಮ ಪತ್ರದಲ್ಲಿ ನನಗೆ ಬರೆದಿದ್ದಾರೆ. ಇನ್ನೊಂದು ಕಾಗದ ಹಳೇ ಮೈಸೂರಿನವರೊಬ್ಬರು ನನಗೆ ಬರೆದಿದ್ದಾರೆ. ಬಹಳ ದಿನ ನಾನು ಹುಬ್ಬಳ್ಳಿಯಲ್ಲಿಯೇ ಇದ್ದುದರಿಂದ ಮುಂಬಯಿ ಕರ್ನಾಟಕದವರ ಕಡೆ ಇದ್ದೇನೆ. ಮುಂಬಯಿ ಕರ್ನಾಟಕದವರಿಗೆ ಅನುಕೂಲ ಮಾಡಿ ಕೊಟ್ಟು ಹಳೇ ಮೈಸೂರಿನವರಿಗೆ ಅನ್ಯಾಯ ಮಾಡುತ್ತಿರುವುದಾಗಿ ಅವರು ಆಪಾದಿಸಿದ್ದಾರೆ. ಹೀಗೆ ಮಾಡಿದರೆ ನಾನು ಬಹಳ ದಿವಸ ಬದುಕುವುದಿಲ್ಲ ಎಂದು ಅವರು ಕೊನೆಗೆ ತಿಳಿಸಿದ್ದಾರೆ. ಅನ್ಯಾಯವಾಗುತ್ತಿದೆ ಎಂದು ಅಧಿಕಾರಿಗಳಲ್ಲಿ ಅನುಮಾನ ಇದೆ. ಯಾರಿಗೂ ಅನ್ಯಾಯ ಮಾಡುವ ಉದ್ದೇಶ ನನಗೆ ಖಂಡಿತ ಇಲ್ಲ. ಎಲ್ಲರಿಗೂ ನ್ಯಾಯ ದೊರೆಯ ಬೇಕೆಂದು ಎಲ್ಲರೂ ನಿಷ್ಠೆಯಿಂದ ಕೆಲಸ ಮಾಡಬೇಕು ಸೇವೆ ಸಲ್ಲಿಸ ಬೇಕು ಎಂದು ಅಧಿಕಾರಿಗಳನ್ನು ಇಟ್ಟುಕೊಂಡಿದ್ದೇವೆ. ಎಲ್ಲರಿಗೂ ನ್ಯಾಯ ದೊರೆಯುವುದಕ್ಕಾಗಿ ಸೀನಿಯಾರಿಟಿ ಪಟ್ಟಿಯನ್ನು ಒಂದೆರಡು ಸಲ ಪಬ್ಲಿಷ್ ಮಾಡಿದ್ದೇವೆ. ಕೆಲವು ಸಂದರ್ಭದಲ್ಲಿ ಹೈ ಕೋರ್ಟು ಮಧ್ಯೆ ಬರುತ್ತದೆ. ಹಾಗಲ್ಲ ಹೀಗಲ್ಲ ಎಂದು ಹೇಳಿ, ಸ್ಟೇ ಆರ್ಡರ್ ತಂದ ಮೂಲಕ ಆರು ತಿಂಗಳು ಅವಧಿ ಬೇಕಾಗಬಹುದು ಒಂದು ವರ್ಷ ಅವಧಿ ಬೇಕಾಗಬಹುದು. ಈ ಮೂಲಕ ಅದು ನಿಂತಿದೆ. ಒಂದು ಸಂತೋಷದ ವಿಚಾರ. ಎರಡು ಮೂರು ವರ್ಷ ಪ್ರಯತ್ನ ಪಟ್ಟು ಕೆಲವು ಪಟ್ಟಿಗಳು ಪೂರ್ತಿಯಾಗಿವೆ. ಹಣಕಾಸಿನ ಮಂತ್ರಿಗಳು ಇದನ್ನು ಹೇಳಿದ್ದಾರೆ. 21 ಡಿಪಾರ್ಟ್‌ಮೆಂಟುಗಳಲ್ಲಿ ಗೆಜೆಟೆಡ್ ಅಧಿಕಾರಿಗಳ ಸೀನಿಯಾರಿಟಿ ಪಟ್ಟಿಯ ಕೆಲಸ ಪೂರೈಸಿದೆ. ಅದನ್ನ ಜಾರಿಗೆ ಕೊಡುತ್ತೇವೆ. ಅದೇ ರೀತಿ ಇನ್ನೂ ಆರು ಡಿಪಾರ್ಟ್‌ಮೆಂಟಿನಿಂದ ಸಹ ಬಂದಿದೆ. ಶಿಫಾರಸ್ಸು ಮಾಡಿ ಕೇಂದ್ರ ಸರಕಾರಕ್ಕೆ ಕಳಿಸಿದ್ದೇವೆ. ಕೇಂದ್ರ ಸರಕಾರದಿಂದ ಬಂದ ಕೂಡಲೆ ಪಬ್ಲಿಷ್ ಮಾಡಿ ಜಾರಿಗೆ ಕೊಡುತ್ತೇವೆ ಇನ್ನು ನಾಲ್ಕು ಡಿಪಾರ್ಟುಮೆಂಟಿನಿಂದ ಅಖೈರು ಪಟ್ಟಿ ಬರಬೇಕಾಗಿದೆ. ಶಿಫಾರಸ್ಸು ಕಳಿಸಬೇಕಾಗಿ ಬರುತ್ತದೆ. ಈ ವರ್ಷದ ಮಧ್ಯ ಭಾಗದಲ್ಲಿ ಈ ಕಾರ್ಯ ಸಂಪೂರ್ಣ ಮುಗಿದಂತಾಗುತ್ತದೆ. ಬಹಳ ಮಾಡಿ ಬರುವ ದಸರಾ ಹಬ್ಬದೊಳಗಾಗಿ ಎಲ್ಲ ಇಲಾಖೆಗಳ ಸೀನಿಯಾರಿಟಿ ಪಟ್ಟಿಗಳೂ ಅಂತಿಮಗೊಂಡು ಜಾರಿಗೆ ಬರುವುವು. ಈ ಸೀನಿಯಾರಿಟಿ ಪಟ್ಟಿಯಿಂದ ಕೆಲವರು ಮೇಲೆ ಬರುತ್ತಾರೆ ಕೆಲವರು ಕೆಳಗೆ ಹೋಗುತ್ತಾರೆ ಇದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ನ್ಯಾಯವಾದ ರೀತಿಯಲ್ಲಿ ಕೇಂದ್ರ ಸರಕಾರದವರು ತೀರ್ಮಾನ ಮಾಡುತ್ತಾರೆ. ಅವರ ತೀರ್ಮಾನದಿಂದ ಎಲ್ಲರಿಗೂ ಸಮಾಧಾನವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಇಂಥ ಕೆಲಸಗಳಲ್ಲಿ ಹತ್ತು ಜನಕ್ಕೆ ಸಮಾಧಾನವಾದರೆ ಒಬ್ಬರಿಗೆ ಅಸಮಾಧಾನವಾಗುತ್ತದೆ. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಈ ಸೀನಿಯಾರಿಟಿ ಬಗ್ಗೆ ತೀರ್ಮಾನ ಮಾಡುವ ಕಾರ್ಯದಲ್ಲಿ ಅನೇಕ ಅಡ್ಡಿ ಆತಂಕಗಳು ತೊಂದರೆಗಳು ಇವೆ. ಸ್ಟೇಟ್ ರೀಆರ್ಗನೈಜೇಶನ್ ದೇಶದಲ್ಲಿ ಹೊಸದಾಗಿ ಜಾರಿ ಆಯಿತು. ಕಷ್ಟ ಬರತಕ್ಕದ್ದು ಸಹಜ. ಸಾಧ್ಯವಾದುದನ್ನು ಮಾಡುತ್ತಿದ್ದೇವೆ. ಕೇಡರ್ ರೂಲ್ಸ್ ತಯಾರಾಗುತ್ತಾ ಇದೆ. 15 ವರ್ಷ ನೌಕರಿಯಲ್ಲಿ ಇರತಕ್ಕವರಿಗೆ ತೊಂದರೆಯಾಗಿದೆ. ಸಾಧ್ಯವಾದುದನ್ನು ನ್ಯಾಯವಾದುದನ್ನು ಅಷ್ಟೂ ಮಾಡಿದ್ದೇವೆ. ಯಾವದೇ ಭಾಗದಿಂದ ಬಂದವರು ಇರಲಿ ಸರಕಾರಿ ನೌಕರರ ಸಂಬಳ ಕಡಿಮೆ ಮಾಡಿಲ್ಲ. ಅವರಿಗೆ ಮೊದಲು ಎಷ್ಟು ಸಂಬಳ ಬರುತ್ತಿತ್ತೋ ಅಷ್ಟೇ ಸಂಬಳ ಬರುತ್ತಿದೆ. ಅವರ ಜವಾಬ್ದಾರಿ ಕೂಡ ಕಡಿಮೆಯಾಗಿಲ್ಲ. ನಾನು ಮೇಲೆ ನೀನು ಕೆಳಗೆ ಎಂಬ ಹವ್ಯಾಸವನ್ನು ಇಟ್ಟುಕೊಂಡಷ್ಟು ಕಷ್ಟ, ತೊಂದರೆ ಜಾಸ್ತಿಯಾಗುತ್ತದೆ. ದೇಶದಲ್ಲಿ ಇರುವ ಬಡತನ ನಿರುದ್ಯೋಗ ಹೋಗಲಾಡಿಸಿ ಯೋಗ್ಯ ಸಮಾಜ ಕಟ್ಟಬೇಕಾಗಿದೆ. ಹೊಸ ರಾಷ್ಟ್ರ ನಿರ್ಮಾಣ ಮಾಡಲು ನಾವು ಹೊರಟಿದ್ದೇವೆ ಎನ್ನು

ವುದನ್ನು ಗಮನದಲ್ಲಿಟ್ಟುಕೊಂಡು ಮೇಲೆ, ಕೆಳಗೆ, ಹಾಗೆ, ಹೀಗೆ ಎಂದು ಮನದಲ್ಲಿಟ್ಟುಕೊಂಡು ಅವಿಶ್ವಾಸದಿಂದ ಕೆಲಸ ಮಾಡುವುದು ಸರಿಯಲ್ಲ.

ಸರ್ಕಾರಕ್ಕೂ ಈ ಸಣ್ಣ ಸಣ್ಣ ನೌಕರರ ಬಗ್ಗೆ ಸಾಕಷ್ಟು ಸಹಾನುಭೂತಿ ಇದೆ. ಅವರು ಬಹಳ ಮಟ್ಟಿಗೆ ಎಲ್ಲರೂ ಬಡವರೇ ಆಗಿರುತ್ತಾರೆ, ಅವರಿಗೆ ಮಕ್ಕಳೂ ಜಾಸ್ತಿ ಇವೆ, ಎನ್ನುವುದೆಲ್ಲಾ ನಮಗೂ ಗೊತ್ತಿದೆ. ಅದಕ್ಕಾಗೇ ನಾವೂ ಕೂಡ ಅವರಿಗೆಲ್ಲಾ ಯೋಗ್ಯ ರೀತಿಯಲ್ಲಿ ಏನು ಸಹಾಯ ಸಹಾನುಭೂತಿಗಳನ್ನು ತೋರಿಸಬಹುದೋ ಅಷ್ಟನ್ನೂ ತೋರಿಸಿದ್ದೇವೆ. ನಮಗೆ ಈ ಹಿಂದೆ ಇವರೆಲ್ಲರಿಗೂ 5 ರೂಪಾಯಿಗಳ ಡಿ. ಎ. ಜಾಸ್ತಿ ಮಾಡಿದ್ದಕ್ಕೆ 5 ಕೋಟಿ ರೂಪಾಯಿಗಳ ಖರ್ಚು ಜಾಸ್ತಿ ಆಯಿತು. ಈಗ ತಮಗೆಲ್ಲಾ ತಿಳಿದಿರುವಂತೆ ಇವರಿಗೆ ಆ ಮದ್ರಾಸ್ ನೌಕರರ ಮಟ್ಟಕ್ಕೆ ಡಿ. ಎ. ಇತ್ಯಾದಿಗಳನ್ನು ಏರಿಸುವುದರಿಂದ ಸುಮಾರು 13—14 ಕೋಟಿ ರೂಪಾಯಿಗಳ ವೆಚ್ಚ ಜಾಸ್ತಿಯಾಗುವುದು. ನಾವು ಸಾಲದ್ದಕ್ಕೆ ಆ ಕೇಂದ್ರ ಸರ್ಕಾರದವರಿಗೂ ನಮ್ಮ ಎಲ್ಲಾ ಮನವಿಗಳನ್ನೂ ಸಲ್ಲಿಸಿದ್ದೇವೆ. ಅವರಿಗೆ ಇಷ್ಟು ಕೊಡಬೇಕು ಎಂಬುದನ್ನೂ ಸಹಾ ತಿಳಿಸಿದ್ದೇವೆ. ಆದರೆ ಈಗ ಆ ಕೇಂದ್ರ ಸರ್ಕಾರದಲ್ಲಿ ಏನು ಕೊಡುತ್ತಿದ್ದಾರೋ ಅದನ್ನೇ ಇಲ್ಲಿಯೂ ಕೊಡಬೇಕೆಂದರೆ ಅದು ಸಧ್ಯಕ್ಕೆ ಸಾಧ್ಯವಿಲ್ಲ. ಆದರೆ ನಮಗೆ ಇಲ್ಲಿ ಎಷ್ಟು ಹಣ ಕಡಮೆ ಬೀಳುತ್ತದೆಯೋ ಅಷ್ಟನ್ನು ಕೇಂದ್ರ ಸರ್ಕಾರ ಕೊಡುವುದಾದರೆ ಮಾತ್ರ ಆಗ ನಮಗೆ ಅಷ್ಟನ್ನು ಕೊಡುವುದಕ್ಕೆ ಸಾಧ್ಯವಾಗಬಹುದು. ನಾವು ಮೊನ್ನೆ ಮದ್ರಾಸಿಗೆ ಫೈನಾನ್ಸ್ ಕಮಿಷನ್ನವರನ್ನು ನೋಡುವುದಕ್ಕೆ ಹೋಗಿದ್ದಾಗ ನಾವು ಅಲ್ಲಿ ಅವರ ಮುಂದೆ ಸವಿಸ್ತಾರವಾಗಿ ಎಲ್ಲ ವಿಚಾರಗಳನ್ನೂ ತಿಳಿಸಿದ್ದೇವೆ. ಒಂದೇ ಕಡೆಯಲ್ಲಿ ಒಂದೇ ದರ್ಜೆಗೆ ಸೇರಿರತಕ್ಕ ಇಬ್ಬರು ನೌಕರರಿಗೆ ಒಬ್ಬನಿಗೆ ಜಾಸ್ತಿ ಸಂಬಳ, ಇನ್ನೊಬ್ಬನಿಗೆ ಕಡಮೆ ಸಂಬಳ ಕೊಡತಕ್ಕದ್ದು, ಇಂಥ ಸಂಬಳದಲ್ಲಿ ವ್ಯತ್ಯಾಸವಿರತಕ್ಕದ್ದು ಸರಿಯಾದ್ದಲ್ಲ, ಇಬ್ಬರೂ ಒಂದೇ ಕೆಲಸ ಮಾಡುತ್ತಾರೆ, ಇಬ್ಬರ ಕ್ವಾಲಿಫಿಕೇಷನ್ನೂ ಒಂದೇ, ಇಬ್ಬರ ದರ್ಜೆಯೂ ಒಂದೇ; ಹೀಗಿದ್ದಾಗ ಒಬ್ಬನಿಗೆ ಜಾಸ್ತಿ ಸಂಬಳ ಇನ್ನೊಬ್ಬನಿಗೆ ಕಡಮೆ ಸಂಬಳ ಕೊಡತಕ್ಕದ್ದು ಸರಿಯಾದ್ದಲ್ಲ ಎಂತ ಅವರಿಗೆ ಖಚಿತವಾಗಿ ತಿಳಿಸಿದ್ದೇವೆ. ನಮ್ಮಲ್ಲಿರತಕ್ಕ ಒಬ್ಬ ಡಿ.ಎಸ್.ಪಿ. ಏನು ಕೆಲಸಮಾಡುತ್ತಾನೋ ಅದನ್ನೇ ಆ ಐ.ಪಿ.ಎಸ್. ಅಧಿಕಾರಿಯೂ ಮಾಡುತ್ತಾನೆ. ಆದರೆ ನಮ್ಮಲ್ಲಿರತಕ್ಕ ಡಿ.ಎಸ್.ಪಿ. 600 ರೂಪಾಯಿ ಸಂಬಳ, ಐ.ಪಿ.ಎಸ್. ಅಧಿಕಾರಿಗೆ 1,200 ರೂಪಾಯಿ ಸಂಬಳ ಇದೆ. ಹೀಗೆ ಸಂಬಳಗಳಲ್ಲಿ ವ್ಯತ್ಯಾಸವಿರುವುದು ಸರಿಯಲ್ಲ, ಜನರಲ್ಲಿ ಒಂದು ಅಸಮಾಧಾನಕ್ಕೆ ಕಾರಣವಾಗುತ್ತದೆ. ಆದುದರಿಂದ ಕೇಂದ್ರ ಸರ್ಕಾರದವರು ಇದನ್ನು ಆದಷ್ಟು ಬೇಗ ಸರಿಪಡಿಸಬೇಕು ಎಂಬುದಾಗಿ ನಾವು ಅವರಿಗೆ ತಿಳಿಸಿದ್ದೇವೆ. ಆದರೆ ಅಲ್ಲಿಯತನಕ ನಾವು ಇಲ್ಲಿ ನಮ್ಮ ಶಕ್ತಿ ಎಷ್ಟಿದೆ, ನಮ್ಮ ಹೊಣೆಗಾರಿಕೆಗಳು ಎಷ್ಟಿವೆ, ನಮ್ಮ ವರಮಾನವೇನು, ಎಂಬುದನ್ನೆಲ್ಲಾ ನೋಡಿ ನಾವು ಇಲ್ಲಿ ಇದನ್ನು ಜಾಸ್ತಿ ಮಾಡಬೇಕಾಗಿದೆ. ನಾವೇನು ಈ ದಿವಸ ಈ ತುಟ್ಟಿಭತ್ಯ ಇತ್ಯಾದಿಗಳನ್ನು ಜಾಸ್ತಿ ಮಾಡಿದ್ದೇವೋ ಇದು ನಮ್ಮ ಶಕ್ತಿಗೆ ಮೀರಿದ್ದಾಗಿದೆ. ನಾವು ಇದನ್ನು ಜಾಸ್ತಿ ಮಾಡತಕ್ಕ ಕಾಲದಲ್ಲಿ ಕನಿಷ್ಠ ಪಕ್ಷ ಜನರ ಹೊಟ್ಟೆ ಮತ್ತು ಬಟ್ಟೆಗಾದರೂ ಒಂದು ಮಾರ್ಗ ಇರಲೇಬೇಕಲ್ಲ ಎಂಬುದನ್ನು ಆಲೋಚನೆಮಾಡಿ ಮಾಡಿದ್ದೇವೆ. ನಮ್ಮ ಶಕ್ತಿಗೂ ಮೀರಿ ಸಹಾಯ ಮಾಡಿದ್ದೇವೆ. ಇಲ್ಲಿ ನಮ್ಮ ಮಾತು ಕೇಳಬಾರದವರ ಮಾತುಗಳನ್ನೆಲ್ಲಾ ಕೇಳಿಕೊಂಡು ರಾಜ್ಯಾಡಳಿತಕ್ಕೆ ವಿರುದ್ಧವಾದ ದಾರಿಯನ್ನು ಹಿಡಿದರೆ ನಾವು ಇವರ ಬಗ್ಗೆ ಅದನ್ನು ತಡೆಗಟ್ಟಲು ಏನೇನು ಶಿಸ್ತಿನ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಳ್ಳಬೇಕಾಗಿ ಬಂದೀತು.

ಇನ್ನು ಸರ್ಕಾರಕ್ಕೆ ಬರತಕ್ಕ ಕಾಗದಪತ್ರಗಳ ಬಗ್ಗೆ ವಿಶೇಷವಾಗಿ ಬಹಳ ತಡವಾಗುತ್ತಿದೆ ಎಂಬ ಒಂದು ವಾದ ಇದೆ. ದಿವಸಾ ನನಗೆ ಸಾಮಾನ್ಯವಾಗಿ ನೂರಾರು ಫೈಲುಗಳು ಬರುತ್ತಿವೆ. ಅವುಗಳ ಪೈಕಿ ಸುಮಾರು 20 ಪರ್ಸೆಂಟು ಫೈಲುಗಳ ಮೇಲಾದರೂ ಇಷ್ಟು ಈ ಫೈಲು ತಡವಾಗುವುದಕ್ಕೆ ಕಾರಣವೇನು ಎಂತ ಬರೆದಿರುತ್ತೇನೆ. ಆದರೆ ಇತ್ತೀಚೆಗೆ ಎಲ್ಲರೂ ಬೇಗ ಬೇಗ ಕೆಲಸಗಳನ್ನು ಮಾಡುತ್ತಿದ್ದಾರೆ. ನಮ್ಮ ಸೆಕ್ರೆಟರಿಗಳೂ ಕೂಡ ಬಹಳ ಹೊತ್ತು ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮಲ್ಲಿರತಕ್ಕದ್ದು ಬಹಳ ಹಳೇ ಕಾಲದ ಮೆಷಿನರಿ. ನಮಗೆ ಸ್ವಾತಂತ್ರ್ಯ ಬಂದಾಗಿನಿಂದಲೂ ನಾವು ವಿಧಿಯಿಲ್ಲದೆ ಇದರಿಂದಲೇ ಕೆಲಸವನ್ನು ತೆಗೆದುಕೊಳ್ಳುತ್ತಿದ್ದೇವೆ. ಆದರೆ ಇದನ್ನು ಒಂದೇ ಸಾರ್ತಿಗೆ ಕಿತ್ತುಹಾಕಿ ಹೊಸದನ್ನು ತರುವುದಕ್ಕೆ ಸಾಧ್ಯವಿಲ್ಲ, ಕಾಲಕ್ರಮೇಣ ಇದು ಸರಿಹೋಗಬೇಕಾಗಿದೆ. ಆದರೆ ಈಗೀಗ ಇದು ಸ್ವಲ್ಪ ಗೇರಪ್ ಆಗುತ್ತಿದೆ. ಶ್ರೀ ಕಡಿದಾಳ್ ರವರೂ ಇದನ್ನೇ ಹೇಳಿದ್ದು. ಅವರೂ ಇಲ್ಲಿದ್ದು ಕೆಲಸಮಾಡಿದವರು. ಎಲ್ಲಾ ನೋಡಿದ್ದಾರೆ. ಕ್ರಮೇಣ ಇದನ್ನೆಲ್ಲಾ ನಾವು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅನೇಕರು ಇನ್ನೂ ಅನೇಕ ಕಟ್‌ಮೋಷನ್‌ಗಳನ್ನು ಕಳುಹಿಸಿದ್ದಾರೆ. ಆದರೆ ನಾನು ಎಲ್ಲರಿಗೂ ಹೇಳುವುದಿಷ್ಟೇ: ಏನಾದರೂ ಅಂಥ ಅನ್ಯಾಯಗಳು ಆಗಿದ್ದ ಪಕ್ಷದಲ್ಲಿ ಅವನ್ನು ನನಗೆ ಬಂದು ತಿಳಿಸಲಿ. ಅಂಥ ವಯಕ್ತಿಕ ಅನ್ಯಾಯಗಳು ನಡೆದಿದ್ದ ಪಕ್ಷದಲ್ಲಿ ನಾವು ಅದನ್ನು ಖಂಡಿತ ಸರಿಪಡಿಸುತ್ತೇವೆ.

(ಶ್ರೀ ಎಸ್. ನಿಜಲಿಂಗಪ್ಪ)

ಇನ್ನು ಕೆಲವರು ಧಾರವಾಡ ಮತ್ತು ಇನ್ನಿತರಕಡೆಗಳ ಕೆಲವು ವಿಚಾರಗಳನ್ನೆತ್ತಿ ಕೆಲವು ಲೋಕಲ್ ಕ್ಯಾಂಡಿಡೇಟುಗಳನ್ನು ಕೆಲಸದಿಂದ ನಿವೃತ್ತಿಮಾಡಿರತಕ್ಕ ವಿಚಾರ ಹೇಳಿದ್ದಾರೆ. ಆದರೆ ಅವರನ್ನು ಕಾನೂನು ಪ್ರಕಾರ ವಾಪಸ್ಸು ಕಳುಹಿಸಿದ್ದೇ ಸರಿಯಾಗಿದೆ. ಇನು ಮುಂದೆ ಅಂಥ ಕಷ್ಟಗಳು ಆಗದಿರುವಂತೆ ಮಾಡಲು ಏನೇನು ಕ್ರಮಗಳನ್ನು ಮಾಡಬೇಕೋ ಅವನ್ನು ಮಾಡಲಾಗುತ್ತದೆ. ಆದರೆ ಆ ಸ್ಥಳದಲ್ಲಿ ಕೆಲಸಕ್ಕೆ ಎಷ್ಟು ಜನ ಇರಬೇಕೋ ಅದಕ್ಕಿಂತ ಹೆಚ್ಚಿಗೆ ಜನರಿದ್ದ ಕಾರಣ ಆ ರೀತಿ ಆಯಿತೆಂದು ಹೇಳಿದ್ದಾರೆ. ಆದರೆ ಇತ್ತೀಚೆಗೆ ಕೆಲವು ಕಡೆ ಹುದ್ದೆಗಳನ್ನು ಜಾಸ್ತಿಮಾಡಲಾಗಿದೆ. ಇನ್ನು ಈ ಕಛೇರಿಗಳಲ್ಲಿ ಕೆಲಸಮಾಡುವುದಕ್ಕೆ ಬರತಕ್ಕ ಜನರಿಗೆ ಒಂದು ಸರಿಯಾದ ಶಿಕ್ಷಣ ಕೊಡುವುದಕ್ಕೂ ಸಹಾ ನಾವು ಒಂದು ಏರ್ಪಾಡನ್ನು ಮಾಡಬೇಕೆಂದಿದ್ದೇವೆ. ಇದರಿಂದಲಾದರೂ ಈ ಕಾಗದಪತ್ರಗಳ ವಿಲೇವಾರಿ ಬೇಗ ಆದೀತೆಂದು ನಾನು ಆಶಿಸಿದ್ದೇನೆ. ಈ ದಿವಸ ನೌಕರಿಗೆ ಬರತಕ್ಕ ಪದವೀಧರರ ಹಾಗೂ ಎಸ್.ಎಸ್.ಎಲ್.ಸಿ. ಗಳ ಬರವಣಿಗೆಯೋ, ಅವರ ಭಾಷೆಯೋ ಅವರು ಉಪಯೋಗಿಸತಕ್ಕ ಶಬ್ದಗಳೋ ಬಹಳ ವಿಚಿತ್ರವಾಗಿವೆ. ಅಂದರೆ ನಾನು ಹೇಳುತ್ತಿರುವುದು ಅವರಿಗೂ ಕಷ್ಟ, ನಮಗೂ ಕಷ್ಟ. ಆದರೆ ದಕ್ಷತೆಯಿಂದ ಕೆಲಸಮಾಡತಕ್ಕ ಕೆಲವೇ ಜನ ನೌಕರರನ್ನು ಇಟ್ಟುಕೊಂಡು ಅಂಥವರಿಗೆ ಜಾಸ್ತಿ ಸಂಬಳ ಕೊಡಬೇಕೆಂದರೆ, ಅದು ಆಗಬಹುದು. ಆದರೆ ಅಂಥ ಜನರು ಸಿಕ್ಕಬೇಕಲ್ಲ! ನಾವೀಗ ಇದಕ್ಕಾಗಿ ಒಂದು ಸಮಿತಿಯನ್ನು ನೇಮಕಮಾಡಿದ್ದೇವೆ. ಅದಾಗಲೇ ಈಗ ಕೆಲಸವನ್ನು ನಡೆಸುತ್ತಿದೆ. ಈ ಸೀನಿಯಾರಿಟಿಯ ವಿಷಯ ಬಹಳ ತೊಡಕಿನದು. ಇದನ್ನು ಆದಷ್ಟು ಬೇಗ ಮುಗಿಸಬೇಕೆಂದಿದ್ದೇವೆ. ನಾನೀಗ ಇಲ್ಲಿಯವರೆಗೂ ಹೇಳಬೇಕಾದ್ದನ್ನೆಲ್ಲಾ ಹೇಳಿದ್ದೇನೆ.

ಇನ್ನೂ ಒಂದು ವಿಚಿತ್ರವಾದ ವಾದ ಬಂದಿದೆ. ಯಾರೋ ಒಬ್ಬರು ಹೇಳಿದ್ದಾರೆ, ಯಾವುದೋ ಒಂದು ಇಲಾಖೆಯಲ್ಲಿ ಒಂದೇ ಜಾತಿಯವರಿದ್ದಾರೆ ಎಂತ ಹೇಳಿದರು. ಇರಬಹುದು, ಆ ರೀತಿಯಾಗಿ ಕೇಳತಕ್ಕ ಕಾಲ ಈಗ ಹೋಯಿತು. ಹಿಂದೆ ನಾವೂ ಕೂಡ ಒಂದಾನೊಂದು ಕಾಲದಲ್ಲಿ ಇಂಥ ಇಲಾಖೆಯಲ್ಲಿ ಒಕ್ಕಲಿಗರೆಷ್ಟಿದ್ದಾರೆ, ಲಿಂಗಾಯಿತರೆಷ್ಟಿದ್ದಾರೆ, ಬ್ರಾಹ್ಮಣರೆಷ್ಟಿದ್ದಾರೆ ಎಂತ ಹೀಗೆಲ್ಲಾ ಕೇಳುತ್ತಿದ್ದೆವು. ಆದರೆ ಈಗ ಆ ರೀತಿ ಕೇಳತಕ್ಕದ್ದು ಅಷ್ಟು ಸರಿಯೆಂದು ಕಾಣುವುದಿಲ್ಲ. ಅಕಸ್ಮಾತ್ ಎಲ್ಲಿಯಾದರೂ ಒಂದು ಕಡೆ ಬರೀ ಒಕ್ಕಲಿಗರೇ ಇರಬಹುದು, ಇನ್ನೊಂದು ಕಡೆ ಬರೀ ಲಿಂಗಾಯಿತರೇ ಇರಬಹುದು, ಮತ್ತೊಂದು ಕಡೆ ಬರೀ ಬ್ರಾಹ್ಮಣರೇ ಇರಬಹುದು. ಆದರೆ ಅಷ್ಟಕ್ಕೆ ಒಂದು ಅಸಮಾಧಾನಪಟ್ಟುಕೊಳ್ಳುವುದು ಸರಿಯಲ್ಲ. ಇದರ ಬಗ್ಗೆ ತಮ್ಮೆಲ್ಲರಲ್ಲೂ ನನ್ನ ಒಂದು ಪ್ರಾರ್ಥನೆಯೇನೆಂದರೆ, ತಾವು ಈ ವಿಚಾರವನ್ನು ವಹಿಸಿಕೊಂಡು ಯಾರೂ ಬರಬೇಡಿ, ಇಂಥ ಒಂದು ವರ್ಗವನ್ನು ಕ್ರಿಯೇಟ್ ಮಾಡಬೇಡಿ ಅಂತ ಕೇಳಿಕೊಳ್ಳುತ್ತೇನೆ. ಇದಕ್ಕೆ ಅವಕಾಶ ಕೊಟ್ಟರೆ ದಿನವಹಿ ಹತ್ತಾರು ಜನರು ಬಂದೇ ಬರುತ್ತಾರೆ. ಕೆಲವರಿಗೆ ಇದರಿಂದ ಅನ್ಯಾಯವೂ ಆಗಬಹುದು. ಮೊನ್ನೆ ತಾನೆ ಯಾರೋ ಒಬ್ಬ ಒಂದು ಪ್ರಮೋಷನ್ ವಿಚಾರದಲ್ಲಿ ಒಬ್ಬ ಅಂಡರ್ ಸೆಕ್ರೆಟರಿಗೆ ಕವರಿನಲ್ಲಿ ನೋಟುಗಳನ್ನಿಟ್ಟು ಕಳುಹಿಸಿದ್ದ. ಅವನಿಗೆ ಶಿಕ್ಷೆಯಾಯಿತು. ಅವನು ಅಂಥ ವ್ಯಕ್ತಿಯಲ್ಲ, ಬಹಳ ಒಳ್ಳೆಯವನು ಎಂತ ಹತ್ತಾರು ಜನ ಅವನ ಬಗ್ಗೆ ಶಿಫಾರಸ್ಸಿಗೆ ಬಂದಿದ್ದರು. ಅದರಲ್ಲಿ 6 ಜನರು ಶಾಸನಸಭಾ ಸದಸ್ಯರು...

ಶ್ರೀ ಎಸ್. ಶಿವಪ್ಪ.—ಅವರೆಲ್ಲಾ ನಿಮ್ಮ ಕಡೆಯವರೇ...

ಶ್ರೀ ಎಸ್. ನಿಜಲಿಂಗಪ್ಪ.—ಅದರಲ್ಲಿ ಈ ಕಡೆಯವರೂ ಇದ್ದರು, ಆ ಕಡೆಯವರೂ ಇದ್ದರು. ಹೀಗೆ ಒಬ್ಬರು ಬಂದು ಹೇಳಿದಮೇಲೆ ಮತ್ತೆ ರಿಕಾರ್ಡನ್ನು ತರಿಸಬೇಕು, ನೋಡಿದ್ದನ್ನೇ ನೋಡಬೇಕು, ಇದರಿಂದ ಕಾಲಹರಣವಾಗುತ್ತದೆ.

ಅತ್ಯಂತ ಅಮೂಲ್ಯವಾದ ಕಾಲ ವ್ಯರ್ಥವಾಗುತ್ತದೆ. ಆದ್ದರಿಂದ ಇಷ್ಟು ಮಾತ್ರ ಹೇಳಬಲ್ಲೆ ಯಾರಿಗೂ ಅನ್ಯಾಯ ಮಾಡುವುದಕ್ಕೆ ಹೋಗುವುದಿಲ್ಲ, ಆಕಸ್ಮಿಕವಾಗಿ ಆಗಿದ್ದರೆ ಆಗಿರಬಹುದು ಅಷ್ಟೆ. ಎಷ್ಟೋ ಜನ ಕೆಲಸ ಕೊಡಿ, ಪ್ರಮೋಷನ್ ಕೊಡಿ, ವರ್ಗ ಮಾಡಿರಿ, ಎಂದು ಹೇಳಿಕೊಂಡು ಬರುತ್ತಾರೆ. ನೂರಕ್ಕೆ 99 ಜನ ಅವರವರ ಜಾತಿಯವರೇ ಬಂದಿದ್ದಾರೆಯೇ ಹೊರತು ಜಾತಿ ಬಿಟ್ಟು ಯಾರೂ ಬಂದಿಲ್ಲ. ಈ ಮಾತನ್ನು ನಾನು ಹೇಳದೇ ಇದ್ದರೆ ಕರ್ತವ್ಯ ಲೋಪವಾಗುತ್ತದೆ. ಅವರವರ ಜಾತಿಯವರಿಗೇ ಸಹಾಯ ಮಾಡಿ ಎಂದು ಹೇಳುತ್ತಾರೆ.

4-30 P.M

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಠಾಧಿಪತಿಗಳೂ ಆ ರೀತಿ ಬಂದಿರಬಹುದು.

ಶ್ರೀ ಎಸ್. ನಿಜಲಿಂಗಪ್ಪ.—ಮಹಾದಿಪತಿಗಳು ಇಂತಹ ವಿಷಯಕ್ಕೆಲ್ಲಾ ಏಕೆ ಬರುತ್ತಾರೆ? ಅವರ ಹಿಂದೆ ಇರುವವರು ಬಹಳ ಜನ ಬರುತ್ತಾರೆ, ಅವರ ಹೆಸರನ್ನು ಉಪಯೋಗಿಸಿಕೊಳ್ಳುವವರು ಬಹಳ ಜನ ಇರುತ್ತಾರೆ. ಆದ್ದರಿಂದ ಯಾರೇ ನನ್ನ ಹತ್ತಿರ ಬರಲಿ ಅಥವಾ ನನ್ನ ಸಹೋದ್ಯೋಗಿಗಳ ಹತ್ತಿರ ಬರಲಿ ಅವರೆಲ್ಲರಿಗೂ ಹೇಳಿದ್ದೇನೆ, ಅವರ ಮಾತುಗಳನ್ನು ಕೇಳಿಕೊಂಡು ಹೋಗಬೇಡಿ ಎಂದು. ಕಿವಿ ಮಾತು ಕೇಳುತ್ತೀರಿ ಎಂದು ಹೇಳುತ್ತಾರೆ ಕಿವಿ ಮಾತು ಕೂಡ ಕೇಳುವುದಿಲ್ಲ ಇದು ಬಹಳ ವ್ಯಸನಪಡತಕ್ಕ ಮಾತು. ನನ್ನ ಮೇಲೆ ಲಂಚ ತಿಂದು ಶ್ರೀಮಂತನಾಗಿದ್ದಾನೆ ಎಂದು ಹೇಳಿ ಏನು ಆಕ್ಷೇಪಣೆ ಬಂದಿದೆ ಇದು ಆಡತಕ್ಕ ಮಾತಲ್ಲ; ಮತ್ತು ನಿಮ್ಮ ಕಿವಿ ಹಿತ್ತಾಳೆ ಕಿವಿ ಎಂದು ಏನೇನೋ ಹೇಳುತ್ತಾ ಇರುತ್ತಾರೆ.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ನೀವೇ ನೇರವಾಗಿ ಲಂಚ ತೆಗೆದುಕೊಂಡಿದ್ದೀರಿ ಎಂದು ಯಾವತ್ತೂ ಅಪಾದನೆ ಹೊರಿಸಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ತಾವು ಕೊಟ್ಟಿರುವ ಪಟ್ಟಿಯಲ್ಲಿ ಬರೆದಿದ್ದೀರಿ, ರುಜು ಹಾಕಿದ್ದೀರಿ. ಅಪಾರವಾಗಿ ಹಣ ಸಂಪಾದನೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇನೆ ಎಂದು ಬರೆದಿದ್ದೀರಿ. ಅವರವರ ಪಾಪಕ್ಕೆ ಅವರವರೇ ಹೊಣೆ, ಅದು ಅವರಿಗೇ ಹೋಗಲಿ. ಕಿವಿ ಹಿತ್ತಾಳೆ, ನೀವು ಕೇಳುತ್ತಾ ಇಲ್ಲ ಎಂದು ಹೇಳುತ್ತಾ ಇದ್ದಾರೆ. ಇಂತಹ ಸಂದರ್ಭದಲ್ಲಿ ಇಂತಹವರ ಮಾತು ಕೇಳಿದ್ದೀರಿ ಎಂದು ಖಚಿತವಾಗಿ ಹೇಳಿ ಹೌದಾಗಿದ್ದರೆ ಹೌದು ಎಂದು ಹೇಳುತ್ತೇನೆ ಇಲ್ಲದೇ ಹೋದರೆ ನೀವೇ ಸಮಾಧಾನಪಟ್ಟುಕೊಳ್ಳಿ. ಈ ರೀತಿ ಹೇಳುವುದನ್ನೆಲ್ಲಾ ಬಿಡಬೇಕು. ಇಂತಹ ಮನಸ್ಸನ್ನೆಲ್ಲಾ ಬಿಟ್ಟು ಚೊಕ್ಕಟವಾಗಿ ಕೆಲಸ ಮಾಡೋಣ. ಆದ್ದರಿಂದ ಇವತ್ತು ಆಕ್ಷೇಪಣೆ ಏನು ಬಂದಿದೆ ಅದಕ್ಕೆ ಸಾಧ್ಯವಾದಷ್ಟು ಮಟ್ಟಿಗೂ ಜವಾಬು ಹೇಳಿದ್ದೇನೆ. ಯಾವುದಾದರೂ ಹೇಳದೇ ಇದ್ದರೆ ಅದನ್ನು ತಾವು ಬಂದು ನನ್ನಲ್ಲಿ ನಿರ್ದಾಕ್ಷಿಣ್ಯವಾಗಿ ಹೇಳಬಹುದು. ಯಾವ ಅಧಿಕಾರಿಯೇ ಆಗಲಿ, ಯಾವ ಜಾತಿಯೇ ಆಗಲಿ ಯಾರಿಗಾದರೂ ಅನ್ಯಾಯವಾಗುತ್ತಾ ಇದೆ ಎಂದರೆ ನಿರ್ಭಯವಾಗಿ ಬಂದು ನನಗೆ ಹೇಳಬಹುದು, ಅಂತಹ ಸಂದರ್ಭದಲ್ಲಿ ನ್ಯಾಯವನ್ನು ದೊರಕಿಸಿ ಕೊಡುವುದು ನಮ್ಮ ಆದ್ಯ ಕರ್ತವ್ಯ, ಅದನ್ನು ಮಾಡುವುದಕ್ಕೆ ಸಿದ್ಧವಾಗಿದ್ದೇನೆ ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಈ ಒಂದು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Sri S. M. KRISHNA (Maddur).—The Hon'ble Chief Minister has made reference to major irrigation, minor irrigation projects. I do not know how he omitted the medium size irrigation projects.

Sri S. NIJALINGAPPA.—I am sorry. They are entitled to the same amount of consideration. I entirely agree with you.

ಶ್ರೀ ಎಸ್. ಎಂ. ಕೃಷ್ಣ.—ಮುಖ್ಯ ಮಂತ್ರಿಗಳು ಈ ದೇಶದಲ್ಲಿ ಲಂಚ ಇಲ್ಲ ಎಂದು ಹೇಳುವುದಿಲ್ಲ ಆದರೆ ಲಂಚದ ಪ್ರಮಾಣ ಹಿಂದಿಗಿಂತಲೂ ಕಡಿಮೆಯಾಗಿದೆ ಎಂಬ ಭಾವನೆ ಬರತಕ್ಕ ಮಾತುಗಳನ್ನು ಆಡಿದ್ದಾರೆ. ಆಂಟಿಕರಪ್ಷನ್ ಇಲಾಖೆಯ ಜೊತೆಗೆ ವಿಜಿಲೆನ್ಸ್ ಕಮಿಷನರರನ್ನು ನೇಮಕ ಮಾಡಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಲಂಚ ರುಷವತ್ತು ಏನು ಜಾಸ್ತಿಯಾಗಿದೆ ಅದನ್ನು ಮೂಲೋತ್ಪಾಟನೆ ಮಾಡಲಿಕ್ಕೆ ಏನಾದರೂ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಅಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ವಿಜಿಲೆನ್ಸ್ ಕಮಿಷನ್ ನೇಮಕ ಮಾಡಿದ್ದರಿಂದ ಲಂಚ ರುಷುವತ್ತು ಜಾಸ್ತಿಯಾಗಿದೆ ಎಂದು ಅರ್ಥವಲ್ಲ. ಇದ್ದದ್ದನ್ನು ಹಿಡಿದುಹಾಕಬೇಕೆಂಬ ಉದ್ದೇಶದಿಂದ ಮಾಡಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗುಂಡಸಿ).—ರಿವರ್ ಬೋರ್ಡನ್ನು ಏಕೆ ಮಾಡಬಾರದು?

ಶ್ರೀ ಟಿ. ಎನ್. ಮಾದಪ್ಪಗೌಡ (ರಾಮನಗರ).—ಉದ್ದೇಶಪೂರ್ವಕವಾಗಿ ಜಾತೀಯತೆಯನ್ನು ಎತ್ತಿದ್ದಾರೆ ಎಂದು ಹೇಳಿದರು, ನಾನು ಉದ್ದೇಶಪೂರ್ವಕವಾಗಿ ಕೇಳುವವನಲ್ಲ. ಈಗಲಾದರೂ ಪಿ.ಡಬ್ಲ್ಯು.ಡಿ.ನಲ್ಲಿ ಏನಾಗಿದೆ ಅದನ್ನು ವಿಮರ್ಶೆ ಮಾಡಿ ಮುಂದಿನ ಸಾರಿ ಉತ್ತರ ಕೊಡುವಾಗ ಸಮಾಧಾನ ಕೊಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಬಂದರೆ ಅದು ಏನಾಗಿದೆ ಎಂಬುದನ್ನು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಉಪಸಚಿವರು ಈ ಬೇಡಿಕೆಗಳ ಮೇಲೆ ಉತ್ತರ ಕೊಟ್ಟಿದ್ದಾರೆ, ಸಾಕಾದಷ್ಟು ಸವಿಸ್ತಾರವಾಗಿ ಅವರು ಹೇಳಿದ್ದಾರೆ. ಬಹುಶಃ ನಾನು ಹೇಳುವುದಕ್ಕೆ ಅಷ್ಟೊಂದು ಅವಕಾಶವಿಲ್ಲವೇನೋ ಎಂದು ನನಗೆ ಅನಿಸುತ್ತಾ ಇದೆ. ಪ್ರತಿವರ್ಷವೂ ಬಜೆಟ್ ಭಾಷಣದಲ್ಲಿ ಮೊದಲನೆಯದಾಗಿ ಆ ವರ್ಷ ಪಬ್ಲಿಕ್‌ವರ್ಕ್ಸ್ ಇಲಾಖೆ ಸಾಧಿಸಿದಂತಹ ಸಾಧನೆ ಏನು ಎಂಬುದನ್ನು ಹೇಳುವಂತಹ ವ್ರತ ಹಾಕಿಕೊಂಡು ಬರುತ್ತಾ ಇದ್ದೇನೆ. ಬಜೆಟ್ ಚರ್ಚೆ ಎಂದರೆ ವರ್ಷದಲ್ಲಿ ಆದ ಕೆಲಸದ ಒಂದು ಬ್ಯಾಲೆನ್ಸ್‌ಷೀಟ್ ಎಂದು ಹೇಳುವರೆ ತಪ್ಪಾಗಲಿಕ್ಕೆ ಇಲ್ಲ. ಏನು ಸಾಧಿಸಿದ್ದೇವೆ, ಏನು ಸಾಧಿಸಬಹುದಾಗಿತ್ತು ಎಂಬುದು ಅಭಿಪ್ರಾಯದ ಮಾತು. ಆದ್ದರಿಂದ ಏನು ಸಾಧಿಸಿದ್ದೇವೆ ಎಂಬುದನ್ನು ಸೂಕ್ಷ್ಮವಾಗಿ ಹೇಳುವಂತಹದು ನಮ್ಮ ಕರ್ತವ್ಯವಾಗಿದೆ. 1964-65ನೇ ಸಾಲಿನಲ್ಲಿ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಏನು ಆಗಿದೆ ಎಂಬುದನ್ನು ಹೇಳಬಯಸುತ್ತೇನೆ. ಎಲ್ಲಕ್ಕೂ ದೊಡ್ಡದಾದ, ಮೈಸೂರಿನ ಇತಿಹಾಸದಲ್ಲೇ ದೊಡ್ಡದಾದ ಒಂದು ಮಹತ್ ಸಾಧನೆ-ಅನೇಕ ವರ್ಷಗಳಿಂದ ಎಲ್ಲ ಕನ್ನಡಿಗರ ಕನಸು ಆದಂತಹ ಶರಾವತಿ ವಿದ್ಯುತ್ ಶಕ್ತಿ ಯೋಜನೆ ಕಾರ್ಯಗತವಾಗಿದೆ. ಶರಾವತಿ ಯೋಜನೆಯ ಬಗ್ಗೆ ಮತ್ತು ಅದರಿಂದ ಉತ್ಪತ್ತಿಯಾಗುವ ಪವರ್ ಬಗ್ಗೆ ಬಹಳ ದಿವಸಗಳಿಂದ ಜನರು ಕಾತರರಾಗಿದ್ದರು. ಮೊನ್ನೆ ನಮ್ಮ ದೇಶಕ್ಕೆ ಪ್ರಧಾನ ಮಂತ್ರಿಗಳು ದಯಮಾಡಿಸಿ ಮೊದಲನೆಯ ಯೂನಿಟ್ಟನ್ನು ಕಮಿಷನ್ ಮಾಡಿದಮೇಲೆ ಮೊದಲೇನೊಂದು ವಿದ್ಯುಚ್ಛಕ್ತಿಗೆ ಬರಗಾಲವಿತ್ತು ಅದು ದೂರವಾಗಿದೆ. ಒಂದು ಹಾರ್ಸ್‌ಪವರ್ ಬೇಕಾದರೂ ಕೂಡ ಎಂ. ಎಸ್. ಇ. ಬಿ. ಆಫೀಸಿಗೆ ಹೋಗಿ ಒಂದೇ ಸಮನೆ ಹೆಣಗ ತೆಗೆದುಕೊಳ್ಳಬೇಕಾಗಿತ್ತು. ಈಗ ಎಷ್ಟು ಬೇಕಾದರೂ ಪವರ್ ಕೊಡಲು ತಯಾರಿದ್ದೇವೆ. ಇದನ್ನು ಘಂಟಾಘೋಷವಾಗಿ ಹೇಳಬಹುದು. ಈ ಪರಿಸ್ಥಿತಿ ಮೈಸೂರು ದೇಶದಲ್ಲಿ ಮೊದಲನೆಯ ಸಲ ಬಂದಿದೆ. ಇಂಥ ಸಂದರ್ಭದಲ್ಲಿ ಸಂಬಂಧಪಟ್ಟ ಯೋಜನೆ ಕಾರ್ಯಗತ ಮಾಡುವುದರಲ್ಲಿ ಇಂಜನಿಯರುಗಳು, ಕಂಟ್ರಾಕ್ಟರುಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಹಗಲೂ ರಾತ್ರಿ ಕಷ್ಟಪಟ್ಟು ದುಡಿದ ಲೇಬರ್ ಮುಂತಾದವರಿಗೆ ಮತ್ತು ಈ ಸಭೆಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಇದಲ್ಲದೆ ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮಲ್ಲಿ 4-5 ಜನ ಚೀಫ್ ಎಂಜಿನಿಯರುಗಳಿದ್ದಾರೆ. ಆದರೆ ಕೇಡರ್ ಒಂದೇ. ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ಬೈಫರ್ಕೇಟ್ ಮಾಡಿಲ್ಲ, ಕೆಲವು ದೇಶಗಳಲ್ಲಿ ಇರಿಗೇಷನ್, ರಸ್ತೆ ಕಟ್ಟಡಗಳಿಗೆ ಎರಡು ಕೇಡರ್ ಮಾಡಿದ್ದಾರೆ. ಆದರೆ ಮೈಸೂರು ದೇಶದಲ್ಲಿ ಮಾಡಿಲ್ಲ. ಅದರ ಸಲುವಾಗಿ ಬೈಫರ್ಕೇಟ್ ಮಾಡಿಲ್ಲದಿರುವಾಗ ಅಸಿಸ್ಟೆಂಟ್ ಎಂಜಿನಿಯರು ಮತ್ತು ಅವರ ಕೆಳಗಿರುವ ಜನರ ಮೇಲಿನ ಕಂಟ್ರೋಲ್, ವರ್ಗ ಮುಂತಾದುವುಗಳ ಬಗ್ಗೆ ಅನೇಕ ಚೀಫ್ ಎಂಜಿನಿಯರುಗಳಿರುವುದರಿಂದ ಜವಾಬ್ದಾರಿ ಯಾರಿಗೆ ವಹಿಸಬೇಕು ಎಂಬ ಪ್ರಶ್ನೆ ಬರುತ್ತದೆ. ಅವನ್ನು ಯೋಚಿಸಿ ಆ ಸಮಸ್ಯೆ ಪರಿಹಾರ ಮಾಡಲು ಒಂದು ನಿರ್ಣಯಮಾಡಿದ್ದೇವೆ. ಅದಕ್ಕೆ ಬೋರ್ಡ್ ಇದೆ, ಚೀಫ್ ಎಂಜಿನಿಯರುಗಳ ಒಂದು ಬೋರ್ಡ್ ಮಾಡಿ ಅದಕ್ಕೆ ಸೀನಿಯರ್ ಮೋಸ್ಟ್ ಚೀಫ್ ಎಂಜಿನಿಯರನ್ನು ಛೇರ್ಮನ್ ಮಾಡಿ ಅಸಿಸ್ಟೆಂಟ್ ಎಂಜಿಯರು ಮುಂತಾದವರ ವರ್ಗಾವರ್ಗಿ ಅಥವಾ ಅವರಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದು ಮುಂತಾದುವು ಆ ಬೋರ್ಡಿನ ಮೂಲಕ ನಡೆಯಬೇಕು ಎಂದು ನಿರ್ಣಯ ಮಾಡಿದ್ದೇವೆ. ಇದರ ಸಲುವಾಗಿ ಕೂಲಂಕಷವಾಗಿ ವಿಚಾರಮಾಡಿ ಈ ಪ್ರಯತ್ನ ಮಾಡಿರುವುದೇಕೆ, ಇಷ್ಟೊಂದು ವಿಚಾರಮಾಡಬೇಕಾದ ಪರಿಸ್ಥಿತಿ ಹೇಗೆ ಬಂತು ಅಂದರೆ ಈ ದಿವಸ ಮೊದಲನೆಯ ಸಲ ಈ ದೇಶದಲ್ಲಿ ಚೀಫ್ ಎಂಜಿನಿಯರಾಗಿರುವವರು ಸುಮಾರು 15 ವರ್ಷ ಹಾಗೆಯೇ ಇರುತ್ತಾರೆ. ಇದನ್ನು ಎಲ್ಲರೂ ತಿಳಿಯಬೇಕು. ಇದನ್ನು ನನ್ನ ಮಟ್ಟಿಗೆ ಒಂದು ರೀತಿಯಲ್ಲಿ ವಿಚಾರ ಮಾಡುತ್ತಿದ್ದೇನೆ. ಈಗಿರುವ ಚೀಫ್ ಎಂಜಿನಿಯರ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಸುಧಾರಣೆಯಾಗದಿದ್ದರೆ ಮುಂದೆ ಎಂದೂ ಆಗುವುದಿಲ್ಲ. ಇಲ್ಲಿಯವರೆಗೆ ಯಾವ ಚೀಫ್ ಎಂಜಿನಿಯರು ಬಂದರೂ 3 ವರ್ಷ ಇದ್ದರೆ ಬಹಳ ಹೆಚ್ಚಾಗಿತ್ತು. ಅಷ್ಟರಲ್ಲೇ ಅವರು ರಿಟೈರ್ ಆಗುತ್ತಿದ್ದರು. ಈ ದಿವಸ ಮುಖ್ಯವಾಗಿ ಚೀಫ್ ಎಂಜಿನಿಯರಾಗಿ ಬಂದಿರುವವರು ಯಾರೇ ಆಗಲಿ ಈ ಜನ ಸುಮಾರು 15 ವರ್ಷಗಳವರೆಗಿರುತ್ತಾರೆ. ಬಹುಶಃ ಆಲ್ ಇಂಡಿಯ ಎಂಜಿನಿಯರ್ಸ್ ಸರ್ವಿಸ್ ಬಂದರೆ ಅವರು 58ರಿಂದ 60 ವರ್ಷ ವಯಸ್ಸಾಗುವವರೆಗೆ ಇರಬಹುದು. ಈ ಜನ ಸಮಾಧಾನದಿಂದ ವಿಚಾರಮಾಡಿ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ಮಾಡಲು ತಕ್ಕಂತೆ ಯೋಗ್ಯ ನಿರ್ಣಯ ಮಾಡುವುದು ಅವಶ್ಯಕವಾಗಿದೆಯೆಂದು ಭಾವಿಸಿ, ಇದಕ್ಕಾಗಿ ಒಂದು ಬೋರ್ಡನ್ನು ರಚಿಸಿ ಅದಕ್ಕೆ ತಕ್ಕ ಕೆಲಸವನ್ನು ವಹಿಸಿದ್ದೇವೆ. ಈ ದಿವಸ ಎಲ್ಲ ಚೀಫ್ ಎಂಜಿನಿಯರುಗಳಿಗೂ ಒಂದು ಸಮಾಧಾನವಿದೆ, ಅವರು ಒಮ್ಮತದಿಂದ ಕೆಲಸಕಾರ್ಯ ಮಾಡುತ್ತಿದ್ದಾರೆ. ಸಿಬ್ಬಂದಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನೂ ಅವರೇ ಮಾಡುತ್ತಿದ್ದಾರೆ. ಅನೇಕ ಸಲ ಬಜೆಟ್ ಮೇಲೆ ಮಾತನಾಡುವಾಗ ವರ್ಕ್‌ಛಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್ ವಿಚಾರ ಬೇರೆ ಹೇಳಿದ್ದಾರೆ. ಈಗ ಸುಮಾರು 8 ಸಾವಿರ ಜನ ವರ್ಕ್‌ಛಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ ಕೆಲಸಮಾಡುತ್ತಿದ್ದಾರೆ. ಅನೇಕರು ಡ್ರೈವರು

ಕ್ಲೀನರು, ಸೂಪರ್‌ವೈಜರುಗಳಾಗಿ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ತಪಶೀಲನ್ನು ಹೇಳುವ ಅವಶ್ಯಕತೆ ಇಲ್ಲ, ಈ 8 ಸಾವಿರ ಜನರನ್ನು ಖಾಯಂ ಮಾಡಬೇಕೆಂಬ ಬೇಡಿಕೆ ಅನೇಕ ದಿನಗಳಿಂದ ಇತ್ತು. ಎಲ್ಲರಿಗೂ ಖಾಯಂ ಮಾಡುವುದಕ್ಕಾಗುವುದಿಲ್ಲ, ಯಾರಿಗೆ ಸಾಧ್ಯವೋ ಅವರಿಗೆ ಮಾಡುತ್ತೇವೆ ಎಂದು ಹೇಳಿದ್ದೆ. ಈ ಸಮಸ್ಯೆ 1957ರಿಂದ ಇಲ್ಲಿಯವರೆಗೂ ಸರಕಾರದ ಪರಿಶೀಲನೆಯಲ್ಲಿತ್ತು. ಈಗ ಒಂದು ನಿರ್ಣಯವಾಗಿದೆ. ಅದನ್ನು ಹೇಳುವುದು ಅವಶ್ಯಕ ಎಂದು ಭಾವಿಸಿದ್ದೇನೆ. ಈಗ 16 ನೂರು ಮಂದಿಗೆ ಖಾಯಂ ಮಾಡಬೇಕು, ಸರ್ಕಾರಿ ನೌಕರರೆಂದು ಭಾವಿಸಬೇಕು ಎಂದು ನಿರ್ಣಯಮಾಡಿ ಆಜ್ಞೆ ಮಾಡಿದ್ದೇವೆ. ಇದರಿಂದ ಎಲ್ಲರಿಗೂ ಸಮಾಧಾನ ವಾಯಿತೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಬಹಳ ಮಟ್ಟಿಗೆ 10ರಿಂದ 30 ವರ್ಷಗಳವರೆಗೆ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದವರಿಗೆ ಬಹಳ ಪರಿಹಾರ ದೊರೆತಿದೆ ಎಂದು ತಮ್ಮ ಮುಂದೆ ಹೇಳುತ್ತಿದ್ದೇನೆ. ನರೆ ಪ್ರಾಂತದಲ್ಲಿ ಯಾವರೀತಿ ಸಿಬ್ಬಂದಿಯಿದೆ, ಯಾವ ಕಂಡೀಷನ್ ಮೇಲೆ ಅಬ್‌ಸಾರ್ಬ್ ಮಾಡುತ್ತಾರೆ ಎಂದು ಪರಿಶೀಲನೆಮಾಡುವುದಕ್ಕೆ ಒಬ್ಬ ಆಫೀಸರನ್ನು ಹಾಕಿ ನೆರೆ ಪ್ರಾಂತದ ಅಂಕಿಅಂಶ ತರಿಸಿ ಒಂದು ನಿರ್ಣಯಮಾಡಿದೆ. ಬಹುಶಃ ಹೋದಸಲ ಹೀಗೆ ಮಾಡುವು ದಾಗಿ ಹೇಳಿದ್ದೆ. ಈ ದಿವಸ ನಿರ್ಣಯಮಾಡಿ 16 ನೂರು ಮಂದಿಗೆ ಖಾಯಂ ಮಾಡಿ ಅವರಿಗೆ ಗ್ರಾಚ್ಯುಟಿ ಕೊಡಬೇಕೆಂದು ಗೊತ್ತುಮಾಡಿದ್ದೇವೆ. ಅವರ ಸ್ಕೇಲು ಸ್ವಲ್ಪ ಉತ್ತಮಪಡಿಸುವುದಕ್ಕೆ 1964ರಲ್ಲಿ ನಿರ್ಣಯಮಾಡಿ ಸರಕಾರಿ ಆಜ್ಞೆ ಹೊರಡಿಸಿದ್ದೇವೆ. ಅದರ ವಿವರವನ್ನು ಹೇಳುವುದಿಲ್ಲ.

ಶ್ರೀ ಶಿವಪ್ಪನವರು ಮತ್ತು ಅನೇಕ ಮಾನ್ಯ ಸದಸ್ಯರು ಈ ಬೇಡಿಕೆಯಮೇಲೆ ಮಾತನಾಡುತ್ತಾ ಈ ದಿವಸ ಅಂದಾಜುಗಳು ತಿದ್ದುಪಡಿಯಾಗುತ್ತಿವೆ, ಸರಿಯಾಗಿ ಇನ್‌ವೆಸ್ಟಿಗೇಷನ್ ಆಗುತ್ತಿಲ್ಲ, ಇನ್‌ವೆಸ್ಟಿಗೇಷನ್ ನ್ಯೂನತೆಗಳಿಂದ ಕೂಡಿದೆ, ಇದರಿಂದ ಹೆಚ್ಚು ಹಣ ಹಾಳಾಗುತ್ತಿದೆ ಎಂದು ಹೇಳಿ ರುವುದು ಇದೇನೂ ಮೊದಲನೆಯ ಸಲವಲ್ಲ, ಪ್ರತಿಯೊಂದು ಸಲವೂ ಹೇಳುತ್ತಿರುವುದೇ ಆಗಿದೆ. ಇದು ಪರಿಶೀಲನೆಯಲ್ಲಿತ್ತು. ಕೇಂದ್ರದವರೂ ಕೂಡ ಇವರ ಸಲುವಾಗಿ ಒಂದು ಪ್ರತ್ಯೇಕ ಸೆಲ್ ಮಾಡಿ ಎಂದು ಒತ್ತಾಯಮಾಡಿದ್ದರು. ಅದರ ಪ್ರಕಾರ, ಈ ಮಾನ್ಯ ಸಭೆಯ ಸದಸ್ಯರಿಂದ ಬಂದ ಸಲಹೆಯ ಪ್ರಕಾರ ವಿಚಾರಮಾಡಿ ಪ್ರತ್ಯೇಕ ಇನ್‌ವೆಸ್ಟಿಗೇಷನ್‌ಗೆ ಒಬ್ಬ ಛೀಫ್ ಎಂಜಿನಿಯರು ಮಾಡ ಬೇಕೆಂದು ಆರ್ಡರುಮಾಡಿದ್ದೇವೆ. ಇಷ್ಟರಲ್ಲೇ ಇದಕ್ಕೆ ಒಬ್ಬರನ್ನು ನೇಮಕಮಾಡಲಿದ್ದೇವೆ. 8-10 ದಿವಸಗಳಲ್ಲಿ ಬಹುಶಃ "ಚೀಫ್ ಎಂಜಿನಿಯರ್ ಫಾರ್ ಇನ್‌ವೆಸ್ಟಿಗೇಷನ್ ಅಂಡ್ ಡಿಸೈನ್ಸ್" ಎಂದು ನೇಮಕವಾಗಬಹುದು. ಇದು ಅವಶ್ಯಕ. ಇವತ್ತು ಒಂದು ಇರಿಗೇಷನ್ ಪ್ರಾಜೆಕ್ಟ್ ತೆಗೆದುಕೊಳ್ಳಿ, ಇನ್‌ವೆಸ್ಟಿಗೇಷನ್ ಮಾಡುವವರು ಮತ್ತು ಎಗ್ಸಿಕ್ಯೂಷನ್ ಮಾಡುವವರು ಒಂದೇ ಇಲಾಖೆಯವರು. ಅದಕ್ಕೆ ಬೇರೆ ವ್ಯವಸ್ಥೆ ಇರಲಿಲ್ಲ. ಯಾರು ಇನ್‌ವೆಸ್ಟಿಗೇಟ್ ಮಾಡಿ ಪ್ಲಾನು ಮತ್ತು ಅಂದಾಜನ್ನು ಮಾಡುವರೋ ಆ ಏಜೆನ್ಸಿಗೂ ಎಗ್ಸಿಕ್ಯೂಷನ್ ಏಜೆನ್ಸಿಗೂ ಸಂಬಂಧವಿರ ಬಾರದು, ಸ್ವತಂತ್ರವಾಗಿರಬೇಕು. ಅವರ ಕೆಲಸ ಯಾವ ಎಸ್ಟಿಮೇಟ್, ರಸ್ತೆ ಮಾಡಬೇಕಾದರೂ ಮೇಜರ್ ಇರಿಗೇಷನ್ ಸಲುವಾಗಿ ಅಂದಾಜು, ಡಿಸೈನು, ಪ್ಲಾನು, ಇನ್‌ವೆಸ್ಟಿಗೇಷನ್ ಮಾಡುವುದರ ಸಲುವಾಗಿ ಪ್ರತ್ಯೇಕ ಆರ್ಗನೈಜೇಷನ್ ಇರಬೇಕು ಎಂದು ಕೇಂದ್ರ ಸರಕಾರದವರು ಒತ್ತಾಯ ಮಾಡಿದ್ದರು; ಮತ್ತು ಈ ಸಭೆಯ ಅನೇಕರು ಸಲಹೆಮಾಡಿದ್ದರು. ಆ ಪ್ರಕಾರ ಈಗಾಗಲೇ ನಿರ್ಣಯಮಾಡಿ ಪ್ರತ್ಯೇಕ ಇನ್‌ವೆಸ್ಟಿಗೇಷನ್ ಮತ್ತು ಡಿಸೈನ್‌ಗೆ ಒಬ್ಬ ಚೀಫ್ ಎಂಜಿನಿಯರನ್ನು ನೇಮಕಮಾಡಿದ್ದೇವೆ. ಅವರ ಕೆಳಗೆ ಇತರರು ಬರುತ್ತಾರೆ; ಬಹುಶಃ ಒಬ್ಬ ಹೊಸ ಚೀಫ್ ಎಂಜಿ ನಿಯರು ಬರಬಹುದು. ಈಗಾಗಲೆ ಎರಡನೆಯ ಚೀಫ್ ಎಂಜಿನಿಯರ ಕೆಳಗಿರುವ ಎಸ್. ಇ. ಮಟ್ಟದವರನ್ನು ವರ್ಗಮಾಡುವುದಕ್ಕೆ ಇಲಾಖೆಯನ್ನು ಪೂರ್ಣವಾಗಿ ರೀಆರ್ಗನೈಜ್ ಮಾಡಿ ದ್ದೇವೆ. ಒಂದು ಇನ್‌ವೆಸ್ಟಿಗೇಷನ್ ಜೋನ್ ಮಾಡಿದ್ದೇವೆ; ಅದು ಮಾಡಿರುವುದು ಈ ವರ್ಷ. ಅದೂ ಅಲ್ಲದೆ ಈಗ ಅನೇಕ ರಸ್ತೆ, ಕಟ್ಟಡ, ಕೆರೆ, ಪ್ರಾಜೆಕ್ಟ್ ಮಾಡುತ್ತಿದ್ದೇವೆ. ಅದಕ್ಕೆ ಒಂದು ಸ್ಟ್ಯಾಂಡರ್ಡ್ ಸ್ಪೆಸಿಫಿಕೇಷನ್ ಹೊಸ ಮೈಸೂರಾದಮೇಲೆ ಇರಲಿಲ್ಲ, ಹಳೇ ಮೈಸೂರಿನಲ್ಲಿ ಒಂದು ಇತ್ತು, ಮುಂಬಯಿ ಕರ್ಣಾಟಕದಲ್ಲಿ ಮತ್ತು ಹಳೆಯ ಹೈದರಾಬಾದಿನಲ್ಲಿ ಒಂದು ರೀತಿಯಿಂದ ಮಾಡುತ್ತಿದ್ದರು.

ಲೋಕೋಪಯೋಗಿ ಇಲಾಖೆಯಲ್ಲಿ ಏಕರೂಪವಾದ ಒಂದು ಪಾಕೆಟ್ ಹ್ಯಾಂಡ್ ಬುಕ್ ನಮ್ಮಲ್ಲಿಲ್ಲ. ಅಂಥ ಒಂದು ಪುಸ್ತಕವನ್ನು ಮಾಡಬೇಕು ಎಂದು ವಿಚಾರ ಮಾಡುತ್ತಿದ್ದೇವೆ. ಆ ಕೆಲಸಕ್ಕೆ ಒಬ್ಬ ರಿಟೈರ್ ಆದ ಚೀಫ್ ಇಂಜಿನಿಯರನ್ನೋ ಅಥವಾ ಒಬ್ಬ ದಕ್ಷರಾದ ಇಂಜಿನಿಯರನ್ನೋ ನೇಮಿಸಬೇಕು ಎನ್ನುವುದು ಸರ್ಕಾರದ ಗಮನದಲ್ಲಿದೆ. ಒಂದು ಏಕರೂಪವಾದ ಹ್ಯಾಂಡ್‌ಬುಕ್ ರಾಜ್ಯಾದ್ಯಂತ ತರಬೇಕು ಎಂದು ಇದ್ದೇವೆ. ಬಿಲ್ಡಿಂಗ್, ವಾಟರ್ ಸಪ್ಲೈ, ಮೈನರ್ ಇರಿಗೇಷನ್ ಇವಕ್ಕೆಲ್ಲ ಬೊಂಬಾಯಿ ಪಿ.ಡಬ್ಲ್ಯೂ.ಡಿ. ಹ್ಯಾಂಡ್ ಬುಕ್ ಏನಿದೆ ಅದನ್ನು ಅನುಸರಿಸಬೇಕು ಎಂದು

(ಶ್ರೀ ವೀರೇಂದ್ರ ಪಾಟೀಲ್)

ಆದೇಶ ಕೊಟ್ಟಿದ್ದೇವೆ. ಅದೇ ರೀತಿ ರಸ್ತೆ ಮತ್ತು ಸೇತುವೆಗಳ ಸಲುವಾಗಿ ಮದ್ರಾಸ್ ಹೈ ವೇ ಬಿಲ್ ಮತ್ತು ಇಂಡಿಯನ್ ರೋಡ್ ಕಾಂಗ್ರೆಸ್‌ನವರು ಏನು ಸ್ಪೆಸಿಫಿಕೇಷನ್ ಹಾಕುತ್ತಾರೆ ಅದನ್ನು ಅನುಸರಿಸಬೇಕು ಎಂದು ತಿಳಿಸಿ ಏಕರೂಪತೆಯನ್ನು ರಾಜ್ಯದಲ್ಲಿ ಈಗಾಗಲೇ ತಂದಿದ್ದೇವೆ.

ನಮ್ಮಲ್ಲಿ ಕೋಟ್ಯಾವಧಿ ರೂಪಾಯಿಗಳ ಯಂತ್ರಗಳು ಕೆಲಸಕ್ಕೆ ಬಾರದೆ ಬಿದಿವೆ. ಅನೇಕ ಯಂತ್ರಗಳು ಜಂಗುತಿಂದು ಹೋಗುತ್ತಿವೆ ಮತ್ತು ರಿಪೇರಿ ಇಲ್ಲದೆ ಬಿದ್ದಿವೆ. ಒಂದು ಅಡ್‌ಹಾಕ್ ಕಮಿಟಿಯನ್ನು ರಚನೆ ಮಾಡಿ ಯಾವ ಯಾವ ಯಂತ್ರಗಳು ರಿಪೇರಿ ಆಗುವುದಕ್ಕೆ ಶಕ್ಯವಿವೆ, ಯಾವುದು ರಿಪೇರಿ ಆಗುವುದಕ್ಕೆ ಶಕ್ಯವಿಲ್ಲ, ಯಾವುದನ್ನು ಸ್ಕ್ರಾಪ್ ಮಾಡಬೇಕು ಎನ್ನುವುದರ ಬಗ್ಗೆ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಆ ಪ್ರಕಾರ ಮಾಡಬೇಕೆಂದಿದ್ದೇವೆ. ಯಾವುದು ಕೆಲಸಕ್ಕೆ ಬರುವುದಿಲ್ಲವೋ ಅದನ್ನು ಸ್ಕ್ರಾಪ್ ಮಾಡಿ ಹರಾಜು ಮಾಡಿ ಎಂದು ಹೇಳುವುದಕ್ಕೆ ಮತ್ತು ರಿಪೇರಿ ಮಾಡಲು ಸಾಧ್ಯವಿರುವುದನ್ನು ರಿಪೇರಿ ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಒಂದು ಮೆಕ್ಯಾನಿಕಲ್ ಆರ್ಗನೈಜೇಷನ್ ಬೇಕು. ಅದಿಲ್ಲದೆ ಇಷ್ಟೆಲ್ಲ ಮೆಷಿನರಿ ರಿಪೇರಿ ಮಾಡುವುದಕ್ಕಾಗುವುದಿಲ್ಲ ಎನ್ನುವುದರ ಸಲುವಾಗಿ ಒಂದು ಸೆಂಟ್ರಲ್ ಮೆಕಾನಿಕಲ್ ಆರ್ಗನೈಜೇಷನ್ ಮಾಡುವುದಕ್ಕೆ, ಅದರಲ್ಲಿ ರೀಜನಲ್ ಮೆಕ್ಯಾನಿಕಲ್ ಯೂನಿಟ್ಸ್ ಮಾಡುವುದಕ್ಕೆ ಸೆಂಟ್ರಲ್ ಮೆಕ್ಯಾನಿಕಲ್ ಯೂನಿಟ್ಟಿಗೆ ಜವಾಬ್ದಾರಿಯುತವಾಗಿರುವಂತೆ ಸಬ್-ಡಿವಿಜನ್ನುಗಳನ್ನು ಮಾಡುವುದಕ್ಕೆ ಈ ವರ್ಷ ನಿರ್ಣಯ ತೆಗೆದುಕೊಂಡಿದ್ದೇವೆ. ಇದು ಒಂದು ಯೋಗ್ಯವಾದ ಮಹತ್ವವಾದ ನಿರ್ಣಯ ಎಂದು ತಮ್ಮ ಮುಂದೆ ಹೇಳುತ್ತಿದ್ದೇನೆ.

ಶ್ರೀಮಾನ್ ಶಿವಪ್ಪನವರು "ಕ್ವಾಲಿಟಿ ಆಫ್ ವರ್ಕ್ ಸಫರ್ ಆಗುತ್ತಿವೆ", ಎಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಬಹಳ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಕಾರ್ಯಗಳನ್ನು ಮಾಡುತ್ತಿರುವಾಗ ಅವರ ಕ್ವಾಲಿಟಿ ಯಾವ ರೀತಿಯಿಂದ ಇರಬೇಕೋ ಆ ರೀತಿ ಇರಲಾರದಂಥ ಪರಿಸ್ಥಿತಿ ಬಂದಿದೆ. ಅದರ ಸಲುವಾಗಿ ಕ್ವಾಲಿಟಿ ಕಂಟ್ರೋಲ್ ಮಾಡಬೇಕು, ಕ್ವಾಲಿಟಿ ಚೆನ್ನಾಗಿರುವಂತೆ ನಮ್ಮ ಅಧಿಕಾರಿಗಳು ನೋಡಿಕೊಳ್ಳಬೇಕು ಎನ್ನುವುದರ ಸಲುವಾಗಿ ಈಗಾಗಲೇ ಪ್ರತಿಯೊಂದು ಡಿವಿಜನಲ್ಲಿಯೂ ಫೀಲ್ಡ್ ಟೆಸ್ಟಿಂಗ್ ಎಕ್ವಿಪ್‌ಮೆಂಟ್ ಕೊಡಬೇಕು ಎಂದು ನಿರ್ಣಯ ಮಾಡಿದ್ದೇವೆ. ಯಾವುದೋ ಒಂದು ಇಟ್ಟಂಗಿ ಇರುತ್ತದೆ. ಅದನ್ನು ಉಪಯೋಗ ಮಾಡಲು ಕಂಟ್ರಾಕ್ಟರನು ಎಲ್ಲಿಂದಲೋ ತರುತ್ತಾನೆ. ಇಟ್ಟಂಗಿ ಗಟ್ಟಿಯಾಗಿದೆಯೋ ಇಲ್ಲವೋ ಎನ್ನುವುದನ್ನು ಪರೀಕ್ಷೆ ಮಾಡಬೇಕಾದರೆ ತಕ್ಕ ಸಲಕರಣೆಗಳು ಬೇಕು. ಅದೇ ರೀತಿ ಸುಣ್ಣದ ಗಾರೆಯಲ್ಲಿ ಸ್ಟ್ರೆಂಗ್ತ್ ಇದೆಯೋ ಇಲ್ಲವೋ ಗೊತ್ತಾಗುವುದಿಲ್ಲ. ಕಣ್ಣು ಮುಚ್ಚಿ ಸಿಕ್ಕಿದ ವಸ್ತುಗಳನ್ನು ಉಪಯೋಗಿಸಿರುವುದರಿಂದ ಆಗಿರುವಂಥ ತೊಂದರೆಯ ನಿದರ್ಶನಗಳು ನಮ್ಮ ಮುಂದೆ ಬಂದಿವೆ. ಆದುದರಿಂದ ಎಲ್ಲ ಡಿವಿಜನ್ನುಗಳಿಗೂ ಮೆಟೀರಿಯಲ್ ಟೆಸ್ಟ್ ಮಾಡುವ ಸಲಕರಣೆಗಳನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ.

ಬೆಂಗಳೂರಿನಲ್ಲಿ ಇಟ್ಟಂಗಿಗಳ ಬೆಲೆ ಸಾವಿರಕ್ಕೆ 65 – 70 ರೂಪಾಯಿ ಇದೆ. ಇಲ್ಲಿ ಇಟ್ಟಂಗಿಗಳು ಹಾಟ್ ಕೇಕ್ಸ್‌ನಂತೆ ಮಾರಾಟವಾಗುತ್ತಿವೆ. ಬೆಳಗ್ಗೆ ಎದ್ದರೆ ಒಂದೊಂದು ಮನೆಯನ್ನು ಕಟ್ಟುವುದಕ್ಕೆ ಪ್ರಾರಂಭಿಸುತ್ತಾರೆ. ಸಾವಿರಾರು ಮನೆಗಳನ್ನು ಬೆಂಗಳೂರಿನಲ್ಲಿ ಕಟ್ಟುತ್ತಿದ್ದಾರೆ. ಎಷ್ಟು ಜನ ಇಟ್ಟಂಗಿಗಳನ್ನು ತಯಾರು ಮಾಡಿದರೂ ಕೂಡ ಸಾಲದು. ನಮಗೆ ಸ್ಟಾಂಡರ್ಡ್ ಇಟ್ಟಂಗಿಗಳು ಸಿಕುತ್ತಿಲ್ಲ. ಲೋಕೋಪಯೋಗಿ ಇಲಾಖೆ ಹೆಚ್ಚು ವಸ್ತುಗಳನ್ನು ಬಳಸುತ್ತದೆ. ಆದುದರಿಂದ ಇಲಾಖೆಯಿಂದಲೇ ಏಕೆ ಇಟ್ಟಂಗಿಗಳನ್ನು ತಯಾರು ಮಾಡಬಾರದು ಎನ್ನುವ ವಿಚಾರವನ್ನು ವಿಚಾರ ಮಾಡಲಾಗುತ್ತಿದೆ. ಈಗ ಮದ್ರಾಸಿನಲ್ಲಿ ಇಟ್ಟಂಗಿಗಳನ್ನು ತಯಾರು ಮಾಡುವ ಒಂದು ಯೂನಿಟ್ ಇದೆ. ರುಮೇನಿಯಾದಿಂದ 45 ಲಕ್ಷ ರೂಪಾಯಿ ವೆಚ್ಚದಲ್ಲಿ ಅದಕ್ಕೆ ಬೇಕಾದ ಯಂತ್ರಗಳನ್ನು ತರಿಸಿದ್ದಾರೆ. ಪ್ರತಿ ದಿವಸ ಒಂದು ಲಕ್ಷ ಒಂದೂವರೆ ಲಕ್ಷ ಇಟ್ಟಂಗಿಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಿದೆ. ನಮ್ಮ ಮುಖ್ಯ ಇಂಜನಿಯರು ಆ ಯೂನಿಟನ್ನು ನೋಡಿಕೊಂಡು ಬಂದಿದ್ದಾರೆ. ಒಬ್ಬ ಖಾಸಗಿಯವರು ಅದನ್ನು ನಡೆಸುತ್ತಿದ್ದಾರೆ. ಮದ್ರಾಸಿನಲ್ಲಿ 60 ರೂಪಾಯಿ ಪ್ರಕಾರ ಮಾರಾಟ ಮಾಡುತ್ತಿದ್ದಾರೆ. ಅವರಿಗೆ ಸಾಕಷ್ಟು ಲಾಭ ಅದರಲ್ಲಿ ಸಿಕ್ಕುತ್ತಿದೆ. ನಮ್ಮಲ್ಲಿ ಕೆಲಸಕ್ಕೆ ಬಾರದ ಇಟ್ಟಂಗಿಗಳನ್ನು 65–70 ರೂಪಾಯಿಗಳಿಗೆ ಮಾರುತ್ತಿದ್ದಾರೆ. ಅದಕ್ಕೆ ಒಂದು ಪ್ರಪೋಸಲ್ ಈಗಾಗಲೇ ಇರಿಸಿಕೊಂಡು ಅದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಶ್ರೀಮಾನ್ ದೇವರಾಜ ಅರಸ್ ಅವರು ಹೌಸಿಂಗ್ ಬೋರ್ಡ್ ಸಲುವಾಗಿ ಒಂದು ಪ್ರತ್ಯೇಕವಾದ ಯೂನಿಟ್ ಇಟ್ಟುಕೊಳ್ಳುವವರಿದ್ದಾರೆ.

ನಮ್ಮಲ್ಲೇ ಇವೆ ಕೆಲವು ಯೂನಿಟ್‌ಗಳನ್ನು, ಬೆಂಗಳೂರು, ಮೈಸೂರು, ಬೆಳಗಾಂ, ಗುಲ್ಬರ್ಗ, ಗಳಲ್ಲಿ ಒಂದೊಂದು ಯೂನಿಟ್ ಮಂಜೂರುಮಾಡುವುದಕ್ಕೆ ವಿಚಾರ ಮಾಡುತ್ತಿದ್ದೇವೆ.

ಅನೇಕ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಇವತ್ತು ಸರ್ಕಾರ ಕಂಟ್ರಾಕ್ಟರುಗಳ ಕೈಯಲ್ಲಿದೆ, ಅವರು ಸರ್ಕಾರಕ್ಕೆ ಟರ್ಮ್ಸ್ ಡಿಕ್ಟೇಟ್ ಮಾಡುತ್ತಿದ್ದಾರೆಂದು. ಇದು ಸ್ವಲ್ಪಮಟ್ಟಿಗೂ ನಿಜವಲ್ಲ. ನಮ್ಮಲ್ಲಿ ಅಗ್ರಿಮೆಂಟ್ ಫಾರಂ ಏಕರೂಪವಾಗಿರಲಿಲ್ಲ. ಸೂಪರಿಂಟೆಂಡಿಂಗ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಇವರುಗಳು ಒಂದು ಅಗ್ರಿಮೆಂಟ್ ಫಾರಂ ಇಟ್ಟುಕೊಂಡು ಅದರ ಪ್ರಕಾರ ಅಗ್ರಿಮೆಂಟ್ ತೆಗೆದುಕೊಳ್ಳುತ್ತಿದ್ದರು. ಅದರಲ್ಲಿ ಕೆಲವು ಲೋಪಗಳಿದ್ದುದರಿಂದ ಹೆಚ್ಚು ರೇಟ್ ಕೇಳುತ್ತಿದ್ದರು ಮತ್ತು ಕೋರ್ಟಿಗೂ ಹೋಗುತ್ತಿದ್ದರು. ಈಗ ನಾವು ಅಗ್ರಿಮೆಂಟ್ ಫಾರಂ ಅನ್ನು ರಿವೈಸ್ ಮಾಡಿದ್ದೇವೆ. ಇನ್ನುಮುಂದೆ ಯಾವ ಯಾವ ಕೆಲಸಗಳನ್ನು ಕೊಡಲಿ, ಈ ಹೊಸ ಅಗ್ರಿಮೆಂಟ್ ಬಾಂಡ್ ಪ್ರಕಾರ ಕೊಡಬೇಕು ಎಂದು ಹೇಳಿದ್ದೇವೆ. ಆ ಅಗ್ರಿಮೆಂಟ್ ಪ್ರಕಾರ ಸರ್ಕಾರ ಕಂಟ್ರಾಕ್ಟರ ಮೂಗಿನ ಕೆಳಗೆ ಅಡಗಿರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಸರ್ಕಾರದ ಹತೋಟಿಯಲ್ಲಿರುತ್ತಾರೆನ್ನುವುದನ್ನು ಸ್ಪಷ್ಟಪಡಿಸುತ್ತಿದ್ದೇನೆ.

ಹೋದ ವರ್ಷ ಹೈ ವೇ ಬಿಲ್ ಪಾಸಾಯಿತು. ಅದಕ್ಕೆ ರಾಜ್ಯಪಾಲರ ಒಪ್ಪಿಗೆಯೂ ಸಿಕ್ಕಿದೆ. ರಸ್ತೆಯ ಪಕ್ಕಗಳಲ್ಲಿ ಮನ ಬಂದಂತೆ ಡೆವಲಪ್‌ಮೆಂಟ್ ಆಗುತ್ತಿತ್ತು. ಮುಂದೆ ರಸ್ತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಅದನ್ನು ಅಗಲ ಮಾಡಬೇಕಾದರೆ ಲಕ್ಷಾವಧಿ ರೂಪಾಯಿ ಪರಿಹಾರವನ್ನು ಕೊಡಬೇಕಾದ ಪರಿಸ್ಥಿತಿ ಇತ್ತು. ಅದಕ್ಕೆ ಹೈವೇ ಬಿಲ್ ಪಾಸ್ ಮಾಡಿಕೊಂಡಿದ್ದೇವೆ.

ನಮ್ಮ ರಾಜ್ಯದಲ್ಲಿರುವ ಕೆರೆಗಳ ಪೈಕಿ ನೂರಕ್ಕೆ 90 ಭಾಗ ರೆವೆನ್ಯೂ ಇಲಾಖೆಗೆ ಸಂಬಂಧಪಟ್ಟ ಕೆರೆಗಳು. 200—250 ಕೆರೆಗಳು ಮಾತ್ರ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟವೆ. ಉಳಿದುವೆಲ್ಲ ರೆವೆನ್ಯೂ ಕೆರೆಗಳಾಗಿವೆ. ಇದಕ್ಕೆ ಬೇರೆ ಬೇರೆ ಏಜೆನ್ಸಿ ಇರುವುದರಿಂದ ಒಳ್ಳೆಯ ಪ್ರಮಾಣದಲ್ಲಿ ಅವುಗಳನ್ನು ಮೇಂಟೇನ್ ಮಾಡುವುದಕ್ಕೆ ಆಗುತ್ತಿರಲಿಲ್ಲ. ಈಗ ಮೇಂಟೆನೆನ್ಸ್ ಸೆಸ್ ಕೊಡಲು ಒಪ್ಪಿಕೊಂಡಿರುವುದರಿಂದ ಒಂದೇ ಏಜೆನ್ಸಿಯ ಮೂಲಕ ಒಳ್ಳೆಯ ರೀತಿಯಿಂದ ಮೇಂಟೇನ್ ಮಾಡುವುದಕ್ಕೆ ಸಾಕಷ್ಟು ಅವಕಾಶವಾಗಿದೆ. ಇದು ಒಂದು ದೊಡ್ಡ ಸಾಧನೆ. ಈ ಸಾಧನೆ ಹೋದ ವರ್ಷ ಈ ಇಲಾಖೆಯಲ್ಲಿ ಆಗಿದೆ.

ಬೆಂಗಳೂರಿನಲ್ಲಿ ಬೃಹದಾಕಾರವಾದ ನೀರಿನ ಯೋಜನೆಯ ಸಲುವಾಗಿ ಕೇಂದ್ರ ಸರ್ಕಾರದವರು ಈಗಾಗಲೇ ಮನ್ನಣೆಯನ್ನು ಕೊಟ್ಟಿದ್ದಾರೆ. ವಾಟರ್ ಸಪ್ಲೈ ಆಕ್ಟ್ ಸಭೆಯ ಮುಂದೆ ಬಂದಿದ್ದು ಅದಕ್ಕೆ ಸಭೆಯು ತನ್ನ ಮಂಜೂರಾತಿಯನ್ನು ಕೊಟ್ಟಿದೆ. ಬೆಂಗಳೂರಿಗೆ ನೀರು ಸರಬರಾಜು ಮಾಡುವ ಕೆಲಸವನ್ನು ಬೆಂಗಳೂರು ವಾಟರ್ ಸಪ್ಲೈ ಬೋರ್ಡಿಗೆ ವಹಿಸಿದ್ದೇವೆ. ಆ ಕೆಲಸ ಬಹಳ ತ್ವರಿತವಾಗಿ ನಡೆಯುತ್ತಿದೆ ಇನ್ನು ಮೂರು ನಾಲ್ಕು ವರ್ಷಗಳಲ್ಲಿ ಕೆಲಸ ಮುಗಿಯಬಹುದು ಎಂದು ನನಗನಿಸುತ್ತದೆ. 1964-65 ರಲ್ಲಿ ಲೋಕೋಪಯೋಗಿ ಇಲಾಖೆಯು ಸಾಧಿಸಿದಂಥ ಸಾಧನೆಗಳ ಒಂದು ಸಂಕ್ಷಿಪ್ತ ಪರಿಚಯವನ್ನು ಸಭೆಯ ಮುಂದೆ ಇಟ್ಟಿದ್ದೇನೆ.

ಈಗ ಕಂಟ್ರಾಕ್ಟರುಗಳ ರಿಜಿಸ್ಟ್ರೇಷನ್ ಸಲುವಾಗಿ ಕೆಲವು ವರ್ಗಗಳನ್ನು ಮಾಡಲಾಗಿದೆ. ಈ ರೀತಿ ವಿಂಗಡಣೆ ಮಾಡಿರುವುದರಿಂದ 'ಎ' ದರ್ಜೆಯ ಕಂಟ್ರಾಕ್ಟರಿಗೆ ಮನಾಪಲಿ ಮಾಡಿಕೊಟ್ಟಿದ್ದೇವೆಂದು ಕೆಲವು ಸದಸ್ಯರು ಹೇಳಿದ್ದಾರೆ. ಈ ಇರಾದೆ ದೊಡ್ಡದಿದೆ. ಇಲ್ಲಿ ಎಷ್ಟು ಜನ ಕಂಟ್ರಾಕ್ಟರುಗಳೂ ಬಂದರೂ ಸ್ವಾಗತಿಸುತ್ತೇವೆ. ಹೆಚ್ಚು ಜನ ಬರುವುದರಿಂದ ಹೆಚ್ಚು ಸ್ಪರ್ಧೆ ಇರುತ್ತದೆ. ಅದರಿಂದ ನಮಗೆ ಅನುಕೂಲವಾಗುತ್ತದೆ. ಕೆಲವೇ ಜನರು ಬಂದರೆ ಅವರವರೇ ಮಾತನಾಡಿಕೊಂಡು ನಮಗೆ ಡಿಕ್ಟೇಟ್ ಮಾಡುವುದಕ್ಕೆ ಶುರು ಮಾಡುತ್ತಾರೆ. ಅದರ ಸಲುವಾಗಿ ರೂಲ್ಸ್ ಸಡಿಲಗೊಳಿಸಬೇಕು ಎನ್ನುವ ವಿಚಾರ ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್‌ಗೆ ವಹಿಸಿದ್ದೇವೆ. ಒಬ್ಬ ಕಂಟ್ರಾಕ್ಟರಿಗೆ ಸಾಲ್ವೆನ್ಸಿ ಸರ್ಟಿಫಿಕೇಟ್ ಎಷ್ಟು ಇರಬೇಕು ಎನ್ನುವುದರ ಬಗ್ಗೆ ಇರುವ ನಿಯಮಗಳನ್ನು ಸಡಿಲಗೊಳಿಸಬೇಕು, ಹೆಚ್ಚು ಜನ ಕಂಟ್ರಾಕ್ಟರುಗಳು ಬರುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವ ವಿಚಾರ ಮಾಡುತ್ತಿದ್ದೇವೆ. ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್‌ನಿಂದ ರಿಪೋರ್ಟ್ ಬಂದ ಮೇಲೆ ಸರ್ಕಾರದವರು ನಿರ್ಣಯ ತೆಗೆದುಕೊಳ್ಳುತ್ತೇವೆ.

ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್. ಎರಡನೆ ರಾಜ್ಯಗಳಲ್ಲಿ ಇನ್ನೂ ಇದರ ಬಗ್ಗೆ ಏನೂ ಆಗಿಲ್ಲ. ಮಹಾರಾಷ್ಟ್ರ ಸರ್ಕಾರದಲ್ಲಿ ಆಗಿದೆ. ಅವರು ಪ್ರಾಜೆಕ್ಟ್‌ಗಳ ಸಲುವಾಗಿ ಒಂದು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮಾಡಿಕೊಂಡಿದ್ದಾರೆ.

ನಾವು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ನಿರ್ಮಾಣ ಮಾಡುವ ವಿಚಾರವನ್ನು ಯೋಚಿಸುತ್ತಿದ್ದೇವೆ. ಅದು ಸಣ್ಣ ಪ್ರಮಾಣದಲ್ಲಿ ಬೇರೆಕಡೆ ಕೆಲಸಮಾಡುತ್ತಿದೆ. ಅದು ಇಂಡಿಪೆಂಡೆಂಟ್ ಬಾಡಿಯಾಗಿ ಇರು

(ಶ್ರೀ ವೀರೇಂದ್ರ ಪಾಟೀಲ್)

ತ್ತದೆ. ಈಗ ಅನೇಕ ಕಡೆಗಳಲ್ಲಿ ನಾವು ನೋಡುತ್ತಿದ್ದೇವೆ ಸಣ್ಣಪುಟ್ಟ ಕೆಲಸಕಾರ್ಯಗಳಿಗೆ ಕಂಟ್ರಾಕ್ಟರ್ಸ್ ಮುಂದೆ ಬರುವುದಿಲ್ಲ. ಅವರು ಮನಸ್ಸು ಬಂದಂತೆ ರೇಟುಗಳನ್ನು ಕ್ವೋಟ್ ಮಾಡು ತ್ತಾರೆ. ಕಂಟ್ರಾಕ್ಟ್‌ದಾರರುಗಳು ತಮ್ಮದೇ ಆದ ಕಾರ್ಪೊರೇಷನ್ ಮಾಡಿ ಅವರು ಈ ಫೀಲ್ಡ್‌ನಲ್ಲಿ ಎಷ್ಟರಮಟ್ಟಿಗೆ ಕೆಲಸಗಳನ್ನು ಮಾಡುವ ವಿಚಾರವು ಬಂದಿದೆ. ಆ ಬಗ್ಗೆ ಇನ್ನೂ ಒಂದು ಅಖೈರು ನಿರ್ಣಯವನ್ನು ತೆಗೆದುಕೊಂಡಿಲ್ಲ. ಮುಂದೆ ಮಾತತರ್ಕ ವಿಚಾರವನ್ನು ತಮ್ಮ ಮುಂದೆ ಹೇಳು ತ್ತಿದ್ದೇನೆ. ಇದು ಎಷ್ಟರಮಟ್ಟಿಗೆ ಸಾಧನೆಯಾಗಬಹುದು ಎನ್ನುವುದನ್ನು ಇನ್ನು ಕೆಲವೆ ದಿವಸ ಗಳಲ್ಲಿ ಹೇಳುವುದಕ್ಕೆ ಸಾಧ್ಯವಾಗುತ್ತದೆಂದು ನನಗೆ ಅನ್ನಿಸುತ್ತದೆ.

5-00 P.M.

ಇನ್ನು ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ತಮ್ಮ ಭಾಷಣದಲ್ಲಿ ವ್ಯಕ್ತಮಾಡಿದ್ದಾರೆ. ಹೋದಸಾರಿ ಈ ಬೇಡಿಕೆಗಳ ಮೇಲೆ ಎರಡು ದಿವಸಗಳವರೆಗೂ ಭಾಷಣ ಮಾಡಿದ್ದನ್ನು ನಾನು ಕೇಳಿದ್ದೆ. ಬಹಳ ಕಟುವಾಗಿ ಅನೇಕರು ಭಾಷಣ ಮಾಡಿದರು. ಈ ಸಾರಿ ನಾನು ನೋಡಿದ್ದರಲ್ಲಿ ಅಷ್ಟು ಕಟುವಾಗಿ ಭಾಷಣಮಾಡಲಿಲ್ಲ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಟೈಂ ಇದ್ದರೆ ಕಟುವಾಗಿ ಭಾಷಣ ಮಾಡುತ್ತಿದ್ದರು.

ಶ್ರೀ ವೀರೇಂದ್ರ ಪಾಟೀಲ್—ಟೈಂ ಇಲ್ಲವೆಂದಲ್ಲ. ವಿರೋಧಪಕ್ಷದ ನಾಯಕರು ಭಾಷಣಮಾಡುತ್ತಾ ಇನ್ನೂ ದುಡ್ಡು ಹೆಚ್ಚುಬೇಕು, ಇನ್ನೂ ಹೆಚ್ಚು ಕೆಲಸಮಾಡಬೇಕೆಂದು ಹೇಳಿದ್ದಾರೆ. ಎಕಾನಮಿ ಮತ್ತು ಎಫಿಷಿಯನ್ಸಿ ವಿಷಯವಾಗಿಯೂ ಯೋಗ್ಯವಾದ ಸಲಹೆಗಳನ್ನು ಹೇಳಿದ್ದಾರೆ. ಒಬ್ಬೊಬ್ಬರು ಬಿಟ್ಟರೆ ಅದರ ಮಹತ್ವ ಎಷ್ಟು ದೊಡ್ಡದು, ಎಷ್ಟು ಜವಾಬ್ದಾರಿಯಿಂದ ಈ ಕೆಲಸಗಳನ್ನು ಮಾಡಬೇಕು ಎಂಬ ಬಗ್ಗೆ ತಂತಮ್ಮ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ. ಅವರೆಲ್ಲರಿಗೂ ನನ್ನ ಧನ್ಯವಾದಗಳನ್ನು ಅರ್ಪಿ ಸುತ್ತೇನೆ. ಒಬ್ಬೊಬ್ಬರು ಭಾಷಣ ಮಾಡಿದ್ದು ಹಳೆಯ ಧಾಟಿಯಲ್ಲಿ ಅಂದರೆ ಹೋದವರ್ಷ ಮಾತ ನಾಡಿದ ಹಾಗೆಯೇ ಇತ್ತು. ಅದೇನೆಂದರೆ ಹಳೆಯ ಮೈಸೂರಿಗೆ ಬಹಳವಾಗಿ ಅನ್ಯಾಯವಾಗಿದೆ. ಕನ್ನಡನಾಡು ಎರಡು ಭಾಗವಮಾಡಿ ಎಂಬುದಾಗಿ ಹೇಳಿದರು. ಒಬ್ಬೊಬ್ಬರು ಯಾರೋ ಈ ವರ್ಷ ಹೊಸ ಕೆಲಸಗಳನ್ನು ತೆಗೆದುಕೊಂಡಿಲ್ಲ, ವೆಂಬುದಾಗಿ ಮಾತನಾಡಿದರು ಎಂದು ನನಗನ್ನಿಸುತ್ತದೆ. ಇನ್ನು ಕೆಲವು ಸದಸ್ಯರು ಬಡ್ಜೆಟ್ಟನ್ನು ನೋಡಿದ್ದರೂ ಏನು ಕೆಲಸಗಳನ್ನು ತೆಗೆದುಕೊಂಡಿಲ್ಲ, ವರ್ಕ್ ರೋಡ್ ಇಲ್ಲವೆಂದು ಹೇಳಿದರು. ಈಗ ನಾವು 72 ಕೋಟಿ ರೂಪಾಯಿಗಳನ್ನು ಖರ್ಚುಮಾಡು ತ್ತಿದ್ದೇವೆ. ಇವತ್ತು ಕೆಲಸವಿಲ್ಲವೆಂದು ಹೇಗೆ ಹೇಳುತ್ತಾರೋ ಗೊತ್ತಿಲ್ಲ. ನಾನು ಅದನ್ನೂ ಒಪ್ಪು ತ್ತೇನೆ. ಇದರಲ್ಲಿ ಹೊಸ ಕೆಲಸಗಳು ಯಾವುದೂ ಇಲ್ಲ. ಇಡೀ ಪಿ. ಡಬ್ಲ್ಯು.ಡಿ.ಯಲ್ಲಿ ಎರಡು ಮೂರು ಹೊಸ ಕೆಲಸಗಳೇನೋ ಸಿಕ್ಕುತ್ತವೆ. ಅನೇಕ ಕೆಲಸಗಳನ್ನು ಹಾಕಿದ್ದೇವೆ. ಕೇಂದ್ರ ಸರ್ಕಾರದ ಸಹಾಯ ಬಂದರೆ ಅವನ್ನು ಪ್ರಾರಂಭ ಮಾಡುತ್ತೇವೆ. ಏಕೆಂದರೆ ಅವೆಲ್ಲಾ ಕೇಂದ್ರ ಸರ್ಕಾರದಿಂದ ಸಹಾಯ ಪಡೆದು ಮಾಡುವುದು. ಒಟ್ಟಾರೆ ಹೇಳುವುದಾದರೆ ಈ ಸಾರಿ ಹೊಸ ಕೆಲಸಗಳೇನೂ ಮಾಡಿಲ್ಲ. 9 ಕೋಟಿ ರೂಪಾಯಿಗಳನ್ನು ಎರಡು ವರ್ಷಗಳವರೆಗೂ ಖರ್ಚುಮಾಡಿದ್ದೇವೆ. ಹೋದವರ್ಷ ರೋಡ್ ಡೆವಲಪ್‌ಮೆಂಟ್ ಆಫ್ ಮೈಸೂರು ಎಂಬ ಪುಸ್ತಕವನ್ನು ಕನ್ನಡಿಯ ಹಾಗೆ ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇವೆ. ಅವನ್ನು ಮಾನ್ಯ ಸದಸ್ಯರು ನೋಡಿದ್ದರೆ ಬಹುಶಃ ಇಷ್ಟು ಭಾಷಣ ಮಾಡುವ ಅವಶ್ಯಕತೆ ಇರುತ್ತಿರಲಿಲ್ಲವೆಂದು ನನಗೆ ತೋರುತ್ತದೆ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಬರುವವರೆಗೂ ತಡೆಯಬೇಕಾಗಿದೆ. ಹೊಸ ಕೆಲಸಗಳು ಯಾವುದಾದರೂ ಒಂದು, ಎರಡು, ಮೂರು ಇದ್ದರೆ ವಿಚಾರಮಾಡಬಹುದು. ಆದರೆ ಹೊಸ ತರಹ ಕೆಲಸಗಳಿಗೆ ಯಾವುದಕ್ಕೂ ಅವಕಾಶವಿಲ್ಲ. ಆದರೆ ನನ್ನ ಏರಿಯಾದಲ್ಲಿ ಅನೇಕ ಕೆಲಸಗಳನ್ನು ಮಾಡಿಕೊಂಡಿದ್ದರೆಂಬುದಾಗಿ ಕೆಲವರು ಆರೋಪಣೆ ಮಾಡಿದರು. ಅವರು ಬಡ್ಜೆಟ್ಟನ್ನು ಸರಿಯಾಗಿ ನೋಡಿದ್ದರೆ ಆ ರೀತಿಯಾಗಿ ಹೇಳುತ್ತಿರಲಿಲ್ಲವೆಂದು ನನಗೆ ತೋರುತ್ತದೆ. ಬಹುಶಃ ಹೈದರಾಬಾದಿನ ಮೂರು ಜಿಲ್ಲೆಗಳಲ್ಲಿ ಒಂದು ಹೊಸ ಕೆಲಸವನ್ನೂ ತೆಗೆದುಕೊಂಡಿಲ್ಲ. ನಾನು ಎಲ್ಲವನ್ನೂ ವಿಶದವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಹೊಸದಾಗಿ ಯಾವ ಕೆಲಸವನ್ನೂ ತೆಗೆದುಕೊಳ್ಳದೇ ಇರುವಾಗ ಕಮಿಟೆಡ್ ವರ್ಕ್ಸ್‌ನಲ್ಲಿ ಏನಾದರೂ ಹಣಕಾಸಿನ ಇಲಾಖೆಯವರು ಸ್ವಲ್ಪಮಟ್ಟಿಗೆ ದುಡ್ಡು ಕೊಟ್ಟಿದ್ದರೆ ಅಂತಹ ಸಂದರ್ಭಗಳಲ್ಲಿ ಅಲ್ಲಿ ಇಲ್ಲಿ ಎರಡು ಮೂರು ಕೆಲಸಗಳನ್ನು ಹೊಸದಾಗಿ ಮಾಡಿರಬಹುದು ಅಷ್ಟೆ. ಅಂದಮೇಲೆ ಮಾನ್ಯ ಸದಸ್ಯರು ಒಬ್ಬರಿಗೊಬ್ಬರು ಅವರ ಏರಿಯಾವನ್ನು ನೆಗ್ಲೆಕ್ಟ್ ಮಾಡಿದ್ದಾರೆ, ಇವರ ಏರಿಯಾವನ್ನು ನೆಗ್ಲೆಕ್ಟ್

ಮಾಡಿದ್ದಾರೆ ಎಂಬುದಾಗಿ ಹೇಳುವುದು ಸರಿಯಲ್ಲ. ಆ ರೀತಿ ಹೇಳುವುದರಲ್ಲೂ ಅರ್ಥವಿಲ್ಲ. ಹೋದ ಸಾರಿ ರೀಜನಲ್‌ವೈಜ್ ಎಷ್ಟೇ ಹಣವನ್ನು ಖರ್ಚುಮಾಡಿದ್ದೇವೆ. ಅದರ ವಿವರವನ್ನು ಈಗಾಗಲೇ ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ. ಮೀಡಿಯಂ ಮತ್ತು ಮೇಜರ್ ಇರ್ರಿಗೇಷನ್ ಬಗ್ಗೆ ಎಷ್ಟೆಷ್ಟು ಹಣವನ್ನು ಖರ್ಚುಮಾಡಿದ್ದೇವೆ ಎನ್ನುವುದನ್ನು ಸಂಪೂರ್ಣವಾಗಿ ಹಾಗೂ ಸವಿಸ್ತಾರವಾಗಿ ಅಂಕಿಅಂಶಗಳಿಂದ ಹೋದಸಾರಿಯೇ ಹೇಳಿದೇವೆ. ಅದನ್ನೇ ಈಗಲೂ ಹೇಳಿದರೆ ಹಾಡಿದ್ದೇ ಹಾಡಿದಂತಾಗುತ್ತದೆ. ಕೆಲವು ಮಾನ್ಯ ಸದಸ್ಯರು ಹೋದಸಾರಿ ಏನು ಹೇಳಿದರೋ ಅದನ್ನೇ ಈ ಸಾರಿಯೂ ಹೇಳಿದ್ದಾರೆ. ಆದರೆ ನಾನು ಈ ಸಭೆಯ ಕಾಲವನ್ನು ಹೆಚ್ಚಿಗೆ ತೆಗೆದುಕೊಳ್ಳುವದಿಲ್ಲ. ಹೊಸ ಕೆಲಸ ಕಾರ್ಯಗಳಿಗೆ ಅವಕಾಶ ಹೆಚ್ಚಿಗೆ ಬೇಕು. ಆದರಿಂದ ನಾಲ್ಕನೆಯ ಪಾಂಚವಾರ್ಷಿಕ ಯೋಜನೆ ಬರುವ ವರೆಗೂ ನಾವೆಲ್ಲರೂ ತಡೆಯಬೇಕಾಗುತ್ತದೆ. ಮಾನ್ಯ ಸದಸ್ಯರು ಇಲ್ಲಿ ಏನೇನು ಬೇಡಿಕೆಗಳನ್ನು ಇಟ್ಟಿದ್ದಾರೋ ಅವನ್ನೆಲ್ಲಾ ಒಂದು ಪಟ್ಟಿಯ ಹಾಗೆ ತಯಾರುಮಾಡಿ ಯಾವ್ಯಾವ ಕ್ಷೇತ್ರದಲ್ಲಿ ಯಾವ್ಯಾವ ಸಭಾಸದಸ್ಯರು ಒತ್ತಾಯಪೂರ್ವಕವಾಗಿ ಏನೇನು ಹೇಳಿದ್ದಾರೆಂಬುದನ್ನು ನಾನು ಗುರುತು ಹಾಕಿಕೊಂಡಿದ್ದೇನೆ. ಅವೆಲ್ಲವೂ ಈ ವರ್ಷ ಸಾಧ್ಯವಾಗದೆ ಹೋದರೂ 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಏನಾದರೂ ಕೆಲಸಕಾರ್ಯಗಳನ್ನು ತೆಗೆದುಕೊಂಡರೆ ಅವರವರ ಕ್ಷೇತ್ರದಲ್ಲಿ ಹತ್ತು ಕೆಲಸಗಳನ್ನು ಕೇಳಿದ್ದರೆ ಒಂದನ್ನಾದರೂ ಮಾಡಿಕೊಡುವ ಪರಿಸ್ಥಿತಿ ನಮ್ಮ ಸರ್ಕಾರಕ್ಕೆ ಬಂತಲ್ಲಾ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದ್ದರಿಂದ 4ನೇ ಪಾಂಚವಾರ್ಷಿಕ ಯೋಜನೆಯಲ್ಲಿ ಒಂದನೇ ವರ್ಷದಲ್ಲಿ ಎಷ್ಟು ಕೆಲಸಕಾರ್ಯಗಳು ಸಾಧ್ಯವಾಗುತ್ತದೆಂಬುದನ್ನು ನೋಡಿ ನನ್ನ ಪಕ್ಷ ಅವರ ಪಕ್ಷ ನಿಮ್ಮ ಪಕ್ಷ ಎಂಬುದಾಗಿ ಭೇದಭಾವ ಇಲ್ಲದೆ ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಎಂಬುದಾಗಿ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡಲು ಇಚ್ಛಿಸುತ್ತೇನೆ. ಈಗ ಎಲ್ಲ ಪಕ್ಷದಲ್ಲಿರುವ ಎಲ್ಲ ಪ್ರದೇಶಗಳ ಮಾನ್ಯ ಸದಸ್ಯರಿಗೆ ಏನೇನು ಅನುಕೂಲತೆಗಳು ಬೇಕೋ ಅದೆಲ್ಲಾ ಒದಗಿ ಎಲ್ಲರಿಗೂ ಸಮಾಧಾನವಾಗುತ್ತದೆ. ಮುಂದೆ ಆ ಕಾರ್ಯಕ್ರಮವನ್ನು ಮಾಡುವುದಕ್ಕೆ ನಮ್ಮ ಶಕ್ತಿಮೀರಿ ಕೆಲಸಮಾಡಲು ಪ್ರಯತ್ನಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಸಂಜೀವನಾಥ ಐಕಳ.—ಅಷ್ಟು ಹೊತ್ತಿಗೆ ನಾವೇ ಬರುತ್ತೇವೆ.

ಶ್ರೀ ವೀರೇಂದ್ರ ಪಾಟೀಲ್.—4ನೇ ಪಾಂಚವಾರ್ಷಿಕ ಯೋಜನೆ ಮುಗಿದಮೇಲೆ ಇವರು ಎಲ್ಲಿರುತ್ತಾರೋ ಗೊತ್ತಿಲ್ಲ. ಮುಂದಿನ ವರ್ಷದ ಬಡ್ಜೆಟ್ 4ನೇ ಪಾಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟದು. ಆದರೂ ಎಲೆಕ್ಷನ್ ಬರುವುದು ಇನ್ನೂ ಎರಡುವರ್ಷಗಳಿವೆ. ಯಾರಾರು ಎಲ್ಲೆಲ್ಲಿ ಇರುತ್ತಾರೆಂಬುದು ನಮಗೂ ಗೊತ್ತಿಲ್ಲ, ಅವರಿಗೂ ಗೊತ್ತಿಲ್ಲ. ಅಂದಮೇಲೆ ಈ ವಿಚಾರವನ್ನು ಈಗ ಏತಕ್ಕೆ ಮಾತನಾಡಬೇಕು ? ಇನ್ನು ಒಂದು ಆಕ್ಷೇಪಣೆ ಬಂತು. ಚೀಫ್ ಇಂಜನಿಯರುಗಳ ಸಂಖ್ಯೆಯನ್ನು ಸರ್ಕಾರದವರು ಮನಸ್ಸುಬಂದಂತೆ ಬೆಳೆಸುತ್ತಿದ್ದಾರೆಂದು ಶ್ರೀಮಾನ್ ರೇವಣ್ಣಸಿದ್ದಪ್ಪನವರು ಹೇಳಿದರು. ಅದು ಎಷ್ಟರಮಟ್ಟಿಗೆ ನಿಜವಿದೆಯೋ ನನಗೆ ಗೊತ್ತಾಗಲಿಲ್ಲ. ನಾನು ಇಲ್ಲಿ ಪ್ರತಿಯೊಬ್ಬರೂ ಏನೇನು ಹೇಳಿದರೋ ಅವನ್ನೆಲ್ಲಾ ಗುರುತುಮಾಡಿಕೊಂಡು ಹೋದಸಾರಿ ಮಾನ್ಯ ಸದಸ್ಯರು ಮಾಡಿದ್ದಂಥ ಟೀಕೆಗಳಿಗೆಲ್ಲಾ ಉತ್ತರಕೊಟ್ಟೆ. ಅದನ್ನೆಲ್ಲಾ ಸರಿಯಾಗಿ ತಿಳಿದುಕೊಳ್ಳದೆ ಸುಮ್ಮನೆ ಯಾವುದೋ ಒಂದು ವಿಷಯವನ್ನು ತಂದು ಅಲ್ಲಿ ಹೆಚ್ಚುಮಾಡಿದ್ದಾರೆ, ಇಲ್ಲಿ ಹೆಚ್ಚು ಮಾಡಿದ್ದಾರೆಂದು ಸರ್ಕಾರವನ್ನು ಟೀಕಿಸುವುದು ಯೋಗ್ಯವಲ್ಲ. ಅದು ಮಾನ್ಯ ಸದಸ್ಯರ ಒಂದು ತಪ್ಪುಭಾವನೆ ಎಂಬುದಾಗಿ ಪರಿಗಣಿಸಬೇಕಾಗುತ್ತದೆ. ಚೀಫ್ ಇಂಜನಿಯರ್ ಜನರಲ್, ರೋಡ್ಸ್, ಅಂಡ್ ಬಿಲ್ಡಿಂಗ್ಸ್, ಇರ್ರಿಗೇಷನ್ ಪ್ರಾಜೆಕ್ಟ್ಸ್, ಸ್ಪೆಷಲ್ ಚೀಫ್ ಇಂಜನಿಯರ್ ಫಾರ್ ಶರಾವತಿ ಇವರೆಲ್ಲರೂ ನಾನು ಬರುವುದಕ್ಕಿಂತ ಮೊದಲು ಇದ್ದವರು. ಚೀಫ್ ಇಂಜನಿಯರ್ ಫಾರ್ ಬೆಂಗಳೂರು ವಾಟರ್ ಸಪ್ಲೈ ಇವರ ಬಗ್ಗೆ ಇವರೇ ಇಲ್ಲಿ ಒಂದು ಆಕ್ಟ್ ಮಾಡಿದ್ದಾರೆ. ಅದಕ್ಕೆ ನಾನು ಕಾರಣನಲ್ಲ ಅದಕ್ಕೆ ಒಂದು ಸ್ಟ್ಯಾಟ್ಯುಟರಿ ಬೋರ್ಡ್ ಇರಬೇಕೆಂಬುದಾಗಿ ಇಲ್ಲಿಯೇ ಒಂದು ನಿರ್ಣಯ ಮಾಡಿದ್ದಾರೆ. ಆ ಪ್ರಕಾರವಾಗಿ ಅವರುಗಳೆಲ್ಲಾ ಕೆಲಸಮಾಡುತ್ತಿದ್ದಾರೆ. ನಾನು ಮಾಡಿದ್ದು ಇನ್‌ವೆಸ್ಟಿಗೇಷನ್ನಿಗೆ ಒಬ್ಬ ಚೀಫ್ ಇಂಜನಿಯರನ್ನು ಹೆಚ್ಚು ಮಾಡಿದ್ದೇನೆ, ಅಷ್ಟೇ. ಶರಾವತಿ ಚೀಫ್ ಇಂಜನಿಯರ್ ಹುದ್ದೆಯನ್ನು ತೆಗೆದುಹಾಕಿ ಇದನ್ನು ಕ್ರಿಯೇಟ್ ಮಾಡಿದ್ದೇನೆ. ಶರಾವತಿ ಸಿವಿಲ್ ವರ್ಕ್ಸ್ ಪರವಾಗಿ ಯಾರು ಇದ್ದರೋ ಅವರೂ ಸಹ ಈಗ ಕೆಲಸಮಾಡುತ್ತಿದ್ದಾರೆ. ಯಾವುದೋ ಒಂದು ಕೆಲಸ 5 ಲಕ್ಷದಿಂದ 10 ಲಕ್ಷದವರೆಗೂ ಅಗತ್ಯ ಖರ್ಚಿನಲ್ಲಿ ಪ್ರಾರಂಭ ಮಾಡಬೇಕಾಗಿತ್ತು. ಅಂಬಳಿಗೊಳ ಪ್ರಾಜೆಕ್ಟಿಗೆ ಸುಮಾರು 15 ಲಕ್ಷ ರೂಪಾಯಿಗಳ ಯೋಜನೆ ಬಗ್ಗೆ ಪ್ಲಾನ್, ಅಂದಾಜು ತಯಾರು ಮಾಡಿದ್ದರೂ ಅದಕ್ಕೆ ಇನ್‌ವೆಸ್ಟಿಗೇಷನ್ನಿಗಾಗಿ ಒಂದು ಪ್ರತ್ಯೇಕವಾದ

(ಶ್ರೀ ವೀರೇಂದ್ರ ಪಾಟೀಲ್)

ಒಂದು ಆರ್ಗನೈಜೇಷನ್ ಬೇಕಾಯಿತು. ಶರಾವತಿಯಲ್ಲಿ ಈಗ ಸರ್ಪ್ಲಸ್ ಇರುವುದರಿಂದ ಅಲ್ಲಿನ ಒಂದು ಚೀಫ್ ಇಂಜನಿಯರ್ ಹುದ್ದೆಯನ್ನು ತೆಗೆದುಹಾಕಿ ಅದರ ಬದಲು ಚೀಫ್ ಇಂಜನಿಯರ್ ಫಾರ್ ಇನ್‌ವೆಸ್ಟಿಗೇಷನ್ ಹುದ್ದೆಯನ್ನು ಕ್ರಿಯೇಟ್ ಮಾಡಿದೆ. ಅದನ್ನು ಸ್ಪಷ್ಟವಾಗಿ ಹೇಳ ಬಯಸುತ್ತೇನೆ.

ಒಂದು ಮಾತನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು, ಅವರು ಆ ಮಾತನ್ನು ಯಾವಾಗ ಹೇಳಿದರೋ ಆಗಿನಿಂದಲೂ ಸಹ ನನ್ನ ಮನಸ್ಸಿಗೆ ಬಹಳ ನೋವಾಗುತ್ತಿದೆ. ಯಾವ ಮಾತನ್ನು ಹೇಳಬೇಕಾದರೂ ಅದನ್ನು ಸರಿಯಾಗಿ ತಿಳಿದುಕೊಂಡು ಮಾತನಾಡಬೇಕು. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಜಾತೀಯತೆ ತಾಂಡವವಾಡುತ್ತಿದೆ ಎಂಬ ಮಾತನ್ನು ಅವರು ಹೇಳಿದರು. ಮತ್ತು ಹೈದರಾಬಾದಿನಿಂದ ಬಂದಿರತಕ್ಕ ಆಫೀಸರಿಗೆ ಎಲ್ಲಾ ಕಡೆಯೂ ಪ್ರಾಶಸ್ತ್ಯ ಸಿಕ್ಕುತ್ತದೆ ಎಂದು ಹೇಳಿದರು. ಆ ಸಂಬಂಧದಲ್ಲಿ ಬೇಕಾದರೆ ಅಂಕಿ ಅಂಶಗಳನ್ನು ಹೇಳುತ್ತೇನೆ. ಚೀಫ್ ಇಂಜಿನಿಯರುಗಳ ಪ್ರಮೋಷನ್ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಇಲಾಖೆಯ ನಿಯಮಾವಳಿಗಳನ್ನು ಅನುಸರಿಸಿ ಈ ಅಧಿಕಾರಿಗಳಿಗೆ ಪ್ರಮೋಷನ್ ಕೊಡಲಾಗಿದೆ. ಅಲ್ಲಿ ಅಕಸ್ಮಾತ್ ಇವೊತ್ತು ಕೆಲವು ಜಾತಿಯವರೇ ಇದ್ದಾರೆ ಎಂದು ಹೇಳಿದ್ದಾರೆ. ನಾವು ಯಾವ ಆಫೀಸರಿಗೇ ಆಗಲೀ ಪ್ರಮೋಷನ್ ಕೊಡುವಾಗ ಅವರು ಯಾವ ಜಾತಿ, ಕುಲ ಗೋತ್ರವನ್ನೂ ನಾವು ಕೇಳುವುದಿಲ್ಲ, ಮತ್ತು ಯಾವ ಪ್ರಾಂತೀಯ ಭಾವನೆಯನ್ನು ಇಟ್ಟುಕೊಳ್ಳುವುದಿಲ್ಲ. ಸರ್ಕಾರವನ್ನು ನಡೆಸಬೇಕಾದರೆ ಕೆಲವು ನಿಯಮಗಳಿವೆ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಇದೆ. ಎಗ್ಸಿಕ್ಯುಟೀವ್ ಇಂಜಿನಿಯರ ಮೇಲ್ಪಟ್ಟು ಇರುವಂತಹ ಹುದ್ದೆಗೆ ಪ್ರಮೋಷನ್ ಕೊಡಬೇಕಾದರೆ ಸೆಲೆಕ್ಷನ್ ಮುಖಾಂತರ ಪ್ರಮೋಷನ್ ಕೊಡಬೇಕೆಂದಿದೆ. ಆ ರೀತಿ ಸರ್ಕಾರದವರು ಅವರನ್ನು ಸೆಲೆಕ್ಷನ್ ಮಾಡುತ್ತಾರೆ. ಆ ರೀತಿ ಆ ಹುದ್ದೆಗೆ ಸೆಲೆಕ್ಷನ್ ಮಾಡುವಾಗ ಅಧಿಕಾರಿಗಳ ಸೀನಿಯಾರಿಟಿ ಸರ್ವೀಸು, ಸಂಬಳ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು ಕಾನೂನು ಪ್ರಕಾರ ಸ್ಕ್ರೀನಿಂಗ್ ಕಮಿಟಿಯವರು ಅವರನ್ನು ಸ್ಕ್ರೀನ್ ಮಾಡುತ್ತಾರೆ. ಆ ಕಮಿಟಿಯವರು ಆ ಹುದ್ದೆಗೆ ಯಾರು ಯೋಗ್ಯರಾಗಿದ್ದಾರೆ ಎಂದು ಶಿಫಾರಸ್ಸು ಮಾಡುತ್ತಾರೆಯೋ ಅಂಥವರಿಗೆ ಪ್ರಮೋಷನ್ ಕೊಡುತ್ತಾರೆ. ಆ ಪ್ರಕಾರ ಈಗ ಚೀಫ್ ಇಂಜಿನಿಯರಾಗಿರತಕ್ಕ 5 ಜನಗಳಿಗೂ ಪ್ರಮೋಷನ್ ಕೊಟ್ಟಿದೆ. ಸೆಲೆಕ್ಷನ್ ಪೋಸ್ಟಿಗೆ ಇಂಥವರನ್ನೇ ಆರಿಸಬೇಕು, ಇಂಥವರನ್ನೇ ಮಾಡಬೇಕು ಎಂದೇನು ಇಲ್ಲ. ಇದರಲ್ಲಿ ನಾವು ಏನು ಪದ್ಧತಿಯನ್ನು ಅನುಸರಿಸಬೇಕೆಂದು ಇಟ್ಟುಕೊಂಡಿದ್ದೇವೆ ಎಂದರೆ, ಸೀನಿಯಾರಿಟಿಗೆ ಮಹತ್ವಕೊಟ್ಟು ಅದನ್ನು ವಿಚಾರ ಮಾಡಿ ಆ ಅಧಿಕಾರಿಯ ಬಗ್ಗೆ ಕಾನ್‌ಫಿಡೆನ್ಷಿಯಲ್ ರಿಪೋರ್ಟ್ಸ್ ಸರಿಯಾಗಿಲ್ಲದೆ ಇರುವುದು, ಮತ್ತು ಅವರ ಬಗ್ಗೆ ಏನಾದರೂ ದೂರುಗಳು ಬಂದು ಅವರ ಮೇಲೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದರೆ ಅಂಥವರನ್ನು ಬಿಟ್ಟು ಮುಂದಿನ ಸೀನಿಯಾರಿಟಿ ಪ್ರಕಾರ ಯಾರಿಗೆ ಪ್ರಮೋಷನ್ ಕೊಡಬೇಕೋ ಅಂಥವರನ್ನು ಸ್ಕ್ರೀನ್ ಕಮಿಟಿಯವರು ಸ್ಕ್ರೀನ್ ಮಾಡುತ್ತಾರೆ ಅವರು ಸ್ಕ್ರೀನ್‌ಮಾಡಿ ಯಾರಿಗೆ ಪ್ರಮೋಷನ್ ಕೊಡಬಹುದು, ಯಾರು ಯೋಗ್ಯರು ಎಂಬುದನ್ನು ಅವರು ಶಿಫಾರಸ್ಸು ಮಾಡುತ್ತಾರೆ. ಆ ಪ್ರಕಾರ ಪ್ರಮೋಷನ್‌ಕೊಡಬೇಕು ಎಂಬ ಪದ್ಧತಿಯನ್ನು ನಾವು ಅನುಸರಿಸುತ್ತಿದ್ದೇವೆ. ಈ ಪ್ರಕಾರ 5 ಜನ ಚೀಫ್ ಇಂಜಿನಿಯರಿಗೂ ಪ್ರಮೋಷನ್ ಕೊಟ್ಟಿದೆ. ಇದರಲ್ಲಿ ಇಬ್ಬರು ಅಧಿಕಾರಿಗಳ ಸೀನಿಯಾರಿಟಿಯನ್ನುನಾವು ಸೂಪರ್‌ಸೀಡ್ ಮಾಡಿದ್ದೇವೆ. ಸೀನಿಯಾರಿಟಿ ಪ್ರಕಾರ ಪ್ರಮೋಷನ್ ಸಿಕ್ಕದೆ ಇರುವವರು ಇಬ್ಬರು ಇದ್ದಾರೆ. ಅವರಲ್ಲಿ ಒಬ್ಬರು 6 ತಿಂಗಳಲ್ಲಿ ರಿಟೈರ್ ಆಗುವವರು ಇದ್ದರು ಅವರನ್ನು ಚೀಫ್‌ಇಂಜಿನಿಯರಾಗಿ ಮಾಡದೇ ಇರುವುದರಲ್ಲಿ ತಪ್ಪೇನೂ ಇಲ್ಲ ಎನಿಸುತ್ತದೆ. ಏತಕ್ಕೆಂದರೆ ಅವರು 3 ತಿಂಗಳು 6 ತಿಂಗಳಲ್ಲಿ ಮನೆಗೆ ಹೋಗುತ್ತಾರೆ. ಮದ್ರಾಸಿನಲ್ಲಿ ಒಬ್ಬ ಅಧಿಕಾರಿಗಳಿಗೆ 3ವರ್ಷ ಸರ್ವೀಸ್ ಇದ್ದರೂ ಕೂಡ ಅಂಥವರಿಗೆ ಪ್ರಮೋಷನ್ ಕೊಡುತ್ತಿಲ್ಲ ಎಂದು ನಾನು ಕೇಳಿದ್ದೇನೆ. ಈ ದೃಷ್ಟಿಯಿಂದ ಈ ಅಧಿಕಾರಿಗಳಿಗೆ 6 ತಿಂಗಳು ಮಾತ್ರ ಸರ್ವೀಸ್ ಇದ್ದುದರಿಂದ ಅವರಿಗೆ ಪ್ರಮೋಷನ್ ಕೊಟ್ಟಿಲ್ಲ. ಇನ್ನೊಬ್ಬರ ಸೀನಿಯಾರಿಟಿಯನ್ನು ಸೂಪರ್ ಸೀಡ್ ಮಾಡಿದ ಕಾರಣವೇನೆಂದರೇ, ಅವರ ಮೇಲೆ ಆಂಟಿಕರಪ್ಷನ್ ಎಂಕ್ವೈರಿ ನಡೆಯುತ್ತಿತ್ತು. ಆದಕ್ಕೋಸ್ಕರ ಅವರಿಗೆ ಪ್ರಮೋಷನ್ ಸಿಕ್ಕಲಿಲ್ಲ. ಈ ಇಬ್ಬರು ಅಧಿಕಾರಿಗಳನ್ನು ಬಿಟ್ಟರೆ ಬಾಕಿ ಎಲ್ಲರಿಗೂ ಸಹ ಸೀನಿಯಾರಿಟಿ ಪ್ರಕಾರ ಪ್ರಮೋಷನ್ ಸಿಕ್ಕಿದೆ ಎಂದು ಹೇಳಬಹುದು. ಸೀನಿಯಾರಿಟಿ ಇದ್ದು ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ಸ್ ಸರಿಯಾಗಿದ್ದು, ಯಾವ ತಪ್ಪು, ಬ್ಲಾಕ್ ಮಾರ್ಕ್ಸ್ ಇಲ್ಲದೆ ಯಾರು ಇದ್ದರೋ ಅಂಥವರನ್ನು ಪ್ರಮೋಟ್ ಮಾಡಿದ್ದೇವೆ. ಹೀಗಿದ್ದರೂ ಕೂಡ ನಿಮ್ಮ ಕುಲದವರೇ ಉನ್ನತ ಅಧಿಕಾರಿಗಳು ಹೆಚ್ಚಾಗಿ ಪ್ರಮೋಷನ್ ಆಗಿ ಬಂದಿರುತ್ತಾರೆ ಎಂದರೆ, ಈಗ ನಾನು ಲಿಂಗಾಯತರ ಕುಲಕ್ಕೆ ಸೇರಿದವನು, ನಾನು

ಪಬ್ಲಿಕ್ ವರ್ಕ್ ಶಾಖೆ ಮಂತ್ರಿಯಾಗಿದ್ದೇನೆ ನಾನು ಇಲ್ಲಿ ಇರುವತನಕ ಲಿಂಗಾಯಿತರಿಗೆ ಅವಕಾಶವಿಲ್ಲ. ಎಂದು ಆರ್ಡರ್ ಮಾಡುವುದಕ್ಕಾಗುತ್ತದೆಯೋ? ಇದನ್ನು ಮಾನ್ಯ ಸದಸ್ಯರು ಸ್ವಲ್ಪ ಯೋಚನೆ ಮಾಡಬೇಕು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಇವುಗಳನ್ನೆಲ್ಲಾ ಬಿಟ್ಟು ಪ್ರಮೋಷನ್ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಆದ್ದರಿಂದ ಈ ಇಲಾಖೆಯ ನಿಯಮಾವಳಿಗಳನ್ನು ಅನುಸರಿಸಿಯೇ ಈ ಅಧಿಕಾರಿಗಳಿಗೆ ನಾವು ಪ್ರಮೋಷನ್ ಕೊಟ್ಟಿದ್ದೇವೆ. ಈ ದೃಷ್ಟಿಯಿಂದ ಅವರಿಗೆ ಪ್ರಮೋಷನ್ ಕೊಡುವಾಗ ಸೂಪರ್‌ಸೀಡ್ ಮಾಡಿದ್ದಾರೆ, ಕುಲ, ಗೋತ್ರ, ಜಾತಿಯ ಆಧಾರದ ಮೇಲೆ ಪ್ರಮೋಷನ್‌ಗಳನ್ನು ಕೊಡುತ್ತಾರೆ ಎಂದು ಇಲ್ಲಿ ವಾದ ಮಾಡುವುದು ಸರಿಯಲ್ಲ. ಮೇಲಿಂದ ಮೇಲೆ ಲೋಕೋಪಯೋಗಿ ಇಲಾಖೆಯಲ್ಲಿ ಮಂತ್ರಿಗಳಿಂದ ಹಿಡಿದು ಸೂಪರ್‌ವೈಜರ್‌ರವರಿಗೆ ಎಲ್ಲಾ ಹುದ್ದೆಗಳಲ್ಲಿಯೂ ಒಂದು ಕುಲದವರಾಗಿದ್ದಾರೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಇದರ ಸಲುವಾಗಿ ಕುಲ, ಗೋತ್ರ ಎಂದು ಎಣಿಸುವುದು ಬೇಡ. ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡದೆ, ಇನ್ ಎಫಿಷಿಯಂಟ್ ಆಗಿದ್ದರೆ, ಅವರಲ್ಲಿ ಲಂಚಗುಳಿತನ ಇದ್ದರೆ ಅದನ್ನು ಹೇಳುವುದಕ್ಕೆ ಮಾನ್ಯ ಸದಸ್ಯರಿಗೆ ಅಧಿಕಾರ ಇದೆ. ಈ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳು ನನ್ನ ಕುಲಕ್ಕೆ ಸೇರಿದವರಾಗಿದರೆ ಅದಕ್ಕೆ ನಾನೇನು ಮಾಡುವುದಕ್ಕಾಗುತ್ತದೆ? ಅದು ನನ್ನ ತಪ್ಪಲ್ಲ. ನ್ಯಾಯವಾಗಿ ಅವರ್ರಿಗೆ ಸಿಕ್ಕುವಂಥಾದ್ದು ಸಿಕ್ಕಬೇಕು. ಇದರ ಸಲುವಾಗಿ ಇದರಲ್ಲಿ ಯಾವ ಕುಲ ಗೋತ್ರವನ್ನೂ ಕೂಡತರುವಂಥಾದ್ದು ಬೇಡ ಎಂದು ಸ್ಪಷ್ಟವಾಗಿ ತಿಳಿಯಬೇಕು.

Sri S. SIVAPPA.—Justice should be seemingly justice.

ಶ್ರೀ ವೀರೇಂದ್ರ ಪಾಟೀಲ್.—ಎಲ್ಲಾ ಕುಲದವರಿಗೂ ಕೊಡಬೇಕೆಂದು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲನ್ನ ಬದಲಾವಣೆ ಮಾಡಬೇಕು ಮತ್ತು ಎಲ್ಲರಿಗೂ ನ್ಯಾಯವನ್ನು ದೊರಕಿಸುವುದಕ್ಕಾಗಿ ಒಂದೊಂದು ಕುಲಕ್ಕೆ ಒಬ್ಬೊಬ್ಬರು ಚೀಫ್ ಇಂಜಿನಿಯರು ಮಾಡಬೇಕು ಅದು ನಮ್ಮಿಂದ ಸಾಧ್ಯವಿಲ್ಲ. ತಾವು ಅಧಿಕಾರಕ್ಕೆ ಬಂದ ಮೇಲೆ ಅದನ್ನು ಮಾಡಬಹುದು.

Sri H. R. KESHAVA MURTHY.—Encourrage products of inter-caste marriage.

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ನಾನು ಆರ್ಡರ್ ಮಾಡುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದರು, ಚೀಫ್ ಇಂಜಿನಿಯರ ಆಫೀಸಿನಲ್ಲಿದ್ದ ಒಬ್ಬರು ಒಕ್ಕಲಿಗರ ಕೋಮಿನ ಆಫೀಸರನ್ನ ಬೇರೆ ಕಡೆ ಟ್ರಾನ್ಸ್‌ಫರ್ ಮಾಡಿ ತಮಗೆ ಬೇಕಾದ ಜಾತಿಯವರೊಬ್ಬರನ್ನು ಹೊಸದಾಗಿ ಅಲ್ಲಿಗೆ ತಂದರು ಎಂದು ನನಗೆ ಗೊತ್ತಿರುವ ಹಾಗೆ ಆ ಆಫೀಸರು ಬ್ರಾಹ್ಮಣರ ಕೋಮಿಗೆ ಸೇರಿದವರು. ಒಕ್ಕಲಿಗರ ಕೋಮಿನವರು ಇದ್ದರೆ ಏನಾಗುತ್ತದೆ, ಅಥವಾ ಯಾವ ಕೋಮಿನವರು ಇದ್ದರೆ ಏನಾಗುತ್ತದೆ? ಸರ್ಕಾರಿ ನೌಕರಿಯಲ್ಲಿ ಅನೇಕ ಜಾತಿಯವರು ಇದ್ದಾರೆ. ಎಲ್ಲರೂ ಕೂಡಿ ದೇಶವನ್ನು ಕಟ್ಟಬೇಕಾಗುತ್ತದೆ. ಜಾತಿಯ ವಿಷಯವನ್ನು ತಂದು ಈ ಅಸೆಂಬ್ಲಿಯಲ್ಲಿ ಭಾಷಣ ಮಾಡಿದರೆ ಜನ ಏನು ತಿಳಿದುಕೊಳ್ಳುತ್ತಾರೆ, ಎಂಬುದನ್ನು ಸಹ ನಾವು ಯೋಚನೆ ಮಾಡಬೇಕು. ಈ ರೀತಿ ಮಾತನಾಡುವುದು ಸರಿಯಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಶ್ರೀಮಾನ್ ಬಿ. ಎಸ್. ಪಾಟೀಲ್ ಅವರೂ ಕೂಡ ಹೇಳಿದ್ದಾರೆ. ನಾನು ಎರಡು ಸಾರಿ ಬಡ್ಜೆಟ್ ಚರ್ಚೆಯ ಮೇಲೆ ಉತ್ತರ ಕೊಟ್ಟಿದ್ದೇನೆ. ಆ ಭಾಷಣಗಳನ್ನು ಬೇಕಾದರೆ ತರಿಸಿ ನೋಡಿ. ಎರಡು ಸಲ ಬಡ್ಜೆಟ್ಟಿನ ಡಿಮ್ಯಾಂಡಿನ ಮೇಲೆ ನಡೆದಂತಹ ಚರ್ಚೆಗೆ ಉತ್ತರವನ್ನು ಕೊಡುವ ಪ್ರತಿಯೊಂದು ಸಂದರ್ಭದಲ್ಲಿಯೂ ಈ ಡಿಪಾರ್ಟ್‌ಮೆಂಟಿನಲ್ಲಿ ಲಂಚಗುಳಿತನ ಇಲ್ಲ ಎಂದು ನಾನು ಹೇಳುವುದಕ್ಕೆ ತಯಾರು ಇಲ್ಲ. ಲಂಚಗುಳಿತನ ಹೆಚ್ಚಿದಾತ ನೋಡಿಕೊಂಡು ತಪ್ಪು ಮಾಡಿದವರನ್ನು ಹಿಡಿದು ಶಿಕ್ಷೆ ಮಾಡುವುದಕ್ಕೆ ಟೆಕ್ನಿಕಲ್ ಆಡಿಟ್ ಸೆಲ್ ಇದೆ. ಲಂಚಗುಳಿತನದ ವಿಷಯದಲ್ಲಿ ಯಾವ ಮಾನ್ಯ ಸದಸ್ಯರೂ ಕೂಡ ಇಲ್ಲಿಯವರೆಗೆ ನನ್ನ ಹತ್ತಿರ ಒಂದು ದೂರನ್ನೂ ತಂದಿಲ್ಲ. ತಪ್ಪಿತಸ್ಥರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ತಯಾರಾಗಿದ್ದೇನೆ. ಯಾರು ಯಾರಿಂದ ದೂರು ಬಂದಿದೆ ಎಂಬುದಕ್ಕೆ ಅಂಕಿ ಅಂಶಗಳನ್ನ ನಾನು ಇಟ್ಟಿದ್ದೇನೆ. ಮೊನ್ನೆ ಒಂದು ಕೇಸಿನಲ್ಲಿ ಎಲ್ಲಾ ವಿಚಾರಣೆ ಆದ ಮೇಲೆ ಶ್ರೀಮಾನ್ ಬಿ. ಎಸ್. ಪಾಟೀಲ್ ಅವರು ನಮ್ಮ ಹತ್ತಿರ ಬಂದು ಹೇಳಿದರು ಆ ಕೇಸಿನ ಸಂಬಂಧದಲ್ಲಿ ಪಂಚಾಯಿತಿಯವರಿಂದ ಕಾಗದ ಬಂದ ತಕ್ಷಣ, ಮತ್ತು ಒಬ್ಬರು ಮಾನ್ಯ ಸದಸ್ಯರು ಬಂದು ಹೇಳಿದ ತಕ್ಷಣ 7 ದಿವಸಗಳವರೆಗೂ ಅಲ್ಲಿಗೆ ಟೆಕ್ನಿಕಲ್ ಆಡಿಟ್‌ಸೆಲ್‌ನವರನ್ನು ಕಳುಹಿಸಿ ಅವರು ಅಲ್ಲಿಂದ ರಿಪೋರ್ಟ್ ತೆಗೆದುಕೊಂಡು ಬಂದ ತಕ್ಷಣ ಆ ವಿಷಯದಲ್ಲಿ ನಾವು ಸಂಬಂಧಪಟ್ಟವರ ಮೇಲೆ

(ಶ್ರೀ ವೀರೇಂದ್ರ ಪಾಟೀಲ್)

ಕ್ರಮವನ್ನು ತೆಗೆದುಕೊಂಡಿದ್ದೇವೆ. ತಪ್ಪಿತಸ್ಥರು ಯಾವ ಜಾತಿಯವರೇ ಇರಲಿ, ಯಾರೇ ಆಗಿರಲಿ ಅವರಿಗೆ ಶಿಕ್ಷೆ ಆಗಲೇಬೇಕು. ಇದಕ್ಕೆ ಪ್ರತಿಯೊಬ್ಬರೂ ಸಹಕಾರ ಮಾಡಬೇಕು. ತಪ್ಪು ಮಾಡು ವಂತಹವರಿಗೆ ಶಿಕ್ಷೆಯನ್ನು ವಿಧಿಸುವುದಾದರೆ ಮುಂದೆ ಅವರು ಇನ್ನು ತಪ್ಪು ಮಾಡುವುದಿಲ್ಲ ಎನ್ನು ವಂಥ ಒಂದು ವಾತಾವರಣ ಹುಟ್ಟುತ್ತದೆ. ಈ ದೃಷ್ಟಿಯಿಂದ ಲಂಚಗುಳಿತನವನ್ನು ಹೋಗಲಾಡಿಸು ವುದಕ್ಕೆ ಪ್ರತಿಯೊಬ್ಬರೂ ಸಹಾಯ ಮಾಡಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳು ತ್ತೇನೆ.

ರೂರಲ್ ಕಮ್ಯೂನಿಕೇಶನ್ಸ್ ಸಲುವಾಗಿ ದುಡ್ಡು ಹೆಚ್ಚು ಖರ್ಚು ಮಾಡಬೇಕು ಅನ್ನುವ ಮಾತನ್ನು ಎಲ್ಲರೂ ಹೇಳಿದ್ದಾರೆ, ನಾನು ಒಪ್ಪುತ್ತೇನೆ ಈಗಾಗಲೇ 5 ಕೋಟಿ ರೂಪಾಯಿವರೆಗೆ ಖರ್ಚು ಮಾಡಿದ್ದೇವೆ. ಇನ್ನೂ 5½ ಕೋಟಿ ಖರ್ಚು ಮಾಡಿ ರೂರಲ್ ಕಮ್ಯೂನಿಕೇಶನ್ನನ್ನು ಒಂದು ಸ್ಟೇಜಿಗೆ ತರಬೇಕಾಗಿದೆ; ಅದನ್ನು ಒಂದು ಸ್ಟ್ಯಾಂಡರ್ಡ್ ಮುಟ್ಟಿಸಬೇಕಾದರೆ 5½ ಕೋಟಿ ರೂಪಾಯಿಗಳು ಬೇಕು. ಇದ್ದಂಥ 9½ ಕೋಟಿ ಜೊತೆಗೆ 13 ಕೋಟಿ ಹೊಸ ದುಡ್ಡು 4 ನೇ ಪಂಚ ವಾರ್ಷಿಕ ಯೋಜನೆಯಲ್ಲಿ ದುಡಿಯಬೇಕಾಗುತ್ತದೆ. ಈಗಾಗಲೇ ಪ್ಲಾನಿಂಗ್ ಕಮಿಷನ್ನಿನವರನ್ನೂ, ಕೇಂದ್ರ ಸರ್ಕಾರದವರನ್ನೂ 4 ನೆಯ ಪಂಚವಾರ್ಷಿಕ ಯೋಜನೆಯಲ್ಲಿ ರೂರಲ್ ಕಮ್ಯೂನಿಕೇಶನ್ನಿಗಾಗಿ ಏನಾದರೂ ಪ್ರಾವಿಶನ್ ಮಾಡಿ ಎಂದು ಎಲ್ಲ ಸರ್ಕಾರಗಳವರೂ ಕೇಳುತ್ತಿದ್ದಾರೆ. ಅದಕ್ಕೆ ಕೇಂದ್ರ ಸರ್ಕಾರದವರು ಕಮ್ಯೂನಿಕೇಶನ್ನಿಗೆ ಎಷ್ಟು ಖರ್ಚು ಮಾಡುತ್ತೀರೋ ಅದರಲ್ಲಿ 20 ಪರ್ಸೆಂಟ್ ರೂರಲ್ ಕಮ್ಯೂನಿಕೇಷನಿಗೆ ಖರ್ಚು ಮಾಡಬೇಕು, ಹಾಗೆ ಮಾಡಿದರೆ, ಅವರು ಮೂರನೆಯ ಒಂದು ಭಾಗ ಖರ್ಚನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಇದನ್ನು ನಾವು ಈಗಾಗಲೇ ಮಾಡಿದ್ದೇವೆ, ನಮಗೆ ಸಹಾಯ ಮಾಡಿ ಎಂದು ಕೇಳಿದ್ದೇವೆ. ಬಹುಶಃ ನಾಲ್ಕನೆಯ ಯೋಜನೆಯಲ್ಲಿ ದುಡ್ಡು ಬಂದರೆ ಏನಾದರೂ ಮಾಡಬೇಕು. 25-30 ಲಕ್ಷ ರೂಪಾಯಿ ರೂರಲ್ ಕಮ್ಯೂನಿಕೇಷನ್ನಿಗೆ ಇದ್ದರೆ, ಅದನ್ನು ಎಲ್ಲಕಡೆಗೂ ಹಂಚಿದರೆ ಎಷ್ಟು ಆಗುತ್ತದೆ? ಒಂದು ಕಡೆ 4 ಮೈಲಿ ಇದ್ದರೆ, ನಾರ್ತ್ ಕೆನರಾದಲ್ಲಿ ಒಂದು ತಾಲ್ಲೂಕಿನಲ್ಲಿ 2-3 ಮೈಲಿ ಆಗಿಲ್ಲ. ಆದ್ದರಿಂದ ದುಡ್ಡು ಖರ್ಚು ಮಾಡಿ, ಅಂಥ ತಾಲ್ಲೂಕನ್ನು ಎರಡನೆ ತಾಲ್ಲೂಕು ಮಟ್ಟದವರೆಗೆ ತರುವುದು ನಮ್ಮ ಕರ್ತವ್ಯ. ರೂರಲ್ ಕಮ್ಯೂನಿ ಕೇಶನ್ನಿಗೆ ಹೆಚ್ಚು ದುಡ್ಡನ್ನು 4 ನೆಯ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಪಡೆದು, ನಾವೂ ಹೆಚ್ಚು ಹಣ ಒದಗಿಸಿ, ರೂರಲ್ ಕಮ್ಯೂನಿಕೇಶನ್ನಿನಲ್ಲಿ ಈಗಾಗಲೇ ಮಾಡಿರುವ ಕೆಲಸ ಕಾರ್ಯ ಗಳನ್ನು ಸೇಫ್ ಸ್ಟೇಜಿಗೆ ತರುವ ಒಂದು ವಿಚಾರ ಮಾಡಿದ್ದೇವೆ.

ಅನೇಕ ಮಾನ್ಯ ಸದಸ್ಯರುಗಳು ಸಣ್ಣ ನೀರಾವರಿ ಯೋಜನೆಗಳಿಗೆ ರಿಸ್ಟ್ರಿಕ್ಷನ್ಸ್ ಹಾಕಿ ಬಿಟ್ಟಿದ್ದೇವೆ, ಯಾವ ಒಂದು ಹೊಸ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವ ಹಾಗಿಲ್ಲ, ಇದೊಂದು ಸಮಸ್ಯೆಯಾಗಿದೆಯೆಂದು ಅರಿಕೆ ಮಾಡಿದರು. ಈಗಾಗಲೆ ನಮ್ಮ ಉಪಸಚಿವರು ಹೇಳಿದ್ದಾರೆ. ಸಣ್ಣ ನೀರಾವರಿ ಯೋಜನೆಗೆ ಈ ವರ್ಷ ಖರ್ಚು ಮಾಡುವುದು ಆಗಿಲ್ಲ. ಇನ್ನೂ 5600 ಕೆರೆಗಳೂ ಇನ್‌ಕಂಪ್ಲೀಟಾಗಿ ಹಾಗೆಯೇ ಇವೆ. ಕಮಿಟೆಡ್ ವರ್ಕ್ಸ್ ಇವೆ. ಈ ಕೆಲಸ ಮುಗಿಸಬೇಕಾದರೆ ಇನ್ನೂ 10 ಕೋಟಿ ರೂಪಾಯಿವರೆಗೆ ಬೇಕು. ಹಿಡಿದ ಕೆಲಸವನ್ನು ಅರ್ಧಂಬರ್ಧಕ್ಕೆ ನಿಲ್ಲಿಸಿ ಎಂದು ಹೇಳುತ್ತೀರ? ಅದನ್ನು ಮೊದಲು ಮುಗಿಸಬೇಕು. ನಮ್ಮ ದೇಶದ ಎಕಾನಮಿ ಮತ್ತು ಎಕನಾಮಿಕನ್ನು ದಯೆಯಿಟ್ಟು ಅರ್ಥಮಾಡಿಕೊಳ್ಳಬೇಕು. ಪ್ರಾರಂಭ ಮಾಡಿದ ಕೆಲಸ ಮುಗಿಸಬೇಕು ಅಥವ 5600 ಕೆರೆಯ ಕೆಲಸವನ್ನು ತೆಗೆದುಕೊಂಡು, ಎಲ್ಲವನ್ನೂ ಅಪೂರ್ಣ ವಾಗಿಡಬೇಕೋ ಅನ್ನುವುದನ್ನು ವಿಚಾರ ಮಾಡಬೇಕು.

ಶ್ರೀ ಜಿ. ವಿ. ಗೌಡ.—ಎಲ್ಲಾ ಒಂದೆ ಕಡೆ ಆಗಿದೆ, ಒಂದು ರ್ಯಾಶನಲ್ ಬೇಸಿಸ್ ಮೇಲೆ ಮಾಡಬೇಕು.

ಶ್ರೀ ವೀರೇಂದ್ರಪಾಟೀಲ್.—ಪ್ಲಾನಿಂಗ್ ಕಮಿಶನ್ ಹತ್ತಿರ ಹೋದಾಗ ರೀಜನ್‌ವಾರ್ ಮಾತ ನಾಡುವ ಹಾಗಿಲ್ಲ. ಒಂದು ರೀಜನ್ನಿಗೆ ಇಷ್ಟು ಕೊಡಿ, ಇನ್ನೊಂದು ರೀಜನ್ನಿಗೆ ಅಷ್ಟು ಕೊಡಿ, ಎಂದು ಕೇಳುವ ಹಾಗಿಲ್ಲ. ಅವರು ಫೈನಾನ್ಸಿಯಲ್ ಪ್ರೋಗ್ರೆಸ್, ಫಿಸಿಕಲ್ ಪ್ರೋಗ್ರೆಸ್ ತೂಕ ಮಾಡಿ ಹಿಡಿಯುತ್ತಾರೆ, ಮತ್ತು ಕನ್ನಡಿಯಂತೆ ಮುಖಕ್ಕೆ ಹಿಡಿದು ತೋರಿಸುತ್ತಾರೆ. ಹಿಡಿದ ಕೆಲಸವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಿಲ್ಲವೆಂದು ಕಠೋರವಾಗಿ ಒಂದೊಂದು ಸಲ ಮಾತನಾ ಡುತ್ತಾರೆ. ಇವತ್ತು ಏನು ದುಡ್ಡು ಬಂದಿದೆ ಅದನ್ನು ತೆಗೆದುಕೊಂಡಿರುವ ಕೆಲಸವನ್ನು ಮುಗಿಸುವು ದಕ್ಕೆ ವಿನಿಯೋಗ ಮಾಡಬೇಕು. ಅದಕ್ಕೇ ಇನ್ನು ಮುಂದೆ ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳ ಕೆಲಸಗಳನ್ನು ಸೂಪರಿಂಡೆಂಟಿಂಗ್ ಇಂಜನಿಯರುಗಳು ತೆಗೆದುಕೊಳ್ಳಬೇಕಾದರೆ, ಸರ್ಕಾರದ ಅನು

ಮತಿ ಇಲ್ಲದೆ ತೆಗೆದುಕೊಳ್ಳಬಾರದೆಂದು ಗವರ್ನಮೆಂಟ್ ಆರ್ಡರ್ ಮಾಡಿದ್ದೇವೆ. ತೆಗೆದುಕೊಳ್ಳಲೇ ಬಾರದೆಂಬ ಉದ್ದೇಶದಿಂದ ರಿಸ್ಟ್ರಿಕ್ಷನ್ ಹಾಕಿಲ್ಲ, ನಮ್ಮ ಅನುಮತಿ ಇಲ್ಲದೆ ತೆಗೆದುಕೊಳ್ಳಕೂಡದೆಂದು ಹೇಳಿದ್ದೇವೆ ಅಷ್ಟೆ. ಕೇಂದ್ರದಿಂದ ಹೆಚ್ಚು ದುಡ್ಡು ಬಂದರೆ, ಕಮಿಟೆಡ್ ವರ್ಕ್ಸ್ ಮುಗಿಸುವುದು ಬಿಟ್ಟು ಹೊಸ ಕೆಲಸ ಮಾಡಿ ಎಂದು ಹೇಳುವುದಕ್ಕೆ ಯಾವ ರೀತಿ ಆಗುತ್ತದೆ ? ನಮ್ಮ ಹತ್ತಿರ ಈ ಅಧಿಕಾರವನ್ನು ಒಂದು ಉದ್ದೇಶದಿಂದ ಇಟ್ಟುಕೊಂಡಿದ್ದೇವೆ. ಎಲ್ಲಿ ಸ್ಪಿಲ್‌ಓವರ್ ಇಲ್ಲ, ಅಲ್ಲಿಗೆ ಹಣ ಹಂಚೋಣ, ಹೊಸ ಕೆಲಸಗಳಿಗೆ ಖರ್ಚುಮಾಡುವುದಕ್ಕೆ ಹಣ ಒದಗಿಸೋಣವೆಂಬ ವಿಚಾರದಿಂದ ನಿರ್ಣಯ ಮಾಡಿದ್ದೇವೆ. ಬಹುಶಃ ಈ ನಿರ್ಣಯ ತಪ್ಪು ಎಂದು ಹೇಳಲಿಕ್ಕಿಲ್ಲ. ಸ್ಪಿಲ್‌ಓವರ್ ಹೆಚ್ಚಿದರೆ ಹೆಚ್ಚಿಗೆ ವರ್ಕರ್ಸ್ ತೆಗೆದುಕೊಳ್ಳುವುದಕ್ಕಾಗುತ್ತದೆಯೇ ?

ಹೊಸದಾಗಿ ಬಂದಿರುವ ನಮ್ಮ ಚೀಫ್ ಇಂಜನಿಯರು ತಮ್ಮದೇ ಆದ ಒಂದು ಸ್ಟ್ಯಾಂಡರ್ಡ್ ಹಾಕಿದ್ದಾರೆ ಎಂಬ ಮಾತು ಕೆಲವೊಂದು ಸದಸ್ಯರು ಹೇಳಿದ್ದಾರೆ. ಚೀಫ್ ಇಂಜನಿಯರು ಟೆಕ್ನಿಕಲ್ ಹೆಡ್. ನಾವು ಟೆಕ್ನಿಕಲ್ ಮ್ಯಾಟರ್ಸಿನಲ್ಲಿ ಕೈಹಾಕುವ ಹಾಗಿಲ್ಲ, ಅವರು ಏನು ನಿರ್ಣಯ ಮಾಡುತ್ತಾರೋ ಅದನ್ನು ನಾವು ಒಪ್ಪಿಕೊಳ್ಳಬೇಕು ಅದರಂತೆ ಕೆಲಸ ಮಾಡದಿದ್ದರೆ ಕೆಲಸ ಚೆನ್ನಾಗಿರುವುದಿಲ್ಲ. ಅವರು ಏನು ಹೇಳಿದ್ದಾರೆಂದರೆ, ಸ್ಟೋನ್ ಪಿಚಿಂಗ್ ಮಾಡಿ ಎಂದು, ಸ್ಟೋನ್ ಪಿಚಿಂಗ್ ಮಾಡಿದ್ದೇ ಆದರೆ ಒಳಭಾಗವನ್ನು ಭದ್ರ ಮಾಡಬಹುದು : ಅದಕ್ಕೆ ಶಕ್ತಿ ಬರುತ್ತದೆ; ಇಲ್ಲದಿದ್ದರೆ ವಾಟರ್ ಪರ್ಕೊಲೇಟ್ ಆಗುತ್ತದೆ. ಹಿಂದಕ್ಕೆ ನಮ್ಮ ವೇಸ್ಟ್‌ವೇಯಲ್ಲಿ ಫ್ಲಡ್ ಡಿಸ್‌ಚಾರ್ಜಗಳಿಗೆ ಸಾಕಷ್ಟು ಅವಕಾಶವಿರುತ್ತಾ ಇರಲಿಲ್ಲ. ಅದು ಹಿಂದಿನ ಪದ್ಧತಿಯಾಗಿತ್ತು. ಅದರಿಂದ ಅನೇಕ ಕೆರೆಗಳು ಪ್ರತಿವರ್ಷ ಒಡೆದು ಹೋಗಿವೆ. ಒಡೆದ ಕೆರೆಗಳ ದುರಸ್ತಿ ಮಾಡಿದ್ದೇವೆ. Flood damage worksಗೆ 60–70 ಲಕ್ಷ ರೂಪಾಯಿ ಖರ್ಚು ಮಾಡುತ್ತಾ ಇದ್ದೇವೆ. ಅದಕ್ಕೋಸ್ಕರವೆ, ಈ ರೀತಿ ಡ್ಯಾಮೇಜ್ ಆಗಬಾರದೆಂದು, Flood dischargeಗೆ ಹೆಚ್ಚು ಸ್ಕೋಪು ಇರಬೇಕು ಎಂದು ಹೇಳಿದ್ದಾರೆ; ಸ್ಟೋನ್ ಪಿಚಿಂಗ್ ಮಾಡಿದರೆ ಕ್ವಾಲಿಟಿ ಸೇಫ್ ಆಗಿರುತ್ತದೆಂದು ಅವರಿಗೆ ಸ್ಪಷ್ಟವಾಗಿ ಹೇಳಿದ್ದಾರೆ ಅದರಲ್ಲಿ ಹೆಚ್ಚು ಖರ್ಚಾಗುವುದಿಲ್ಲ. ಲೆಕ್ಕ ಹಾಕಿ ಹೇಳಿದರೆ, ಬಹುಶಃ ಏನಾದರೂ ಖರ್ಚಾದರೆ ಶೇಕಡ 5-10 ರಷ್ಟು ಹೆಚ್ಚಾಗಬಹುದು, ಆದರೆ ಅದೂ ಆಗಲಿಕ್ಕಿಲ್ಲವೆಂದು ನನಗನಿಸುತ್ತದೆ. ಒಂದುವೇಳೆ 5-10 ಪರ್ಸೆಂಟು ಹೆಚ್ಚಿಗೆ ಖರ್ಚಾಗಿ, ಕ್ವಾಲಿಟಿ ಹೆಚ್ಚಾದರೆ ಏಕೆ ಮಾಡಬಾರದು ? ಕೆರೆ ಒಡೆದು ಹೋದಲ್ಲಿ ಸರ್ಕಾರದವರು ಹೆಚ್ಚಿಗೆ ದುಡ್ಡು ಕೊಡಬೇಕು ಕೊಟ್ಟರೂ, ಆ ವರ್ಷ ನೀರು ಬರುವುದಿಲ್ಲ ಜನಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಈ ರೀತಿ ಪದ್ಧತಿಯಲ್ಲಿ ಮಾಡಿದರೆ, ಬ್ರೀಚ್ ಆಗುವುದು ಕಡಿಮೆಯಾಗುತ್ತದೆಂದು, ಸ್ಟ್ಯಾಂಡರ್ಡ್ ಮಾಡಿದ್ದಾರೆ.

ಪ್ರಾಜೆಕ್ಟುಗಳ ಬಗ್ಗೆ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಅದರ ಬಗ್ಗೆ ವಿಶೇಷ ಹೇಳಬೇಕಾಗಿಲ್ಲ. ಏನಾದರೂ ಕಾಂಪ್ಲಿಕೇಷನ್ ಇದ್ದರೆ ಕೇಳಬಹುದು, ಹೇಳುವುದಕ್ಕೆ ಸಿದ್ಧನಿದ್ದೇನೆ. ಒಂದು ವಿಚಾರ ಶ್ರೀ ಗಾಂಜಿ ವೀರಪ್ಪನವರು ಹೇಳಿದರು, ಶ್ರೀ ದೇವೇಗೌಡರು ಮತ್ತು ಮಾನ್ಯ ಎಂ. ಸಿ. ಬಸಪ್ಪನವರೂ ಹೇಳಿದರು ಅಂತ ಕಾಣುತ್ತದೆ, ನೆನಪಿಲ್ಲ; ಇವತ್ತು ಎಲ್ಲಕ್ಕೂ ಹೆಚ್ಚಿಗೆ ಇರ್ರಿಗೇಶನ್ನಿಗೆ ಕೊಡಬೇಕು. ಶರಾವತಿ ವಿದ್ಯುಚ್ಛಕ್ತಿ ಬಂದಿರುವಾಗ, ಬಹುಶಃ ಇನ್ನು ಹತ್ತು ವರ್ಷದವರೆಗೂ ಯಾವ ನೆರೆಪ್ರಾಂತ್ಯಕ್ಕೂ ಕೂಡ ಪವರ್‌ಬೇಕೆಂದು ಭಿಕ್ಷೆ ಬೇಡುವ ಪ್ರಶ್ನೆ ಇಲ್ಲ. ಮೊದಲನೆ ಯೂನಿಟ್ ಕಮಿಶನ್ ಆಗಿದೆ; ಆರು ಆರು ತಿಂಗಳಿಗೆ ಒಂದೊಂದು ಯೂನಿಟ್ ಬಂದ ಹಾಗೆ ಕೊಡುತ್ತಿರುತ್ತೇವೆ. ಇವತ್ತು ನಮಗೆ ಅಭಾವವಿರುವುದು ಇರ್ರಿಗೇಷನ್ ಫೆಸಿಲಿಟೀಸ್. ಅಂದ ಮೇಲೆ ನಾವು ನಿರ್ಣಯ ಮಾಡಿಕೊಳ್ಳಬೇಕು. ಇರ್ರಿಗೇಶನ್ ಡಿಮ್ಯಾಂಡ್ ಬಂದಾಗ ಇರ್ರಿಗೇಶನ್ನಿಗೆ ಹೆಚ್ಚು ಹಣ ಕೊಡಿ ಎಂದು ಕೇಳುತ್ತೀರಿ, ಎಜುಕೇಶನ್ ಡಿಮ್ಯಾಂಡ್ ಬಂದಾಗ ಎಜುಕೇಶನ್ನಿಗೆ ಹೆಚ್ಚು ದುಡ್ಡು ಕೊಡಿ ಅನ್ನುತ್ತೀರಿ. ಅಗ್ರಿಕಲ್ಚರಲ್ ಡಿಮ್ಯಾಂಡ್ ಬಂದಾಗ ಅದಕ್ಕೆ ಹೆಚ್ಚು ದುಡ್ಡು ಕೊಡಬೇಕೆಂದು ಹೇಳುತ್ತೀರಿ, ಸೋಶಿಯಲ್ ವೆಲ್‌ಫೇರಿಗೆ ಹೆಚ್ಚು ಹಣ ಇಡಬೇಕೆನ್ನುತ್ತೀರಿ. ಹೀಗಾದರೆ ಹಣ ಎಲ್ಲಿಂದ ಒದಗುತ್ತದೆ ? ದುಡ್ಡು ಎಷ್ಟಿದೆ ಅನ್ನುವುದು ತಮಗೆ ಗೊತ್ತಿದೆ. ನೆರೆಯ ಪ್ರಾಂತ್ಯವಾದ ಆಂಧ್ರದ ಮೆಂಬರುಗಳ ಕೂಡ ಮಾತನಾಡಿದ್ದೇನೆ. ಅವರ ಮಂತ್ರಿಗಳ ಕೂಡಾನೂ ಮಾತನಾಡಿದ್ದೇನೆ. ಅವರು ಏನು ಹೇಳುತ್ತಾರೆಂದರೆ : ನಮ್ಮಲ್ಲಿ ಐದು ನಯಾಪೈಸೆ ಉಳಿದರೆ ಆ ಹೆಚ್ಚು ದುಡ್ಡನ್ನು ನಾಗಾರ್ಜುನ ಸಾಗರಕ್ಕೆ ಹಾಕುತ್ತೇವೆ, ನಮ್ಮ ಒಂದು ನಾಗಾರ್ಜುನ ಸಾಗರವಾದರೆ 40ಲಕ್ಷ ಎಕರೆ ನೀರಾವರಿಯಾಗುತ್ತದೆ ಎಂದು ಆಂಧ್ರದಲ್ಲಿ ಅವರು ರಸ್ತೆಗಳು, ಮುಂತಾದಕ್ಕೆ ಅಷ್ಟು ಆದ್ಯತೆ ಕೊಟ್ಟಿಲ್ಲ. ಎಷ್ಟು ದುಡ್ಡು ಸಿಗುತ್ತದೋ ಅಷ್ಟನ್ನೂ ನಾಗಾರ್ಜುನ ಸಾಗರಕ್ಕೆ ಹಾಕುತ್ತಿದ್ದಾರೆ. ಮಾನ್ಯ ಸದಸ್ಯರೊಬ್ಬರು ಸ್ಮಾಲ್, ಮೀಡಿಯಂ ಮತ್ತು ಮೇಜರ್ ಇರ್ರಿಗೇಷನ್ನಿಗೆ ಕೊಟ್ಟಂಥ ದುಡ್ಡನ್ನು ಏಕೆ ಖರ್ಚು ಮಾಡಲಿಲ್ಲವೆಂದು ಕೇಳಿದರು. ನಮಗೆ

(ಶ್ರೀ ವೀರೇಂದ್ರ ಪಾಟೀಲ್)

ಖರ್ಚು ಮಾಡುವುದಕ್ಕೆ ಕೆಪಾಸಿಟಿ ಇಲ್ಲ, ಶಕ್ತಿ ಇಲ್ಲವೆಂದು ಅಲ್ಲ. ಆದರೆ ಇವತ್ತು ನಾವು ಆದ್ಯತೆ ಕೊಟ್ಟಿರುವುದು ಶರಾವತಿಗೆ ಏನಾದರೂ ಮಾಡಿ, ಶರಾವತಿಯೋಜನೆಯನ್ನು ಮೊದಲು ಮುಗಿಸ ಬೇಕೆಂದು, ಎಷ್ಟು ದುಡ್ಡಿದ್ದರೂ ಶರಾವತಿಗೆ ಹಾಕುತ್ತಿದ್ದೇವೆ, ಎರಡನೆ ಸೆಕ್ಟರ್ ಸಫರ್ ಆದರೂ ಪರವಾಗಿಲ್ಲವೆಂದು ಶ್ರೀಮಾನ್ ಗಾಂಜಿ ವೀರಪ್ಪನವರು ಹೇಳಿದಂತೆ ನಾವು ನಿರ್ಣಯ ಮಾಡಬೇಕು. ಇರ್ರಿಗೇಶನ್ ಫೆಸಿಲಿಟಿ ಬೇಕೆಂದರೆ, ರೋಡು, ಬ್ರಿಡ್ಜ್, ವಗೈರೆಗೆ ಪ್ರಾಮುಖ್ಯತೆ ಕೊಡುವುದು ಮರೆತು ಬಿಡಿ, ಎಲ್ಲಾ ದುಡ್ಡನ್ನು ಇರ್ರಿಗೇಶನ್ನಿಗೆ ಹಾಕಿ. ದೇಶದಲ್ಲಿ ಹೆಚ್ಚು ಬೆಳೆಯಾಗ ಬೇಕಾದರೆ ಹೆಚ್ಚಿಗೆ ನೀರಾವರಿ ಸೌಕರ್ಯಗಳಾಗಬೇಕು. ಆದ್ದರಿಂದ ತಾವು ನಿರ್ಣಯ ಮಾಡಿ.

5.30. P.M.

ತಾವು ಇಲ್ಲಿ ಬಂದಾಗ ನಮ್ಮ ಭಾಗದಲ್ಲಿ ರೋಡಿನ ಕೆಲಸವಾಗಿಲ್ಲ. ಇಲ್ಲಿ ಇರಿಗೇಷನು ಫೆಸಲಿಟೀಸ್ ಆಗಿಲ್ಲ, ಇಂತಹ ಕೆಲಸಗಳನ್ನು ಮಾಡಿಕೊಟ್ಟಿಲ್ಲ ಎಂದು ಹೇಳುತ್ತೀರಿ. ಶರಾವತಿಯಂತಹ ಒಂದು ಹೊಸ ಯೋಜನೆಯನ್ನು ಮಾಡಬೇಕೆಂದು ಒಂದು ನಿರ್ಣಯ ಮಾಡಿ ಹೇಳಬೇಕು. ಇರಿಗೇಷನ್ನಿಗಾಗಿ ಇಷ್ಟು ಹಣ ಕೊಡಬೇಕಾಗಿತ್ತು ಎಂದು ಒಬ್ಬರೂ ಇಲ್ಲಿ ಒಂದು ನಿರ್ಣಯ ಮಾಡುವ ಹಾಗಿಲ್ಲ. ಪ್ರತಿಯೊಂದು ಇಲಾಖೆಯ ಡಿಮ್ಯಾಂಡೂ ಬಂದಾಗ ಇಲ್ಲಿ ಇದಕ್ಕೆ ಕೊಟ್ಟಿರತಕ್ಕ ಹಣ ಸಾಲದು, ಇನ್ನೂ ಕೊಡಿ ಎಂದರೆ ಹಣವೆಲ್ಲಿಂದ ಬರಬೇಕು ? ಇರಿಗೇಷನ್ನಿನ ಬಗ್ಗೆ ಅನೇಕ ಸಲ ಇಲ್ಲಿ ಹೇಳುತ್ತಾರೆ. ಅವಕಾಶ ಸಿಕ್ಕಿದಾಗಲೆಲ್ಲಾ ಇದಕ್ಕಾಗಿ ಹೆಚ್ಚಿನ ಹಣ ಕೊಡಬೇಕು. ಇರಿಗೇಷನ್ನು ಪ್ರಾಬ್ಲಂ ಎನ್ನುವುದು ಅಷ್ಟು ದೊಡ್ಡದು, ಕಾವೇರಿ ಬೇಸಿನ್‌ನಲ್ಲಿ ಎಷ್ಟು ನೀರು ಸಿಗುತ್ತದೋ ಎಷ್ಟು ನೀರು ಸಿಗುತ್ತದೋ ಅದನ್ನು 1974ನೇ ಇಸವಿಯೊಳಗೆ ಉಪಯೋಗ ಮಾಡಿಕೊಂಡರೆ ಎಷ್ಟೋ ಎಕರೆಗಳನ್ನು ಭೂಮಿ ವ್ಯವಸಾಯ ಮಾಡಲು ಅನುಕೂಲವಾಗುತ್ತದೆ ಎಂದು ನಮ್ಮಲ್ಲಿರುವ ಅಂಕೆ ಸಂಖ್ಯೆಗಳಿಂದ ಗೊತ್ತಾಗುತ್ತದೆ. ನಮ್ಮಲ್ಲಿ ದುಡ್ಡು ಎಷ್ಟಿದೆಯೋ ಅದರ ಮೇಲೆ ಕೆಲಸಗಳನ್ನು ಮಾಡಬೇಕಾಗುತ್ತದೆ, ಮೈನರು ಇರಿಗೇಶನ್ನಿಗಾಗಿ ಹೆಚ್ಚು ಪ್ರಮಾಣದಲ್ಲಿ ಕೆಲಸಗಳನ್ನು ಮಾಡ ಬೇಕೆಂದು ಈ ಸಾರಿ ಹೆಚ್ಚು ಹಣವನ್ನು ಕೊಟ್ಟು ಉಪಯೋಗಿಸಿಕೊಳ್ಳಲು ಅನುಕೂಲವಾಯಿತು. ಆದರೆ ಕೃಷ್ಣಾನದಿ, ಹಾಗೂ ಕಾವೇರಿ ನದಿಯ ನೀರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾಗಿ ರುವಾಗ ಮೈನರು ಇರಿಗೇಶನ್ನಿಗೆ ಹೆಚ್ಚು ಹಣ ಸಿಗುತ್ತಿಲ್ಲ. ನೀರನ್ನು ಪೂರ್ಣವಾಗಿ ಯುಟಿಲೈಸು ಮಾಡಿಕೊಳ್ಳಬೇಕಾದರೆ ಮೀಡಿಯಂ ಹಾಗೂ ಮೇಜರು ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಲೇಬೇಕಾಗು ತ್ತದೆ. ಮೈನರು ಪ್ರಾಜೆಕ್ಟುಗಳಿಂದ ಈ ನೀರಿನ ಉಪಯೋಗವಾಗುವುದಿಲ್ಲ. ನಮ್ಮ ನೀತಿ ರಾಜ್ಯ ದಲ್ಲಿ ಮೀಡಿಯಂ ಹಾಗೂ ಮೇಜರು ಪ್ರಾಜೆಕ್ಟುಗಳನ್ನು ಪ್ರಾರಂಭ ಮಾಡಿ ಅದಷ್ಟು ತೀವ್ರವಾಗಿ ಮುಗಿಸುವ ಪ್ರಯತ್ನ ಮಾಡಬೇಕು. ಇವೆಲ್ಲಾ ಮುಗಿಸಬೇಕಾದರೆ ನಮಗೆ ನೂರಾರು ಕೋಟಿ ಯಷ್ಟು ಹಣ ಬೇಕಾಗುತ್ತದೆ. ಕೆಲಸ ಮುಗಿಯುವ ವೇಳೆಗೆ 116 ರಿಂದ 120 ಕೋಟಿಯವರೆಗೆ ಹೋಗುತ್ತದೆ. ಹೀಗೆ ಸುಮಾರು 300-400 ಕೋಟಿಯಷ್ಟು ಹಣ ಬೇಕಾಗುವಾಗ ಕೇಂದ್ರದ ಸಹಾಯವಿಲ್ಲದೆ ಯಾವ ಕೆಲಸಗಳನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಇಂತಹ ದೊಡ್ಡ ಯೋಜನೆಗಳನ್ನು ನಮ್ಮ ಸ್ಟೇಟು ಪ್ಲಾನಿಗೆ ಸೇರಿಸಬೇಡಿ ಎಂದು ಕೇಂದ್ರ ಸರಕಾರದವರನ್ನು ಕೇಳುತ್ತಿದ್ದೇವೆ ಮತ್ತು ನಿಮ್ಮ ಪ್ಲಾನಿನ ಚೌಕಟ್ಟಿನಲ್ಲಿಯೇ ಇದನ್ನೂ ಸೇರಿಸಿಕೊಂಡು ನಮಗೆ ಕೆಲಸ ಮಾಡಲು ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ. ಅದರಂತೆ ಕಾಳೀ ನದಿ ಯೋಜನೆ ಹಾಗೂ ಅಪ್ಪರು ಕೃಷ್ಣಾ ಯೋಜನೆಗಳನ್ನು ಮಾಡಲು ನಮ್ಮಲ್ಲಿ ದುಡ್ಡು ಕೊಡಲು ಆಗುತ್ತಿಲ್ಲ. ಕೇಂದ್ರದ ಸಹಾಯ ದೊರೆತರೆ ಇವನ್ನು ತೀವ್ರವಾಗಿ ಮುಗಿಸಲು ನಮ್ಮ ರಾಜ್ಯಕ್ಕೆ ಸಾಧ್ಯವಾಗುತ್ತದೆ.

ಮೈನರು ಪೋರ್ಟುಗಳ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಇಲ್ಲಿ ಹೇಳಿದ್ದಾರೆ. ಅನೇಕರು ಪೋರ್ಟುಗಳ ಪ್ರಗತಿ ಹಾಗೂ ಪ್ರೋಗ್ರೆಸ್ಸು ಸರಿಯಾಗಿಲ್ಲ ಎಂದು ಹೇಳಿದರು. ಇದನ್ನು ನಾನೂ ಒಪ್ಪುತ್ತೇನೆ. ಇದಕ್ಕೆ ಅನೇಕ ಕಾರಣಗಳಿವೆ, ಪೋರ್ಟುಗಳಲ್ಲಿ ಕೆಲಸ ಮಾಡಲು ತರಬೇತಿಯಾದ ಮೆರೀನು ಇಂಜಿನಿಯರುಗಳು ನಮ್ಮಲ್ಲಿಲ್ಲ. ಅವರಿಗೆ ತರಬೇತಿ ಕೊಡಲು ಇಲ್ಲಿ ಯಾವ ಕೋರ್ಸುಗಳೂ ಇಲ್ಲ. ಇವರನ್ನೆಲ್ಲಾ ಹೊರಗಡೆಗೆ ಕಳುಹಿಸಬೇಕಾಗುತ್ತದೆ. ಅಲ್ಲದೆ ಇಲ್ಲಿ ಕೆಲಸ ತಿಳಿದಿರುವಂತಹ ಕಂಟ್ರಾಕ್ಟರುಗಳು ಬೇಕಾಗುತ್ತದೆ. ಸರಿಯಾದ ಕೆಲಸ ತಿಳಿದವರು ಸಿಗದೇ ಹೋದರೆ ಅಲ್ಲಿ ವಾರ್ಫ್ ಮತ್ತಿತರ ಕಟ್ಟಡಗಳನ್ನು ಕಟ್ಟಲು ಆಗುವುದಿಲ್ಲ. ಹಾಗೆ ಈಗ ಕೆಲವರು ಕೆಲಸ ಮಾಡುತ್ತೇವೆ ಎಂದು ಬಂದವರು ಏರಿಸಿದ ಬೆಲೆಗಳನ್ನು ಕೊಡಿ ಎಂದು ಕೇಳುತ್ತಾರೆ. ಅದನ್ನು ಕೊಡುವುದೋ ಬಿಡು ವುದೋ ಎನ್ನುವ ಸಂಶಯ ಬರುತ್ತಿದೆ. ಮೂರನೇದು ಇದರಲ್ಲಿ ನಮಗೆ ಫಾರಿನ್ ಎಕ್ಸ್‌ಚೇಂಜು

ಬೇಕಾಗುತ್ತದೆ, ಇದಕ್ಕೆ ಬೇಕಾದ ಮೆಷಿನರಿಗಳು ನಮ್ಮ ದೇಶದಲ್ಲಿಲ್ಲ. ಹೊರಗಡೆಯಿಂದ ನಾವು ತರಿಸಿಕೊಳ್ಳಬೇಕು, ಇಲ್ಲಿ ಸಿಗುವುದಿಲ್ಲ. ಇಂತಹ ಕೆಲವು ಕಷ್ಟಗಳಿಂದಾಗಿ ನಮಗೆ ಇದನ್ನು ಮಾಡುವುದು ಒಂದು ತೊಡಕಾಗಿದೆ. ಇದನ್ನೆಲ್ಲಾ ಎದುರಿಸಿಕೊಂಡು ಮುಂದಕ್ಕೆ ಹೋಗಬೇಕಾಗಿ ಬಂದಿದೆ. ಶ್ರೀ ಕೋಲ್ಕೆಬೈಲ್‌ರವರು ಸ್ಪೆಷಲ್ ಆಫೀಸರು ಎಂದೇಕೆ ಮಾಡಿದಿರಿ ? ಅವರುಗಳು ಟೆಕ್ನಿಕಲ್ ಕೆಲಸಗಳನ್ನು ನೋಡಲು ಅವರಿಗೇನು ತಿಳಿಯುತ್ತದೆ ಎಂದು ಹೇಳಿದರು. ಸಿವಿಲ್ ವರ್ಕ್ಸ್‌ಗಳನ್ನೆಲ್ಲಾ ನೋಡಿಕೊಳ್ಳಲು ಪ್ರತ್ಯೇಕವಾಗಿ ಒಬ್ಬರು ಚೀಫ್ ಇಂಜನೀಯರು ಎಂದಿರುತ್ತಾರೆ. ಬಹುಶಃ ಸ್ಟೇಟು ಪೋರ್ಟ್ಸ್ ಆಫೀಸರು ಆಗಿರುವವರು ಅವರ ರಿಕ್ವೈರುಮೆಂಟುಗಳೇನು ಎಂದು ತಿಳಿಸುತ್ತಾರೆ. ಅದರಂತೆ ಚೀಫ್ ಇಂಜನೀಯರುರವರು ಅವರ ಕೆಲಸಕಾರ್ಯಗಳನ್ನು ನೋಡಿಕೊಳ್ಳುತ್ತಾರೆ. ಮಾನ್ಯ ಸದಸ್ಯರು ಹೇಳಿದಂತಹ ಪಾಯಿಂಟುಗಳಿಗೆಲ್ಲಾ ನನಗೆ ತಿಳಿದಮಟ್ಟಿಗೆ ಉತ್ತರ ಕೊಟ್ಟಿರುತ್ತೇನೆ. ತಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಇಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ನಮ್ಮ ಮರಾಮತ್ತು ಇಲಾಖೆಯ ಮಂತ್ರಿಗಳಿಗೆ ತಿಳಿದಂತೆ ಅಭಾವ ಪೀಡಿತ ಪ್ರದೇಶಗಳಿಗಾಗಿ ಈಗಿನ ನಾಲ್ಕಾರು ಜಿಲ್ಲೆಗಳಲ್ಲಿ ಒಂದು ಖಾಯಂ ಆದ ಪರಿಹಾರ ಯೋಜನೆ ಮಾಡಲು ಸುಮಾರು ನಲವತ್ತು ಕೋಟಿಯಷ್ಟು ಖರ್ಚು ಮಾಡಲು ಕೇಂದ್ರ ಸರಕಾರಕ್ಕೆ ಕಳುಹಿಸಲಾಗಿತ್ತು. ಅದು ಕಾರ್ಯಗತವಾಗಲು ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರಕಾರಕ್ಕೆ ಈ ಯೋಜನೆ ಕಳುಹಿಸಲಾಗಿದೆ. ಅವರಿಂದ ಸಹಾಯ ದೊರಕಲಿದೆ.

ಶ್ರೀ ಎಸ್. ಎಸ್. ಕೊಲ್ಕೆಬೈಲ್ (ಕುಂದಾಪುರ).—ಮೂರನೇ ಯೋಜನೆಯಲ್ಲಿ ಪೋರ್ಟ್ಸ್ ಡೆವೆಲಪ್‌ಮೆಂಟಿಗಾಗಿ ಮೂರು ಕೋಟಿಯಷ್ಟು ಹಣವನ್ನು ಮೀಸಲಾಗಿಡಲಾಗಿದೆ ಎಂದರೆ ಅಷ್ಟನ್ನೂ ಬರುವ ವರ್ಷವಲ್ಲಿ ಖರ್ಚು ಮಾಡುವುದಕ್ಕಾಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಒಂದು ವರ್ಷದಲ್ಲೇ ಖರ್ಚು ಮಾಡುತ್ತೇವೆಂದು ಹೇಳಲಿಲ್ಲ. ಸ್ವಲ್ಪ ಕೆಲಸಗಳಾಗುತ್ತದೆ. ಹಾಗೂ ಇದಕ್ಕೆ ಅನೇಕ ಕಾರಣಗಳಿವೆ ಎಂದು ಆಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರಿಗೂ ತಿಳಿದಂತೆ ಇದು ಬಹಳ ತೊಡಕಿನ ಸಮಸ್ಯೆ. ಮಾನ್ಯ ಸದಸ್ಯರು ಇದರ ಬಗ್ಗೆ ಇನ್ನೂ ಹೆಚ್ಚು ತಿಳಿದಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಆಗ ಯೋಚನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Sri N. O. SAMAJI (Khanapur) [SPOKE IN MARATHI]

ಶ್ರೀ ವೀರೇಂದ್ರ ಪಾಟೀಲ್.—ಪ್ರತಿಯೊಬ್ಬ ಸದಸ್ಯರೂ ಅವರವರ ಕಾನ್‌ಸ್ಟಿಟ್ಯುಯೆನ್ಸಿ ಬಗ್ಗೆ ಕೆಲವು ಪ್ರಶ್ನೆಗಳನ್ನು ಹೇಳುವ ರೀತಿಯಲ್ಲಿ ಇವರೂ ಸಹ ಒಂದು ನೋಟನ್ನು ಬರೆದು ನನ್ನ ಕಡೆಗೆ ಕಳುಹಿಸಿದ್ದರು. ಅವರು ಹೇಳುವ ವಿಚಾರ, ಗೋವಾಗಡಿಗೆ ಹೋಗುವ ಖಾನಾಪುರದ ಡಿ.ಎಲ್.ಬಿ. ರೋಡು ಇದೆ. ಇದನ್ನು ಪಿ.ಡಬ್ಲ್ಯು.ಡಿಗೆ ಸೇರಿಸಿಕೊಳ್ಳಬೇಕೆಂದು ಮತ್ತು ಈ ರೋಡನ್ನು ಇಲಾಖೆಯವರೇ ವಹಿಸಿಕೊಂಡು ಒಂದು ಪಕ್ಕಾ ರೋಡು ಮಾಡಲು ಇಲ್ಲಿ ಒಂದು ಸೇತುವೆ ಹಾಕಿಕೊಡಬೇಕು ಎಂದು ಬಹುಶಃ ಹೊಸ ವರ್ಕ್ಸ್ ತೆಗೆದುಕೊಳ್ಳುವಾಗ ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ನಂಜಪ್ಪ (ಕಬ್ಬನ್ ಪೇಟೆ).—ಬೆಂಗಳೂರಿಗೆ ಕಾವೇರಿ ನೀರು ಬರುವುದಕ್ಕೆ ಮುಂಚೆ ವಾಟರು ಬೋರ್ಡ್‌ನವರು ಪ್ರತಿ ನಲ್ಲಿಗೂ ಮೂರು ರೂಪಾಯಿಗಳಷ್ಟು ಕೊಡಬೇಕೆಂದು ಹೇಳುತ್ತಿದ್ದಾರೆ. ಇದು ಕಾವೇರಿ ನೀರು ಇಲ್ಲಿಗೆ ಬಂದ ಮೇಲೆ ವಿಧಿಸುತ್ತಾರೆಯೇ ? ಹೇಗೆ ?

ಶ್ರೀ ವೀರೇಂದ್ರ ಪಾಟೀಲ್.—ವಾಟರು ಬೋರ್ಡು ಒಂದು ಅಟಾನಮಸ್ ಬಾಡಿ, ಅವರೇನು ಮಾಡುತ್ತಾರೋ ಅದರಲ್ಲಿ ಸರಕಾರ ಹಸ್ತಕ್ಷೇಪ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಅದು ತಪ್ಪು ಎಂದು ಹೇಳುವುದು ಸಮಂಜಸವಲ್ಲ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಕಾವೇರಿ ಯೋಜನೆ ತೆಗೆದುಕೊಳ್ಳಲು ಅಡ್ಡಿ ಇಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಹಿಂದಕೆ ಇದಕೆ ಸಂಬಂಧಪಟ್ಟ ನಿರ್ಣಯ ಬಂದಾಗ್ಗೆ ಭರವಸೆ ಕೊಟ್ಟಿದ್ದಾರೆ. ಇದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿದ್ದಾರೆಯೇ ? ಹಾರಂಗಿ ಯೋಜನೆ ಬಗ್ಗೆ ಏನು ಆಗಿದೆ ?

ಶ್ರೀ ವೀರೇಂದ್ರ ಪಾಟೀಲ್.—ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕೆಂದು ಬರೆದಿದ್ದೇವೆ. ಈ ವಿಚಾರವನ್ನು ಹಣ ಕಾಸಿನ ಮಂತ್ರಿಗಳು ಹೇಳಿದ್ದಾರೆ. ಹಾರಂಗಿ ಮತ್ತು ಹೇಮಾವತಿ ಯೋಜನೆ ಬಗ್ಗೆ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕಿಲ್ಲ.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಹೆಚ್ಚು ಹಣ ಖರ್ಚು ಮಾಡಬೇಕಾಗಿರುವ ಮೇಜರ್ ಪ್ರೊಜೆಕ್ಟುಗಳನ್ನು ಕೇಂದ್ರ ಸರಕಾರ ವಹಿಸಿಕೊಳ್ಳಬೇಕೆಂದು ಹೇಳುತ್ತೇನೆ. ಹತ್ತು ಕೋಟಿ ಮೇಲೆ ವೆಚ್ಚ ತಗಲುವ ಯೋಜನೆಯನ್ನು ಕೇಂದ್ರ ಸರಕಾರ ವಹಿಸಿಕೊಳ್ಳುವುದು ಒಳ್ಳೆಯದು. ಇದರ ಬಗ್ಗೆ ಪ್ಲಾನಿಂಗ್ ಕಮಿಷನ್ ಅವರು ಏನು ಹೇಳುತ್ತಾರೆ ?

Sri VEERENDRA PATIL.—This question was answered. The Government of India is to finance the scheme: that is what I have said. I have made it clear that there is no question of control or other things.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸ್ವಾಮಿ, ಹಾಸನ್-ಮಂಗಳೂರು ರೈಲು ಮಾರ್ಗವನ್ನು ಮೀಟರ್‌ಗೇಜ್ ಮಾಡಬೇಕೆಂದು ಇದ್ದಾರೆ. ಇದನ್ನು ಬ್ರಾಡ್‌ಗೇಜ್ ಮಾಡಿದರೆ ಒಳ್ಳೆಯದು. ವಿಧಿ ಇಲ್ಲದೆ ನಾವು ಕಣ್ಣು ಮುಚ್ಚಿಕೊಂಡು ಕೂತಿದ್ದೇವೆ. ಇದರ ಬಗ್ಗೆ ನಿಮ್ಮ ಖಚಿತ ಅಭಿಪ್ರಾಯ ಏನು ಇದೆ ?

Mr. SPEAKER.—I will reply on behalf of the Minister. It is not the responsibility of the State Government. There was a position when even putting up of Meter-gauge line was in danger. It is in such a precarious position; it is not proper to embarrass the Government I am as much interested in Hassan-Mangalore Railway as anybody else in the State.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ವಿಜಾಪುರ ಜಿಲ್ಲೆಯಲ್ಲಿ ಮಾಡಬೇಕಾಗಿರುವ ಲಿಫ್ಟ್ ಇರಿಗೇಶನ್ ಬಗ್ಗೆ ಏನಾಯಿತು ? ಅಪ್ಪರ್ ಕೃಷ್ಣಾ ಯೋಜನೆಯಿಂದ ವಿಜಾಪುರ ಜಿಲ್ಲೆಗೆ ನೀರಾವರಿಗಾಗಿ ಹೆಚ್ಚಾಗಿ ನೀರು ಒದಗಿಸುವುದಕ್ಕಾಗುವುದಿಲ್ಲ. ಆದುದರಿಂದ ವಿಜಾಪುರ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ಮಾಡಬೇಕೆಂದಿರುವುದು ಎಲ್ಲಿಗೆ ಬಂದಿದೆ ?

ಶ್ರೀ ವೀರೇಂದ್ರ ಪಾಟೀಲ್.—ಅಪ್ಪರ್ ಕೃಷ್ಣಾ ಯೋಜನೆಯಿಂದ ವಿಜಾಪುರ ಜಿಲ್ಲೆಯಲ್ಲಿ ಸುಮಾರು ಮೂರು ಲಕ್ಷ ಎಕರೆ ಜಮೀನು ನೀರಾವರಿಯಾಗುತ್ತದೆ. ಲಿಫ್ಟ್ ಇರಿಗೇಷನ್ ಮೂಲಕ ಹೆಚ್ಚು ಅನುಕೂಲತೆ ಮಾಡಿಕೊಬೇಕೆಂದು ಇದೆ. ಇದನ್ನು ಪರಿಶೀಲಿಸಲಾಗುತ್ತಿದೆ. ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ವಿದ್ಯುತ್ ಶಕ್ತಿ ಒದಗಿಸಬೇಕಾಗುತ್ತದೆ. ಇದಕ್ಕೆ ಸಹಾಯ ಮಾಡಿ ಒದಗಿಸಿ ಕೊಟ್ಟ ಮೇಲೆ ಮೆಂಟೆನನ್ಸ್ ಖರ್ಚನ್ನು ರೈತರು ವಹಿಸಿಕೊಳ್ಳಬೇಕಾಗುತ್ತದೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್‌ಷಾ (ಬಾಗೇವಾಡಿ)—ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಂಬರು 13 ನೇ ನ್ಯಾಷನಲ್ ಹೈ ವೇ ಮಾಡುವುದಕ್ಕಾಗಿ ಸರ್ವೆ ಆಗುತ್ತಾ ಇದೆ. ವಿಜಾಪುರದಲ್ಲಿ ಇದಕ್ಕಾಗಿ ಆಫೀಸ್ ಶುರು ಆಗಿದೆ. ಈಗ ಮೂರನೇ ಯೋಜನೆ ಮುಗಿಯುವುದಕ್ಕೆ ಬಂದಿದೆ. ಇದರ ಬಗ್ಗೆ ಏನು ಮಾಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ನ್ಯಾಷನಲ್ ಹೈ ವೇ ನಂಬರ್ 13 ಇದನ್ನು ಕೇಂದ್ರ ಸರಕಾರ ಮಂಜೂರು ಮಾಡಿದ್ದಾರೆ. ಈ ಮಧ್ಯೆ ಎಮರ್‌ಜನ್ಸಿ ಬಂದ ಮೂಲಕ ಇದನ್ನು ಕೈ ಬಿಡಬೇಕಾದ ಪ್ರಸಂಗ ಬಂತು. ಈ ಯೋಜನೆ ಸ್ಯಾಂಕ್ಷನ್ ಮಾಡಿದ್ದಾರೆ. ಕೆಲಸ ಪ್ರಾರಂಭ ಮಾಡಿದ್ದಾರೆ. ವರ್ಕ್ ಆರ್ಡರ್ ಕೊಡುತ್ತೇವೆ. ಈಗ ವಿವರ ಹೇಳುವುದಕ್ಕಾಗುವುದಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಮಲೆನಾಡು ಅಭಿವೃದ್ಧಿಗೋಸ್ಕರ ಹೆಚ್ಚು ಹಣ ಒದಗಿಸಬೇಕೆಂದು ಗೊತ್ತು ಮಾಡಲಾಗಿತ್ತು. ಮಲೆನಾಡು ಡೆವಲಪ್‌ಮೆಂಟ್ ಫಂಡ್ ಈಗ ನಿಲ್ಲಿಸಿದ್ದೀರಿ. ಮಲೆನಾಡು ಅಭಿವೃದ್ಧಿಗಾಗಿ ಹಣ ಸಹಾಯ ಮಾಡುವುದಕ್ಕೆ ಏನು ಕಾರ್ಯಕ್ರಮ ಕೈಕೊಳ್ಳುತ್ತೀರಿ ? ಇದಕ್ಕೆ ಉತ್ತರ ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ಉತ್ತರ ಹೇಳಿದ್ದೇನೆ. ನನ್ನ ಹತ್ತಿರ ಈಗ ದುಡ್ಡು ಇಲ್ಲ. ಹಣ ಕಾಸಿನ ಪರಿಸ್ಥಿತಿ ಏನಿದೆ ಇದು ಎಲ್ಲರಿಗೂ ಗೊತ್ತಿದೆ. ಮಲೆನಾಡಿನಲ್ಲಿ ಮುಖ್ಯವಾಗಿ ರಸ್ತೆ, ಸೇತುವೆ ಕೆಲಸ ಹೆಚ್ಚಾಗಿ ಮಾಡಬೇಕಾಗಿವೆ. ಇದಕ್ಕಾಗಿ ನಾಲ್ಕನೇ ಯೋಜನೆಯಲ್ಲಿ ಹೆಚ್ಚು ಪ್ರಯತ್ನ ಮಾಡುತ್ತೇವೆ. ಇದಕ್ಕೆ ಗಮನ ಕೊಡುತ್ತೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಹಾಸನ ಡಿಸ್ಟ್ರಿಕ್ಟಿನಲ್ಲಿ ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಇವು ಟೂರಿಸ್ಟ್ ಸೆಂಟರ್ಸ್ ಇರುವುದರಿಂದ ಲಕ್ಷಾಂತರ ರೂಪಾಯಿ ಆದಾಯ ಸರಕಾರಕ್ಕೆ ಬರುತ್ತದೆ. ಇವುಗಳ ಅಭಿವೃದ್ಧಿಗಾಗಿ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಈ ಬೇಡಿಕೆ ಟೂರಿಸ್ಟ್ ಬಗ್ಗೆ ಇಲ್ಲ.

ಶ್ರೀ ಎಚ್. ಎ. ಕಲಿಂಗಣ್ಣನವರ್ (ಗೋಕಾಕ್ I).—ದೇಶದಲ್ಲಿ ಆಹಾರ ಅಭಾವ ಇದೆ ನಮ್ಮ ತಾಲ್ಲೂಕಿನಲ್ಲಿ ನೀರಿನ ಅಭಾವ ಅನೇಕ ಹಳ್ಳಿಗಳಲ್ಲಿ ಇದೆ. ಈ ಅಭಾವ ಪರಿಸ್ಥಿತಿ ಸುಧಾರಿಸುವುದಕ್ಕೆ ಚಿಕ್ಕ ನೀರಾವರಿ ಯೋಜನೆ ಮಾಡಿದರೆ ಅನುಕೂಲವಾಗುತ್ತದೆ. ಚಿಕ್ಕ ನೀರಾವರಿ ಬಗ್ಗೆ ಸರಕಾರದ ಧೋರಣೆ ಏನಿದೆ ?

ಶ್ರೀ ವೀರೇಂದ್ರ ಪಾಟೀಲ್.—ದೊಡ್ಡ ನೀರಾವರಿ ಯೋಜನೆ ಕೈಕೊಂಡಿರುವ ಕಡೆ ಸಣ್ಣ ನೀರಾವರಿ ಯೋಜನೆ ತೆಗೆದುಕೊಳ್ಳಬಾರದು ಎಂದು ನಿರ್ಣಯ ಮಾಡಿದೆ. ಸಣ್ಣ ಬಂಧಾರ ಸಣ್ಣ ಡ್ಯಾಂ ಇದ್ದರೆ ಹಾಕುವ ಏರ್ಪಾಡು ಮಾಡುತ್ತೇವೆ. ಸಣ್ಣ ಕೆಲಸ ಇದ್ದರೆ ಮಾಡುತ್ತೇವೆ. ಎರಡು ಮೂರು ಲಕ್ಷ ರೂಪಾಯಿ ವೆಚ್ಚದ ಸಣ್ಣ ನೀರಾವರಿ ತೆಗೆದುಕೊಳ್ಳಬಹುದು. ಆ ಪ್ರದೇಶದಲ್ಲಿ ಮಲಪ್ರಭಾ ಯೋಜನೆಯಿಂದ ಕೆಲವು ದಿವಸಗಳಲ್ಲಿ ನೀರು ದೊರೆಯುವುದರಿಂದ ಅಲ್ಲಿ ಸಣ್ಣ ಸಣ್ಣ ಯೋಜನೆ ಹಾಕುವುದು ಸಮಂಜಸವಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—1 ಸಾವಿರ, 2 ಸಾವಿರ ರೂಪಾಯಿಗಳ ವೆಚ್ಚದಲ್ಲಾಗತಕ್ಕ ಸಣ್ಣ ನೀರಾವರಿ ಯೋಜನೆಗಳನ್ನೂ ಕೂಡ ತೆಗೆದುಕೊಳ್ಳಬಾರದೆಂದು ಮಂತ್ರಿಗಳು ಆಜ್ಞೆ ಮಾಡಿರುವುದರಿಂದ ನೀರಾವರಿ ಬಾವಿಗಳಿಗೂ ಹಣವನ್ನು ಕೊಡುತ್ತಿಲ್ಲ. ಇನ್ನು ಗೊರೂರಿನ ವಿಷಯ ಇಲ್ಲಿಗೆ 40 ವರ್ಷಗಳಿಂದಲೂ ಸರ್ವೆಯಾಗುತ್ತಲೇ ಇದೆ. ಇವುಗಳನ್ನು ಕಾರ್ಯಗತ ಮಾಡುವುದು ಯಾವಾಗ ?

ಶ್ರೀ ವೀರೇಂದ್ರ ಪಾಟೀಲ್.—ಗೊರೂರು ವಿಷಯ ಆಗಲೇ ಹೇಳಿದ್ದೇನೆ. ಕೇಂದ್ರದ ಮಂತ್ರಿಗಳು ಬಂದು ಕೆಲವು ಸಲಹೆಗಳನ್ನು ಮಾಡಿದ್ದಾರೆ, ಅದರಿಂದ ಅದು ಸಲ್ಪ ನಿಧಾನವಾಯಿತು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಶ್ರೀ ಕೆ. ಪಿ. ರೇವಣಸಿದ್ದಪ್ಪನವರು ಹೇಳಿದಂತೆ ಒಂದು ಸರ್ಕ್ಯುಲರನ್ನು ಹೊರಡಿಸಿರುವುದರಿಂದ 5-10 ಸಾವಿರ ರೂಪಾಯಿಗಳ ಕೆಲಸಗಳನ್ನಾದರೂ ತೆಗೆದುಕೊಳ್ಳತಕ್ಕದು ಅತ್ಯಗತ್ಯ. ಅದಕ್ಕಾಗಿ 4-5 ಕೋಟಿ ರೂಪಾಯಿಗಳನ್ನು ಒದಗಿಸಿ ಹೊಸ ಕಾಮಗಾರಿಗಳಿಗೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಅಷ್ಟು ಸ್ಪಷ್ಟವಾಗಿ ಖಂಡ ತುಂಡವಾಗಿ ಆಗಲೇಬಾರದು ಎಂಬುದಾಗೇನೂ ಹೇಳಿರುವುದಿಲ್ಲ. ಸರ್ಕಾರದವರ ಪರ್ಮಿಷನ್ ಪಡೆದು ಹೊಸ ಕಾಮಗಾರಿಗಳನ್ನು ಮಾಡಬೇಕು ಎಂದು ಹೇಳಿದ್ದೇನೆ.

ಶ್ರೀ ಎಂ. ಎನ್. ಕೃಷ್ಣಸಿಂಗ್ (ಜಗಳೂರು).—ಹೊಸ ಕೆರೆಗಳ ನಿರ್ಮಾಣ, ಸಣ್ಣ ಕೆರೆಗಳ ದುರಸ್ತಿ, ಹಳೇ ಕೆರೆಗಳ ದುರಸ್ತಿ, ವಿಚಾರ ಹಾಗಿರಲಿ. ಈ ಕೆರೆಗಳ ಕೆಳಗೆ 1 ಸಾವಿರ ಎಕರೆ ಅಚ್ಚುಕಟ್ಟಿದ್ದು ಅದರಲ್ಲಿ 500 ಎಕರೆ ಜೋಪಾಗಿದ್ದರೇನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ತಡೆಗಟ್ಟಲು ಸಾಧ್ಯವಾದುದನ್ನು ಎಲ್ಲಾ ಮಾಡೋಣ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಈಗಾಗಲೇ ಆ ಘಟಪ್ರಭಾ ಯೋಜನೆಯ ಮೇಸನರಿ ಡ್ಯಾಂ ಮಾಡಬೇಕೆಂದಿದ್ದುದನ್ನು ತಳಹದಿಯನ್ನು ತೋಡಿದ್ದುದನ್ನು ಸಿ.ಡಬ್ಲ್ಯು.ಪಿ.ಸಿ. ಅವರು ಬಂದು ಅಲ್ಲಿ ಮೇಸನರಿ ಡ್ಯಾಂ ಸರಿಯಿಲ್ಲ, ಅದನ್ನು ರಾಕಫಿಲ್ ಡ್ಯಾಮನ್ನಾಗಿ ಮಾಡಬೇಕೆಂದು ಹೇಳಿರತಕ್ಕ ವಿಚಾರದಲ್ಲಿ ನಿಮ್ಮ ಅಭಿಪ್ರಾಯವನ್ನು ತಿಳಿಸಲಿಲ್ಲವಲ್ಲಾ ?

ಶ್ರೀ ವೀರೇಂದ್ರ ಪಾಟೀಲ್.—ಅದು ಟೆಕ್ನಿಕಲ್ ವಿಷಯ ; ಪ್ರಾಜ್ಞರು ಅಭಿಪ್ರಾಯ ಕೊಟ್ಟಿದ್ದಾರೆ. ಅದರಂತೆ ಕಾರ್ಯಕ್ರಮ ಕೈಗೊಳ್ಳುತ್ತೇವೆ.

Mr. SPEAKER.—I wanted to tell the Hon'ble Members a little earlier that there is a slight change in the programme tomorrow. There is going to be a special resolution tomorrow as they might have seen from the agenda which they might have received already. There is going to be a special resolution relating to Goa. Let the Hon'ble Members not say tomorrow that they are not aware of the change. However, I am bringing this to the notice of the House.

ಶ್ರೀ ಬಿ. ಜಿ. ಲಿಂಗೇಗೌಡ (ಚನ್ನಪಟ್ಟಣ).—ಮಂಚನ ಗಡಿಯ ಬಳಿ ಫ್ಲಡ್‌ಕಂಟ್ರೋಲ್ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲು ಕೇಂದ್ರ ಸರಕಾರದವರು ಹಣವನ್ನು ಒದಗಿಸುವುದಾಗಿ ಹೇಳಿದ್ದರು. ಆ ವಿಚಾರದಲ್ಲಿ ಸರ್ಕಾರದವರೇನು ಕಾರ್ಯಕ್ರಮ ಕೈಗೊಂಡಿದ್ದಾರೆಂಬುದನ್ನು ತಿಳಿಸಬೇಕು ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನೆಲ್ಲಾ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಮಾಡಿದ್ದೇವೆ.

ಶ್ರೀ ಜಿ. ದೇವಯ್ಯ (ಮಂಡ್ಯ).—ಲೋಕಪಾವನೀ ನದಿಗೆ ದೊಡ್ಡಗಂಗವಾಡಿ ಹತ್ತಿರ ಒಂದು ಕಟ್ಟೆಯನ್ನು ನಿರ್ಮಾಣಮಾಡುವುದಾಗಿ ಹೇಳಿ ಆ ಕೆಲಸವೂ ಪ್ರಾರಂಭವಾಗಿ ಇಲ್ಲಿಗೆ 8 ವರ್ಷ ಆದಾಗ್ಯೂ ಆ ಕೆಲಸವಿನ್ನೂ ಮುಗಿಯಲಿಲ್ಲ, ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ತಿಳಿದು ಹೇಳುತ್ತೇನೆ.

ಅಧ್ಯಕ್ಷರು.—ಅವಷ್ಟು ಬೇಗ ಮಾಡಿಸುತ್ತೇವೆಂದು ಹೇಳಿ, ಈಗ ಅವರು ಬಡ್ಜೆಟ್ಟನ್ನು ಓಟು ಮಾಡಬೇಕಾಗಿದೆ....

ಶ್ರೀ ಎಚ್. ಓ. ಸಾವುಜಿ.—(ಬೆಳಗಾಂ II).—ಮರಾಠಿಯಲ್ಲಿ ಪ್ರಶ್ನೆ ಕೇಳಿದರು.

ಶ್ರೀ ವೀರೇಂದ್ರ ಪಾಟೀಲ್.—ಅವರು ಕೇಳಿದ್ದು ಕಾಂಪೆನ್‌ಸೇಷನ್ ಕೊಡತಕ್ಕ ವಿಚಾರದಲ್ಲಿ ಬಹಳ ತಡವಾಗುತ್ತಿದೆ, ಆ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರೆಂತ ಕೇಳಿದರು. ಅದಕ್ಕೆ ಕಾರಣ ಅವಾರ್ಡನ್ನು ಪಾಸ್ ಮಾಡುವುದರ ಬಗ್ಗೆ ಸ್ವಲ್ಪ ತಡವಾಯಿತು. ಆದರೆ ಅದನ್ನು ಬೇಗ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಎಸ್. ಕೊಳ್ಕೆಬೈಲ್.—ಮಂಗಳೂರಿನಲ್ಲಿ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಸ್ಕೀಮುಗಳು ಸರಿಯಾಗಿಲ್ಲದ ಕಾರಣ ಅಲ್ಲಿ ಬಹಳ ಜನರಿಗೆ ಆನೆಕಾಲು ರೋಗ ಬಂದಿದೆ. ಇದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೂ ಮತ್ತು ಹೆಲ್ತ್ ಮಿನಿಸ್ಟರಿಗೂ ತೋರಿಸಿರುತ್ತೇನೆ. ಆದರೆ ಇನ್ನೂ ಏನೂ ಕಾರ್ಯಕ್ರಮ ಕೈಗೊಂಡಿಲ್ಲ, ಏಕೆ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಅಂಡರ್ ಗ್ರೌಂಡ್ ಕೆಲಸಗಳು ನಡೆಯುತ್ತಿವೆ. ಬಹುಶಃ ಈಗಾಗಲೇ ಅದು ಮುಗಿಯುವ ಸ್ಟೇಜಿಗೆ ಬಂದಿರಬಹುದು. ಅದನ್ನು ಬೇಗ ಮಾಡಿಸುತ್ತೇವೆ.

Mr. SPEAKER.—I will now put the Demands to the vote of the House. The question is :

> "That the respective sums not exceeding the amounts shown in the list of Demands circulated to the Members be granted to defray the charges which will come in course of payment during the financial year ending with 31st day of March 1966 in respect of Demands Numbers 6, 10, 29, 30, 45, 46, 47, 31, 32, 43, 48 and 50".

The motion was adopted.

As Directed by the Speaker, motion for Demands and grants which were adopted by the Houses are reproduced below.

DEMAND No. 6—OTHER TAXES—ADMINISTRATION

13. Other Taxes and Duties.

"That a sum not exceeding Rs. 10,75,000 be granted to the Government to defray the charges which will come in course of payment during the financial year for the period ending 31st day of March 1966, in respect of 'Other Taxes and Duties.'."

DEMAND No. 10—GENERAL ADMINISTRATION

19. General Administration.

That a sum not exceeding Rs. 3,25,87,200 be granted to the Government to defray the charges which will come in course of payment during the financial year for the period ending 31st day of March 1966, in respect of General Administration'."

DEMAND No. 29—IRRIGATION—COMMERCIAL

43. Irrigation, Navigation Embankment and Drainage Works (Commercial.)

"That a sum not exceeding Rs. 5,45,95,000 be granted to the Government to defray the charges which will come in course of payment during the financial year for the period ending 31st day of March 1966, in respect of 'I.N.E. & D Works (Commercial)'."

DEMAND No. 30—IRRIGATION—NON-COMMERCIAL

44. Irrigation, Navigation, Embankment and Drinage Works (Non-Commercial).

"That a sum not exceeding Rs. 1,73,99,000 be granted to the Government to defray the charges which will come in course of payment during the financial year for the period ending 31st day of March 1966, in respect of 'I.N.E. & D. Works (Non-Commercial)'."

DEMAND No. 31—PUBLIC WORKS

50. Public Works

"That a sum not exceeding Rs. 22,83,31,000 be granted to the Government to defray the charges which will come in course of payment during the financial year for the period ending 31st day of March 1966, in respect of 'Public Works'.".

(MR. SPEAKER)

DEMAND No. 32—PORTS AND PILOTAGE

53. Ports and Pilotage

"That a sum not exceeding Rs. 8,04,000 be granted to the Government to defray the charges which will come in course of payment during the financial year for the period ending 31st day of March 1966, in respect of 'Ports and Pilotage'.".

DEMAND No. 43—CAPITAL OUTLAY ON IMPROVEMENT OF PUBLIC HEALTH.

94. Capital Outlay on Improvement of Public Health

"That a sum not exceeding Rs. 10,30,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Improvement of Public Health'.".

DEMAND No. 45—CAPITAL OUTLAY ON IRRIGATION

99. Capital Outlay on Irrigation, Navigation, Embankment and Drainage Works (Commercial).

"That a sum not exceeding Rs. 8,79,84,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Irrigation, Navigation, Embankment and Drainage Works (Commercial)'."

DEMAND No. 46—CAPITAL OUTLAY ON IRRIGATION NON-COMMERCIAL

100. Capital Outlay on I.N.E. and D. Works (Non-Commercial)

"That a sum not exceeding Rs. 2,50,97,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on I.N.E. and D. Works (Non-Commercial).'.

DEMAND No. 47—CAPITAL OUTLAY OF ELECTRICITY SCHEMES OUTSIDE THE REVENUE ACCOUNT

101. Capital Outlay on Electricity Schemes

"That a sum not exceeding Rs. 19,18,65,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Electricity Schemes' "

DEMAND No. 48—CAPITAL OUTLAY ON PUBLIC WORKS

103. Capital Outlay on Public Works

"That a sum not exceeding Rs. 7,59,75,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Public Works' "

DEMAND No. 50—DEVELOPMENT OF MINOR PORTS

110. Capital Outlay on Ports

"That a sum not exceeding Rs. 59,99,000 be granted to the Government to defray the charges which will come in course of payment during the financial year for the period ending 31st day of March 1966, in respect of 'Capital Outlay on Ports'.".

Mr. SPEAKER.—The House will stand adjourned now to re-assemble tomorrow at 8-30 A.M.

The House adjourned at Six of the Clock to meet again at Thirty Minutes past Eight of the Clock on Saturday, 13th March 1965.

WD 4710—GPB—500—8-7-1965